
# ಅಪರಂಜಿ

ತಿಳಿನಗೆಯ ಕಾರಂಜಿ

ಎಪ್ರಿಲ್ 2022

## ಯುಗಾದಿ ವಿಶೇಷಾಂಕ




ಬಿಡಿ ಪ್ರತಿ: ರೂ. 30/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 39**

**ಸಂಚಿಕೆ – 07**

**ಎಪ್ರಿಲ್ – 2022**

## ಈ ಸಂಚಿಕೆಯಲ್ಲಿ.....

| | | |
|---|---|---|
| ಮೊದಲ ಮಾತು | ಶಿವಕುಮಾರ್ | 3 |
| ಅಪರಂಜಿ ಕಿಡಿ | ಪ್ರಕಾಶ್ | 4 |
| ವೈಕುಂಟ ಪೈಯೆಂಬ .... | ಸುಚಿತ್ರಾ ಹೆಗಡೆ | 5 |
| ಬೈಗುಳದ ರಹಸ್ಯ | ಈಶ್ವರ ಚಂದ್ರ | 9 |
| ಬದುಕಿದೆಯಾ ಬಡ ಜೀವಿ...? | ಅರವಿಂದ.ಜಿ. ಜೋಷಿ | 12 |
| ಹಬ್ಬದ ಸಂತೆ ಮತ್ತು ಎಳೇ ಕಂತೆ! | ತುರುವೇಕೆರೆ ಪ್ರಸಾದ್ | 14 |
| ಟ್ವೆಂಟಿ ನೈಂಟಿಗಳ ನಡುವೆ... | ಸುಮಾ ರಮೇಶ್ | 19 |
| ನವ ವಸಂತದ ಗಾಳಿ ಬೀಸಲು... | ಸಹನಾ ಪ್ರಸಾದ್ | 21 |
| ವೈರಸ್ ಮತ್ತು ಆಂಟಿವೈರಸ್ | ನಂದಿನಿ ಕಾಪಡಿ | 23 |
| ಎಲೆಯ ಮೇಲೆ ಬಿದ್ದ ಮುಳ್ಳಿನ ನೀತಿಕಥೆ | ಡಾ.ಡಿ.ವಿ.ಗುರುಪ್ರಸಾದ್ | 27 |
| ಡಾಲಿಯ ಡೌಲು | ಕವಿತಾ ಹೆಗಡೆ ಅಭಯಂ | 30 |
| ನೋ ಥ್ಯಾಂಕ್ ಯು' ನೀರಜಾ ! | ಚಿತ್ರಾ ರಾಮಚಂದ್ರನ್ | 34 |
| ಕಾಲಕ್ಕೆ ತಕ್ಕ ಹಾಗೆ!... | ವಾಣಿ ಸುರೇಶ್ | 38 |
| ತುಂತುರು | ದಂನಳ | 41 |
| ಕೊಟ್ಟೋನು ಇಸಕೊಂಡೋನು | ಬೇಲೂರು/ರಘುಪತಿ ಶೃಂಗೇರಿ | 42 |

ವ್ಯಂಗ್ಯಚಿತ್ರ

ಮುಖಪುಟ : ಇಂಟರ್‌ನೆಟ್ ಕೃಪೆ

ಒಳಪುಟಗಳಲ್ಲಿ : ರಘುಪತಿ ಶೃಂಗೇರಿ, ಆದರ್ಶ ಪೈ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com



**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಸಿರಿಹಿಟ್ಟು | ಪಾಲಹಳ್ಳಿ ವಿಶ್ವನಾಥ್ | 45 |
| ಹಳೆಯದು ಹೊಸದರ ಸಂಭ್ರಮ | ಬೇಲೂರು ರಾಮಮೂರ್ತಿ | 48 |
| ಅಶೋಕನ ಪೀಕಲಾಟದ ಪ್ರಸಂಗ | ವತ್ಸನ | 51 |
| ನಮ್ಮ ಸ್ವೆಪ್ನಿಗಳತ್ತ ಒಂದು ಎಕ್ಸ್ಟ್ರಾ ನೋಟ | ಪ್ರಕಾಶ್ ಶೆಟ್ಟಿ | 56 |
| ಅಜ್ಜನ ಅತಿಥಿಗಳು | ಡಾ. ಶ್ಯಾಮಲಾ ರವಿಶಂಕರ್ | 58 |
| ಪೇಂಟಿಂಗ್ ಅಲ್ಲಾ, ಕಲರಿಂಗ್ | ಸಿ.ಎ.ವಿಲಾಸ ಹುದ್ದಾರ | 60 |
| ಗಂಗಾವತರಣ | ಕೃಷ್ಣ ಸುಬ್ಬರಾವ್ | 61 |
| ವೃತ್ತಿ ಬದುಕಿನ ಹಾಸ್ಯ ರಸಾಯನ! | ಜಿ.ಎಸ್.ಟಿ.ಪ್ರಭು | 63 |
| ನಿವೃತ್ತಿಗೆ ಮುನ್ನ.... | ಎಚ್. ಗೋಪಾಲಕೃಷ್ಣ | 68 |
| ಕಾರೇಷು ದಾಸಿ! | ಗಣೇಶ ಹೆಗಡೆ | 72 |
| ಎಲ್ಲೆಲ್ಲೀ ನೋಡಲೀ...ನಿನ್ನನ್ನೇ ಕಾಣುವೇ.. | ನಳಿನಿ ಭೀಮಪ್ಪ | 74 |
| ತೀರ್ಥಯಾತ್ರೆ | ಸಿ.ಆರ್.ಸತ್ಯ | 78 |
| ಶೂನ್ಯ ಸಂಪಾದನೆ.....! | ವಿಜಯೇಂದ್ರ ರಾವ್ | 81 |
| ಧೂಳ್...ಧೂಳ್...ಧೂಳ್ | ವೈ ಎನ್ ಗುಂಡೂರಾವ್ | 83 |
| ಕೋಪಕ್ಕೊಂದು ಮನೆ | ಚಿಂತಾಮಣಿ ಕೊಡ್ಲೆಕೆರೆ | 87 |
| ದೇಖೋನಾ ಸನ್ ಆಫ್ ಕರೋನಾ | ಗೌತಮ | 92 |
| ಅಂಡೆಪಿರ್ಕಿ ಅವತಾರಗಳು | ಶರತ್ ಕಲ್ಕೋಡ್ | 96 |
| ದಂತ ಧಾವನದ ಧಾವಂತಗಳು | ಕೆ.ಎಸ್.ಸೋಮೇಶ್ವರ | 100 |
| ರಷ್ಯ–ಯುಕ್ರೇನ್ ಯುದ್ಧಕ್ಕಿಂತ .... | ಇ.ಆರ್. ರಾಮಚಂದ್ರನ್ | 103 |
| ಒಬ್ಬಟ್ಟಿನಲ್ಲಿ ಬಲವಿದೆ | ನಳಿನಿ ಸೂರ್ಯಪ್ರಕಾಶ್ | 106 |
| ಜೀವನಾನುಭವ ದೊಡ್ಡದು ! | ಹಿರಿಯೂರು ರಾಘವೇಂದ್ರ | 109 |
| ಹೋಳಿ ಹಬ್ಬ | ನಾಗರತ್ನ ರಾಮಮೂರ್ತಿ | 111 |
| ಜೀವನ–ಪಿ. ಜಿ. ವೋಡ್‌ಹೌಸ್ ಕಂಡಂತೆ | ಸುಕೇಶವ | 113 |
| 'ಮುಂಗೋಟಿ ಬಲು ಒಳ್ಳೇದಣ್ಣ!' | ಲತಾ ಹೆಗಡೆ | 114 |
| ಮರೆಯುವವರ ನೆನಪಿನಲ್ಲಿ | ಜಿ. ವಿ. ಅರುಣ | 117 |




# ಮೊದಲ ಮಾತು

**- ಶಿವಕುಮಾರ್**

ಶಾರ್ವರಿ, ಪ್ಲವ ನಾಮ ಸಂವತ್ಸರಗಳಲ್ಲಿ ಹಬ್ಬಿದ್ದ ಕರೋನಾ ಕಾರ್ಮೋಡ, ಇಂದಿನ ಶುಭಕೃತನಾಮ ಸಂವತ್ಸರದಲ್ಲಿ ಚದುರಿ, ಆರೋಗ್ಯ ಸಂತಸಗಳ ರವಿಕಿರಣ ಎಲ್ಲೆಲ್ಲೂ ಪಸರಿಸಲೆಂಬ ಹಾರೈಕೆಯಿಂದ ಈ ಯುಗಾದಿಯಂದು ಅಪರಂಜಿ  ನಿಮ್ಮ ಬಾಗಿಲಿಗೆ ಬಂದಿದ್ದಾಳೆ. ಆದರದಿಂದ ಬರಮಾಡಿಕೊಳ್ಳಿ. ಈ ವಿಶೇಷ ಸಂಚಿಕೆಯ ತಯಾರಿಗೆ ಅನೇಕ ಪ್ರತಿಭಾವಂತ ಬರಹಗಾರ ಬರಹಗಾರ್ತಿಯರು ಸಹಕರಿಸಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಇವರೆಲ್ಲರಿಗೂ ಅಪರಂಜಿಯ ಆದರಪೂರ್ವಕ ನಮನಗಳು. ಅಚ್ಚುಕಟ್ಟಾಗಿ ಸಂಚಿಕೆ ಹೊರಬರಲು ಕಾರಣರಾದ ಒಮೆಗಾ ಲೇಸರ್‌ಟೆಕ್‌ನ ಶ್ರೀ ರವೀಂದ್ರ ರಾವ್, ಮುದ್ರಣ ಮತ್ತು ಅಂಚೆ ರವಾನೆಯ ಹೊಣೆಯನ್ನು ಭರಿಸಿರುವ ರವಿ ಗ್ರಾಫಿಕ್ಸ್‌ನ ಶ್ರೀ ವಿ.ಆರ್. ಭರತ್ ಅವರುಗಳಿಗೆ ನಮ್ಮೆಲ್ಲರ ಹಾರ್ದಿಕ ಕೃತಜ್ಞತೆಗಳು.

ಈ ಶುಭಕೃತನಾಮ ಸಂವತ್ಸರವು, ಎಲ್ಲರಿಗೂ ಸಕಲ ಸನ್ಮಂಗಳಗಳನ್ನುಂಟು ಮಾಡಲೆಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.





## ಅಪರಂಜಿ ಕಿಡಿ

- **ಪ್ರಕಾಶ್**

"ಯುಗ ಯುಗಾದಿ ಮರಳಲಿ

**ಕರೋನಾರ್ಭಟ ನಲುಗಲಿ"** –ಸಮೂಹಗಾನ

***

ಕೃಷ್ಣ ಶಿಶುಪಾಲರ ಕಥೆ ಹೇಳಿದ ವಕೀಲ – ಸುದ್ದಿ.

**ಹರೆ ರಾಮ ಹರೆ ಕೃಷ್ಣಾ !!**

***

ಯೋಗಿಗೆ ಉತ್ತರಾಧಿಕಾರ – ಶೀರ್ಷಿಕೆ

**ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು !!**

***

ನಕಲಿ ವಿಲ್ ಸೃಷ್ಟಿಸಿ ಐವತ್ತು ಕೋಟಿ ರೂ ವಂಚನೆ– ಸುದ್ದಿ

**ವೇರ್ ದೇರ್ ಈಸ್ ವಿಲ್ ದೇರ್ ಈಸ್ ಟ್ರಬಲ್ !!**

***

ಜನರ ಅಭಿಪ್ರಾಯವನ್ನು ನಾವು ಬೆಂಬಲಿಸುತ್ತೇವೆ. –ರಾಹುಲ್

**ಬೇರೆ ಮಾರ್ಗವಿಲ್ಲ!?**

***

ಯುವ ಬರಹಗಾರರಿಗೆ ತಾಳ್ಮೆ ಬೇಕು
– ಶ್ರೀಮತಿ ನುಗ್ಗೇಹಳ್ಳಿ ಪಂಕಜ.

**ಅಪರಂಜಿ ತಲೆದೂಗಿದಳಂತೆ !!**

***

ಕುವೆಂಪು ವಿ.ವಿ. ಕುಲಪತಿ ತಪ್ಪೊಪ್ಪಿಗೆ– ಪತ್ರಿಕೆ

**ಓ ನನ್ನ ವೇತನಾ, ಆಗು ನೀ ಅನಿಕೇತನಾ ಎಂಬ ಸಿದ್ಧಾಂತ !?**

***

ಚಿನ್ನ 427, ಬೆಳ್ಳಿ 710 ರೂ ತುಟ್ಟಿ – ಸುದ್ದಿ

**ನಮಗಂತೂ ಇದು ತಟ್ಟುವುದಿಲ್ಲ ಸಧ್ಯ !!**

***



# ವೈಕುಂಟ ಪೈ ಎಂಬ ಗೋವರ್ಧನ ಗಿರಿಧಾರಿ

***ಸುಚಿತ್ರಾ ಹೆಗಡೆ**

ಈ ತಲೆಬರಹ ಓದುತ್ತಿದ್ದಂತೆ ನನಗೆ ಎದುರಾಗುವ ಮೊಟ್ಟ ಮೊದಲ ಪ್ರಶ್ನೆ ವೈ..? ಕುಂಟ.. ವೈ ನಾಟ್ ವೈಕುಂಠ? ಅದರ ವಿವರಣೆ ಆ 'ಕಾಲ'ದ್ದು. ಈ ಕಾಲದಲ್ಲಿ ನಾ ಏನಾದ್ರೂ ಹೇಳಿಬಿಟ್ಟರೆ ನನ್ನ ಮಗಳ ಪ್ರತಿಕ್ರಿಯೆಯಂತೆ 'ಓ ಮೈ ಗಾಡ್.. ಸೋ.. ಇನ್ಸೆನ್ಸಿಟಿವ್..!?!, ಹೌ ಕ್ಯಾನ್ ಯೂ ಜಜ್ ಸಮ್ ಬಡೀ ಲೈಕ್ ದಿಸ್..?' ಎಂದು ಹೀಗಳೆಯುವದಂತೂ ಗ್ಯಾರಂಟಿ. ಹಾಗಂತ ನಾನು ನಮ್ಮೂರ ಅತ್ಯಂತ ವಿಶಿಷ್ಟವಾದ ವ್ಯಕ್ತಿಗಳಲ್ಲೊಬ್ಬರ ಕುರಿತು ಹೇಳದೇ ಇರಲೇ..? ನನ್ನ ಬಾಲ್ಯದ ಮತ್ತು ನನ್ನೂರಿನ ಸ್ಮರಣೆಗಳಲ್ಲಿ ಕೆಲವು ಘಟನೆಗಳ ರೂಪದಲ್ಲಿ ಇನ್ನು ಕೆಲವು ವ್ಯಕ್ತಿಗಳ ರೂಪದಲ್ಲಿ ನನ್ನನ್ನು ಕಾಡುವುದುಂಟು. ಅವುಗಳು ಆಗ ಹೇಗಿದ್ದರೂ ಈಗ ಎಲ್ಲವೂ ಸುಖದ ಸ್ಮೃತಿಗಳೇ ಆಗಿವೆ.

ನನ್ನೂರಿನ ವೈವಿಧ್ಯತೆ ಬೆರಗಾಗುವಂಥದ್ದು. ಯಾವುದೇ ಒಂದು ಜಾತಿಯ ಕೇರಿ ಅಂತ ಇಲ್ಲದೇ ಎಲ್ಲಾ ಜಾತಿಯ ಮನೆಗಳೂ ಒಟ್ಟಿಗಿರುವ ಅಪರೂಪದ ಊರು. ಊರಿನ ಅರಣ್ಯ ಇಲಾಖೆ, ಪೋಲೀಸ್ ಇಲಾಖೆ, ಆಸ್ಪತ್ರೆ, ಶಾಲೆಗಳಿಗೆ ರಾಜ್ಯದ ಬೇರೆ ಭಾಗಗಳಿಂದ ಬರುವ ಜನರು ಮತ್ತು ಅವರ ಕುಟುಂಬಗಳು ನಮ್ಮೂರಿಗೊಂದು ವಿಶಾಲವಾದ ದೃಷ್ಟಿಕೋನವನ್ನು ಕೊಟ್ಟಿದ್ದರು. ನಮ್ಮಲ್ಲಿನ ಪೋರ್ಚುಗೀಸ್ ವಂಶಸ್ಥರ ಗೋವೆಯ ಜೊತೆಗಿನ ನಂಟು ಆಧುನಿಕತೆಯ ಗಾಳಿ ಬೀಸುವಂತೆ ಮಾಡಿತ್ತು. ಎಲ್ಲಾ ಹಬ್ಬಗಳನ್ನೂ ಎಲ್ಲಾ ಜಾತಿಯವರು ಸೇರಿಯೇ ಆಚರಿಸುತ್ತಿದ್ದ ಕಾಲ ಅದು. ಗಣೇಶನ ಹಬ್ಬದ ಉಂಡೆ ಚಕ್ಕುಲಿಗಳು, ಕ್ರಿಸ್ಮಸ್‌ನ ಕೇಕು, ಕುಕೀಸ್‌ಗಳು ಮತ್ತು ನಾಗರ ಪಂಚಮಿಯ ಪಾತೋಳಿ, ಪೋಡಿಗಳನ್ನು ಸಮಾನವಾಗಿ ನಾವು ಮಕ್ಕಳು ಹಂಚಿಕೊಂಡು ತಿನ್ನುತ್ತಿದ್ದ ನೆನಪುಗಳು ಇನ್ನೂ ಹಸಿರಾಗಿವೆ.

ಪೈಗಳು ಹುಟ್ಟಿದಾಗ ಇಟ್ಟ ಹೆಸರು ಶ್ರೀಮನ್ನಾರಾಯಣನ ಆವಾಸವಾದ ವೈಕುಂಠ ಎನ್ನುವದೇ ಆಗಿತ್ತು. ಅವರ ಯೌವನಾವಸ್ಥೆಯವರೆಗೂ ಎಲ್ಲರೂ ಅವರನ್ನು ಕರೆಯುತ್ತಿದ್ದದ್ದು ಪ್ರೀತಿಯಿಂದ ಮಾತನಾಡಿಸುತ್ತಿದ್ದದ್ದು "ಕಸಲ್ರೇ ವೈಕುಂಠು.. ಜವಣ್ ಜಾಲ್ವೆ..ವೈಕುಂಠ..?" ಎಂದೇ ಆಗಿತ್ತು. ಆದರೆ ಅದೊಂದು ಘಟನೆ ಅವರ ಹೆಸರು, ಪರಿಚಯವಷ್ಟೇ ಅಲ್ಲ, ವ್ಯಕ್ತಿತ್ವವನ್ನೇ ಬದಲಾಯಿಸಿಬಿಟ್ಟಿತು.

ನಾನು ಬಾಲ್ಯದಲ್ಲಿ ನೋಡಿದ ಪೈಗಳಿಗೆ ಅದಾಗಲೇ ಮಧ್ಯವಯಸ್ಸು ದಾಟಿ ಮೊಮ್ಮಕ್ಕಳು ಬಂದಾಗಿತ್ತು. ಆದರೆ ಅವರ ಜನಪ್ರಿಯತೆಗೆ ಕೊಂಚವೂ ಕುಂದು ಬಂದಿರಲಿಲ್ಲ. ಅವರ ಹಿಂದಿನ ಕಥೆಯೆಲ್ಲ ನಾನು ನಮ್ಮ ತಂದೆಯವರಿಂದ, ಹಿರಿಯರಿಂದ ಕೇಳಿ ತಿಳಿದಿದ್ದು. ವೈಕುಂಠ, ಉಪ್ಪಿನಪಟ್ಟಣದ ವಿಠ್ಠಲ ಪೈ ಮತ್ತು ರುಕ್ಮಿಣಿ ದಂಪತಿಗಳಿಗೆ ನಾಲ್ಕನೆಯದೋ ಐದನೆಯದೋ ಸಂತಾನ. ಅಂದಹಾಗೆ ಈ ಉಪ್ಪಿನ ಪಟ್ಟಣ ಒಂದು ಕಾಲದಲ್ಲಿ ಪಟ್ಟಣವಾಗಿತ್ತಂತೆ. ಉಪ್ಪು ಮಾರಾಟದ ಕೇಂದ್ರವಾಗಿ ಹೆಸರಾಗಿದ್ದ ಊರಾಗಿತ್ತು ಅಂತಲೂ ಹೇಳುತ್ತಾರೆ. ಈಗಂತೂ ಪಟ್ಟಣದ ಯಾವ ಲಕ್ಷಣಗಳೂ ಇಲ್ಲದೇ ಹತ್ತಿರದ ಕತಗಾಲಿಗೆ ಕತಗಾಲ ಪೇಟೆ ಎಂದು ಕರೆಯತೊಡಗಿದ್ದಾರೆ. ಇರಲಿ.



ಪೈಗಳ ಬಾಲ್ಯ ಆ ಕಾಲದ ಬಹುತೇಕ ಮಕ್ಕಳಂತೆ ಕಳೆಯಿತು ಅಂದರೆ ನಾಲ್ಕನೆಯ ತರಗತಿಯವರೆಗೆ ಹತ್ತಿರದ ಶಾಲೆಯೊಂದಕ್ಕೆ ಹೋದಂತೆ ಮಾಡಿ, ಮುಂದಿನ ವಿದ್ಯಾಭ್ಯಾಸಕ್ಕೆ ಶಾಲೆ ದೂರವಿದೆ ಎಂದು ಹೋಗಲಾಗದೇ ಇರುವ ಅಡಿಕೆತೋಟದಲ್ಲೇ ಕೆಲಸ ಮಾಡಿಕೊಂಡಿರುವುದು ಎಂದು ನಿರ್ಧಾರವಾಯಿತು. ಹಾಗೇ ಅಡಿಕೆ ಹೆಕ್ಕುವುದು, ಸೊಪ್ಪು ತರುವುದು, ಕಳೆ ತೆಗೆಯುವುದು, ಗೊಬ್ಬರ ಹೊರುವುದು ಮುಂತಾದ ಕೆಲಸಗಳನ್ನು ಮಾಡುತ್ತಾ ತೋಟದ ಉಸ್ತುವಾರಿಯಲ್ಲಿ ನುರಿತರಾಗಿ ಯೌವ್ವನಾವಸ್ಥೆಗೆ ಕಾಲಿಟ್ಟ ಪೈಗಳಿಗೆ ಹತ್ತಿರದ ಕುಮಟೆಯ ಬಸ್ತಿಪೇಟೆಯ ಹುಡುಗಿಯೊಂದಿಗೆ ಮದುವೆಯೂ ಆಯಿತು. ಪೈಗಳ ಮದುವೆಯ ಸಂಭ್ರಮ ಮುಗಿಯುವಷ್ಟರಲ್ಲಿಯೇ ಅದೊಂದು ದುರಂತ ಘಟನೆ ನಡೆದುಹೋಯಿತು.

ಈಗ ಕೋಡ ಮಂಗಗಳ ಕಾಟವಿರುವಂತೆ ಆಗ ತೋಟ ಗದ್ದೆಗಳಿಗೆ ವಿಪರೀತ ಕಾಡುಹಂದಿಗಳ ಹಾವಳಿ ಜೋರಾಗಿತ್ತು. ಗುಂಪುಗುಂಪಾಗಿ ನುಗ್ಗುವ ಅವುಗಳ ಕಾಟಕ್ಕೆ ಯಾವ ಬೇಲಿಯೂ, ಅಡೆತಡೆಯೂ ನಿಲ್ಲುತ್ತಿರಲಿಲ್ಲ. ಬೆಳಗಾಗುವಷ್ಟರಲ್ಲಿ ಬಾಳೆ ಕಬ್ಬುಗಳ ತೋಟಕ್ಕೆ ತೋಟವೇ ನಾಶವಾಗುತ್ತಿತ್ತು. ರಾತ್ರಿಯ ಸಮಯದಲ್ಲಿ ಹೊಲಹೊಡೆಯುವ ಅಂದರೆ ಹಂದಿಬೇಟೆಯಾಡುವ ಜನರ ತಂಡವೇ ಇತ್ತು. ಹಂದಿಗಳು ಬಂದುಹೋಗುವ ಜಾಗದಲ್ಲಿ ವಿಷದ ಉಂಡೆಗಳನ್ನು, ನಾಡಬಾಂಬುಗಳನ್ನು ಇರಿಸುವದು ಮೊದಲಾದ ಗಾಂವಟಿ ವಿಧಾನಗಳೂ ಚಾಲ್ತಿಯಲ್ಲಿದ್ದವು ಅನ್ನುವಾಗ ನನಗೀಗ ಆ ಪ್ರಾಣಿಗಳ ಮೇಲೆ ಕನಿಕರವೆನಿಸುತ್ತಿದೆ.

ಪೈಗಳು ಅಂಥದ್ದೊಂದು ನಾಡಬಾಂಬನ್ನು ಅರಿವಿಲ್ಲದಂತೆ ಮುಟ್ಟಿ ಅದು ಕೈಯಲ್ಲೇ ಸ್ಫೋಟಗೊಂಡಿತ್ತು. ಹೊಸ ಮದುಮಗನ ಬಲಗೈಯ ಎರಡು ಬೆರಳುಗಳು ಮತ್ತು ಒಂದು ಕಾಲು ಈ ಘಟನೆಯಲ್ಲಿ ಜಖಂ ಆಗಿ ಯಾವ ಚಿಕಿತ್ಸೆಯೂ ಫಲಕಾರಿಯಾಗದೇ ಪೈಗಳು ಬೆರಳಿಲ್ಲದ ಕೈಗೆ ಬಟ್ಟೆ ಸುತ್ತಿ, ಬಲವಿಲ್ಲದ ಕಾಲನ್ನು ಎಳೆಯುತ್ತಾ ನಡೆಯತೊಡಗಿದ್ದರು. ಇದನ್ನು ದಿನವೂ ನೋಡುತ್ತಿದ್ದಂತೆ ಕ್ರಮೇಣ ಜನರ ಬಾಯಲ್ಲಿ ವೈಕುಂಠ ಎನ್ನುವ ಹೆಸರ 'ಠ' ಕೈಬಿಟ್ಟುಹೋಗಿ 'ಟ' ಚಾಲ್ತಿಗೆ ಬಂದಿತ್ತು. ಪೈಗಳು ಇದನ್ನು ಅಷ್ಟೇ ಸರಳವಾಗಿ ಒಪ್ಪಿಕೊಂಡಿದ್ದರು ಎಂದೇ ಆಗ ನನಗೆ ಅನಿಸಿತ್ತು. ಯಾಕೆಂದರೆ ಆ ನಾಡಬಾಂಬಿಟ್ಟವರು ಯಾರು ಎಂದಾಗಲಿ, ಅವರ ಬಗ್ಗೆ ಒಂದೇ ಒಂದು ಬೈಗುಳವನ್ನಾಗಲಿ ಪೈಗಳು ಬಳಸಿದ್ದು ಯಾರೂ ಕೇಳಿಲ್ಲ. ತನ್ನ ಜೀವನದ ಕುರಿತು ಒಂದು ಸಲವೂ ಬೇಸರ ಅಥವಾ ವ್ಯಥೆಪಟ್ಟಿದ್ದು ಕೂಡಾ ಇಲ್ಲವೇ ಇಲ್ಲ. ಈಗಲೂ ನನಗೆ ಅದೊಂದು ಸೋಜಿಗವಾಗಿ ಕಾಣುತ್ತದೆ. ಬಾಳಿನುದ್ದಕ್ಕೂ ಅವರ ಆಧಾರಸ್ತಂಭವಾಗಿ ನಿಂತ ಅವರ ಪತ್ನಿಯ ಕುರಿತು ಆಗ ಯೋಚಿಸದಿದ್ದರೂ ಈಗ ಅಪಾರ ಮೆಚ್ಚುಗೆ ಮತ್ತು ಕರುಣೆ ಎರಡೂ ಒಟ್ಟಿಗೇ ಮೂಡುತ್ತದೆ. ಬದುಕನ್ನು ಸಹಜವಾಗಿ, ಸರಳವಾಗಿ ಸ್ವೀಕರಿಸಿದ ಪೈಗಳಂಥವರೇ ನಮ್ಮ ಹಿಂದಿನ ತಲೆಮಾರುಗಳ ನಿಜವಾದ ಶಕ್ತಿ ಎಂದೂ ಅನಿಸುತ್ತದೆ.

ಆದರೆ ಅದೊಂದು ಆಕಸ್ಮಿಕ ಅವಘಡ ಪೈಗಳ ವ್ಯಕ್ತಿತ್ವಕ್ಕೆ ಒಂದು ನಿಗೂಢ ಆಕರ್ಷಣೆಯನ್ನು ಕೊಟ್ಟಿತು. ವೈಕುಂಠ ಪೈಗಳಿಗಿಂತ ವೈಕುಂಟ ಪೈಗಳೇ ಹೆಚ್ಚು ಜನಪ್ರಿಯರಾದರು. ಮೊದಲು ಹೆಚ್ಚು ಮಾತನಾಡದೇ ತಾನಾಯಿತು ತನ್ನ ಕೆಲಸವಾಯಿತು



ಎಂದಿದ್ದ ಪೈಗಳು ಈಗ ಹೆಚ್ಚೆಚ್ಚು ಮಾತನಾಡತೊಡಗಿದರು. ಅದೂ ಹೇಗೆ? ಇಲ್ಲದ ಬೆರಳುಗಳ ಮತ್ತು ಕಾಲಿನ ಶಕ್ತಿಯೆಲ್ಲ ಅವರ ನಾಲಿಗೆಗೆ ಬಂದ ಹಾಗಿತ್ತು. ಚಿಕ್ಕಪುಟ್ಟ ವಿಷಯಗಳಿಗೆ ಖಿನ್ನತೆ ಆವರಿಸುವ ಈ ಕಾಲದಲ್ಲಿ ಅಂಥ ದುರಂತದಲ್ಲೂ, ಕರುಣೆಯಿಲ್ಲದೇ ಹೀಯಾಳಿಸುತ್ತಿದ್ದ ಜನರ ಮಧ್ಯದಲ್ಲಿಯೇ ಪುಟಿದೇಳುವ ಶಕ್ತಿ ಬಂದದ್ದು ಹೇಗೆಂದು ನನಗೆ ಸತ್ಯವಾಗಿಯೂ ಗೊತ್ತಿಲ್ಲ.

ಸಾಯಂಕಾಲ ಆಯ್ತು ಅಂದರೆ ಪಕ್ಕದ ಕತಗಾಲ ಊರಿನ ಕಟ್ಟೆಯಲ್ಲಿ ಸಾಮಾನ್ಯವಾಗಿ ಊರಿನ ಮುಖಂಡರೆಲ್ಲ ಕುಳಿತು ತಮ್ಮ ಕಷ್ಟಸುಖ ಮಾತಾಡುವುದು ಆ ಕಾಲದಿಂದ ನಡೆದು ಬಂದ ಪದ್ಧತಿ. ಮುಂಚೆ ಒಂದು ಜನವೇ ಅಲ್ಲದಿದ್ದ ವೈಕುಂಟ ಪೈಗಳು ಈಗ ಆ ಒಡ್ಡೋಲಗದ ಅನಭಿಷಿಕ್ತ ಅಧಿಪತಿ. ಈಗೀಗ ಕಟ್ಟೆಯಲ್ಲಿ ಜನ ಸೇರುವುದೇ ಪೈಗಳ ಮಾತು ಕೇಳಲು ಎನ್ನುವುದು ಅಂದಿನ ವಾಸ್ತವ. ಟಿವಿ, ಮೊಬೈಲುಗಳು ಇಲ್ಲದಿದ್ದ ಆ ಕಾಲದಲ್ಲಿ ಪೈಗಳ ಮಾತು ಭರ್ಜರಿ ಮನರಂಜನೆ ನೀಡುತ್ತಿದ್ದದ್ದು ಸುಳ್ಳಲ್ಲ. ಮಧ್ಯದ ಎರಡು ಬೆರಳಿಲ್ಲದ ಅವರ ಕೈ ಕೃಷ್ಣನ ಗೋವರ್ಧನ ಪರ್ವತ ಎತ್ತಿದ ಕೈಯ ಹಾಗೆ ಕಾಣುತ್ತಿದುದರಿಂದ ಕಟ್ಟೆಯ ಸದಸ್ಯರು ಅವರಿಗೆ ಗೋವರ್ಧನ ಗಿರಿಧಾರಿ ಎಂಬ ರಹಸ್ಯ ಹೆಸರಿನಿಂದಲೂ ಕರೆಯುತ್ತಿದ್ದರು ಎನ್ನುವುದು ಅವರಿಗೆ ಗೊತ್ತಿರಲಿಲ್ಲ ಅಂದುಕೊಂಡು ಸಮಾಧಾನಪಟ್ಟಿದ್ದೇನೆ.

ನನಗೆ ವೈಕುಂಠ ಪೈಗಳ ಮಾತುಗಳನ್ನು ನೆನಪಿಸಿಕೊಳ್ಳುವುದೂ ಒಂದು ಥೆರಪಿಯ ಹಾಗೆ ತೋರುತ್ತದೆ. ನಿನ್ನೆ ನಮ್ಮ ತಮ್ಮನ ಮನೆಯ ಗೃಹಪ್ರವೇಶ ಎಷ್ಟು ಭರ್ಜರಿಯಾಗಿತ್ತು, ಅವನ ಮನೆಯಂತೂ ಅರಮನೆಯ ಹಾಗಿದೆ ಎಂದು ಆ ದಿನಗಳ ಕಟ್ಟೆಯ ಖಾಯಂ ಮೆಂಬರುಗಳಲ್ಲಿ ಒಬ್ಬರಾದ ಶ್ರೀಪಾದ ಭಟ್ಟರು ಮಾತುಕತೆಯನ್ನು ಆರಂಭಿಸಿದ್ದೇ ತಡ, ವೈಕುಂಟ ಪೈಗಳು ತಮ್ಮ ಎಂದಿನ ವರಸೆಯಲ್ಲಿ ಶುರುಮಾಡಿಯೇ ಬಿಟ್ಟರು.

"ಯಲ್ಲಾಪುರದ ನಮ್ ತಮ್ಮನ ಮನೆ ನೋಡಬೇಕು ನೀವು ಜಗಲಿಯಿಂದ ಅಡಿಗೆಮನೆಗೆ ಹೋಗುಕೆ ರಿಕ್ಷಾ ಮಾಡ್ಕಂಡ ಹೋಗಬೇಕು. ನೂರ್ ಜನ ಬಂದ್ರೂ ಜನ ಇದ್ದಂಗೇ ಕಾಣ್ಸುದಿಲ್ಲ. ಅಲ್ಲಿ ಮಕ್ಳು ಕ್ರಿಕೆಟ್ ಆಡುದೆಲ್ಲಿ ಗೊತ್ತದೆ? ಎಲ್ಲಾಗಿರುದ್ರ.. ಹೇಳಿನೋಡ್ವ.. ಎಂದು ಒಂದು ನಾಟಕೀಯ ವಿರಾಮ ನೀಡಿದಾಗ ನಾಯ್ಕ ಮಾಸ್ತರರು 'ಅಂಗಳದಲ್ಲಿ..?' ಎಂದು ಮಾತನ್ನು ಮುಂದುವರಿಸಲು ಅನುವು ಮಾಡಿಕೊಟ್ಟರು.

"ಅಂಗಳದಲ್ಲಿ?.. ನಿಮ್ ಮಳ್ ಹಾಳಾಯ್ತು.. ಮೆತ್ತಿ ಮೇಲೆ ಮಾಳಗೆ ಮೇಲೆ ದಿನಾ ಸಂಜಿಗೆ ಇಪ್ಪತ್ ಮಕ್ಳು ಸೇರ್ಕಂಡು ಕ್ರಿಕೆಟ್ ಆಟ ಆಡ್ತು. ಅಷ್ಟ ದೊಡ್ಡದೆ ಮನೆ" ಅಂದಾಗ ಕಟ್ಟೆಯ ಮೇಲೆ ಕುಳಿತವರು ಪೈಗಳ ತಮ್ಮನ ಅರಮನೆಯಿಂದ ಹೊರಗೆ ಬರಲು ದಾರಿ ತಿಳಿಯದೇ ಚಡಪಡಿಸುತ್ತಿದ್ದರು. ಪೈಗಳ ಮಾತು ಎಂದರೆ ಹಾಗೇ. ಮಾತಿನಲ್ಲೇ ಮನೆ ಕಟ್ಟಿ ನಿಲ್ಲಿಸುತ್ತಿದ್ದರು. ಆದರೆ ಅವರು ಮಾತು ಶುರು ಮಾಡಬೇಕೆಂದರೆ ಯಾರಾದರೂ ಒಂದು ಚಿಕ್ಕ ಸುಳಿವು ಕೊಡಬೇಕಿತ್ತು ಅಷ್ಟೇ.



ಅಷ್ಟರಲ್ಲಿ ಒಂದು ಬೈಕು 'ವ್ರೂಮ್' ಎಂದು ಹಾದು ಹೋದಾಗ ಸೋಡಾ ಮಾದೇವ ' ನೋಡ್ರ..ಈಗಿನ ಮಕ್ಳು ಗಾಡಿ ಬಿಡು ಚಂದವ..' ಅಂದದ್ದೇ ತಡ, ಮತ್ತೆ ಪೈಗಳ ರೈಲು ಮುಂದೋಡತೊಡಗಿತು."ಇದ್ ಯೆಂತಾ ಸ್ಪೀಡು? ಕಳೆದ ದೀವಳಿಗಿಗೆ ಕರುಕೆ ನಮ್

ತಂಗಿ ಮನೆ ಹುಬ್ಬಳ್ಳಿಗೆ ಹೋಗಿದ್ದೆ. ಕರೆದಾಯ್ತು, ಅನ್ನ ಪಾಯ್ಸ ಉಂಡೂ ಆಯ್ತು, ನಾ ಇನ್ನ ಮನೆಗೆ ಹೋಗ್ತೆ ಅಂದೆ. ನನ್ನ ತಂಗಿ ಮಗ ನಾನೂ ಬತ್ತೆ ನನ್ನ ಬೈಕಲ್ಲಿ ಹೋಗ್ವ ಅಂದ. ಆಯ್ತು ಗಾಡಿ ಜೋರ್ ಬಿಡೂಕಾಗ ಹೇಳಿ ತಂಗಿ ಕಳಸಕೊಟ್ಟು. ಬೈಕ್ ಸ್ಟಾರ್ಟ್ ಮಾಡಿ, ಮಾವಾ ಹತ್ತು ಅಂದ. ನಾ ಹತ್ತಿ ಕಾಲ್ ಇಟ್ಕಳುದೆಲ್ಲಿ ನೋಡಕಂಡು ಸರಿ ಕೂತ್ಕಂಬುದ್ರಲ್ಲಿ ಮಾವಾ ಸಣ್ಣ ಮಾವನ ಮನೆ ಬಂತು ಅಂದ. ನಾ ನೋಡದ್ರೆ ಖರೇ ಹೌದು..ಎಲ್ ಬಂದಾಗಿತ್ರ ನಾವು”.. ಎಂದಿನ ರೆಟಾರಿಕ್ ಪ್ರಶ್ನೆಯೊಂದಿಗೆ ಮತ್ತೆ ಸಣ್ಣ ನಾಟಕೀಯ ವಿರಾಮ..”ಯಲ್ಲಾಪುರ!” ಗಾಳಿಯಲ್ಲೇ ಹುಬ್ಬಳ್ಳಿಯಿಂದ ಯಲ್ಲಾಪುರಕ್ಕೆ ಹೋದ ಬೈಕಿನ ಧೂಳು ಈಗ ಎಲ್ಲರ ಕಣ್ಣಿನಲ್ಲಿ!

ಅವರ ಕುಂಬಳಕಾಯಿಯ ಕಥೆಯೊಂದು ಹೀಗಿದೆ. ಆವತ್ತು ವಾಮನ ನಾಯಕರು ಅವರ ಮನೆಯಲ್ಲಿ ನಾಲ್ಕಾರು ಕುಂಬಳಕಾಯಿ ಬಿಟ್ಟಿರುವ ಬಗ್ಗೆ ಹೇಳಿದಾಗ ಎಂದಿನಂತೆ ಎಲ್ಲರೂ ಪೈಗಳ ಮಾತಿಗೆ ಅಣಿಯಾದರು. ಪೈಗಳ ಮಾತುಗಳಲ್ಲೇ ಕೇಳಿ.. “ನಮ್ಮನೆ ಬಳ್ಳೀಲಿ ಬಿಟ್ಟ ಕುಂಬಳಕಾಯಿಗಳು ಎಷ್ಟು ದೊಡ್ಡದು ಎಂದರೆ ನಮ್ಮನೆಗೆ ಬಂದಿದ್ದ ಬಾವ ರಾತ್ರಿಯಲ್ಲಿ ಅವುಗಳನ್ನು ನೋಡಿ ಹಂದಿಗೋಲೆ ಬಂದಿದೆ ಎಂದು ಕೋವಿ ಈಡು ಮಾಡಿ ಹೊಡೆಯಲು ಹೋಗಿದ್ದ. ಪುಣ್ಯಕ್ಕೆ ಬ್ಯಾಟ್ರಿ ಬಿಟ್ಟು ನೋಡದಾ.. ಆಗ ಅವಂಗೆ ಗೊತ್ತಾಯ್ತು..ಅದು ಹಂದಿ ಅಲ್ಲ.. ನಮ್ಮನೆ ಕುಂಬಳಕಾಯಿ..” ಸುತ್ತಲಿನವರ ಕಣ್ಣು ಬಾಯಿಗಳು ಆ ಅಸಾಮಾನ್ಯ ಕುಂಬಳಕಾಯಿಯ ಗಾತ್ರಕ್ಕೆ ಸ್ಪರ್ಧಿಸುವಂತಿದ್ದವು.

ಪೈಗಳ ಮಗಳ ಮನೆಯ ನೆಲ್ಲಿಕಾಯಿ ಗಾತ್ರದ ಯಾಲಕ್ಕಿ, ಹುಲಿಯನ್ನು ಹಿಮ್ಮೆಟ್ಟಿಸಿದ ಅವರ ಅಣ್ಣನ ನಾಯಿ, ಸೀಯಾಳದಷ್ಟೇ ಸಿಹಿ ನೀರಿರುವ ಅವರ ಮನೆಯ ಬಾವಿ, ಅವರ ಅಕ್ಕನ ಮನೆಯ ತೋಟದಲ್ಲಾಗುವ ಒಬ್ಬರಿಂದ ಎತ್ತಲಾಗದಷ್ಟು ದೊಡ್ಡ ತೆಂಗಿನಕಾಯಿ.. ಹೀಗೆ ಪೈಗಳು ಹೇಳಿದ ಅದ್ಭುತ ರಮ್ಯ ಕಥೆಗಳು ಅಸಂಖ್ಯ. ಒಟ್ಟಿನಲ್ಲಿ ಅವರದೊಂದೇ ಅಲ್ಲ, ಅವರ ನೆಂಟರು ಬಂಧು ಬಳಗದವರ ಮನೆಗಳಲ್ಲೂ ಅದ್ಭುತಗಳೇ ಘಟಿಸುತ್ತಿದ್ದವು. ಯಾರು ಯಾವ ವಿಷಯವನ್ನು ಎತ್ತಿದರೂ ಅದು ಏನೇನೂ ಅಲ್ಲ ಎಂಬ ಧೋರಣೆಯಲ್ಲಿ ಪೈಗಳ ಮಾತಿರುತ್ತಿತ್ತು. ಅವರ ಮಾತುಗಳು ಅದೆಷ್ಟು ಅತಿಶಯೋಕ್ತಿಯಿಂದ ಕೂಡಿದ್ದರೂ, ಯಾರಿಗೂ ಅವುಗಳ ಸತ್ಯಾನ್ವೇಷಣೆ ಮಾಡಿ ಅದರ ರಸಾನುಭವ ಕಳೆದುಕೊಳ್ಳುವ ಮನಸ್ಸಿಲ್ಲದೇ ಇದ್ದುದರಿಂದಲೋ ಏನೋ ಅವರ ಉತ್ಪ್ರೇಕ್ಷಾಲಂಕಾರ ಕೊನೆಯವರೆಗೂ ನಿರಾತಂಕವಾಗಿ ಸಾಗಿತ್ತು. ಎಷ್ಟೋ ಸಲ ಅವರ ಮಾತುಗಳನ್ನು ಕೇಳಲೆಂದೇ ಅವರನ್ನು ಮನೆಗೆ ಕರೆದು ಚಾ ಕೊಟ್ಟು ಕೂರಿಸಿ ಮಾತನಾಡಿಸಿ ಕಳುಹಿಸಿದವರೂ ಇದ್ದರು.

ವೈ’ಕುಂಟ’ನೆಂದು ಕರೆದು ಮೂದಲಿಸಿದವರು ಅಂದುಕೊಂಡಿದ್ದ ಜನರೇ ಅವರು ಹೇಳಿದ್ದ ಕಟ್ಟು ಕಥೆಗಳನ್ನೆಲ್ಲ ನಂಬಿದಂತೆ ನಟಿಸಿ ಅವರನ್ನು ಖುಷಿಯಾಗಿಟ್ಟರೋ ಅಥವಾ ತಾನು ಹೇಳುತ್ತಿರುವುದು ಅತಿರಂಜಿತವೆಂದೂ ಗೊತ್ತಿದ್ದೂ ಹಾಗೆ ಹೇಳುವದರಲ್ಲೇ ಪೈಗಳು ತಮ್ಮ ಕಷ್ಟವನ್ನು ಮರೆತು ಸುಖಪಡುತ್ತಿದ್ದರೋ ಖಂಡಿತವಾಗಿಯೂ ನನಗೆ ಗೊತ್ತಿಲ್ಲ. ಇನ್ನೊಂದು ಅರ್ಥವಾಗದ ಸಂಗತಿಯೆಂದರೆ ಇಲ್ಲಿ ಗೆಲ್ಲುವುದು ಕ್ರೌರ್ಯವೋ ಅಥವಾ ಮಾನವತೆಯೋ ಅನ್ನುವುದು.



■

# ಬೈಗುಳದ ರಹಸ್ಯ

***ಈಶ್ವರ ಚಂದ್ರ**

ದುಬಾರಿ ನಗರ ಬೆಂಗಳೂರಿಗೆ ವರ್ಗವಾದಾಗ ಸ್ವಲ್ಪ ಯೋಚನೆಯಾಗಿತ್ತು. ನನ್ನ ಪತಿ ಕಡಿಮೆ ಬಾಡಿಗೆ ಅಂತ ಊರ ಹೊರವಲಯದಲ್ಲಿ ಮನೆ ಮಾಡಿದ್ದರು. ಈ ಹೊಸ ಬಡಾವಣೆಯಲ್ಲಿ ಅಲ್ಲೊಂದು, ಇಲ್ಲೊಂದು ಮನೆ, ಜನ ಸಂಚಾರ ಕಡಿಮೆ, ಅದೃಷ್ಟಕ್ಕೆ ನಮ್ಮ ಮನೆಯ ಪಕ್ಕದಲ್ಲೇ ಒಂದು ಮನೆ ಇತ್ತು. ಅಲ್ಲೊಬ್ಬರು ಮಧ್ಯ ವಯಸ್ಸಿನ ಮಹಿಳೆ ಇದ್ದರು. ಆದರೆ ಬಂದು ಮೂರು ದಿನವಾದರೂ ಅವರ ದರ್ಶನವಾಗಿರಲಿಲ್ಲ. ಕೆಲಸದವರು ಮಾತ್ರ ಮೂರು ಜನ ಬರುತ್ತಿದ್ದರು. ಇರೋ ಒಬ್ಬರಿಗೆ ಮೂರು ಜನ ಯಾಕೆ? ಒಬ್ಬರಾದ ಮೇಲೆ ಒಬ್ಬರು ಬರುತ್ತಿದ್ದರು. ಸದ್ದಿಲ್ಲ, ಗದ್ದಲವಿಲ್ಲ. ಆದರೆ ಮೂರನೆಯವಳು ಬಂದಾಗ ಏನೋ ಜಗಳ. ಆ ಅಜ್ಜಿ ಒಂದೇ ಸಮನೆ ಬೈಯುವುದು ಕೇಳಿಸುತ್ತಿತ್ತು. ಆದರೆ ಸ್ಪಷ್ಟವಾಗಿ ಏನೂ ಗೊತ್ತಾಗುತ್ತಿರಲಿಲ್ಲ. ಒಂದೋ, ಎರಡೋ ಶಬ್ದ ಕೇಳಿಸಿಕೊಂಡು ಪೂರ್ತಿ ಬೈಗುಳವನ್ನು ಊಹಿಸಿಕೊಳ್ಳಬೇಕಾಗಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ ಯಾಕೆ ಹಾಗೆ ಒಂದೇ ಸಮನೆ ಬೈಯುತ್ತಾಳೆ ಎಂಬ ಪ್ರಶ್ನೆ. ಆದರೆ ಆ ಕೆಲಸದವಳು ತುಟಿಪಿಟಿಕ್ ಅನ್ನುತ್ತಿರಲಿಲ್ಲ. ಇದೊಂದು ಸೋಜಿಗ.

ದಿನದಿನಕ್ಕೆ ಕುತೂಹಲ ಕೆರಳುತ್ತಿತ್ತು. ನನಗೆ ಬೇರೇನು ಕೆಲಸ? ಬೆಳಗ್ಗೆ ಬೇಗ ಎದ್ದು ತಿಂಡಿ, ಅಡಿಗೆ ಮುಗಿಸಿ ಡಬ್ಬಿ ಕಟ್ಟಿಕೊಟ್ಟರೆ ಮುಗೀತು ಕೆಲಸ. ನನ್ನ ಪತಿ ಬೆಳಗ್ಗೆ ಹೋದರೆ ಬರುವುದು ರಾತ್ರಿಗೇ. ಪಕ್ಕದ ಮನೆಯ ಅಜ್ಜಿಯನ್ನಾದರೂ ಪರಿಚಯ ಮಾಡಿಕೊಳ್ಳೋಣ ಎಂದು ಐದನೆಯ ದಿನವೇ ಅವರ ಮನೆಗೆ ಹೋದೆ. ಅಜ್ಜಿ ಬಾಗಿಲು ತೆರೆದು "ಬನ್ನಿ" ಎಂದು ಸ್ವಾಗತಿಸಿದರು.

"ಪಕ್ಕದ ಮನೆಗೆ ಹೊಸದಾಗಿ ಬಂದಿದೀರಲ್ವ ನೀವು? ಏನು ಹೆಸರು?"

ಹೇಳಿದೆ. ಸ್ವಲ್ಪ ಹೊತ್ತು ಅದೂ ಇದೂ ಮಾತನಾಡಿದ ಮೇಲೆ ನಾನು ನೇರವಾಗಿ ವಿಷಯಕ್ಕೆ ಬಂದೆ.

"ಅಲ್ಲಾ ಮನೇಲಿ ನೀವಿರೋದು ಒಬ್ಬರು. ಮೂರು ಜನ ಕೆಲಸದವರು ಬರ್ತಾರಲ್ಲ?"

"ಬೆಳಗ್ಗೆ ಏಳು ಗಂಟೆಗೆ ನಿಂಗಮ್ಮ ಬರ್ತಾಳೆ, ಅಂಗಳ ಗುಡಿಸಿ ನೀರು ಹಾಕಿ ರಂಗೋಲಿ ಹಾಕ್ತಾಳೆ. ಆ ಮೇಲೆ ಮನೆಯೊಳಗೆ ಕಸಗುಡಿಸಿ, ನೆಲ ಒರೆಸಿ, ಪಾತ್ರೆ ತೊಳೆದು, ಬಟ್ಟೆ ಒಗೆದು ಒಣ ಹಾಕಿ, ನಿನ್ನೆ ಬಟ್ಟೆಗಳನ್ನು ಮಡಿಸಿಟ್ಟು ಹೋಗ್ತಾಳೆ. ಆಮೇಲೆ ಒಂಬತ್ತು ಗಂಟೆಗೆ ರಂಗಮ್ಮ ಬರ್ತಾಳೆ"

'ನಿಂಗಮ್ಮ....ರಂಗಮ್ಮ!'

'ರಂಗಮ್ಮ ತಿಂಡಿ, ಅಡಿಗೆ ಮಾಡಿಟ್ಟು ಹೋಗ್ತಾಳೆ. ಆಮೇಲೆ...'

'ಗಂಗಮ್ಮ..?'

'ಓಹ್ ನಿಮಗೆ ಗೊತ್ತಾ ಅವಳು ?"

"ಗಂಗಮ್ಮ ಹನ್ನೊಂದು ಗಂಟೆಗೆ ಬರ್ತಾಳೆ"

'ಅವಳನ್ನು ನೋಡಿದೀನಿ, ನೀಟಾಗಿ ಡ್ರೆಸ್ ಮಾಡ್ಕೊಂಡು ಬರ್ತಾಳಲ್ವ?'

'ಹೌದು...ಹೌದು..ಅವಳೇ ಗಂಗಮ್ಮ'



‘ಅವಳು ಬಂದ ಕೂಡಲೇ ನೀವು ಬೈಯಕ್ಕೆ ಷುರು ಮಾಡ್ತೀರಲ್ಲ?” ಎಂದೆ.

“ಹೌದು...ಇಲ್ನೋಡಿ ಈ ನೋಟ್ ಪುಸ್ತಕದ ತುಂಬ ಬರೆದಿಟ್ಟಿದೀನಿ’

ಬೈಗುಳಗಳನ್ನು ದಿನಕ್ಕೆ ಐದು ಪುಟ. ಒಂದು ದಿನ ಬೈದದ್ದನ್ನು ಮತ್ತು ಮೂವತ್ತು ದಿನ ಬೈಯೋ ಹಾಗಿಲ್ಲ. ಕೊನೆಯಲ್ಲಿ ಸ್ವಲ್ಪ ಖಾಲಿ ಪುಟಗಳನ್ನು ಬಿಟ್ಟಿದ್ದೀನಿ. ಹೊಸ ಹೊಸ ಬೈಗುಳಗಳನ್ನು ಸೃಷ್ಟಿ ಮಾಡಿದಾಗ ಅಲ್ಲಿ ಬರೀತೀನಿ”

‘ಹೇಗೆ ಸೃಷ್ಟಿ ಮಾಡ್ತೀರಿ?’

‘ಎರಡು ಮೂರು ಶಬ್ದಗಳನ್ನು ಸೇರಿಸಿ ಒಂದು ಬೈಗುಳ ಮಾಡೋದು, ಈಗ ನೀವು ಮೂರು ಶಬ್ದ ಕೊಡಿ, ಒಂದು ಬೈಗುಳ ಸೃಷ್ಟಿ ಮಾಡ್ತೀನಿ?!’

ನಾನು ಸ್ವಲ್ಪ ಯೋಚಿಸಿ ಸಂಬಂಧವೇ ಇಲ್ಲದ ಮೂರು ಶಬ್ದಗಳನ್ನು ಹೇಳಿದೆ– “ತಲೆ, ಕೆಸರು, ಸಗಣಿ”

‘ಅದೇನು ಮಹಾ! ತುಂಬಾ ಸುಲಭ!’ ಎಂದು ಚಪ್ಪಾಳೆ ತಟ್ಟುತ್ತಾ, ಅವರೆಂದರು, – ನಿನ್ನ ತಲೇಲಿ ಸೆಗಣಿ ತುಂಬಿದೆಯೋ, ಕೆಸರು ತುಂಬಿದೆಯೋ?’

‘ಕಣ್ಣು, ಕಾಲು”

“ ನಿಂದೇನು ಕಣ್ಣು ಕುರುಡೋ ಕಾಲು ಕುಂಟೋ”

“ಕತ್ತೆ”

“ನಿನಗಿಂತ ಒಂದು ಕತ್ತೆನೇ ವಾಸಿ!”

‘ನಿನ್ನ ಬೈಗುಳ ಸಾಮರ್ಥ್ಯ ಈಗ ಅರ್ಥವಾಯ್ತು” ಆದರೆ ಅಶ್ಲೀಲ ಬೈಗುಳ ನೀವು ಬೈಯೋದಿಲ್ಲ!”

“ಇಲ್ಲಪ್ಪ, ನಂಗೂ ಅವು ಗೊತ್ತು. ಮುಂ...ರಂ...ಹುಂ....” ಎಂದೆಲ್ಲಾ ಷುರು ಆಗ್ತಾವಲ್ಲ...ನಾನಂತೂ ಅಶ್ಲೀಲ ಬೈಗುಳ ಬೈಯೋದಿಲ್ಲ. ಬೈಯೋದರಲ್ಲೂ ಡೀಸೆಂಟಾಗಿ ಇರಬೇಕು. ಮೈಸೂರು ವಿಶ್ವ ವಿದ್ಯಾನಿಲಯದ ಒಬ್ಬ ಸಂಶೋಧನಾ ವಿದ್ಯಾರ್ಥಿ ಬಂದಿದ್ದ. ‘ಜಾನಪದ ಬೈಗುಳಗಳು’ ಅವನ ಸಂಶೋಧನಾ ಪ್ರಬಂಧದ ವಿಷಯ ನನ್ನ ಬೈಗುಳಗಳನ್ನೆಲ್ಲ ಎರಡು ಗಂಟೆ ಧ್ವನಿ ಮುದ್ರಣ ಮಾಡಿಕೊಂಡು ಹೋದ. ಅವನೂ ಕೂಡ ಇದೇ ಪ್ರಶ್ನೆ ಕೇಳಿದ. ನಾನು ಅಶ್ಲೀಲ ಬೈಗುಳ ಬೈಯೋದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟೆ. ಮತ್ತೆ ಬರ್ತೀನಿ ಅಂತ ಹೇಳಿ ಹೋಗಿದ್ದಾನೆ?”

“ಈಗ ಇನ್ನೊಂದು ಪ್ರಶ್ನೆ ಉಳೀತು, ನೀವು ಗಂಗಮ್ಮಂಗೆ ಯಾಕೆ ಬೈತೀರಿ? ನಿಮ್ಮನೇಲಿ ಅವಳು ಏನು ಕೆಲಸ ಮಾಡ್ತಾಳೆ?”

“ಏನೂ ಇಲ್ಲ!”

“ಅಂದ್ರೆ ಬರೀ ಬೈಸಿಕೊಳ್ಳೋದೇ ಅವಳ ಕೆಲಸಾನ?”

“ಕರೆಕ್ಟ್, ಇನ್ನೊಂದು ಗಂಟೆಗೆ ಸರಿಯಾಗಿ ಬಂದು ಇಲ್ಲಿ ಸೋಫಾ ಮೇಲೆ ಕೂತ್ಕೋತಾಳೆ. ನಾನು ಎದುರಿಗೆ ಕೂತ್ಕೊಂಡು ಬೈಯಕ್ಕೆ ಷುರು ಮಾಡ್ತೀನಿ, ಸರಿಯಾಗಿ ಒಂದು ಗಂಟೆ, ಹನ್ನೆರಡಕ್ಕೆ ವಾಪಸ್ ಹೋಗ್ತಾಳೆ”

“ಆದ್ರೆ ಯಾಕೆ?”

“ನೋಡಿ ಇವರೆ, ನಿಮ್ಮ ಯಜಮಾನರ ಹಾಗೇ ನನ್ನ ಯಜಮಾನರೂ ಬೆಳಗ್ಗೆ



ಕೆಲಸಕ್ಕೆ ಹೋದರೆ ರಾತ್ರಿ ವಾಪಸ್ ಬರ್ತಿದ್ರು, ಮನೆಯಲ್ಲಿ ನಾನು ಒಬ್ಬಳೇ..."

"ಮಕ್ಕಳು ಮರಿ?"

"ಇದಾರೆ ಮೂರು ಜನ. ಎರಡು ಗಂಡು, ಒಂದು ಹೆಣ್ಣು, ಬೇರೆ ಬೇರೆ ದೇಶಗಳಲ್ಲಿ ಅವರ ಪಾಡಿಗೆ ಅವರು ಇದಾರೆ. ಇಲ್ಲಿ ಇಡೀ ದಿನ ಒಬ್ಬಳೇ ಇದ್ದು, ಬೋರ್ ಹೊಡೆಯುತ್ತೆ. ಇವರು ಆಫೀಸಿನಿಂದ ಬಂದ ಕೂಡ್ಲೆ ಒಂದು ಲೋಟ, ಕಾಫಿ ಕೊಟ್ಟು ಬೈಯೋಕೆ. ಷುರು ಮಾಡ್ತಿದ್ದೆ. ಪಾಪ ಹಸುವಿನಂಥ ಸಾಧು ಪ್ರಾಣಿ, ಒಂದು ಗಂಟೆ ಸುಮ್ಮನೆ ಕೇಳಿ ಆಮೇಲೆ ಅಪ್ಪಿಕೊಂಡು ತಲೆ ನೇವರಿಸೋರು. ಅಲ್ಲಿಗೆ ನನ್ನ ಉದ್ವೇಗವೆಲ್ಲ ಶಮನವಾಗ್ತಿತ್ತು.."

"ಈಗ"

"ಈಗ ಅವರಿಲ್ಲ, ತೀರಿಕೊಂಡು ಮೂರು ವರ್ಷ ಆಯಿತು. ಈಗ ಯಾರಿಗೆ ಬೈಯೋದು. ಅದಕ್ಕೇ ಗಂಗಮ್ಮನ್ನ ಕೆಲಸಕ್ಕೆ ಇಟ್ಕೊಂಡಿದ್ದೀನಿ" ಒಂದು ಗಂಟೆ ಬೈಸಿಕೊಳ್ಳೋದಷ್ಟೇ ಅವಳ ಕೆಲಸ. ತಿಂಗಳಿಗೆ ಮೂರು ಸಾವಿರ ಸಂಬಳ."

"ಓಹ್"!

'ಆದ್ರೆ ಒಂದು ಗುಟ್ಟು ಏನು ಗೊತ್ತಾ? ಅವಳಿಗೆ ಒಂದು ಚೂರೂ ಕಿವಿ ಕೇಳಲ್ಲ. ನೀವು ಸ್ಟೋನ್ ಡೆಫ್ ಅಂತೀರಲ್ಲ, ಹಾಗೆ ನಾನು ಏನು ಬೇಕಾದ್ರೂ ಬೈಯಬಹುದು – ಯಾವ ಅಪಾಯವೂ ಇಲ್ಲದೆ!"

"ತುಂಬ ಚೆನ್ನಾಗಿದೆ"

"ಬೇಕಾದ್ರೆ ನೀವೂ ಈ ಪುಸ್ತಕ ತಗೊಂಡು ಹೋಗಿ ಕ್ಸೆರಾಕ್ಸ್ ಮಾಡಿಸಿಕೊಳ್ಳಿ, ನಿಮ್ಮ ಯಜಮಾನರೂ ಕೂಡ ಬೆಳಗ್ಗೆ ಹೋದರೆ ರಾತ್ರೀನೇ ಬರೋದಲ್ವಾ?" ಎಂದರು.

* * *

ನನ್ನ ಪತಿ ಇದನ್ನೆಲ್ಲಾ ಕೇಳಿ ಚೆನ್ನಾಗಿ ನಕ್ಕರು. "ನೀನು ಬೇಕಾದ್ರೆ ಗಂಗಮ್ಮನ ಕೆಲಸಕ್ಕೆ ಇಟ್ಟುಕೋ" ಎಂದರು.

"ಬೇಡಪ್ಪ, ಅದರಲ್ಲಿ ಮಜಾ ಸಿಗೋದಿಲ್ಲಾ, ಡೈರೆಕ್ಟಾಗಿ ಬೈದರೇ ಮಜಾ!" ಎಂದು ನಾನು ನಕ್ಕೆ.

ಮರುದಿನ ಗಂಗಮ್ಮ ಪಕ್ಕದ ಮನೆಯಿಂದ ಹೊರ ಬಂದಾಗ, ಗೇಟ್ ಬಳಿಯೇ ನಿಂತಿದ್ದ ನಾನು ಸನ್ನೆ ಮಾಡಿ ಬಳಿಗೆ ಕರೆದೆ. "ಸನ್ನೆಯ ಮೂಲಕ ಅವಳೊಡನೆ ಸಂವಹನ ಮಾಡಲು ಪ್ರಯತ್ನಿಸಿದೆ.

"ನಂಗೆ ಕಿವಿ ಚೆನ್ನಾಗೇ ಕೇಳುತ್ತಮ್ಮ. ಅವರ ಸಂತೋಷಕ್ಕೆ ಕಿವುಡಿ ಥರಾ ನಟಿಸ್ತೀನಿ, ಅಷ್ಟೆ!'' ಎಂದಳು.

"ಬರ್ತೀನಿ, ಇನ್ನೊಂದು ಮನೆಗೆ ಹೋಗಬೇಕು"

'ಅಲ್ಲೆಷ್ಟು ಸಂಬಳ?" ಎಂದೆ

'ಅಲ್ಲೂ ಮೂರು ಸಾವಿರ, ಬರ್ತೀನಿ. ಲೇಟಾದ್ರೆ, ಬೈತಾರೆ" ಎಂದು ಬಿರಬಿರ ನಡೆದಳು.



■

# ಬದುಕಿದೆಯಾ ಬಡ ಜೀವಿ...?

***ಅರವಿಂದ.ಜಿ.ಜೋಷಿ**

ಕಚೇರಿಯ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ತಲೆ ಚಿಟ್ಟು ಹಿಡಿದ ಪರಮೇಶಿಗೆ, ಸಧ್ಯ ತಾನು ಯಾವಾಗ ಮನೆಗೆ ಹೋಗಿ ಬಿಸಿ ಬಿಸಿ ಕಾಫಿ ಕುಡಿದೇನೋ ಎಂದು ಎನಿಸತೊಡಗಿತ್ತು. ಕರೆಕ್ಟಾಗಿ ಐದೂ ನಲವತ್ತಾಗುತ್ತಿದ್ದಂತೆ ಸ್ಕೂಟರ್ ಏರಿ ಮನೆಯತ್ತ ಬಂದು ಗೇಟು ತರೆದ. ಹಜಾರದಲ್ಲಿ ತನ್ನ ಮೈ ಕೈ ಎಲ್ಲ ಬಣ್ಣಮಯ ಮಾಡಿಕೊಂಡು ಡ್ರಾಯಿಂಗ್ ಬಿಡಿಸುತ್ತಿದ್ದ ಆತನ ಐದು ವರ್ಷದ ಪುತ್ರಿ ಕತ್ತೆತ್ತಿ ನೋಡಿ "ಅಮ್ಮಾ..ಅಪ್ಪಾ ಬಂದ್ರು.." ಎಂದು ಮಗ್ಗುಲಲ್ಲಿನ ಕುರ್ಚಿ ಮೇಲೆ ಕುಳಿತು ಮೊಬೈಲ್‌ನಲ್ಲಿ ಮಗ್ನಳಾಗಿದ್ದ ತನ್ನ ತಾಯಿಯತ್ತ ಕೂಗಿ ಹೇಳಿತು. "ಬರ್ಲಿ ಬಿಡು.. ನಾನೇನು ಮಾಡ್ಲಿ?.." ಮೊಬೈಲ್ ನಲ್ಲಿ ಮುಳುಗಿದ್ದವಳ ಬಾಯಿಯಿಂದ ಮುತ್ತು ಉದುರಿತು. ಒಳಗೆ ಬಂದು ಫ್ರೆಶಪ್ ಆದ ಪರಮೇಶಿ ಹಜಾರದ ವಾತಾವರಣ ಗಮನಿಸಿ, ತನ್ನತ್ತ ನೋಡುತ್ತಿದ್ದ ಮಗಳಿಗೆ ಸಂಜ್ಞೆ ಮೂಲಕ ತನ್ನ ಹೆಬ್ಬೆರಳನ್ನು ತುಟ ಬಳಿ ತಂದು "ಕಾಫಿ" ಎಂದ. ತಕ್ಷಣವೇ ಆ ಮಗು ಅಮ್ಮನ ಕಡೆ ತಿರುಗಿ ""ಅಮ್ಮಾ.. ಅಪ್ಪಂಗೆ ಕಾಫೀ ಬೇಕಂತೆ" ಎಂದಿತು. ಯಥಾಸ್ಥಿತಿಯಲ್ಲಿ ಕುಳಿತಿದ್ದ ಪಮ್ಮೀ, ಕತ್ತು ಕೂಡ ಎತ್ತದೇ "ಫ್ಲಾಸ್ಕ್‌ನಲ್ಲಿದೆ ಹಾಕ್ಕೊಂಡು ಕುಡಿಯೊಕೆ ಹೇಳು" ಎಂದಷ್ಟೇ ನುಡಿದು ಪುನಃ ಮೊಬೈಲ್‌ನಲ್ಲಿ ಗಮನ ಕೇಂದ್ರಿಕರಿಸಿದಳು. ಆ ಮಾತನ್ನೇ ಮಗು ರಿಪೀಟ್ ಮಾಡಲು ಮುಂದಾದಾಗ, ಪರಮೇಶಿ ತನ್ನಷ್ಟಕ್ಕೆ ತಾನು"ಆಯ್ತು.. ಆಯ್ತು" ಎಂದು ಹಸ್ತ ತೋರಿಸುತ್ತ ಅಡುಗೆ ಮನೆಗೆ ಹೋಗಿ ಲೋಟಕ್ಕೆ ಕಾಫಿ ಬಗ್ಗಿಸಿ ಕುಡಿದ. ಹೊಟ್ಟೆ ಹಸಿವಿನಿಂದ ತಾಳ ಹಾಕುತ್ತಿತ್ತು. ಶೆಲ್ಫ್‌ನಲ್ಲಿದ್ದ ಎರಡು ಡಬ್ಬ ತಡಕಾಡಿದ. ಊಹೂಂ ಏನೂ ದೊರೆಯಲಿಲ್ಲ. ಅಷ್ಟರಲ್ಲಿ ಆ ಮಗು ಅಡುಗೆ ಮನೆಗೆ ಬಂದು "ಏನಪ್ಪಾ ಹುಡುಕ್ತಾ ಇದ್ದೀ.." ಎಂದು ಮುದ್ದು ಮುದ್ದಾಗಿ ಕೇಳಿದಾಗ ಆತ "ತಿಂಡಿ" ಎನ್ನುತ್ತ ಬೇರೆ ಡಬ್ಬ ಹುಡುಕಲಾರಂಭಿಸಿದ. ಅಪ್ಪನ ಸಂಕಟ ನೋಡದೇ ಆ ಮಗು ಈ ಬಾರಿ ಅಮ್ಮನ ಬಳಿ ಬಂದು ಅವಳ ಭುಜ ಅಲ್ಲಾಡಿಸುತ್ತ "ಏ ಅಮ್ಮಾ.. ಅಪ್ಪಂಗೆ ಹಸಿವೆ ಆಗಿದೆಯಂತೆ ಅವಲಕ್ಕಿ ಚೂಡಾ ಎಲ್ಲಿ..?" ಎಂದು ಕೇಳಿತು. ಅದಕ್ಕೆ ನಿರೀಕ್ಷಿತ ಉತ್ತರ ಬಾರದಿದ್ದಾಗ ಈ ಸಲ ಮೊದಲಿಗಿಂತ ಜೋರಾಗಿ ಅಮ್ಮನ ಭುಜದ ಅಲ್ಲಾಡಿಸುತ್ತ ಮತ್ತದೇ ಪ್ರಶ್ನೆ ಕೇಳುವ ರಭಸದಲ್ಲಿ ಪಮ್ಮೀ ಕೈಯಲ್ಲಿದ್ದ ಮೊಬೈಲ್ "ರಪ್" ಅಂತ ಅಷ್ಟು ದೂರ ಹೋಗಿ ಅಡುಗೆ ಮನೆಯಲ್ಲಿದ್ದ ಡೈನಿಂಗ್ ಟೇಬಲ್ ಕೆಳಗೆ ಬಿದ್ದು ಅದರ ಗಾರ್ಡ್ ಗಾಜು ಸೀಳಿಬಿಟ್ಟಿತು. ಸಾಕಲ್ಲ–ಅದರದೇ ಏಕಾಗ್ರತೆಯಲ್ಲಿದ್ದ ಪಮ್ಮೀ, ಧಡಾರ್‌ನೆ ಕುರ್ಚಿಯಿಂದ ಎದ್ದು, ಮಗಳಿಗೆ ಸಹಸ್ರ ನಾಮಾರ್ಚನೆ ಮಾಡುತ್ತ ಅದನ್ನು ಎತ್ತಿಕೊಳ್ಳಲು ಬರುವಷ್ಟರಲ್ಲಿ ಅಲ್ಲಿಯೇ ಇದ್ದ ಪರಮೇಶಿ ಎತ್ತಿ ಕೊಟ್ಟ. ಅವನಿಂದ ವಟಗುಡುತ್ತಲೇ ಪಡೆದ ಅವಳು ಹತ್ತಾರು ಬಾರಿ ಸರ್ಕಸ್ ಮಾಡಿದಳಾದರೂ ಜಪ್ಪಯ್ಯ ಎಂದರೂ ಅದು ಸ್ಟಾರ್ಟ್ ಆಗಲೇ ಇಲ್ಲ!

ಕುದಿಯುತ್ತಿದ್ದ ಕೋಪವನ್ನೆಲ್ಲ ಪತಿಯತ್ತ ತಿರುಗಿಸುತ್ತ ಏರು ಸ್ವರದಲ್ಲಿ "ಎಲ್ಲಾ ನಿಮ್ಮಿಂದಲೇ ಆಗಿರೋದು, ಮೊದ್ಲು ಹೋಗಿ ರಿಪೇರಿ ಮಾಡ್ಸಕೊಂಡು ಬನ್ನಿ.. "ಎಂದು ಗುಡುಗಿದಳು. ಪಾಪದ ಪರಮೇಶಿಗೆ ಒಂದು ಕಡೆ ಹೊಟ್ಟೆ ಹಸಿವು, ಮತ್ತೊಂದು ಕಡೆ ಅರ್ಧಾಂಗಿಯ ಕೂಗಾಟದಿಂದಾಗಿ ಸಣ್ಣದಾಗಿ ಸಿಡಿಯುತ್ತಿದ್ದ ಆತನ ತಲೆ ಇನ್ನಷ್ಟು ಜೋರಾಗಿ ಸಿಡಿಯಲಾರಂಭಿಸಿತು. ಅವಳನ್ನು ಸಮಾಧಾನ ಪಡಿಸುವಂತೆ "ಎಲ್ಲೀ..ಕೊಡು



ನೋಡ್ತೇನೆ.." ಎಂದು ಅವಳಿಂದ ಕೇಳಿದಾಗ ಆಕೆ ಅದೇ ಟೋನ್‌ನಲ್ಲಿ "ಏನೂ ಬೇಕಾಗಿಲ್ಲ, ಇದ್ದದ್ದೂ ಹಾಳ್ ಮಾಡ್ತಿರಷ್ಟೇ ಮೊದ್ಲು ಹೋಗಿ ರಿಪೇರಿ ಮಾಡ್ಸ ಕೊಂಡು ಬನ್ನೀ." ಎಂದು ಫರ್ಮಾನು ಹೊರಡಿಸಿದಳು. ಸಧ್ಯ ಈ ಒಂದು ನೆಪದಲ್ಲಾದರೂ ಆಚೆಗೆ ಹೋಗಿ ಫ್ರೇಶ್ ಗಾಳಿ ಸೇವಿಸಿ ಅಲ್ಲೆ ಎಲ್ಲಾದರು ಹೊಟ್ಟೆಗೊಂದಿಷ್ಟು ಹಾಕ್ಕೊಂಡು ಬಂದರಾಯ್ತು ಎಂದು ಒಳಗೊಳಗೇ ಲೆಕ್ಕ ಹಾಕಿ ಖುಷಿ ಪಡುತ್ತ ಅವಳಿಂದ ಮೊಬೈಲ್ ಪಡೆದು, ಸ್ಕೂಟರ್ ಏರಿ ಹೊರಟ. ಮೊಬೈಲ್ ಅಂಗಡಿಯಾತನಿಗೆ ಅದನ್ನು ತೋರಿಸಿದಾಗ ಆತ ಒಂದು ಕಡೆಯಿಂದ ಅದರ ಪಾರ್ಟ್ಸ್‌ಗಳನ್ನು ಬಿಚ್ಚಿ ಪರಿಶೀಲಿಸಿದಾಗ "ಸಾರ್ ಇದು ಈಗ ಆಗಲ್ಲ, ಸ್ವಲ್ಪ ಕೆಲಸ ಹಿಡಿತ್ತೈತೆ .. ನಾಳೆ ಇದೇ ಟೈಂ ಗೆ ಬನ್ನಿ "ಎಂದ. ಅದನ್ನು ಕೇಳಿಸಿಕೊಂಡ ಪರಮೇಶಿ ಮನದಲ್ಲೇ "ಆಯ್ತು... ಇನ್ನು ನಾನು ಬರಿ ಕೈಯಲ್ಲಿ ಹೋದರೆ ಅಷ್ಟೇ..." ಎಂದುಕೊಳ್ಳುತ್ತ ಅಂಗಡಿಯಾತನಿಗೆ "ಅಪ್ಪಾ...ಮಾರಾಯಾ ನಿನಗೆ ಬೇಕಾದ್ರೆ ಇನ್ನೂ ನೂರೋ ಇನ್ನುರೋ ಜಾಸ್ತಿ ಕೊಡ್ತೇನೆ, ಒಂದು ಗಂಟೆ ತಗೊಂಡ್ರೂ ಪರವಾಗಿಲ್ಲ ದಯವಿಟ್ಟು ಕೆಲಸಾ ಮಾಡಿ ಕೊಡಪ್ಪಾ." ಎಂದು ಕಳಕಳಿಯಿಂದ ಕೇಳಲಾರಂಭಿಸಿದ. ಮನಸ್ಸಿನೊಳಗೆ ಒಂದು ಪಕ್ಷ ಇವನೇನಾದರೂ ಆಗಲ್ಲಾ ಅಂದ್ರೆ ರಾತ್ರಿ ಇಡೀ.. ಅಯ್ಯೋ ದೇವ್ರೆ..-ನೆನೆಸಿಕೊಂಡರೆ ಭಯ ಆಗುತ್ತೆ ಎಂದು ಅಂದು ಕೊಳ್ಳುತ್ತಿದ್ದಂತೆ ಆತನ ಸೆಲ್ ಫೋನ್ ರಿಂಗಿಣಿಸಿತು. ತೆಗೆದು ನೋಡಿದ ಮನೆಯ ಲ್ಯಾಂಡ್ ಲೈನ್‌ನಿಂದ ಬಂದಿತ್ತು. "ಹಲ್ಲೋ.."ಎಂದ ಕ್ಷೀಣ ಸ್ವರದಲ್ಲಿ. ಆ ಬದಿಯಿಂದ ಅರ್ಧಾಂಗಿ "ಆಯ್ತಾ..?" ಎಂದು ಕೇಳಿದ ಪ್ರಶ್ನೆಗೆ ಪರಮೇಶಿ ತಡಬಡಾಯಿಸುತ್ತ "ಅದ್ರೊಳಗೆ ಯಾವ್ದೊ ಪಾರ್ಟ ಹೋಗಿದೆ ಅಂತ, ನಾಳೆ ಸಂಜೆ ಹೊತ್ತಿಗೆ ರೆಡಿ ಮಾಡಿ ಕೊಡ್ತೀನಿ ಅಂತ ಹೇಳ್ತಿದ್ದಾರೆ" ಎಂದು ಹೇಳಿ ಮುಗಿಸುವಷ್ಟರಲ್ಲಿ ಆತನ ಹಣೆಯ ಬೆವರಿನಿಂದ ತುಂಬಿತ್ತು. ಇತ್ತ ಮುಂದುವರೆದ ಪಮ್ಮೀ "ಪರವಾಗಿಲ್ಲ ನಾಳೆನೇ ತನ್ನೀ.. ಈಗ ತಾನೇ ನಮ್ಮಮ್ಮ ಊರಿಂದ ಬಂದಿದ್ದಾಳೆ, ನೀವು ಮನೆಗೆ ಬರುವಾಗ ಆ ಕೃಷ್ಣಪ್ಪನ ಅಂಗ್ಡಿಯಿಂದ ಬಿಸಿ ಬಿಸಿ ಬಜ್ಜಿ, ಬೋಂಡಾ ಕಟ್ಟಿಸಿಕೊಂಡು ಬೇಗ ಬನ್ನಿ ಆಯ್ತಾ.." ಎಂದಾಗ ಪರಮೇಶೀಗೆ ನಿರಾಳವಾದಂತಾಗಿ ಆತ ಮನದಲ್ಲೇ "ಬದುಕಿದೆಯಾ ಬಡ ಜೀವಿ" ಎಂದುಕೊಳ್ಳುತ್ತ ಬಜ್ಜಿ, ಬೊಂಡಾ ಪಾರ್ಸೆಲ್‌ನೊಂದಿಗೆ ಖುಷಿ-ಖುಷಿಯಿಂದ ಮನೆಗೆ ಬಂದ.

■

---



ಬ್ಯಾಂಕಲ್ಲಿ ಯುಗಾದಿ ಲೋನ್ ಸಿಗುತ್ತ
ಅಂತ ಕೇಳೋದಕ್ಕೆ ಹೋಗ್ತಾ ಇದ್ದಿನಿ ಕಣೋ
ಈ ಸಲ ಯುಗಾದಿ ಹಬ್ಬಕ್ಕೆ ಅಳಿಯಿಂದ್ರು
ಬರ್ತಾ ಇದ್ದಾರೆ ಅದಕ್ಕೆ......!!

# ಹಬ್ಬದ ಸಂತೆ ಮತ್ತು ಎಳೇ ಕಂತೆ!

***ತುರುವೇಕೆರೆ ಪ್ರಸಾದ್**

'ಸತಿಯೊಡನೆ ಸಂತೆಗೋಗಿ ಚೀಲ ಎತ್ತದಿರೆಂತಯ್ಯ' ಎಂದು ಹಲವು ಅನುಭವಸ್ಥರು ಈಗಾಗಲೇ ಉಸ್ಸೆಂದು ನಿಟ್ಟುಸಿರು ಬಿಡುತ್ತಾ ಉಸುರಿ ಹೋಗಿದ್ದಾರೆ.ಅದು ನಮ್ಮಂತೆ ಸಂತೆಯಲ್ಲಿ ಹೆಂಡತಿಯ ಹಿಂದೆ ಚೀಲ ಹಿಡಿದು ಅನುನಾಯಿಗಳಾಗಿ ಹೋಗುವ ಎಲ್ಲಾ ಗಂಡಸರಿಗೂ ಪಕ್ಕಾ ಅನ್ವಯವಾಗುತ್ತದೆ. ನಾನೂ ಇದಕ್ಕೆ ಹೊರತಲ್ಲ. ಸಾಮಾನ್ಯವಾಗಿ ಮಾಮೂಲಿ ಸಂತೆಗಳನ್ನು ಹೆಂಗಸರೇ ಸ್ವತಂತ್ರವಾಗಿ ಮಾಡುತ್ತಾರೆ. ಅದು ಅವರ ಆಜನ್ಮಸಿದ್ಧ ಹಕ್ಕು! ಅಂತಹ ಸಂತೆಗಳಲ್ಲಿ ಅವರು ಗಂಡಸರ ಹಸ್ತಕ್ಷೇಪ ಇಷ್ಟಪಡುವುದಿಲ್ಲ. ಆದರೆ ಗಣಪತಿ ಹಬ್ಬ, ಮಾರ್ಣೋಮಿ, ಯುಗಾದಿಯಂತಹ ಹಬ್ಬದ ಸಂತೆಗಳಲ್ಲಂತೂ ಅವರು ಗಂಡನೆಂಬ ಕೂಲಿಯಿರದೆ ಸಂತೆಗೆ ಕಾಲಿಡುವುದೇ ಇಲ್ಲ.

ಹಾಗೆಂದು ನನಗೆ ಸಂತೆಗೆ ಹೋಗುವ ಛಾನ್ಸ್ ಸಿಗುವುದೇ ಇಲ್ಲ ಅಂತಲ್ಲ. ಅವಾಗವಾಗ ಹೆಂಡತಿಗೆ ಕಾಲೇಜಿಗೆ ರಜಾ ಇಲ್ಲದಾಗ, ಇಲ್ಲ ತಾನು ರಜಾ ಎಂದು ಕೂತಾಗಿ ಅನಿವಾರ್ಯವಾಗಿ ಸಂತೆ ಮಾಡುವ ಅವಕಾಶ ಸಿಗುತ್ತದೆ. ಅದು ಒಂದು ಅವಕಾಶ ಎನ್ನುವುದಕ್ಕಿಂತ ಪ್ರಾರಬ್ಧ ಕರ್ಮ ಎನ್ನುವುದೇ ಸರಿ. ಅವತ್ತು ನನ್ನ ಹಿಂದೆ ಬ್ಯಾಗ್ ಹಿಡಿದು ಬರುವವವರು ಯಾರೂ ಇರುವುದಿಲ್ಲ. ಬೆನ್ನಿನ ಭಾರದ ಜೊತೆಗೆ ತಲೆಯ ಬುದ್ಧಿಯನ್ನೂ ಉಪಯೋಗಿಸಬೇಕಾದ ಪರೀಕ್ಷಾ ಸಮಯವದು. ಹೆಣ್ಣು ನೋಡುವಂತೆ ಇಡೀ ಸಂತೆ ಅಲೆದು ಎಲ್ಲೆಲ್ಲಿ ಯಾವ್ಯಾವ ಹಣ್ಣು, ತರಕಾರಿಗಳು ಎಳೆಯದಾಗಿ ನಳನಳಿಸುತ್ತಿವೆ ಎಂದು ಮೊದಲು ಒಂದು ಗ್ರೌಂಡ್ ಸರ್ವೆ ಮಾಡಬೇಕು. ಆಮೇಲೆ ಹೆಂಡತಿ ಮಾಡಿಕೊಟ್ಟ ಪಟ್ಟಿ ತೆಗೆದು ಸೊಪ್ಪು, ಸದೆ, ಈರುಳ್ಳಿ, ಟೊಮೊಟೊ ಎಲ್ಲವನ್ನೂ ಕೊಳ್ಳುತ್ತಾ ಚೀಲದಲ್ಲಿ ತುಂಬಿಸಿಕೊಳ್ಳುತ್ತಾ, ಆ ಹೆಣಭಾರದ ಚೀಲವನ್ನು ಎಳೆದಾಡುತ್ತಾ ಮುಂದೆ ಹೋಗಬೇಕು. ಈ ಸತ್ವಪರೀಕ್ಷೆ ಯಾವ ಗಂಡನಿಗೂ ಬೇಡ ಅನಿಸಿಬಿಡುತ್ತದೆ.

ಏನೆಲ್ಲಾ ಸರ್ವೆ ಮಾಡಿದರೂ ಹಾಳಾದ್ದು ಕಣ್ಣು ಮೋಸ ಮಾಡಿಯೇ ಬಿಡುತ್ತದೆ. ಅದಕ್ಕಾಗಿ ತರಕಾರಿಯನ್ನು ಸವರಿಯೋ, ಚಿವುಟಿಯೋ, ತೊಟ್ಟು ಮುರಿದೋ, ನಡು ಮುರಿದೋ ಕ್ವಾಲಿಟಿ ಪರೀಕ್ಷೆ ಮಾಡಲೇಬೇಕು. ಹಾಗೆ ತರಕಾರಿಗೆ ಕೈ ಹಾಕುತ್ತಿದ್ದಂತೆ ವ್ಯಾಪಾರಸ್ಥರು ಗುರ್ ಎನ್ನುತ್ತಾರೆ. ಬೆಂಡೆಕಾಯಿ ಚಟ್ ಎನ್ನುತ್ತಾ? ಎಂದು ತೊಟ್ಟು ಮುರೀಯಕ್ಕೆ ಹೋದಾಗ ಅಜ್ಜಿಯೊಂದು' ನೀವು ಗಂಡುಸ್ರು ನಿಮ್ ಚಾಳಿ ಎಲ್ ಬಿಡ್ತೀರಿ, ನೀನೇ ಬಲಿತು ಗ್ವಾಳೆ ಆಗಿದೀಯ.. ಸಂತೆ ತುಂಬಾ ಎಳೇದು ಹುಡುಕ್ಕೊಂಡು ತಿರುಗ್ತೀಯ, ಆಹಾಹಾ! ತ್ರಿಪುರ ಸುಂದ್ರ' ಅಂತ ಮುಖ ಕೆತ್ತಿತ್ತು. ಇನ್ನೊಬ್ಬ 'ಏನ್ಸಾಮಿ, ಯಾವಾಗ್ಲೂ ಎಳೇದು ಅಂತಿರ್ತೀರಿ, ತಲೆ ಮಾಸು ಆರಿ ನೀವು ಬಲ್ತಿರೋ ಅಂಗೇ ಕಾಣ್ತಿಲ್ಲ. ಎಲ್ಲಾ ಕರ್ಮ, ನಿಮ್ ಎಂಡ್ರು ಇಂಥ ಎಳೆ ನಿಂಬೇಕಾಯ್ನ ಕಟ್ಕಂಡವ್ರಲ್ಲ' ಎಂದು ಜನ್ಮಜಾಲಾಡಿದ್ದ. ಅಷ್ಟೋ ಇಷ್ಟೋ ಪರಿಚಯ ಇದ್ದ ಧರ್ಮರಾಯನಪಾಳ್ಯದ ರೇಣುಕಮ್ಮ 'ಸೋಮಿ, ಎಳೇದ್ರಲ್ ಏನ್ ರುಚಿ ಬತ್ತದೆ? ಬಲ್ತಿದ್ ತಿನ್ಬೇಕು..ಅದೇ ತಾಕತ್ ಕೊಡಾದು' ಅಂತ ಕಿಸಕ್ಕನೆ ನಕ್ಕಿದ್ಲು. ಅವಳು ತರಕಾರಿ ಚೀಲ ಎತ್ತಲಾಗದ ನಾನು ಮತ್ತೇನು ಎತ್ತೇನು ಎಂದು ನನ್ನ ಪೌರುಷಕ್ಕೇ ಹೇಳಿದ್ಲಾ? ಅಥವಾ ತರಕಾರಿಗೆ ಹೇಳಿದ್ಲಾ ಅನ್ನೋ ಅನುಮಾನ ಈಗ್ಲೂ ನಂಗಿದೆ. ಹಾವಾಳದ ಚಿಕ್ಕನಂಜ ನಾನು ಸಂತೆಗೆ ಎಂಟ್ರಿ ಕೊಡ್ತಿದ್ದಂಗೇ 'ಓಹ್, ಏನು ಎಳೇ ಸ್ವಾಮಾರು? ಚೆನ್ನಾಗಿದೀರಾ?'



ಅಂತ ಲೇವಡಿಯಿಂದಲೆ ಮಾತು ಶುರುಮಾಡಲಾರಂಭಿಸಿದ ಮೇಲೆ ನಾನು ಸಂತೆಯನ್ನು ಅಯ್ಯಪ್ಪ ಸ್ವಾಮಿ ದೇವಾಲಯದ ಕಡೆಯ ಹಿತ್ತಲ ಬಾಗಿಲಿಂದ ಪ್ರವೇಶ ಮಾಡಲಾರಂಭಿಸಿದೆ.

ಇಷ್ಟೆಲ್ಲಾ ಕಷ್ಟಪಟ್ಟು ಎಲ್ಲಾ ಅವಮಾನ, ನಿಂದೆ ಸಹಿಸಿ ಬೆವರು ಸುರಿಸುತ್ತಾ ಚೀಲ ತುಂಬಿಸಿಕೊಳ್ಳುವ ಕಾರ್ಯಕ್ರಮ ಮುಗಿಯುತ್ತದೆ. ಆ ನಂತರ ಹಳೇ ರಿಪೇರಿಗಳು, ಸಂಡ್ರಿ ಐಟಮ್‌ಗಳನ್ನು ಹುಡುಕುವ ಕಾರ್ಯಕ್ರಮ ಶುರುವಾಗುತ್ತದೆ. ಜೇಬಲ್ಲಿರುವ ನಮ್ ತಾತನ ಕಾಲದ ಬ್ಯಾಟರಿಗೆ ನಾಲಗೆ ಹಾಕಿಸುವುದು, ಲೊಡ್ಡು ಗೊಡ್ಡಾದ ತೂತವೇ ಮುಚ್ಚಿಹೋದ ಬೀಗ ರಿಪೇರಿ ಮಾಡಿಸುವುದು, ಅಡಗೂಲಜ್ಜಿ ಕಾಲದ ಕೊಡೆಗೆ ಕಡ್ಡಿ ಹಾಕುವುದು, ಮಂದಳಿಕೆ ಚಾಪೆ ಹುಡುಕುವುದು, ತುಕ್ಕು ಹಿಡಿದು ಹೋದ ಪಿಕಾಸಿಗೆ ಚೌಕಾಸಿ ಮಾಡಿ ಕಾವು ಹಾಕಿಸುವುದು, ಜರಡಿ ಪ್ಲೇಟ್ ಹುಡುಕುವುದು ಇಂತಹ ಹತ್ತು ಹಲವು ಸಂಡ್ರಿ ಕಾರ್ಯಗಳಿಗೆ ಚೀಲ ಹಿಡಿದೇ ಸಂತೆಯಲ್ಲಾ ಅಲೆಯಬೇಕು. ಈ ವೇಳೆಗೆ ಗಜಗರ್ಭದಂತಹ ಚೀಲ ಉರುಟು ನೆಲದಿಂದಲೋ, ಅಥವಾ ತರಕಾರಿ ಹಾಕಿಸಿದ ಅಸಮತೋಲನದಿಂದಲೋ ಒಂದೆರಡು ಬಾರಿ ನೆಲಕ್ಕುರುಳಿ ಒಳಗಿದ್ದದ್ದನ್ನೆಲ್ಲಾ ವಯಕ್ಕನೆ ಕಕ್ಕಿರುತ್ತದೆ. ಉರುಳುತ್ತಾ ಓಡುವ ಟೊಮೊಟೊ, ನಿಂಬೆ, ಬೀಟ್‌ರೂಟ್, ಕೋಸು ಇವನ್ನೆಲ್ಲಾ ಜನರ ಪಾದಕ್ಕೆರಗಿ ಆಯ್ದು ಮತ್ತೆ ತುಂಬಿಸುವ ಹೊತ್ತಿಗೆ ಸಾಕು ಸಾಕಾಗುತ್ತದೆ.

ಕಂಕುಳಲ್ಲಿ ಚಾಪೆ, ಕೈಯಲ್ಲಿ ಕೊಡೆ, ಹೆಗಲ ಮೇಲೆ ಮಣಭಾರದ ಚೀಲ ಹೊತ್ತು ಉಸ್ಸಪ್ಪಾ ಎಂದು ಮನೆಗೆ ಬಂದ ಮೇಲಾದರೂ ಒಂದು ನಲ್ನುಡಿಯ ಸ್ವಾಂತನ, ಮೆಚ್ಚುಗೆಯ ಹೊನ್ನುಡಿ ಸಿಗುತ್ತದೆಯೇ? ಖಂಡಿತಾ ಇಲ್ಲ. ಆ ಚೀಲವನ್ನು ಮುಲಾಜಿಲ್ಲದೆ ತಲೆಕೆಳಗು ಮಾಡಿ ಹೆಂಡತಿ ಎನ್ನುವವಳು ನನ್ನ ಆಯ್ಕೆಯ ಗುಣಮಟ್ಟದ ಬಗ್ಗೆ, ನನ್ನ ಸಂತೆ ಕುಶಲತೆ, ಯೋಗ್ಯತೆಯ ಬಗ್ಗೆ ಮೌಲ್ಯಮಾಪನ ಹಾಕುತ್ತಾಳೆ. ಅವಳ ಮೊದಲ ಕಂಪ್ಲೇಂಟ್, ಅವಿವೇಕಿಯಂತೆ ಚೌಕಾಸಿ ಮಾಡದೆ ಕೇಳಿದಷ್ಟು ಹಣ ಸುರಿದು ಬಂದಿದ್ದೀರಿ ಎನ್ನುವುದು. ಸೊಪ್ಪಿಗೆ ಯಾಕೆ ಅಷ್ಟು ಕೊಟ್ರಿ? ಬದನೆಕಾಯಿಗೆ ಯಾಕೆ ಇಷ್ಟು ಕೊಟ್ರಿ? ಎಂದು ನನ್ನ ಕನಿಷ್ಟ ಜ್ಞಾನವನ್ನು ಎತ್ತಿಣೆಸದಿದ್ದರೆ ಅವಳಿಗೆ ಸಮಾಧಾನವೇ ಇಲ್ಲ. ಆ ನಂತರ ತರಕಾರಿಗಳ ಆಯ್ಕೆಯಲ್ಲಿ ನನ್ನ ಅವಿವೇಕತನದ ಪೋಸ್ಟ್‌ಮಾರ್ಟಂ ಶುರುವಾಗುತ್ತದೆ. ಈ ಬೆಂಡೆಕಾಯಿ ನೋಡಿ ತರಕ್ಕಾಗಲ್ವಾ? ನಿಮ್ ತರನೆ ಸುರುಟು ಸುರುಟಾಗಿದೆ.. ಏನ್ ಹುರುಳೀಕಾಯೋ? ನಿವ್ ಕೂದಲ ತರ ನಾರೆದ್ದು ಹೋಗಿದೆ..ಬದನೇಕಾಯೆಲ್ಲಾ ನಿಮ್ ಬಟ್ಟೆ ತರ ಕಂದರೆದ್ದು ಹೋಗಿದೆ..ನಿಮ್ ತಲೆ ತರ ಉರುಟು ಸೌತೇಕಾಯಾ ತರೋದು? ಅಯ್ಯೋ! ಈ ಹಾಗಲಕಾಯ್ ಯಾಕ್ರೀ ತಂದ್ರೀ? ಇದು ನಿಮ್ಮಷ್ಟೇ ಕಹಿ ಮುಂಡೇದು.. ಹೀರೇಕಾಯಿ ನಿಮ್ ತರನೇ ಸೊಂಟ ಬಗ್ಗಿಸ್ಕೊಂಡು ಬಲಿತು ಗ್ವಾಳೆ ಆಗಿದೆಯಲ್ರೀ? ಟೊಮೊಟೊನ ಚೀಲದ ಕೆಳಕ್ಕೆ ಹಾಕುಸ್ಕೊತಾರಾ? ಎಲ್ಲಾ ಬಜ್ಜಿ ಆಗಿ ಹೋಗಿದೆ..ಸೊಪ್ಪು ನೋಡಿ, ಎಲ್ಲಾ ಥೇಟ್ ನಿಮ್ ಮುಖದ ತರ ಕಲೆ ಕಲೆ, ತೂತು ತೂತು, ನಿಂಬೆಹಣ್ಣು ಪೀಚು ಪೀಚು.. ಇದು ಕುಂಬಳಕಾಯೇನ್ರೀ? ನಿಮ್ ತಲೆ ತರ ಲೊಳಲೊಟ್ಟೆ, ಲೊಳ ಲೊಳ ಅಲ್ಲಾಡುತ್ತಲ್ರೀ? ಆಯುಧ ಪೂಜೆ ದಿವಸ ಡಮಾರ್ ಅನಿಸುವಂತ ಪೀಚು ತಂದಿದೀರಿ. ನಿಮಗೆ ಹೇಳ್ತೀನಿ ನೋಡಿ, ಎಲ್ಲಾ ನನ್ ಕರ್ಮ! ಎಲ್ಲಾ ಬಲಿತದ್ದೇ ತುಂಬ್ಕೊಂಡ್ ಬಂದಿದೀರಲ್ರೀ? ಇದಕ್ಕೆ ದುಡ್ ಬೇರೆ ಕೇಡು," ಎಂದು ನನ್ನ ಜನ್ಮ ಜಾಲಾಡ್ತಾಳೆ. ಹಿಂದೆಯೇ ಹಣ್ಣುಗಳ ಪರಾಮರ್ಶೆ ನಡೆಯುತ್ತದೆ. 'ಅಲ್ರೀ ಎಳೆ ಸೇಬು ತಂದಿದೀರಲ್ರೀ, ಸೀಬೇಕಾಯೂ ಅಷ್ಟೇ ಬರೀ



ಹೀಚು ಹೀಚು..ಕಾಯಿ ಕಾಯಿ..ಬಲಿತೇ ಇಲ್ಲ..' ಎಂದು ಮುಖ ಮುರಿಯುತ್ತಾಳೆ. ನಾನು ಸಮಜಾಯಿಷಿ ನೀಡಿ 'ಅಲ್ವೇ, ಎಲ್ಲಾ ಎಳೇದು ತನ್ನಿ ಅಂದಿದ್ಯಲ್ಲ, ಅದಕ್ಕೇ ಈ ತರ ತಂದೆ ಎಂದರೆ 'ಆಹಾ! ನಿಮ್ ಜನರಲ್ ನಾಲೆಜ್‌ಗೆ ಬಡ್ಕೊಬೇಕು, ಅಲ್ರೀ ಹಣ್ಣುಗಳನ್ನ ಯಾರಾದ್ರೂ ಪೀಚು, ಎಳೇದು ತರ್ತಾರೇನ್ರೀ? ಬಲಿತಿರೋದು ದ್ವಾರಗಾಯಿ ತರ್ಬೇಕಲ್ವಾ? ನಮ್ಮಪ್ಪ ಅಮ್ಮ ಅದೇನು ಅಂತ ನಿಮ್ಮಂತ ಸೋರೇಕಾಯಿ ಬುರುಡೆನ ನನ್ ಕೊರಳಿಗೆ ಗಂಟ್ ಹಾಕ್ಬಿಟ್ರೋ ಎಂದು ಅವಲತ್ತುಕೊಳ್ಳುತ್ತಾಳೆ.

ಈ ಒಂದು ಸುತ್ತಿನ ಮಾನ ಮರ್ಯಾದೆ ಹರಾಜಾದ ನಂತರ ಸಂಜೆ ದುಂಡು ಕಾಂಪೌಂಡ್ ಪರಿಷತ್ತಿನಲ್ಲಿ ಈ ವಾರದ ಸಂತೆ ಸ್ವಾರಸ್ಯಗಳ ಚರ್ಚೆ ನಡೆಯುತ್ತದೆ. ಇದರಲ್ಲಿ ಹೆಂಗೆಳೆಯರು ಅಂದಿನ ಸಂತೆಯ ಧಾರಣೆಗಳು, ವಿವಿಧ ತರಕಾರಿಗಳ ಅವುಕ, ನಡೆದ ಎಡವಟ್ಟುಗಳು, ಮಾಡಿದ ಚೌಕಾಶಿ ಮುಂತಾದವುಗಳ ಬಗ್ಗೆ ಕೊಚ್ಚಿಕೊಳ್ಳುವ ಬಿಸಿ ಬಿಸಿ ಚರ್ಚೆಗಳು ನಡೆಯುತ್ತವೆ. ಅಲ್ಲೂ ಸಹ 'ಅಯ್ಯೋ ಇವತ್ತು ಅಷ್ಟಕ್ಕಷ್ಟೇ ಕಣ್ರೀ, ನಮ್ ಯಜಮಾನ್ರನ್ನ ಕಳಿಸಿದ್ದೆ, ಏನೋ ಒಂದಿಷ್ಟು ಕೆಲಸಕ್ ಬಾರದ್ ಕಸನ ತುಂಬ್ಕೊಂಡು ಬಂದಿದಾರೆ' ಅಂತ ಕನಿಷ್ಠ ಒಂದಿಬ್ಬರು ನಾರೀಮಣಿಗಳು ಕಾಲ್ ಎಳೆಯುವ ಕೆಲಸ ಮಾಡೇ ಮಾಡುತ್ತಾರೆ. ಈ ಮಧ್ಯೆ ಯಾರೋ ಒಬ್ಬಳು ಮಹರಾಯಿತಿ ಆ ವಾರದ ಸಂತೆಯ ಸಂದಿಯಲ್ಲೆಲ್ಲೋ ಇದ್ದ ಅವರೆಕಾಯನ್ನೋ, ಗಜ್ಜುರಿ ಗೆಣಸನ್ನೋ ಧರೆಗಿಳಿದ ವಿಶೇಷ ಎನ್ನುವಂತೆ ಬ್ರೇಕಿಂಗ್ ನ್ಯೂಸಾಗಿ ಬಿತ್ತರಿಸಿಯೇ ಬಿಡುತ್ತಾಳೆ. ಅಂತಹ ಒಂದು ಸೆಶನ್ ಮುಗಿಸಿ ಬಂದ ಹೆಂಡತಿ ಒಮ್ಮೆ ನನ್ನ ತರಾಟೆಗೆ ತೆಗೆದುಕೊಂಡಳು:

"ಅಲ್ರೀ, ಆ ಅಂಬುಜಮ್ಮನೋರು ಅಂತ ಚೆನ್ನಾಗಿ ಸೊಗಡು ಅವರೆಕಾಯಿ ತಂದ್ರಂತೆ. ನಿಮಗೇನ್ರೀ ಆಗಿತ್ತು ದಾಢಿ? ಕನ್ನಡಕ ಹಾಕ್ಕೊಂಡ್ರೂ ಕಣ್ಣಿಗೆ ಬೀಳ್ಳಿಲ್ವಾ ನಿಮಗೆ?"

"ಅಯ್ಯೋ! ನೋಡ್ದೆ ಕಣೆ, ಆದ್ರೆ ಅದರ ತುಂಬಾ ಹುಳ ಅಂದ್ರೆ ಹುಳ, ಅದಕ್ಕೇ ತರ್ಲಿಲ್ಲ"

"ರೀ! ಅವರೆಕಾಯಿ ಚೆನ್ನಾಗಿದ್ರೆ ತಾನೇ ಹುಳ ಬೀಳೋದು..ಇಷ್ಟಕ್ಕೂ ಹುಳ ಇದೆ ಅಂದ್ರೆ ಅದಕ್ಕೆ ಔಷಧಿ ಹೊಡ್ದಿಲ್ಲ, ಅದು ಸಾವಯವ ಅಂತ ಆಯ್ತು ತಾನೆ? ನಿಮ್ ತಲೆಲೂ ಶತಶತಮಾನದಿಂದ ಹೊಟ್ಟು, ಹೇನು ಇದೆ..ಹಾಗಂತ ತಲೆನೇ ತೆಗೆದ್‌ಬಿಡಕ್ಕಾಗುತ್ತಾ? ನಾನು ಅನುಸರಿಸ್ಕೊಂಡ್ ಹೋಗ್ತಿಲ್ವಾ?"

ನಾನು ಉತ್ತರ ಹೇಳಲಾಗದೆ ತಲೆ ಕೆರೆದುಕೊಂಡು ನಿಂತೆ. ಹೆಂಡತಿ ಮುಂದುವರೆಸಿದಳು: "ಅಂಬುಜಮ್ಮನೋರು ಎಲ್ಲಾ ತರಕಾರಿನ ಹಾಫ್ ರೇಟ್ ಚೀಪ್ ರೇಟ್‌ಗೆ ತಂದಿದಾರೆ. ನೀವೂ ಇದೀರಿ. ಬಲಿತ ಗೋಳೆನ ಒಂದಕ್ಕೆರಡು ರೇಟ್ ಕೊಟ್ಟು ತಂದಿದೀರಿ.."

ನನಗೂ ರೇಗಿ ಹೋಯ್ತು, 'ಸಂತೆಯೆಲ್ಲಾ ಗಂಟ್ ಕಟ್ಟಿದ್ ಮೇಲ್ ಹೋಗಿ ಎಲ್ಲಾ ಬಿಟ್ ಹೋಗಿರೋ ಕಸ ತುಂಬ್ಕೊಂಡ್ ಬಂದಿರೋರು ಅವರು, ಬೇಕಾದ್ರೆ ನೀನೂ ಹೋಗಿ ತುಂಬ್ಕೊಂಡ್ ಬಾ..ಕಸ ಎತ್ತೋ ಮುನಿಸಿಪಾಲಿಟಿಯೋರು ಅಂತ ಯಾರಾದ್ರೂ ಟಿಪ್ಸೂ ಕೊಡ್ತಾರೆ..' ನಾನೂ ಕೂಗಿ ಅಲ್ಲಿಂದ ಜಾಗ ಕಾಲಿ ಮಾಡಿದೆ.



ಹೀಗೆ ಹೇಗೋ ಲಂಡಾಯ ಬಂಡಾಯದಲ್ಲಿ ಈ ಸಂತೆ ಮಾಡುವುದು ನಡೆಯುತ್ತಲೇ ಇತ್ತು. ಆದರೆ ಒಮ್ಮೆ ಒಂದು ಅವಘಡ ನಡೆದುಹೋಯ್ತು. ಎಳೆಯ ತರಕಾರಿಯನ್ನು

ಹುಡುಕಿ, ಚಿಗುಟುವ ಪ್ರಯತ್ನದಲ್ಲಿ ನನ್ನನ್ನೇ ನಾನು ಮೈ ಮರೆತು ಯಾವನೋ ಹಲಾಲ್ಕೋರ ನನ್ನ ಅಂಗಿ ಜೇಬಿನಲ್ಲಿದ್ದ ಮೊಬೈಲನ್ನೇ ಚಾಚಚಕ್ಯತೆಯಿಂದ ಹಾರಿಸಿಕೊಂಡು ಹೋದ. ಮನೆಗೆ ಬಂದ ಮೇಲೆಯೇ ನನಗೆ ಮೊಬೈಲ್ ಎತ್ತಿದಾರೆ ಅಂತ ಗೊತ್ತಾಗಿದ್ದು. 'ಅಟ್ಟದಿಂದ ಬಿದ್ದೋರನ್ನ ಹೆಡೆಮೊಟ್ಟೆಲಿ ಹೊಡುದ್ರು' ಅನ್ನೋ ಹಾಗೆ ಅವತ್ತು ಹೆಚ್ಚೇ ಪೂಜೆ ಆಯ್ತು. '35 ಸಾವಿರದ ಮೊಬೈಲು, ಅಷ್ಟೂ ಜ್ಞಾನ ಇರ್ಲಿಲ್ವಾ ನಿಮಗೆ? ಎಂದು ಉಗಿದಳು. 'ಅಲ್ವೇ, ಎಳೇದು ನೋಡಕ್ಕೆ ಹೋದೆ, ಹೀಗಾಯ್ತು, ನಾನೇನು ಮಾಡ್ಲೇ?' ಎಂದು ಅವಲತ್ತುಕೊಂಡೆ. ಅದಕ್ಕವಳು 'ಸಂತೇಲಿ ಬರೀ ಎಳೆ ತರಕಾರಿ ನೋಡಿದ್ರೆ ಹೀಗಾಗ್ತಿತ್ತಾ? ನೀವು ಯಾರ ಬಳೆ ನೋಡ್ತಾ ಮೈ ಮರೆತು ನಿಂತಿದ್ರೋ? ಯಾವನೋ ಮೊಬೈಲ್ ಹೊಡ್ಕೊಂಡ್ ಹೋಗಿದಾನೆ! ನೀವು ಕಂಡ ಕಂಡ ಹೆಂಗಸರ ಹತ್ರ ಲಲ್ಲೆ ಹೊಡೀತಾ ನಿಂತಿರ್ತೀರಿ ಅಂತ ನಂಗೊತ್ತು.. ಸಂತೆ ನವೆ ಅಲ್ಲ ನೆವ ಮಾಡ್ಕೊಂಡು ನೀವು ಹೋಗೋದೇ ಅದಕ್ಕಲ್ವಾ?' ಎಂದು ನನ್ನ ಸತೀವ್ರತದ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿ ಮುಖ ಮುರಿದು ಹೋದಳು.

ಇಂತ ಅವಘಡಗಳಾದ ಮೇಲೆ ಸಾಮಾನ್ಯವಾಗಿ ಅವಳೇ ಸಂತೆಗೆ ಹೋಗುತ್ತಿದ್ದಳು. ಎಲ್ಲೋ ಅಪರೂಪಕ್ಕೆ ಹಬ್ಬದ ಸಂತೆಗೆ ನನ್ನನ್ನು ಕರೆದೊಯ್ಯುತ್ತಿದ್ದಳು. ಹಬ್ಬದ ಸಂತೆಯೆಂದ ಮೇಲೆ ಸಂತೆ ಸ್ವಲ್ಪ ಜೋರಾಗಿಯೇ ನೆರೆದಿರುತ್ತದೆ. ಕಾಳು, ಕಡ್ಡಿ, ತರಕಾರಿ, ಹಣ್ಣು, ಪುರಿ ಬತಾಸು, ಜಿಲೇಬಿ, ಎಣ್ಣೆ, ಬೆಣ್ಣೆ, ಊದಕಡ್ಡಿ, ಹೀಗೆ ಅಲ್ಲಿ ಸಿಗದ ವಸ್ತುವೇ ಇಲ್ಲ. ಜಗತ್ತಿನ ಸಕಲ ಸೃಷ್ಟಿಯ ಜೊತೆಗೆ ಮಾನವನ ಅವಿಷ್ಕಾರಗಳೆಲ್ಲವೂ ಸಂತೆಯಲ್ಲಿ ಬಂದು ಬೀಳುವ ಬಗ್ಗೆ ಅಚ್ಚರಿ ಎನಿಸುತ್ತದೆ. ಇಂತಹ ಜನಜಂಗುಳಿಯಲ್ಲಿ ಹೆಂಡತಿಯನ್ನೇ ಟ್ರಾಕ್ ಮಾಡುತ್ತಾ ದಾರಿ ತಪ್ಪದಂತೆ (ಕಂಡವರ ಹೆಂಡತಿ ನೋಡದಂತೆ) ಚೀಲ ಹಿಡಿದು ಹಿಂದೆ ಹೋಗುವುದಕ್ಕೂ ಅನುಭವ ಬೇಕು. ಹಾಗೆ ಸಂತೆಯಲ್ಲಿ ಕಳೆದು ಹೋದರೆ ಹೆಂಡತಿ ಹುಡುಕಿ ಬಂದು ಸಂತೆಯಲ್ಲೇ ಮಾನ ಹರಾಜು ಹಾಕುವ ಸಂಭವ ಇರುತ್ತದೆ. ಅವಳು ತರಕಾರಿ ಆರಿಸಿ ತೂಗಿಸಿದ ತಕ್ಷಣ ನಮ್ರ ಸೈನಿಕನಂತೆ ಬ್ಯಾಗ್ ಅಗಲ ಮಾಡಿ ಅದನ್ನು ಸುರಿಸಿಕೊಳ್ಳಬೇಕು. ಇಷ್ಟೇ ಅಲ್ಲ, ಅವಳು ಅವಾಗವಾಗ ಪಕ್ಕೆ ತಿವಿದು ತನ್ನ ಅನುಭವಾಮೃತದ ಉಪದೇಶವನ್ನು ನೀಡುತ್ತಿರುತ್ತಾಳೆ.."ನೋಡಿ, ನಾನ್ ನಿಮ್ಗೆ ಬಿದ್ನಲ್ಲ, ಹಾಗೆ ಒಂದ್ ಗುಡ್ಡೆ ನೋಡಿದ್ ತಕ್ಷಣ ಬಿದ್ ಬಿಡಬಾರದು, ಸಂತೆನೆಲ್ಲಾ ಜಾಲಾಡಿ ಎಲ್ ಒಳ್ಳೇ ತರಕಾರಿ ಇದೆ ನೋಡ್ಬೇಕು, ಈ ತರ ನಾಟಿ ಹುರುಳೀಕಾಯ್ ತಗೋಬೇಕು, ಈ ತರದ್ ಘಾಟಿ ಮೆಣಸಿನಕಾಯ್ ತಗೋಬೇಕು, ಹೂ ಬಿಟ್ಟ ಕೊತ್ತಂಬರಿ ತಗೋಬಾರ್ದು,ಸಿಪ್ಪೆ ಬಿಡಿಸಿದ ಈರುಳ್ಳಿ ತಗೋಬಾರ್ದು, ಹಣ್ ಬಿಟ್ಟ ಕರಿಬೇವು ತಗೋಬಾರ್ದು, ಕೆಂಪಗಿರೋದೆಲ್ಲಾ ಚೆನ್ನಾಗಿರುತ್ತೆ ಅಂತ ಅಲ್ಲ, ತೊಟ್ ಗಾಯ ಆಗಿದ್ಯಾ ನೋಡಿ ತಗೋಬೇಕು,ಇಲ್ಲ ಅಂದ್ರೆ ಕಳಿಯೋಕೆ ಮುಂಚೆ ಕೊಳೆತು ಹೋಗುತ್ತೆ.." ಹೀಗೆ ಸಂತೆ ಸಾಮಾನ್ಯ ಜ್ಞಾನವನ್ನೆಲ್ಲಾ ಬೋಧಿಸುತ್ತಾಳೆ. ಇವಳಿಗೆ ಸಿಗುವ ಗೌರವ, ಮರ್ಯಾದೆ ನಮಗೆಲ್ಲಿ? ಇವಳನ್ನು ಕಂಡ ಕ್ಷಣ "ಓಹೋ! ಮೇಡಮ್ಮೋರೇ ಬನ್ನಿ ಬನ್ನಿ...ಚೆನ್ನಾಗಿದೀರಾ" ಎಂದು ಸೊಪ್ಪು, ಸೆದೆ, ತರಕಾರಿ ಮಾರೋರೆಲ್ಲಾ ತಲೆ ಮೇಲಿನ ಟೆಂಟ್ ಹಾರಿಹೋಗುವಂತೆ ಹಲ್ಕಿರಿದು ಕುಶಲ ವಿಚಾರಿಸೋರೇ! ಎಷ್ಟೇ ಚೌಕಾಶಿಗಾದರೂ ಸೈ! ತಕ್ಕಡಿ, ಬಟ್ಟಿನ ಸಮೇತ ಎತ್ತಿ ಸುರಿಯೋರೇ ಮನೆಮಗಳಿಗೆ ಕೊಟ್ಟಂತೆ ಧಾರೆ ಎರೆದು ಕೊಡೋರೇ..ಈ ವೈಭವವನ್ನೂ ನೋಡುವುದೇ ಒಂದು ಹಬ್ಬ ಎನಿಸಿ ಹೊಟ್ಟೆ ಉರಿದು ಹೋಗುತ್ತದೆ. 'ಅಂದದ ಹೆಣ್ಣ ಮುಂದಿಟ್ಟು ನಡೆ, ಜಗವೇ ನಿನ್ ಹಿಂದೆ ಬರುತ್ತದೆ' ಎಂದು ಬೀಚಿ



ಹೇಳಿದ್ದು ಖಂಡಿತಾ ಸುಳ್ಳಲ್ಲ.

ಇದೆಲ್ಲಾ ಫಜೀತಿಯನ್ನು ನನ್ನ ಸಮಾನ ಸಂತೆ ಶೋಷಿತ ಗಂಡಸರ (?) ಮುಂದೆ ತೋಡಿಕೊಂಡಾಗ ಪರ್ಮೇಶಿ, 'ಲೇಯ್, ಯಜಮಾನ, ಇನ್ನೂ ಯಾವ ಜಮಾನದಲ್ಲಿದೀಯೋ ನೀನು? ಸಂತೆಗೆ ಹೋದ್ರೆ ಅಲ್ವಾ ಈ ಸಮಸ್ಯೆ? ಸುಮ್ನೆ ಮಾಲಲ್ಲೇ ಎಲ್ಲಾ ಪರ್ಚೇಸ್ ಮಾಡ್ಬಿಡಿ. ನಾವಂತೂ ಈಗ ತರಕಾರಿ ಪರ್ಚೇಸ್‌ಗೆ ಮಾಲ್ಗೇ ಹೋಗೋದು, ಹಿಂದೆ ಚೀಲ ಹಿಡ್ಕೊಂಡ್ ನಾಯಿ ತರ ಅಲೆಯೋ ಹಾಗೇ ಇಲ್ಲ' ಅಂತ ಸಲಹೆ ಊದಿದ. ನಾನೂ ಹಾಗೂ ಹೀಗೂ ಮಾಡಿ ರೇಖಾಳನ್ನು ಪುಸಲಾಯಿಸಿ ಒಪ್ಪಿಸಿ ಮಾಲ್ಗೆ ಕರ್ಕೊಂಡ್ ಹೋದೆ. ಮಾಲ್ ಸಂತೆ ಎರಡೂ ಒಂದೇ! ಅಲ್ಲೂ ಸಂತೆ ತರ ನಾವೇ ಮುಟ್ಟಿ, ಮೂಸಿ, ನೇರವಾಗಿ ಕೊಳ್ಳಬಹುದು. ಅಂಗಡಿ ತರ ಮಿಡಲ್‌ಮ್ಯಾನ್ ಇಲ್ಲ. ಮಾಲ್ ಸಂತೆಯ ಒಂದು ಅಪ್‌ಡೇಟೆಡ್ ವರ್ಶನ್ ಅನಿಸ್ತು. ತಳ್ಳುಗಾಡಿಗಳು ಇದ್ದಿದ್ರಿಂದ ಎಲ್ಲಾ ಅದ್ರಲ್ಲಿ ತುಂಬ್ಕೊಂಡ್ ಸಲೀಸಾಗಿ ಓಡಾಡ್ಬಹುದಿತ್ತು. ಕೊಂಡಿದ್ದೆಲ್ಲಾ ನೇರ ಮನೆಗೇ ಪಾರ್ಸಲ್ ಮಾಡ್ತೀವಿ ಅಂದ್ರು. ನಂಗಂತೂ ಸಕತ್ ಖುಷಿಯಾಗಿ ಹೋಯ್ತು. ನಾನು ಒಂದು ತಳ್ಳುಗಾಡಿ ನೂಕ್ಕೊಂಡು ಬರೊ ಹೊತ್ಗೆ ಕೌಂಟರ್ ಹತ್ರ ರೇಖಾ ಎರಡು ತಳ್ಳು ಗಾಡಿ ನಿಲ್ಲಿಸ್ಕೊಂಡು ಬಿಲ್ ಹಾಕುಸ್ತಿದ್ಲು. ಗಾರ್ಲಿಕ್‌ನಿಂದ ಹಾರ್ಲಿಕ್ಸ್‌ವರೆಗೆ, ನೂಡಲ್ಸ್‌ನಿಂದ ಸ್ಯಾಂಡಲ್ಸ್‌ವರೆಗೆ, ಚಾಕು, ಪಾತ್ರೆ, ಕಾವಲಿ, ಸೌಟು, ಕಾಸ್ಮೆಟಿಕ್ಸು ಎಲ್ಲಾ ಗಾಡಿಯಿಂದ ಈಚೆ ಅಕ್ಷಯ ಪಾತ್ರೆಯಂತೆ ಬರ್ತಾನೇ ಇದ್ದದ್ ನೋಡಿ ತಲೆ ರೋಯ್ ಅಂತು. 8 ಸಾವಿರಕ್ಕೆ ಕಾರ್ಡು ಉಜ್ಜಿಸುದ್ಲು ರೇಖಾ!ಪರ್ಸಲ್ಲಿದ್ದ ದುಡ್ಡಿನ ಸಮೇತ ನನ್ನ ಎಲ್ಲಾ ಭಾರ ಇಳಿದು ಹೋಗಿತ್ತು. ಸಂತೇಲಿ ಚೀಲ ಹೊರೋದು ಬಿಟ್ಟು ಮಾಲಲ್ಲಿ ಬಾಲ ಕುಯ್ಯಿಸಿಕೊಂಡ ಹಾಗಾಯ್ತು. ಆ ಬದ್ಮಾಶ್ ಪರ್ಮೇಶಿ ಎಲ್ಲಿ ಸಿಕ್ತಾನೆ ಅಂತ ಹುಡುಕ್ತಾ ಇದೀನಿ. ■

---



ಯುಗಾದಿ ಹಬ್ಬಕ್ಕೆ 5ಲೀಟರ್ ಪೆಟ್ರೋಲ್ ಊಡುಗೊರೆ ಆಗಿ ಕೊಟ್ಟ್ರೇನೆ ಮನೆ ಒಳಗೆ ಬರೋದು ಅಂತಿದ್ದಾರೆ ಕಣೇ ಅಳಿಯಿಂದ್ರು..!



# ಟ್ವೆಂಟಿ ನೈಂಟಿಗಳ ನಡುವೆ...

*ಸುಮಾ ರಮೇಶ್

ನಾನು ಸ್ಕೂಟಿ ಓಡಿಸಲು ಪ್ರಾರಂಭಿಸಿ ಹತ್ತು ವರ್ಷಗಳಾದವು. ಇಂದಿಗೂ ನನ್ನ ಗಾಡಿಯ ಸ್ಪೀಡೋಮೀಟರಿನ ನೀಡಲ್ ಇಪ್ಪತ್ತರಿಂದ ಮುಂದಕ್ಕೆ ಹೋದದ್ದೇ ಇಲ್ಲ. ನಾರಿಯ ಕೆನ್ನೆಯಷ್ಟೇ  ನುಣುಪಾದ ರಸ್ತೆಯಲ್ಲೂ ನನ್ನ ಕೈ ಆಕ್ಸಿಲರೇಟರ್ ಮೇಲೆ ಧಾರಾಳತನ ತೋರದು. ಎಲ್ಲೋ ಒಮ್ಮೊಮ್ಮೆ ನನ್ನ ಬಲಗೈ ಉದಾರಿಯಾದರೂ ತಕ್ಷಣವೇ ಎಡಭಾಗದ ಕರ ಬ್ರೇಕ್ ಮೇಲಿನ ಹಿಡಿತ ಗಟ್ಟಿಗೊಳಿಸಿ ಇಪ್ಪತ್ತರ ಆಸುಪಾಸಿನಲ್ಲೇ ಮುಂದೆ ಸಾಗುವಂತೆ ಆದೇಶಿಸುವುದು. ಹೀಗೇ ಒಮ್ಮೆ ನನ್ನ ಮಗಳನ್ನು ಶಾಲೆಗೆ ಕರೆದೊಯ್ಯುವಾಗ ಅವಳ ಸಹಪಾಠಿಗಳ ಸೈಕಲ್‌ಗಳೇ ನಮ್ಮನ್ನು ಓವರ್ ಟೇಕ್ ಮಾಡಿದ್ದರಿಂದ ಕೆರಳಿದ ಅವಳು ನಾನು ನಡೆದೇ ಹೋಗ್ತೀನಿ ಎಂದು ಕೆಳಗಿಳಿದಳು. ಆ ನಂತರ ಯಾರೂ ನನ್ನ ಸ್ಕೂಟಿಯಲ್ಲಿ ಡಬಲ್ ರೈಡ್ ಬಂದದ್ದಿಲ್ಲ.

ಮದುವೆಯಾದ ಶುರುವಿನಲ್ಲಿ ನನ್ನ ನಳಪಾಕಕ್ಕೆ ಕಾಯಿಪಲ್ಲೆ ಒದಗಿಸಲು ನನ್ನ ಪತಿಗೆ ಸಮಯದ ಅಭಾವವಿತ್ತು. ಹೀಗಾಗಿ ನನ್ನ ಅನುಕೂಲಕ್ಕೆ ಸ್ಕೂಟಿ ಖರೀದಿಸಿ ತಂದರು. ಒಂದೆರಡು ದಿನ ನನ್ನನ್ನು ಫೀಲ್ಡ್‌ಗೆ ಕರೆದೊಯ್ದು ಅಭ್ಯಾಸ ಮಾಡಿಸಿದರು. ಯಾವಾಗಲೂ ಬ್ರೇಕ್ ಮೇಲೆ ಕೈಯಿರಲಿ..... ಆಕ್ಸಿಲರೇಟರ್ ಹೆಚ್ಚು ಕೊಡ್ಬೇಡ.... ಹೀಗೇ ನಿಧಾನವಾಗಿ ಓಡುಸ್ಬೇಕು ಎಂದು ಅವರು ಕಲಿಸಿದ ಬೇಸಿಕ್ಸ್ ನನ್ನ ತಲೆಯಲ್ಲಿ ಡೀಪಾಗಿ ರೆಕಾರ್ಡ್ ಆದದ್ದು ಇಂದಿಗೂ ಇರೇಸ್ ಆಗಿಲ್ಲ. ಫೀಲ್ಡ್ ನಲ್ಲಿ ಲೀಲಾಜಾಲವಾಗಿ ಓಡಿಸುವುದನ್ನು ಕಲಿತ ನಂತರ ರಸ್ತೆಗೆ ಬಂದರೆ ಹೆವಿ ಗಾಡಿಗಳನ್ನು ಕಂಡು  ಕೈಕಾಲುಗಳಲ್ಲಿ ನಡುಕ ಪ್ರಾರಂಭವಾಯಿತು. ಯಾವುದೇ ದ್ವಿಚಕ್ರ ವಾಹನವನ್ನು ಕಂಡರೂ ಸೀದಾ ಅದರೆಡೆಗೆ ಗಾಡಿಯನ್ನು ಕೊಂಡೊಯ್ಯುವಂತಾಗುತ್ತಿತ್ತು. ಕಾಲೇಜು ದಿನಗಳಲ್ಲಿ ಕೇರಂ ಚಾಂಪಿಯನ್ ಆಗಿದ್ದ ನನಗೆ ಎದುರಾದ ಪಾನ್‌ಗಳಿಗೆ ನೇರವಾಗಿ ಸ್ಟ್ರೈಕರ್‌ನಿಂದ ಗುದ್ದಿ ಅಭ್ಯಾಸವಿದ್ದದ್ದಕ್ಕೋ ಏನೋ ಎದುರಾಗುವ ಎಲ್ಲಾ ವಾಹನಗಳಿಗೂ ಗುದ್ದುವ ಚಟ ಪ್ರಾರಂಭವಾಯಿತು.

ಹೀಗೇ ಒಮ್ಮೆ ಯಾವುದೋ ಕೆಲಸದ ಮೇಲೆ ಎಂ.ಜಿ. ರಸ್ತೆಯಲ್ಲಿ ಹೋಗುತ್ತಿದ್ದೆ. ಅಂದು ಸಂತೆಯ ದಿನ ಬೇರೆ. ರಸ್ತೆಯ ತುಂಬಾ ವಾಹನಗಳದ್ದೇ ಪೆರೇಡ್. ನಾನು ಎಂದಿನಂತೆ ಇಪ್ಪತ್ತು ಕಿಲೋಮೀಟರ್ ಸ್ಪೀಡ್‌ನಲ್ಲಿದ್ದೆ. 'ನಿಧಾನವೇ ಪ್ರಧಾನ' ಎಂಬ ಮನಸ್ಥಿತಿ ನನ್ನದು. 'ಅರ್ಲಿ ಈಸ್ ಬೆಟರ್' ಎಂಬ ಪಾಲಿಸಿಯ ಬಿಸಿರಕ್ತದ ಚಾಲಕರು ನನ್ನ ಹಿಂದೆ ಹಾರ್ನಿನ ವಾದ್ಯಗೋಷ್ಠಿ ಪ್ರಾರಂಭಿಸಿದರು. ಗಾಬರಿಗೊಂಡ ನನ್ನ ಬಲಗೈ ಆಕ್ಸಿಲರೇಟರ್‌ನ ಗರಿಷ್ಠ ಮಟ್ಟ ತಲುಪಿತು. ಎಡಗೈ ಬ್ರೇಕ್ ಅನ್ನು ಎಷ್ಟೇ ಒತ್ತಿ ಹಿಡಿದರೂ ಮುಂದಿದ್ದ ಬೈಕ್ ಸವಾರನಿಗೆ ನನ್ನ ಗಾಡಿ ಸ್ಟ್ರೈಕರ್‌ನಂತೆ ಹೋಗಿ ಗುದ್ದಿತು. ಬೈಕ್ ಸವಾರ ಐವತ್ತು ಮೀಟರ್ ಮುಂದೆ ಹೋಗಿ ಬಿದ್ದರೆ ನಾನು ಅಲ್ಲೇ ಎಡಭಾಗಕ್ಕೆ ಮಗುಚಿಕೊಂಡೆ. ನನ್ನ ಬಡಪಾಯಿ ಸ್ಕೂಟಿ, ಟ್ವೆಂಟಿಯಿಂದ ನೈಂಟಿಗೆ ಮೊದಲ ಬಾರಿಗೆ ಏರಿದ ಸ್ಪೀಡ್ ಕಂಡು ಕಕ್ಕಾಬಿಕ್ಕಿಯಾಗಿ ಒಂದೆರಡು ಪಲ್ಟಿ ಹೊಡೆದು ಬಲಭಾಗಕ್ಕೆ ಬೋರಲಾಯಿತು. ಒಂದರೆಕ್ಷಣ ಇಡೀ ರಸ್ತೆ ಸ್ತಬ್ಧವಾಯಿತು. ನನಗೆ ಇಹಲೋಕದ ಅರಿವಾದಾಗ ಎಡಭಾಗದ ತಲೆಯಲ್ಲಿ ಕುಪ್ಪೆಯಾಗಿತ್ತು. ಮಂಡಿ ಮೊಳಕೈಗಳಲ್ಲಿ ಚರ್ಮ ತರಿದು ರಕ್ತ ಜಿನುಗುತ್ತಿತ್ತು. ಸುತ್ತಮುತ್ತಲಿನವರೆಲ್ಲಾ ನನ್ನನ್ನು ಉಪಚರಿಸುತ್ತಿದ್ದರು. ತಲೆಗೆ



ಮುಖಕ್ಕೆ ನೀರು ಚಿಮುಕಿಸಿ ಸಾಂತ್ವನ ಹೇಳುತ್ತಿದ್ದರು. ಯಾರೋ ಮಹಾತ್ಮ ನನ್ನ ಬಿದ್ದ ಗಾಡಿಯನ್ನು ಮೇಲೆತ್ತಿ ಲಕ್ವ ಹೊಡೆದಂತೆ ಚೊಟ್ಟಗಾಗಿದ್ದ ಅದರ ಬಾಡಿಯನ್ನು ಗುದ್ದಿ ಸರಿಪಡಿಸುತ್ತಿದ್ದ.

ಅತ್ತ, ನನ್ನಿಂದ ಗುದ್ದಿಸಿಕೊಂಡಿದ್ದ ಬಡಪಾಯಿಗೆ ಯಾವುದೇ ತೊಂದರೆಯಾಗಿರಲಿಲ್ಲ. ಸಾಮಾನ್ಯವಾಗಿ ಇಂತಹ ಸಂದರ್ಭಗಳಲ್ಲಿ ಪೆಟ್ಟಾದವರ ಪರ ನಿಲ್ಲುವ ಕ್ರೌಡ್, ಅಂದೂ ಹಾಗೆಯೇ ಬೈಕ್ ಸವಾರನಿಗೆ ತದುಕಲು ಸಿದ್ಧವಾಯಿತು. ಅವನೋ ದಮ್ಮಯ್ಯ ಗುಡ್ಡೆ ಹಾಕುತ್ತಾ ನನ್ನದೇನೂ ತಪ್ಪಿಲ್ಲ.... ಬೇಕಾದ್ರೆ ಆ ಯಮ್ಮನ್ನೇ ಕೇಳಿ ಅವ್ರೇ ಹಿಂದಿಂದ ಬಂದು ನನ್ಗೆ ಗುದ್ದಿದ್ದು ....ಅಲ್ವಾ ಮೇಡಂ... ಎನ್ನುತ್ತಾ ನನ್ನೆಡೆಗೆ ದೈನ್ಯ ನೋಟ ಬೀರಿದ. ನನ್ನ ಬಾಯಿಂದ ಹೊರಬರುವ ಒಂದೇ ಒಂದು ಸ್ಟೇಟ್‌ಮೆಂಟ್ ಮೇಲೆ ಅವನ ಅಳಿವು ಉಳಿವು ನಿಂತಿತ್ತು. ನನ್ನ ಉತ್ತರಕ್ಕಾಗಿ ಎಲ್ಲರೂ ಕಾಯುತ್ತಿದ್ದರು. ತಪ್ಪು ಮಾಡಿದ್ದ ನನಗೆ ಶುಶ್ರೂಷೆ ಮಾಡಲು ಹತ್ತಾರು ಜನರು ಮುಗಿಬಿದ್ದಿದ್ದರು. ತಬ್ಬಲಿಯಂತೆ ನಿಂತಿದ್ದ ಅವನನ್ನು ಕಂಡು ಆ ಕ್ಷಣ ನನ್ನ ಮನ ಮರುಗಿತು. "ಅವ್ರುನ್ನ ಬಿಟ್ಬಿಡಿ....ಅವ್ರುದೇನೂ ತಪ್ಪಿಲ್ಲ....." ಎಂದೆ ಕ್ಷೀಣ ಸ್ವರದಿಂದ. ತದುಕಲು ತಯಾರಾಗಿದ್ದವರು ನಿರಾಸೆಯಿಂದ ಮುಷ್ಠಿ ಕೆಳಗಿಳಿಸಿದರು. 'ಬದುಕಿದೆಯಾ ಬಡಜೀವವೇ' ಎನ್ನುತ್ತಾ ಆ ವ್ಯಕ್ತಿ ಸತ್ಯವನ್ನೇ ಅರುಹಿದ ನನ್ನೆಡೆಗೆ ಒಂದು ಕೃತಜ್ಞತೆಯ ನೋಟ ಬೀರಿ ಕ್ಷಣಾರ್ಧದಲ್ಲಿ ಮಾಯವಾದ. ಕಲಹಕ್ಕೆ ಅವಕಾಶವಿಲ್ಲದೆ ಜನರ ಉತ್ಸಾಹ ತಗ್ಗಿತು. ಕೆಲವರು ಗೊಣಗುತ್ತಾ, ಮರೆತಿದ್ದ ತಮ್ಮ ತುರ್ತು ಕೆಲಸಗಳನ್ನು ನೆನೆದು ಹೊರಟರು.

ಎರಡು ದಿನಗಳ ವೈದ್ಯರ ಶುಶ್ರೂಷೆಯಿಂದ ಗುಣವಾದ ನಾನು ಮಾಮೂಲಿ ರುಟೀನ್‌ಗೆ ಮರಳಿದೆ. ನನ್ನ ಸ್ಕೂಟಿಯೂ ವರ್ಕ್‌ಶಾಪ್‌ನಿಂದ ಗುಣವಾಗಿ ಮನೆಗೆ ಬಂದಿತು. "ಇನ್ಮೇಲೆ ನೀನು ಸ್ಕೂಟಿ ಮುಟ್ಬೇಡ, ಆಟೋದಲ್ಲೇ ಓಡಾಡು, ಅದುಕ್ಕೇ ಹೇಳೋದು' ಡಾಕ್ಟರ್ಸ್ ಆರ್ ದ ವರ್ಸ್ಟ್ ಪೇಶೆಂಟ್ಸ್ .... ಲೇಡೀಸ್ ಆರ್ ದ ವರ್ಸ್ಟ್ ಡ್ರೈವರ್ಸ್ ಅಂತ..." ಎನ್ನುತ್ತಾ ನನ್ನವರು ವ್ಯಂಗ್ಯ ನಗು ಬೀರಿದಾಗ ಎರಡು ದಿನಗಳಿಂದ ಶಾಂತವಾಗಿದ್ದ ನನ್ನ ಮನ ಒಮ್ಮೆಲೇ ಕೆರಳಿತು. "ಲೇಡೀಸ್ ಈಗ ಸರ್ಕಾರಿ ಬಸ್‌ಗಳಿಗೆ ಡ್ರೈವರ್ಸ್ ಆಗಿದಾರೆ, ಪೈಲೆಟ್ಸ್ ಆಗಿದಾರೆ ಗಾಡಿಗೂ ಬಾಡಿಗೂ ಆಯಿಲ್ ಹಾಕ್ಕೊಂಡು ಕೆಟ್ಟದಾಗಿ ಓಡ್ಸೋದು ನೀವೇ ....ಗಂಡುಸ್ರು" ನಾನೂ ಹರಿಹಾಯ್ದೆ.

"ನೀನು ಆಯಿಲ್ ಹಾಕ್ದೇನೇ ಅನಾಹುತ ಮಾಡ್ಕೊಂಡ್ಯಲ್ಲಾ...." ಗಾಡಿಯೆಡೆಗೂ, ನನ್ನೆಡೆಗೂ ಕೈ ತೋರುತ್ತಾ ನುಡಿದರು.

"ನನ್ನನ್ನು ಬೇಕಾದ್ರೆ ವರ್ಸ್ಟ್ ಡ್ರೈವರ್ ಅನ್ನಿ....ನಾನು ಎಕ್ಸೆಪ್ಶನ್ ಕೇಸು.... ಆದ್ರೆ ಮಹಿಳೆಯರ ಬಗ್ಗೆ ಮಾತಾಡ್ಬೇಡಿ...." ನಾನು ದನಿಯೇರಿಸಿ ನುಡಿದಾಗ ಅಪರೂಪಕ್ಕೆ ನನ್ನ ದೌರ್ಬಲ್ಯವನ್ನು ನಾನು ಒಪ್ಪಿಕೊಂಡಿದ್ದಕ್ಕೆ ಸಂತೃಪ್ತರಾದ ಪತಿ ವಾದವನ್ನು ಮುಂದುವರೆಸಲಿಲ್ಲ. ಹಾಗೆಂದು ನಾನೇನು ಸ್ಕೂಟಿ ಓಡಿಸುವುದನ್ನು ನಿಲ್ಲಿಸಲಿಲ್ಲ. ಅದೇ ಟ್ವೆಂಟಿ ಟ್ವೆಂಟಿ ಸ್ಪೀಡ್.... ಆದ್ರೆ ಎಂ ಜಿ ರೋಡಿಗೆ ಹೋಗುವಾಗ ಇನ್ನೂರು ಮೀಟರ್ ಮೊದಲೇ ಸಿಗುವ ಪಾರ್ಕ್‌ನ ಎದುರು ನನ್ನ ಗಾಡಿಯನ್ನು ಪಾರ್ಕ್ ಮಾಡಿ ನನ್ನೆಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಬಂದು ಗಾಡಿಯೇರಿ ಮನೆಗೆ ಹಿಂದಿರುಗುವೆ. ■

---



**ಮಳೆಗೆ ಹೆದರಿ ತಲೆ ತಗ್ಗಿಸಿದರೆ ಕಾಮನಬಿಲ್ಲು ಕಾಣಸಿಗುವುದಿಲ್ಲ.**

# ನವ ವಸಂತದ ಗಾಳಿ ಬೀಸಲು ಮತ್ತೆ ಬಂದಿತು ಕೊರೋನ

***ಸಹನಾ ಪ್ರಸಾದ್**

"ಪ್ರತಿಯೊಂದು ಡ್ರೆಸ್‌ಗೂ ಹೊಂದುವಂತಹ ಮಾಸ್ಕುಗಳು ಕೊಂಡಿದ್ದೆ. ಚಪ್ಪಲಿಗಳು, ಬ್ಯಾಗುಗಳ ಜತೆಯಲ್ಲಿ ಈ ಮಾಸ್ಕುಗಳದ್ದೂ ಒಂದು ಶೆಲ್ಫ್ ಆಗಿದೆ. ಈಗ ಕೊರೋನ ಅಬ್ಬರ ಕಡಿಮೆ ಆಗುತ್ತಾ ಇದೆ. ಅವುಗಳನ್ನು ಏನು ಮಾಡುವುದು"

ಎರಡನೇ ಅಲೆಯ ನಂತರ ಬಹಳಷ್ಟು ಜನ ಕೊರೋನ ಈ ಜಗತ್ತಿನಿಂದ ಕಣ್ಮರೆಯಾಯಿತು, ಇನ್ನು ಹೆದರುವ ಅಗತ್ಯವಿಲ್ಲ ಎಂದು ಬಿಂದಾಸ್ ಆಗಿ ಮಾಸ್ಕ್ ಧರಿಸದೆ,ಎಲ್ಲಾ ಕಡೆ ಸುತ್ತಾಡಿ ಮೊದಲಿನಂತೆಯೇ ಸುಖಿಸಿದರು. ಕೆಲವರು ಅಯ್ಯೋ ಮುಗಿಯಿತಲ್ಲ ಈ ಮಹಾಮಾರಿಯ ಆರ್ಭಟ ಎಂದು ದುಃಖಿಸಿದರು ಕೂಡ.

ಮೇಲಿನ ಆಲಾಪನೆ ಎದುರು ಮನೆಯ ಶಬ್ನಮ್ ಬಾನುವಿನದು. ಅವಳ ಪಕ್ಕದ ಮನೆಯ ಸೈಜು ಜಾನ್ ಚಿಂತೆಯೇ ಬೇರೆ ಆಗಿತ್ತು. ಹದಿಹರೆಯದ ಮಗಳು ಜೂಲಿಯಾ ಹಾಗೂ ಪಕ್ಕದ ಬೀದಿಯಲ್ಲಿ ಅಂಗಡಿ ಇಟ್ಟಿರುವ ಶೆಟ್ಟರ ಸೋದರಳಿಯ ಜತಿನ್ ರೊಮ್ಯಾನ್ಸ್ ಕೊರೋನಾ ದೆಸೆಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು ಈಗ ಎರಡನೇ ಅಲೆಯ ನಂತರ ಮತ್ತೆ ಶುರುವಾಗುವುದೇ ಎಂದು ಯೋಚನೆ ಹತ್ತಿತ್ತು. ಮನೆಯಿಂದ ಹೊರಹೋಗಲು ಅವಕಾಶವಿಲ್ಲದಿದ್ದರೂ ಮೆಸೇಜು, ಕಾಲ್ ಮೂಲಕ ಪ್ರಣಯಪಕ್ಷಿಗಳು ಆರಾಮಾಗಿ ಇದ್ದರೆಂಬುದು ಅವರಿಗೆ ಅರಿವಿರಲಿಲ್ಲ.

ಇನ್ನು ಗೌರಮ್ಮನ ಮನಸ್ಸು ಬೇರೆಯೇ ದಿಕ್ಕು ಹಿಡಿದಿತ್ತು. ಮಹಾಮಾರಿಯ ಅಬ್ಬರದಲ್ಲಿ ಮಗ, ಸೊಸೆ, ಮೊಮ್ಮಕ್ಕಳು ಇಡೀ ದಿನ ಮನೆಯಲ್ಲೇ ಇರುತ್ತಿದ್ದರು. ಆಫೀಸು, ಆನ್ಲೈನ್ ಕ್ಲಾಸು ಇತ್ಯಾದಿಗಳಿಂದ ಅವರಿಗೆ ನೆಮ್ಮದಿಯಾಗಿ ಟೀವಿ ನೋಡಲು, ಗಂಟೆಗಟ್ಟಲೆ ಸೊಸೆಯ ಮೇಲೆ ಫೋನಿನಲ್ಲಿ ಚಾಡಿ ಹೇಳಲು ಆಗುತ್ತಲೇ ಇರಲಿಲ್ಲ. ಮಗಳಿಗೆ ಕರೆ ಮಾಡಿ ಸೊಸೆಯ ವಿರುದ್ಧ ಕೂಡಿಟ್ಟುಕೊಂಡಿರುವ ದೂರುಗಳನ್ನು ಹೇಳುವುದಕ್ಕೆ ನಾಲಿಗೆ ಹಾತೊರೆಯುತ್ತಿತ್ತು. ಆದರೆ ಸೊಸೆಯ ಕೆಲಸ ನೋಡುತ್ತಾ ಇದ್ದರೆ ಅವಳ ಮೇಲೆ ಅಭಿಮಾನವೂ ಉಕ್ಕುತ್ತಿತ್ತು. ಸೊಸೆಯ ಪರ ಅಥವಾ ವಿರೋಧ ಹೇಳುವುದೋ ಎಂದು ಮನಸ್ಸು ತೂಗುಯ್ಯಾಲೆಯಾಗಿತ್ತು.

ಆಫೀಸು ಮತ್ತೆ ತೆರೆದರೆ ತನಗೆ ಸಾಕಷ್ಟು ಶರ್ಟು ಪ್ಯಾಂಟು ಇಲ್ಲವಲ್ಲ. ಮತ್ತದೇ ಹಳೆ ಬಟ್ಟೆಗಳನ್ನು ಹಾಕಿಕೊಂಡು ಹೋಗಬೇಕಲ್ಲ ಎಂಬ ಯೋಚನೆಯಲ್ಲಿ ಜಯೇಶ್ ಬೇಯುತ್ತಿದ್ದ. ಹೊಸ ಬಟ್ಟೆಗೆ ಹಾಕುವ ದುಡ್ಡು ಈಗ ಮಕ್ಕಳ ಆನ್‌ಲೈನ್ ಕ್ಲಾಸ್‌ಗೆ ಬೇಕಾಗುವ ಮೊಬೈಲ್ ಇತ್ಯಾದಿಗೆ ವ್ಯಯವಾಗಿತ್ತು.. ಮಡದಿ ತಾರಾಳಿಗೆ ತನ್ನ ಕಛೇರಿ ಆಫ್ ಲೈನ್ ಆದಾಗ ಕೀಳು ದೃಷ್ಟಿಯಲ್ಲಿ ನೋಡುವ ಬಾಸ್ ಮುಖವನ್ನು ಮತ್ತೆ ನೋಡಬೇಕಲ್ಲಾ ಎಂಬ ಹಿಂಸೆ.



ಆರಾಮಾಗಿ ಲಾಗಿನ್ ಮಾಡಿ, ವೀಡಿಯೋ ಆಫ್ ಮಾಡಿಕೊಂಡು ಮೊಬೈಲ್ ಗೇಮ್ ಆಡುತ್ತಾ ಕಾಲ ಕಳೆದು, ಆನ್ಲೈನ್ ಎಕ್ಸಾಂ ಹೊತ್ತಿಗೆ ಗೆಳೆಯನ ನೋಟ್ಸ್ ಓದಿ ಪಾಸ್ ಮಾಡುವ ಯೋಜನೆ ಹಾಕಿಕೊಂಡಿದ್ದ ರವಿಗೆ ಮತ್ತೆ ಕಾಲೇಜಿಗೆ ಹೋಗಿ ಮೇಷ್ಟರ ಕೆಂಗಣ್ಣು ಎದುರಿಸಬೇಕಲ್ಲ ಅನ್ನುವ ಚಿಂತೆ. ಈ ತುಂಟ ಮಕ್ಕಳ ಎದುರು ನಿಂತು ಗಂಟಲು ಹರಿದುಕೊಳ್ಳಬೇಕಲ್ಲ ಎಂಬುದು ಮೇಷ್ಟರ ಸಂಕಟ.

ಪತಿ ಪರಮೇಶ್ವರ ಮನೆಯಲ್ಲೇ ಇದ್ದು ತನಗೆ ಅಡುಗೆ ಕೆಲಸದಲ್ಲಿ ಸಹಾಯ ಮಾಡಿ, ತನ್ನ ಕೆಲಸವನ್ನೂ ಮಾಡಿಕೊಂಡು, ಮಗುವಿಗೂ ಊಟಾ ಮಾಡಿಸಿ ತಮ್ಮ ಮನೆಯನ್ನು ನಂದನವನವಾಗಿಸಿ, ಈಗ ಮತ್ತೆ ಆಫೀಸಿಗೆ ಹೋಗಲು ಶುರು ಮಾಡುವನಲ್ಲ ಎಂದು ರೀನಾಳ ಚಿಂತೆ. ಪ್ರೀತಿಯ ಮಡದಿ, ಮಗುವನ್ನು ಬಿಟ್ಟು ಆಫೀಸಿನ ಮುಖ ನೋಡಬೇಕಲ್ಲ ಎಂದು ಪತಿಯ ತೊಳಲಾಟ.

ನರಸಿಂಹ ರಾಯರಿಗೆ ನಿವೃತ್ತಿಯಾಗಿ ದಶಕವೇ ಉರುಳಿದೆ, ಆರಾಮಾಗಿ ಒಂದು ದಿನವೂ ಕಳೆದಿಲ್ಲ ಅನ್ನುವ ಕೊರಗು ಇದ್ದೇ ಇತ್ತು. ಮಗಳ ಮನೆಯಲ್ಲಿ ಇರುವ ಅವರಿಗೆ ಸದಾ ಡ್ರೈವರ್ ಕೆಲಸ. ಮೊಮ್ಮಕ್ಕಳನ್ನು ಸ್ಕೂಲ್, ಅಬಾಕಸ್, ಸ್ವಿಮ್ಮಿಂಗ್, ಕರಾಟೆ ಇತ್ಯಾದಿ ತರಗತಿಗಳಿಗೆ ತಲುಪಿಸಿ ಮತ್ತೆ ಕರೆದುಕೊಂಡು ಬರುವ ಕಾರ್ಯಕ್ರಮ ನಿತ್ಯವೂ ಇದ್ದಿದ್ದೇ. ಮಹಾಮಾರಿ ಸಮಯದಲ್ಲಿ ಎಲ್ಲವೂ, ಸ್ವಿಮ್ಮಿಂಗ್ ಒಂದನ್ನು ಬಿಟ್ಟು, ಮನೆಯಿಂದಲೇ ನಡೆದಿದ್ದು ಅವರಿಗೆ ಅನುಕೂಲವಾಗಿತ್ತು. ಈಗ ಮತ್ತೆ ಪೇಪರ್ ಓದಲು, ಕಾಫಿ ಆರಾಮಾಗಿ ಕುಡಿಯಲು ಸಾಧ್ಯವಾಗುವುದಿಲ್ಲ ಎಂಬ ಸಂಕಟ ಶುರುವಾಗಿತ್ತು.

ಆನ್‌ಲೈನ್ ಕಿಟ್ಟಿ ಪಾರ್ಟಿಗಳಲ್ಲಿ ಖರ್ಚು ಕಡಿಮೆ. ತಿಂಡಿ, ತಿನಿಸುಗಳು, ತಂಪು ಪಾನೀಯಗಳು ಇತ್ಯಾದಿ ಸರಬರಾಜು ಮಾಡುವಷ್ಟಿಲ್ಲ. ಹಾಯಾಗಿ ಡ್ರೆಸ್ ಮಾಡಿಕೊಂಡು ಕಂಪ್ಯೂಟರ್ ಮುಂದೆ ಕೂತು ಗಂಟೆಗಟ್ಟಲೆ ಹರಟಬಹುದು. ಈಗ ಕೊರೋನ ಮುಗಿದ ಮೇಲೆ ಮತ್ತೆ ಖರ್ಚುಗಳು ಶುರು ಎಂದು ಮಿಸ್ಸೆಸ್ ರಾಘವ್ ಅವರ ಚಿಂತೆ. ಹೆಂಡತಿಯ ಬಿಲ್ ಮತ್ತೆ ಏರುವುದಲ್ಲ ಅಂತ ಮಿಸ್ಟರ್ ರಾಘವ್ ಹಿಂಸೆ.

1. ಕೇವಲ 50 ಜನರನ್ನು ಕರೆದು ಮಗಳ ಮದುವೆ ಶಾಸ್ತ್ರ ಮುಗಿಸಿಬಿಡಬಹುದಿತ್ತು. ಛೇ, ಇನ್ನು ಮತ್ತೆ ನೆಂಟರಿಷ್ಟರ ಹಾವಳಿ, ಅವರಿಗೆ ಉಡುಗೊರೆಗಳು, ಅವರ ಟೀಕೆ , ವ್ಯಂಗ್ಯದ ಮಾತುಗಳು ಮತ್ತೆ ಕೇಳಬೇಕಲ್ಲ ಎಂಬ ಚಿಂತೆ ರೇಣುಕಾದೇವಿಯದ್ದು. ಸಾಲ ಮಾಡಲು ಯಾವ ಬ್ಯಾಂಕ್ ವಾಸಿ ಎಂಬ ಯೋಚನೆಯಲ್ಲಿ ಅವಳ ಗಂಡ ದಿನ ರಾತ್ರಿಗಳು ಕಳೆದರು.

ಮತ್ತೆ ಜನರು ಮಾಸ್ಕ್ ಇಲ್ಲದೆ ಓಡಾಡುತ್ತಾರೆ, ಇಷ್ಟು ಸಮಯ ಮನೆಯಲ್ಲೇ ಕಳೆದ ಸಮಯವನ್ನು ಹೊರಗಡೆ ಸುತ್ತಿ ಬೇಸರ ನಿವಾರಿಸಿಕೊಳ್ಳುತ್ತಾರೆ. ಮತ್ತೆ ಕಾನೂನು ತೊಂದರೆಗಳು, ದರೋಡೆಗಳು, ಟ್ರಾಫಿಕ್ ಉಲ್ಲಂಘನೆಗಳು ಇತ್ಯಾದಿ ಶುರುವಾಗುತ್ತದೆ ಎನ್ನುವ ಚಿಂತೆ ಇನ್ಸಪೆಕ್ಟರ್ ಶ್ಯಾಮ್‌ಗೆ. ಗಂಡ ಮತ್ತೆ ತಲೆ ಕೆಡಿಸಕೊಳ್ಳುತ್ತಾರೆ ಎಂದು ಆತನ ಪತ್ನಿಯ ಕಳವಳ.

ನಿಂತಿದ್ದ ಕೆಟ್ಟ ಚಾಳಿಗಳು ಮತ್ತೆ ಮಗನನ್ನು ಆವರಿಸಿಕೊಳ್ಳುತ್ತದೆ ಎಂದು ಜಯಮ್ಮನ ಆತಂಕ. ಸಣ್ಣ ಪುಟ್ಟ ಕಳ್ಳತನ, ಪುಂಡಾಟ, ಹೆಣ್ಣು ಮಕ್ಕಳನ್ನು ರೇಗಿಸುವುದು, ಕುಡಿತಾ ಇವೆಲ್ಲಾ ಮಗನ ಕಲ್ಯಾಣಗುಣಗಳು, ಮಹಾಮಾರಿ ಬಂದ ಮೇಲೆ ಮನೆಯಲ್ಲೇ ಬೇಕಾಗಿ ಬಂದು ಎಲ್ಲವೂ ಬಂದ್ ಆಗಿದ್ದು ಮತ್ತೆ ಶುರು ಎಂದು ಚಿಂತಾಕ್ರಾಂತ ಮುಖದಿಂದ ಓಡಾಡುತ್ತಿದ್ದಳು.

ಇವರ ಚಿಂತೆಯಲ್ಲವನ್ನೂ ಹೋಗಲಾಡಿಸುವ ಕೊರೋನ ಒಮಿಕ್ರಾನ್ ರೂಪದಲ್ಲಿ ಮತ್ತೆ ಬಂತು!!



■

# ವೈರಸ್ ಮತ್ತು ಆಂಟಿವೈರಸ್

***ನಂದಿನಿ ಕಾಪಡಿ**

ನನ್ನ ಇಪ್ಪತ್ತು ನಿಮಿಷಗಳ ವಾಕಿಂಗ್ ಮುಗಿಸಿ ಬೀಚಿನ ಪಾರ್ಕಿನಲ್ಲಿ ಕುಳಿತು ಅತ್ತಿತ್ತ ನೋಡತೊಡಗಿದೆ. ಯಜಮಾನರು ಒಂದು ಗಂಟೆ ನಡೆಯುವವರಿಂದ ನಾನು ಒಬ್ಬಳೇ ಕುಳಿತು ಸೂರ್ಯಾಸ್ತದ ಆನಂದ ಸವಿಯತೊಡಗಿದೆ. ಪಕ್ಕದ ಬೆಂಚಿನಲ್ಲಿ ಮೂವರು ಮಹಾಶಯರು ಕುಳಿತರು. ಇಬ್ಬರು ನನ್ನಂತೆಯೇ ಹಿರಿಯ ನಾಗರಿಕರು. ಇನ್ನೊಬ್ಬರು ಹುರುಪಿನ ಮಧ್ಯ ವಯಸ್ಕರು. ಈಗಿನ ಕಾಲದಲ್ಲಿ ಎಲ್ಲರೂ ಒಟ್ಟಿಗೆ ಕುಳಿತರೂ ಎಲ್ಲರೂ ತಮ್ಮ ತಮ್ಮ ಮೊಬೈಲಿನ ಸ್ಕ್ರೀನ್ ನೋಡುತ್ತಾ ಸಮಯ ಕಳೆಯುವರು. ಒಬ್ಬರೊಂದಿಗೆ ಒಬ್ಬರ ಮಾತು ಕತೆಯೇ ಇಲ್ಲ. ಹಿರಿಯರ ಮೊಬೈಲ್ ಯಾಕೋ ಸರಿಯಾಗಿ ನಡೆಯಲಿಲ್ಲ ಎಂದು ಮಧ್ಯ ವಯಸ್ಕರ ಹತ್ತಿರ ಅದನ್ನು ಕೊಟ್ಟು "ಸ್ವಲ್ಪ ನೋಡಿ ಸರಿ ಮಾಡಿಕೊಡಿ" ಎಂದರು. ನನಗೆ ಬೇರೆಯವರ ಮಾತುಗಳನ್ನು ಕೇಳಿಸಿಕೊಳ್ಳಲು ಕುತೂಹಲವೂ ಇಲ್ಲ. ಆಸಕ್ತಿಯೂ ಇಲ್ಲ. ಆದರೆ ಜೋರಾಗಿ ಮಾತನಾಡುವವರ ಧ್ವನಿ ನನ್ನ ಕಿವಿಯೊಳಗೆ ಬಿದ್ದ ಮೇಲೆ ಕೇಳಿಸಿಕೊಳ್ಳಲೇಬೇಕಲ್ಲ. ಸರಿ ನನ್ನ ಶ್ರವಣೇಂದ್ರಿಯ ತನ್ನ ಕೆಲಸ ಮಾಡತೊಡಗಿತು. ಆ ಮಾತುಗಳ ಅರ್ಥ, ಅವುಗಳಲ್ಲಿ ಅಡಗಿದ್ದ ಸತ್ಯ ಮತ್ತು ಹಾಸ್ಯ ನಿಮ್ಮೊಂದಿಗೆ ಹಂಚಿಕೊಳ್ಳಲು ಅವರದೇ ಭಾಷೆ ನೀವು ಕೇಳಬೇಕು ನನ್ನ ಪರೋಕ್ಷ ಭಾಷೆಯ ಬದಲು.

ಗುರುತಿಗಾಗಿ ಹಿರಿಯ ಇಬ್ಬರು ನಾಗರಿಕರನ್ನು ಅವರ ಟೀ ಶರ್ಟಿನ ಬಣ್ಣದ ಪ್ರಕಾರ ಮಹಾಶಯ ನೀಲಿ (ಮ.ನೀ), ಮಹಾಶಯ ಬಿಳಿ (ಮ.ಬಿ) ಮತ್ತು ಚಿಕ್ಕವರಾದ ಮಹಾಶಯ ಕೆಂಪು (ಮ.ಕೆ) ಎಂದು ಕರೆಯೋಣ. ಇದಿಷ್ಟು ಹಿನ್ನೆಲೆ. ಮುಂದೆ ಸಂಭಾಷಣೆ..

ಮ.ಕೆ: "ಸ್ವಾಮಿ ನಿಮ್ಮ ಮೊಬೈಲಿನಲ್ಲಿ ವೈರಸ್ ಇದ್ದ ಹಾಗೆ ಕಾಣುತ್ತದೆ. ಯಾವುದೇ app ಸರಿಯಾಗಿ ನಡೆಯುತ್ತಿಲ್ಲ. ನಾಳೆ ಮೊಬೈಲ್ ಶಾಪಿಗೆ ತೋರಿಸಿ."

ಮ.ಬಿ: "ಏನು ಮೊಬೈಲಿಗೂ ವೈರಸ್ ಬರುವ ಸಾಧ್ಯತೆ ಇದೆಯೇ? ಛೆ..ಛೆ... ಈ ಕೋವಿಡ್ ಈಗ ಉಪಕರಣಗಳಿಗೂ ಹತ್ತುತ್ತಿದೆ ಎಂದರೆ ನಂಬಲಾಗುವುದಿಲ್ಲ. "

ಮ. ನೀ : " ಅಯ್ಯೋ ಸ್ವಾಮಿ, ಯಾಕೆ ಬರಲು ಸಾಧ್ಯವಿಲ್ಲ? ನನ್ನ ಮೊಮ್ಮಗಳು ತನ್ನ ಕಂಪ್ಯೂಟರಿಗೆ ಆಂಟಿ ವೈರಸ್ ಎಂಬುದನ್ನು ಹಾಕಿಸಿಕೊಂಡಳು."

ಮ.ಕೆ : "ಅಯ್ಯೋ ಸ್ವಾಮಿ ಕೋವಿಡ್ ಬೇರೆ. ಕಂಪ್ಯೂಟರ್ ವೈರಸ್ ಬೇರೆ. ಕೋವಿಡ್ ಒಂದು ಜೀವವಿರುವ ವೈರಸ್. ಮನುಷ್ಯರಿಗೆ ಅಂಟುವುದು. ಕಂಪ್ಯೂಟರ್ ವೈರಸ್ ಒಂದು ಕೆಟ್ಟ ಪ್ರೋಗ್ರಾಮ್. ಕಂಪ್ಯೂಟರಿನ ಕೆಲಸಕ್ಕೆ ಹಾನಿ ಮಾಡುವುದು. ಕೋವಿಡ್ ಮೊಬೈಲಿಗೂ ಅಥವಾ ಕಂಪ್ಯೂಟರಿಗೂ ಹತ್ತುವುದಿಲ್ಲ."

ಮ.ಬಿ: "ಅಯ್ಯೋ ಅದೆಲ್ಲ ಹೇಳಬೇಡಿ. ಚೀನಾ ದೇಶದವರು ತಾವು ತಯಾರಿಸುವ ಕಂಪ್ಯೂಟರ್ಗಳ ಮೂಲಕ ಕೋವಿಡ್ ತರಹವೇ ಇನ್ನೊಂದು ಜೈವಿಕ ವೈರಸ್ ತಯಾರಿಸಿ ಅದನ್ನು ಕಂಪ್ಯೂಟರ್ ಉಪಯೋಗಿಸುವವರ ದೇಹದೊಳಗೆ ಸೇರಿಸಲೂ ಸಾಧ್ಯ. ಕೆಟ್ಟ ಬುದ್ಧಿ ಎಲ್ಲಿಯ ಮಟ್ಟಕ್ಕೆ ಹೋಗುವುದು ಎಂದು ಊಹಿಸಲೂ ಸಾಧ್ಯವಿಲ್ಲ."



ಮ. ನೀ: "ಶಿ ಜಿನ್ ಪಿಂಗ್ ಜಗತ್ತಿಗೆಲ್ಲ ಕೋವಿಡ್ ವೈರಸ್ ಕೊಟ್ಟರು. ತಮ್ಮ

ಪ್ರಜೆಗಳನ್ನೂ ಸುಲಭವಾಗಿ ಸಾಯಿಸಿ ದೇಶದ ಜನಸಂಖ್ಯೆ ಕಡಿಮೆ ಮಾಡಿಕೊಂಡರು. ಆದರೆ ಅವರಿಗೆ ಮಾತ್ರ ಕೋವಿಡ್ ಬರಲಿಲ್ಲ. ಅವರಿಗೋಸ್ಕರ ಆಂಟಿಕೊವಿಡ್ ಎಂಬ ಇನ್ನೊಂದು ವೈರಸ್ ತಯಾರಿಸಿ ತಮಗೂ, ಕುಟುಂಬ ಮತ್ತು ಆಪ್ತೇಷ್ಟರಿಗೂ ಹಾಕಿಸಿದರಂತೆ."

ಮ. ಕೆ : "ಅಯ್ಯೋ ಅದು ಕೋವಿಡ್‌ನ ವಿರುದ್ಧ ವ್ಯಾಕ್ಸಿನ್ ಕಣ್ರೀ. ನಮ್ಮೆಲ್ಲರಿಗೂ ಕೊಡಲಿಲ್ಲವೇ? covishield , covaxin ಇತ್ಯಾದಿ ಇತ್ಯಾದಿ "

ಮ.ನೀ : "ಎಲ್ಲರಿಗೂ ಕೋವಿಡ್ ಬಂದು ಒದ್ದಾಡಿ, ಸತ್ತಮೇಲೆ ತಾನೇ ವ್ಯಾಕ್ಸೀನ್ ಬಂದದ್ದು? ಇಲ್ಲಿ ಎರಡೆರಡು, ಮೂರು ಸಲ ವ್ಯಾಕ್ಸೀನ್ ಹಾಕಿಸಿಕೊಂಡವರಿಗೂ ಕೋವಿಡ್ ಕಾಡಿಸಲಿಲ್ಲವೇ? ವ್ಯಾಕ್ಸೀನ್ ಬೇರೆ, ಆಂಟಿವೈರಸ್ ಬೇರೆ ಕಣ್ರೀ. ಶಿ ಜಿನ್ ಪಿಂಗ್ ಅವರಿಗೆ ಕೋವಿಡ್ ಬಂದಿದ್ದ ಸುದ್ದಿ ಏನಾದರೂ ಕೇಳಿದಿರಾ? ಅವರಿಗಾಗಿ ತಯಾರಿಸಿದ ಆಂಟಿ ವೈರಸ್ ಹಾಕಿಸಿಕೊಂಡರು ಸ್ವಾಮಿ."

ಮ.ಬಿ : "ಅಲ್ಲಾರೀ, ರಷಿಯಾದ ಪುಟಿನ್ ಅವರಿಗೂ ಕೋವಿಡ್ ಬಂದಿತ್ತು, ಅಮೆರಿಕಾದ ಅಧ್ಯಕ್ಷ ಟ್ರಂಪ್ ಅವರಿಗೂ ಕೋವಿಡ್ ಬಂದಿತ್ತು. ಅವರ ಹತ್ತಿರ ಈ ಆಂಟಿವೈರಸ್ ಇರಲಿಲ್ಲ ಎನ್ನುತ್ತೀರಾ? ಹಾಗಾದರೆ ನಮ್ಮ ಮೋದಿಯವರಿಗೆ ಕೋವಿಡ್ ಬರಲಿಲ್ಲ. ಆದರೆ ಅಮಿತ್ ಶಾ ಅವರಿಗೆ ಬಂದಿತ್ತು. ನಮ್ಮ ವಿಜ್ಞಾನಿಗಳು ಆಂಟಿ ವೈರಸ್ ತಯಾರು ಮಾಡಿ ಪ್ರಧಾನಿಯವರಿಗೆ ಮಾತ್ರ ಹಾಕಿದರು ಎನ್ನುತ್ತೀರಾ?"

ಮ.ಕೆ: "ನೀವಿಬ್ಬರೂ ಸರಿ ಸ್ವಾಮಿ. ಈಗ ವೈರಸ್ ಮಾತು ಬಿಟ್ಟುಬಿಡೋಣ. ಮುಂದೆ ನೋಡಿ. ಆ ಬೆಂಚಿನ ಮೇಲೆ ಕುಳಿತಿರುವ ಹುಡುಗ ಹುಡುಗಿಯರು ಕೋವಿಡ್ ಭಾಷೆ ಮಾತನಾಡುತ್ತಿದ್ದಾರೆಯೇ? ಅವರಿಗೂ ವೈರಸ್ ತಾಕಿದೆ. ಪ್ರೇಮ ಎಂಬ ವೈರಸ್. ಈ ವೈರಸ್ ತುಂಬಾ ಅಪಾಯಕಾರಿ. ಮೋಡ ಮೊದಲಿಗೆ ಸ್ವರ್ಗದ ಸುಖ. ಆಮೇಲೆ ನರಕ ಪ್ರಾಪ್ತಿ ."

ಮ.ಬಿ (ನಗುತ್ತ): "ಆ ವೈರಸ್‌ಗೆ ಆಂಟಿಬಯೋಟಿಕ್ ಕೂಡ ಬೇಡ ಅಥವಾ ವ್ಯಾಕ್ಸಿನೇಷನ್ ಕೂಡ ಬೇಡ. ಒಂದಷ್ಟು ಕಾಲದ ನಂತರ ತಾನಾಗಿ ಬಿಟ್ಟು ಹೋಗುತ್ತದೆ."

ಮ.ನೀ: "ನೀವು ಹೇಳುವುದು ನಿಜ ಸ್ವಾಮಿ. ನನ್ನ ಮಗನಿಗೆ ಅದೆಷ್ಟು ಬಾರಿ ಈ ವೈರಸ್ ಅಂಟಿಕೊಂಡರೂ ಕಡೆಗೆ ನಾವು ನೋಡಿದ ಹುಡುಗಿಯನ್ನೇ ಮದುವೆಯಾದ. ಸುಖವಾಗಿದ್ದಾನೆ ಎಂದುಕೊಂಡಿದ್ದೇನೆ."

ಈ ಮೂವರ ಜೋರಾದ ಸಂಭಾಷಣೆ ಕೇಳುತ್ತಿದ್ದ ಪಕ್ಕದ ಬೆಂಚಿನ ಇನ್ನೊಬ್ಬ ವಯಸ್ಕರೂ ಹಾಜರಾದರು. ಇವರನ್ನು ಮಹಾಶಯ ಹಳದಿ ಅಥವಾ ಮ.ಹ ಎನ್ನೋಣ.

ಮ.ಹ: "ನಿಮ್ಮ ಸಂಭಾಷಣೆ ಕೇಳಿಸಿಕೊಂಡೆ. ಶಿ ಜಿನ್ ಪಿಂಗ್ ಅವರಿಗೆ ಚೀನೀ ಆಯುರ್ವೇದ ವೈದ್ಯರು ಅಮೃತ ರಸಾಯನ ತಯಾರಿಸಿ ಕೊಟ್ಟಿದ್ದಾರಂತೆ. ನಾಗರ ಹಾವಿನ ವಿಷ, ಹೆಬ್ಬಾವಿನ ಪೊರೆ , ಹುಲಿಯ ಮೂಳೆ , ಮೊಸಳೆಯ ಹಲ್ಲು ಇತ್ಯಾದಿ ಇತ್ಯಾದಿ ಬಳಸಿ ತಯಾರಿಸಿರುವ ಈ ಔಷಧಿ ಅವರಿಗಷ್ಟೇ ಉಪಲಭ್ಯವಂತೆ. ಅದೇ ಆಂಟಿ ವೈರಸ್ ಆಗಿ ಕೋವಿಡ್ ಬರದಂತೆ ತಡೆದಿದೆಯಂತೆ."

ಮ.ಬಿ : "ಈಗ ಆ ಕಡೆ ವ್ಯಾಯಾಮ ಮಾಡುತ್ತಿರುವ ಮಹಾಶಯರನ್ನು ನೋಡಿ. ನಮ್ಮಷ್ಟೇ ವಯಸ್ಸಾದರೂ ಇನ್ನೂ ತರುಣರ ತರಹ ಸ್ಕಿಪ್ಪಿಂಗ್ ರೋಪ್ ಜಂಪ್ ಮಾಡುತ್ತಾ ಹಿಂದೆ ಮುಂದೆ ಓಡುತ್ತ ಬಿಳಿ ಕೂದಲನ್ನು ಕಪ್ಪು ಬಣ್ಣ ಮಾಡಿಕೊಂಡು ಹುಡುಗರೊಂದಿಗೆ



ಆಡುತ್ತಾರೆ. ಇವರನ್ನು ದಿನಾ ನೋಡುತ್ತೇನೆ. ತಮ್ಮ ವಯಸ್ಸನ್ನು ಸೋಲಿಸಿ ಮತ್ತೆ ತರುಣರಾಗುವ ಹುಚ್ಚು ವೈರಸ್. ಎಷ್ಟೊಂದು ಜನಕ್ಕೆ ಈ ವೈರಸ್ ಅಂತೀರಾ ? ನನ್ನ ಚಿಕ್ಕಪ್ಪನ ಮಗಳು 60 ವರ್ಷದ ಮೇಲಾದವಳು ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಟ್ರೆಕಿಂಗ್ ಮಾಡುತ್ತಾ ನಮ್ಮನ್ನೇ ಅಣಕಿಸುತ್ತಾಳೆ. ನಾಳೆ ಮೂಳೆ ಮುರಿದುಕೊಂಡು ಹಾಸಿಗೆ ಹಿಡಿದರೆ ಯಾರು ನಮಗೆ ಉಪಚಾರ ಮಾಡುತ್ತಾರೆ? ಈ ವೈರಸ್ ಕೂಡ ತುಂಬಾ ಅಪಾಯಕಾರಿ."

ಮ.ನೀ : "ಸುಮ್ಮನಿರಿ ಸ್ವಾಮಿ. ಆರೋಗ್ಯ ಕಾಪಾಡಿಕೊಳ್ಳುತ್ತಾರೆ ಅವರು. ಮುಪ್ಪನ್ನು ಮುಂದು ಹಾಕುತ್ತಿದ್ದಾರೆ. ಇಷ್ಟಾದರೂ ತಾನೇ ತಾನಾಗಿ ಒಂದು ದಿನ ಶರೀರ ಕೈ ಕೊಟ್ಟು ಮುಪ್ಪು ಆವರಿಸಿಕೊಳ್ಳುತ್ತದೆ. ಪ್ರಕೃತಿಯೇ ಆಂಟಿ ವೈರಸ್ ಆಗಿ ಕೆಲಸ ಮಾಡುವುದು."

ಎಲ್ಲರೂ ತಲೆ ತೂಗುತ್ತಾರೆ.

ಮ. ಕೆ : "ಸರಿ ಆಂಟಿ ವೈರಸ್ ಬಗ್ಗೆ ಮಾತನಾಡುತ್ತಾ ಬಂತು. ವೈರಸ್‌ಗಳು ಮ್ಯುಟೇಷನ್ ಎಂಬ ಪ್ರಕ್ರಿಯೆಗೆ ಒಳಗಾಗಿ ಬದಲಾಗುತ್ತವೆ. ಆದರೆ ಈ ಪ್ರೇಮ, ಚಿರ ತರುಣ ಬಯಕೆ ಎಂಬ ವೈರಸ್‌ಗಳಿಗೆ ಮ್ಯುಟೇಷನ್ ಇಲ್ಲವೇ ಇಲ್ಲ ."

ಈಗ ನಮ್ಮ ನಾಯಕರು ಹುರುಪಿನಿಂದ ಮಾತು ಮುಂದುವರೆಸುತ್ತಾರೆ.

ಮ.ಬಿ : "ನಮ್ಮ ಜನರನ್ನೇ ನೋಡಿ. ಎಷ್ಟು ಸಂಪಾದಿಸಿದರೂ ಇನ್ನೂ ಹಣದ ದಾಹ ಹೋಗದು. ನಮ್ಮ ಗೋವಾ ದಲ್ಲಿ ಕ್ಯಾಸಿನೊಗಳು ಒಂದೇ ಎರಡೇ? ಎಷ್ಟು ಸಹಸ್ರ ಜನಗಳು ಹೊರಗಿನಿಂದ ಬಂದು ಜೂಜಾಡಿ ಹಣ ಕಳೆದುಕೊಂಡರೂ ಮತ್ತೆ ಮತ್ತೆ ಹಣ ಸಂಪಾದಿಸುವ ಹುಚ್ಚು. ಈ ಜೂಜುಕೋರರು ಬಂದು ನಮ್ಮ ಸಂಸ್ಕೃತಿಯೇ ಬದಲಾಯಿತು. ಈ ಶೀಘ್ರ ಹಣ ಗಳಿಸುವ ದಾಹ ಎಲ್ಲದಕ್ಕಿಂತ ದೊಡ್ಡ ವೈರಸ್. ಪ್ರತಿ ಬಾರಿ ಮ್ಯುಟೇಷನ್ ಆಗಿ ಹೊಸ ಹೊಸ ಮಾರ್ಗಗಳನ್ನು ತಯಾರಿಸುತ್ತದೆ. ಈ ವೈರಸ್‌ಗೆ ಉಪಾಯವೇ ಇಲ್ಲ."

ಮ.ಕೆ : "ರಾಜಕಾರಣ ಕೂಡ ವೈರಸ್ ಅಲ್ಲವೇ ? ಸತ್ತೆಗಾಗಿ ಎಷ್ಟೊಂದು ಕಷ್ಟ ಪಡುತ್ತಾರೆ! ಸತ್ತೆಬಂದ ನಂತರ ಹೇಗೆ ತಮ್ಮ ಶಕ್ತಿ ತೋರಿಸುತ್ತಾರೆ! ಹೇಗೆ ಲಂಚ ತಿನ್ನುತ್ತಾರೆ! ವೈರಿಗಳನ್ನು ಕಾರಾಗೃಹಕ್ಕೆ ಕಳಿಸಿ ಯಾವ ರೀತಿ ಜನತೆಯನ್ನು ಬೊಂಬೆಯಾಟ ಆಡಿಸುತ್ತಾರೆ! ಆದರೆ ಇದಕ್ಕೆ ಆಂಟಿವೈರಸ್ ಇದೆ. ಇದು 5 ವರ್ಷದ ನಂತರ ನಡೆಯುವ ಚುನಾವಣೆಯೇ ಆಂಟಿವೈರಸ್!

ಈಗ ನಮ್ಮ ತರುಣ ತರುಣಿಯರು ಎದ್ದು ಹೊರಟು ಹೋಗುತ್ತಾರೆ! ಪಾಪ, ಅವರ ಸರಸ ಸಲ್ಲಾಪಕ್ಕೆ ಈ ಮುದುಕರ ವೈರಸ್ ವಿಶ್ಲೇಷಣೆ ಅಡ್ಡಿ ಮಾಡಿತೋ ಏನೋ! ಪ್ರೇಮದಂತ ನಶೆಗೆ ವೈರಸ್ ವಿಷಯ ಹೇಗೆ ತಾನೇ ಸರಿ ಹೋದೀತು? ಆದರೆ ನಮ್ಮ ಹಿರಿಯ ಪ್ರಜೆಗಳಿಗೆ ಇನ್ನೂ ತುಂಬಾ ಮಾತನಾಡುವುದಿದೆ .

ಮ.ನೀ : "ತಮ್ಮ ಶಕ್ತಿ ತೋರಿಸಿಕೊಳ್ಳುವುದು ಇನ್ನೊಂದು ತರಹದ ವೈರಸ್. ದೇಹದ ಬಲ ತೋರಿಸಿಕೊಳ್ಳುವುದು, ಸೌಂದರ್ಯ ಮೆರೆಸುವುದು, ತಾವು ಜಾಣರೆಂದೂ ವಿದ್ವಾಂಸರೆಂದು ತೋರಿಸಿಕೊಳ್ಳುವ ವೈರಸ್, ಮತ್ತು ತಾವೇ ದೊಡ್ಡವರೆಂದು ಹೆಮ್ಮೆ ಪಡುವ ವೈರಸ್ ಇವೆಲ್ಲಕ್ಕೂ ಆಂಟಿ ವೈರಸ್ ಇಲ್ಲವೇ ಇಲ್ಲ. ಮ್ಯುಟೇಷನ್ ಆಗಿ ಹೊಸ ಹೊಸ ತರಹ ಕಂಡು ಬರುವ ಇವೆಲ್ಲವೂ ಮಾನವ ಕುಲಕ್ಕೆ ಜನ್ಮದಿಂದ ಬಂದಿರುವ



ವೈರಸ್. ಆರು ವೈರಿಗಳು ಎಂದು ಕರೆಸಿಕೊಳ್ಳುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಲ್ಲವೂ ವೈರಸ್ ತಾನೇ? ಇವಕ್ಕೆ ವ್ಯಾಕ್ಸಿನೇಷನ್ ಕೂಡ ಇಲ್ಲ ಆಂಟಿವೈರಸ್ ಇಲ್ಲವೇ ಇಲ್ಲ."

ನನಗೇ ಅರಿಯದಂತೆ ನಾನೂ ತಲೆದೂಗಿದೆ. ಶಿ ಜಿನ್ ಪಿಂಗ್ ಮತ್ತು ಕೋವಿಡ್ ವೈರಸ್‌ನಿಂದ ಪ್ರಾರಂಭವಾದ ಸಂಭಾಷಣೆ ಅಧ್ಯಾತ್ಮ ತತ್ವದ ಮಟ್ಟಕ್ಕೆ ಏರಿತ್ತು. ಮೊದಲು ಹಾಸ್ಯದಂತೆ ತೋರಿದ ಮಾತುಗಳು ಈಗ ಜೀವನ ಅನುಭವ ಪಾಠದತ್ತ ಹೊರಳಿತ್ತು.

ಅಷ್ಟರಲ್ಲಿ ಯಜಮಾನರು ವಾಕ್ ಮುಗಿಸಿ ಬಂದರು. ಸಮುದ್ರದ ತಂಪಾದ ಗಾಳಿ ಸೇವಿಸುತ್ತಾ "ಯಾಕೆ ಮಾತನಾಡದೆ ಸುಮ್ಮನಾಗಿರುವೆ" ಎಂದು ವಿಚಾರಿಸಿಕೊಂಡರು. ನಾನೂ ಅವರಿಗೆ ಕೇಳಿಸಿಕೊಂಡ ಸಂಭಾಷಣೆಯ ಬಗ್ಗೆ ಹೇಳಿದೆ. ತಕ್ಷಣ ನನ್ನ ಕಡೆ ನೋಡಿ" ಎಲ್ಲಕ್ಕಿಂತ ಕೆಟ್ಟ ವೈರಸ್ ಬಗ್ಗೆ ಯಾರೂ ಹೇಳಲಿಲ್ಲವೇ" ಎಂದರು.

"ಆಯ್ತುರ್ರಿ. ಎಲ್ಲ ವೈರಸ್ ಗಳೂ ಹೊರಗೆ ಬಂದವಲ್ಲ" ಎಂದೆ ನಾನು.

" ಇವೆಲ್ಲ ಹೇಳಿದ ನಿನ್ನ ಮಿತ್ರರು ಧರ್ಮದ ಬಗ್ಗೆ ಯೋಚನೆಯೇ ಮಾಡಲಿಲ್ಲವಲ್ಲ! ಕೋವಿಡ್‌ಗಿಂತ ಕೋಟಿ ಪಟ್ಟು ಕೆಟ್ಟದಾದ ವೈರಸ್ ಇಂದು ಧರ್ಮದ ಬಗ್ಗೆ ಕಲಹದಿಂದ ಜಗತ್ತನ್ನೇ ನಾಶ ಮಾಡುತ್ತಿದೆ. ಈ ವೈರಸ್ ಆಂಟಿ ವೈರಸ್ ಇಲ್ಲವೇ ಇಲ್ಲ" ಎಂದರು. ವಿಷಯ ತೀರಾ ಗಂಭೀರವಾಯಿತು. ಅವರ ಮಾತಿನ ಸತ್ಯದ ಅರಿವೂ ಆಯಿತು.

ವಾಪಸು ಬರುತ್ತಾ ಶಿ ಜಿನ್ ಪಿಂಗ್‌ರ ಮೇಲೆ ಒಂದು ತರಹ ಕನಿಕರವೂ ಆಯಿತು. ಕಿಮ್ ಜೊಂಗ್ ಯುನ್, ಪುಟಿನ್ ಎಲ್ಲರ ಮೇಲೂ ಕನಿಕರ ಉದ್ಭವಿಸಿತು. ಯುವಕ ಪ್ರೇಮಿಗಳ ಬಗ್ಗೆಯೂ ಕನಿಕರ ಬಂದಿತು. ಎಪ್ಪತ್ತು ವರ್ಷದ ಮನುಷ್ಯರು ತರುಣರಂತೆ ಸ್ಕಿಪ್ಪಿಂಗ್ ರೋಪ್ ಆಡುವುದೂ ಸರಿಯೆನಿಸಿತು. ಈ ವೈರಸ್ ಇಲ್ಲದಿದ್ದರೆ ಜೀವನ ಹೇಗೆ ಸಾಗಬೇಕು? ಸತ್ಯ ಯುಗ ಮತ್ತೆ ಬರುವುದೇ? ನಿಜವಾಗಿ ಕೋವಿಡ್ ನಮಗೆ ಪಾಠ ಕಲಿಸಿತು ! ಎಷ್ಟೆಲ್ಲಾ ವೈರಸ್ ಗಳು ನಿಮ್ಮನ್ನು ಆಕ್ರಮಿಸಿಕೊಂಡಿವೆ ಆದರೆ ನನ್ನ ಬಗ್ಗೆ ಯಾಕಿಷ್ಟು ದ್ವೇಷ ಎಂದು ನಮ್ಮನ್ನೇ ಪ್ರಶ್ನೆ ಕೇಳಿತಲ್ಲ! ಮೂರು ದಿನಗಳ ಕೆಳಗೆ ತಾನೇ ಹಾಕಿಸಿಕೊಂಡ ಬೂಸ್ಟರ್ ವ್ಯಾಕ್ಸಿನೇಷನ್ ಹಾಕಿದ ಕೈ ನೋಯತೊಡಗಿತು. ಮನೆ ಬಂದಿತು. ಕೈ ಕಾಲು ತೊಳೆದುಕೊಂಡು ದೇವರಿಗೆ ದೀಪ ಹಚ್ಚಿ ಭಗವದ್ಗೀತೆಯ ಪುಸ್ತಕ ಓದಲು ತೆಗೆದುಕೊಂಡೆ. ಕೃಷ್ಣ ಪರಮಾತ್ಮ ಗೀತೆಯಲ್ಲಿ ಉಪದೇಶ ಮಾಡಿದ್ದ ಗುಣತ್ರಯದ ಬಗ್ಗೆ ಓದಲು ತೊಡಗಿದೆ. ಓದುತ್ತ ಓದುತ್ತ ಸಮಯ ಹೋಗಿದ್ದೆ ತಿಳಿಯಲಿಲ್ಲ. ನಮ್ಮಲ್ಲಿ ಬರೀ ಆಸುರೀ ಗುಣಗಳೇ ಇವೆಯಲ್ಲ!

"ತುಂಬಾ ಹಸಿವಾಗಿದೆ ರಾತ್ರಿ ಊಟಕ್ಕೆ ಚಪಾತಿ ಮಾಡುವುದಿಲ್ಲವೇ" ಎಂದು ಯಜಮಾನರು ಉದ್ಗರಿಸಿದರು. ಗಂಟೆ ಎಂಟೂವರೆಯಾಗಿತ್ತು. ರಾಜದೀಪ್ ಮತ್ತು ಅರ್ನಬ್ ಸುದ್ದಿ ಸಮಾಚಾರ ವಿಶ್ಲೇಸುತ್ತಿದ್ದರು ಟಿವಿಯಲ್ಲಿ! ಅರ್ನಬ್ ಕಿರುಚಾಟ ನನ್ನ ವಿಚಾರ ಲಹರಿಯನ್ನು ಭಂಗ ಮಾಡಿತು. ವ್ಯಾಸರು ಹಿಂದೆ ಹೋದರು! ಶಿ ಜಿನ್ ಪಿಂಗ್ ಕಾಣೆಸಿಕೊಂಡರು! ಮೂರು ಗಂಟೆಗಳಲ್ಲಿ ಕೋವಿಡ್ ನಿಂದ ಪ್ರಾರಂಭವಾಗಿದ್ದ ವಿಚಾರ ಸರಣಿ ಮತ್ತೆ ಕೋವಿಡ್‌ನತ್ತ ತಿರುಗಿತು.

ಮಾತು ಆಡಲು ನಾವೆಲ್ಲರೂ ಜಾಣರೇ. ಆದರೆ ಈ ಹೊಟ್ಟೆ ವೈರಸ್‌ಗೆ ಆಂಟಿವೈರಸ್ ಇಲ್ಲ ಎನ್ನುವ ಸತ್ಯ ಗೀತೆಯ ಪುಸ್ತಕ ಪಕ್ಕಕ್ಕಿಡಿಸಿ ನನ್ನನ್ನು ಅಡಿಗೆ ಮನೆಗೆ ಓಡಿಸಿತು. ■



# ಎಲೆಯ ಮೇಲೆ ಬಿದ್ದ ಮುಳ್ಳಿನ ನೀತಿ ಕಥೆ

***ಡಾ.ಡಿ.ವಿ.ಗುರುಪ್ರಸಾದ್**

ಒಂದಾನೊಂದು ಕಾಲದಲ್ಲಿ ಋಷ್ಯಂಗ ಎಂಬ ಒಬ್ಬ ರಾಜನಿದ್ದ. ಆತ ಧೀರನೂ, ಶೂರನೂ ಪರಾಕ್ರಮಿಯೂ ಆಗಿದ್ದ. ತನ್ನ ಪರಾಕ್ರಮವನ್ನು ವಿಶ್ವದಲ್ಲೆಲ್ಲಾ ತೋರಿಸಬೇಕು, ಇಡೀ ವಿಶ್ವದಲ್ಲೇ ತನ್ನ ಅಧಿಪತ್ಯವನ್ನು ಸ್ಥಾಪಿಸಬೇಕು ಎಂಬ ಮಹದಾಸೆಯನ್ನು ಆತ ಹೊಂದಿದ್ದ. ತನ್ನ ಆಸ್ಥಾನದ ಮಂತ್ರಿಗಳ ಸಲಹೆಯಂತೆ ಋಷ್ಯಂಗ ದಂಡಯಾತ್ರೆಯೊಂದನ್ನು ಕೈಗೊಂಡು ಹದಿನಾಲ್ಕು ರಾಜ್ಯಗಳ ಮೇಲೆ ದಾಳಿ ಮಾಡಿ ಅವನ್ನು ಆಕ್ರಮಿಸಿಕೊಂಡ. ಸೋತ ರಾಜರುಗಳು ತಮ್ಮ ಪುತ್ರಿಯರನ್ನು ಋಷ್ಯಂಗನಿಗೆ ಕೊಟ್ಟು ವಿವಾಹವನ್ನು ಮಾಡಿದರು. ಈ ವಿಜಯದ ಫಲವಾಗಿ ಋಷ್ಯಂಗನಿದ್ದ ದೇಶ ವಿಶ್ವದಲ್ಲಿಯೇ ಅತಿವಿಸ್ತಾರವಾದ ದೇಶವೆಂಬ ಖ್ಯಾತಿಯನ್ನು ಗಳಿಸಿತ್ತು.

ಅದೇ ಸಮಯದಲ್ಲಿಯೇ ವಿಶ್ವದ ಇನ್ನೊಂದು ಮೂಲೆಯಲ್ಲಿ ಅಮರಿ ಎಂಬ ರಾಜದೇಶವೊಂದರ ಆಳ್ವಿಕೆಯನ್ನು ನಡೆಸಿದ್ದ. ಆತನ ದೇಶ ಋಷ್ಯಂಗನಷ್ಟು ದೊಡ್ಡದಿರದಿದ್ದರೂ ಆತ ತನ್ನ ಧನಬಲದಿಂದ, ಬುದ್ಧಿಬಲದಿಂದ ಬಹಳಷ್ಟು ಹೊರದೇಶಗಳನ್ನು ತನ್ನ ಅಧೀನದಲ್ಲಿರುವಂತೆ ಮಾಡಿಕೊಂಡಿದ್ದ. ಆತನಿಗಿದ್ದ ಮುಖ್ಯ ವೈರಿಯೇ ಋಷ್ಯಂಗ. ಪ್ರತಿಯೊಂದು ವಿಷಯದಲ್ಲಿಯೂ ಆತ ಋಷ್ಯಂಗನೊಡನೆ ಪೈಪೋಟಿಯನ್ನು ನಡೆಸುತ್ತಿದ್ದ. ಋಷ್ಯಂಗನ ಪರವಾಗಿದ್ದ ದೇಶಗಳ ನೆರೆದೇಶಗಳಲ್ಲಿ ತನ್ನ ಪ್ರಭಾವವಿರುವಂತೆ ನೋಡಿಕೊಂಡು ಆ ದೇಶಗಳು ತಮ್ಮತಮ್ಮೊಳಗೆ ಕಚ್ಚಾಡಲು ಪ್ರಚೋದಿಸಿ ಅವರಿಗೆ ಸಹಾಯ ಮಾಡುತ್ತಿದ್ದ. ಋಷ್ಯಂಗನ ಸಾಮ್ರಾಜ್ಯಶಾಹೀ ಆಸೆಗೆ ಮಣ್ಣೆರಚುತ್ತಿದ್ದ. ಇತರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಕೈ ಹಾಕುತ್ತಿದ್ದ. ತನಗ 'ಯಾರು ಸವಾಲೆಸೆಯುವರೋ ಅವರ ಮೇಲೆ ಆಕ್ರಮಣವನ್ನೂ ಮಾಡಿ ಅವರನ್ನು ಮಣಿಸುತ್ತಿದ್ದ. ಅವನನ್ನು ಎಲ್ಲರೂ ದೊಡ್ಡಣ್ಣನೆಂದೇ ಕರೆಯುತ್ತಿದ್ದರು.

ಅಮರಿಗೂ ಋಷ್ಯಂಗನಿಗೂ ವಿಶ್ವದ ನಂಬರ್ ಒಂದನೇ ಸ್ಥಾನಕ್ಕೆ ಪೈಪೋಟಿ ನಡೆಯುತ್ತಿತ್ತು. ಒಮ್ಮೆ ಋಷ್ಯಂಗ ತನ್ನ ನೆರೆರಾಜ್ಯವಾದ ಅವನಿಸ್ತಾನವನ್ನು ಇದ್ದಕ್ಕಿದ್ದಂತೆ ಆಕ್ರಮಿಸಿಕೊಂಡ. ಅಮರಿಗೆ ಮೈಪರಚಿಕೊಳ್ಳುವಂತಾಯಿತು. ಆತ ಅವನಿಯ ಜನರನ್ನು ಋಷ್ಯಂಗನ ವಿರುದ್ಧ ಬಂಡೇಳುವಂತೆ ಪ್ರಚೋದಿಸಿದ. ಅವರಿಗೆ ಬೇಕಾದ ಶಸ್ತ್ರಾಸ್ತ್ರಗಳು ಹಣ, ತರಬೇತಿಯನ್ನು ನೀಡಿದ. 10 ವರ್ಷಗಳ ನಂತರ ಋಷ್ಯಂಗನನ್ನು ಅವನಿಸ್ತಾನದಿಂದ ಹೊರಗೋಡಿಸುವಲ್ಲಿ ಸಫಲನಾದ.

ಈ ಘಟನೆಯ ತರುವಾಯ ಋಷ್ಯಂಗನಿಗೆ ವೈರಾಗ್ಯದ ಮನೋಭಾವವು ಮೂಡಿತು. ನನಗೆ ವೃದ್ಧಾಪ್ಯ ಬಂದಿದೆ. ಇಷ್ಟು ದೊಡ್ಡ ಸಾಮ್ರಾಜ್ಯನ್ನಿಟ್ಟುಕೊಂಡು ನಾನೇನು ಮಾಡಲಿ, ಅದನ್ನು ಹೇಗೆ ನಿರ್ವಹಿಸಲಿ ಎಂಬ ಯೋಚನೆ ಬಂದಿತು. ಒಂದು ದಿನ ಆತ ಇದ್ದಕ್ಕಿದ್ದಂತೆ ತಾನು ಈ ಹಿಂದೆ ಆಕ್ರಮಿಸಿಕೊಂಡಿದ್ದ ದೇಶಗಳ ರಾಜಕುಮಾರಿಯರಾಗಿದ್ದ ತನ್ನ 14 ಪತ್ನಿಯರನ್ನು ಕರೆಸಿದ. ನನಗೂ ಈಗ ವಯಸ್ಸಾಗಿದೆ. ನನಗೆ ಇಷ್ಟು ದೊಡ್ಡ ಸಾಮ್ರಾಜ್ಯವನ್ನು ನೋಡಿಕೊಳ್ಳಲು ಕಷ್ಟವಾಗುತ್ತಿದೆ. ಹೀಗಾಗಿ ನಿಮ್ಮ ತಂದೆಯರಿಂದ ಆಕ್ರಮಿಸಿಕೊಂಡಿದ್ದ ನಿಮ್ಮ ನಿಮ್ಮ ರಾಜ್ಯಗಳನ್ನೂ ನಿಮಗೇ ಮರಳಿಸುವೆ. ನೀವೆಲ್ಲರೂ ನಿಮ್ಮ ಹಳೆಯ ರಾಜ್ಯಗಳಿಗೆ ಹೋಗಿ ಅವುಗಳನ್ನು ಚೆನ್ನಾಗಿ ಆಳಿರಿ. ನಿಮ್ಮ ರಾಜ್ಯಗಳನ್ನು ನೋಡಿಕೊಳ್ಳಲು. ನಿಮಗೆ ಏನಾದರೂ ತೊಂದರೆ ಬಂದರೆ ನಾನು ಸದಾಕಾಲವೂ ನಿಮ್ಮ ನೆರವಿಗೆ ಇದ್ದೇನೆ ಎಂದ.



“ನೀನೇನಾದರೂ ನಮಗೆ ಡೈವೋರ್ಸ್ ಕೊಡುತ್ತಿರುವಿಯಾ?” ಎಂದು ಒಬ್ಬ ರಾಣಿ ಕೇಳಿದಾಗ, “ಇದು ವಿಚ್ಛೇದನವಲ್ಲ, ನೀವು ನನ್ನ ಪತ್ನಿಯರಂತೆಯೇ ಮುಂದುವರೆಯುವಿರಿ, ಅದರೆ ಒಂದು ಷರತ್ತಿನಿಂದ. ನೀವು ಬೇರೆ ಯಾರನ್ನೂ ಆಶ್ರಯಕ್ಕೆ ಅವಲಂಬಿಸದೆ ನಿಮಗೇನು ಬೇಕಾದರೂ ನನ್ನ ಬಳಿಯೇ ಬರಬೇಕು,” ಎಂದ. ಅದರಂತೆಯೇ ಎಲ್ಲರಾಣಿಯರೂ ತಂತಮ್ಮ ತವರು ರಾಜ್ಯಗಳನ್ನು ಸ್ವತಂತ್ರವಾಗಿ ಆಳತೊಡಗಿದರು. ಎಲ್ಲರೂ ಋಷ್ಯಂಗನಿಗೆ ವಿಧೇಯತೆಯನ್ನು ತೋರಿಸಿಕೊಂಡು ಅವನಿಗೆ ಎಲ್ಲ ಸಹಕಾರವನ್ನೂ ಕೊಡುತ್ತಾ ಬಂದರು.

ಋಷ್ಯಂಗನ ದೇಶದ ಪಕ್ಕದ ದೇಶವನ್ನು ಉಕ್ರಾಣಿ ಎನ್ನುವ ಋಷ್ಯಂಗನ ಪತ್ನಿ ಆಳುತ್ತಿದ್ದಳು. ಆಕೆ ಬೇರೆಲ್ಲ ಪತ್ನಿಯರಿಗಿಂತ ವಯಸ್ಸಿನಲ್ಲಿ ಚಿಕ್ಕವಳಾಗಿದ್ದಳು. ನೋಡಲು ಸುಂದರಳೂ ಆಗಿದ್ದಳು. ಆದರೆ ಆಕೆ ಗರ್ವಿಷ್ಟೆ. ತನ್ನ ಜನರು ವಿದ್ಯಾವಂತರು, ತನ್ನ ದೇಶ ಸುಭಿಕ್ಷವಾಗಿದೆ, ತಾನು ಬೇರೆ ದೇಶಗಳಿಗೆ ರಫ್ತು ಮಾಡುವಷ್ಟು ಬೆಳೆಗಳನ್ನು ಬೆಳೆಯುತ್ತಿರುವೆ, ತನ್ನ ಪ್ರಾಕೃತಿಕ ಸಂಪತ್ತು ಇತರ ರಾಣಿಯರಿಗಿಂತ ಮೇಲು ಎಂದು ಆಕೆ ಬೀಗುತ್ತಿದ್ದಳು. ಆರಂಭದಲ್ಲಿ ಎಲ್ಲ ಮಾಜಿ ರಾಣಿಯರಂತೆ ಆಕೆ ಋಷ್ಯಂಗನ ಜತೆ ಉತ್ತಮ ಸಂಬಂಧವನ್ನಿಟ್ಟುಕೊಂಡಿದ್ದಳು. ತನ್ನ ದೇಶದಲ್ಲಿದ್ದ ಸರ್ವಋತು ಬಂದರನ್ನು ಮೊದಲಿನಂತೆ ಉಪಯೋಗಿಸಲು ಋಷ್ಯಂಗನಿಗೆ ಅನುಕೂಲ ಮಾಡಿಕೊಟ್ಟಿದ್ದಳು. ಏತನ್ಮಧ್ಯೆ ಉಕ್ರಾಣಿಯ ಮಗಳು ಅಮರಿ ಆಳುತ್ತಿದ್ದ ದೇಶಕ್ಕೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಮಾಡಿದಳು. ಆಕೆ ತನ್ನ ರಾಜ್ಯಕ್ಕೆ ವಾಪಸ್ಸಾದ ನಂತರ ಉಕ್ರಾಣಿಯ ಮುಖ್ಯ ಸಲಹೆಗಾರಳಾದಳು. ಆಕೆಯ ಮಾತಿನ ಮೇರೆಗೆ ಉಕ್ರಾಣಿ ಆ ಬಂದರನ್ನು ಇನ್ನು ಮುಂದೆ ಋಷ್ಯಂಗನ ಹಡಗುಗಳು ಉಪಯೋಗಿಸಬಾರದೆಂಬ ಫರ್ಮಾನನ್ನು ಹೊರಡಿಸಿದಳು.

ಋಷ್ಯಂಗನ ದೇಶದ ಹಡಗುಗಳು ಬೇರೆಡೆಗೆ ಹೋಗಲು ಅವನಿಗಿದ್ದ ಏಕೈಕ ಸರ್ವಋತು ಬಂದರು ಉಕ್ರಾಣಿಯಲ್ಲಿಯೇ ಇದ್ದ ಕಾರಣ ರಾಣಿಯ ಫರ್ಮಾನು ಅವನನ್ನು ರೊಚ್ಚಿಗೇಳಿಸಿತು. “ಅನಾದಿಕಾಲದಿಂದಲೂ ನಾನು ಇದೇ ಬಂದರನ್ನೇ ಬಳಸುತ್ತಿರುವುದು ನಿನಗೆ ತಿಳಿದಿದೆ. ನಾನು ನಿನಗೆ ಸ್ವಾತಂತ್ರವನ್ನು ನೀಡುವಾಗ ಈ ಬಂದರನ್ನು ನಾನು ಉಪಯೋಗಿಸುವೆ ಎಂದು ನಿನಗೆ ಹೇಳಿ ನಿನ್ನ ಒಪ್ಪಿಗೆಯ ನಂತರವೇ ನಿನಗೆ ಸ್ವಾತಂತ್ರವನ್ನು ನೀಡಿದೆ. ಈಗ ಇದ್ದಕ್ಕಿದ್ದಂತೆ ಹೀಗೆ ಮಾಡಿದರೆ ಹೇಗೆ?”ಎಂದು ಕೇಳಿದ. ಆದರೆ ಬಿಸಿರಕ್ತದ ಉಕ್ರಾಣಿ, “ಮುಂದಿನ ತಿಂಗಳಿಂದ ಈ ಬಂದರನ್ನು ನಿನ್ನ ಹಡಗುಗಳು ಉಪಯೋಗಿಸಲು ಬಿಡುವುದಿಲ್ಲ,” ಎಂದು ಖಡಾಖಂಡಿತವಾಗಿ ಹೇಳಿದಳು. ಕೋಪಗೊಂಡ ಋಷ್ಯಂಗ ತನ್ನ ಸೈನ್ಯವನ್ನು ಕಳಿಸಿ ಆ ಬಂದರನ್ನು ಕೂಡಲೇ ತನ್ನ ವಶಕ್ಕೆ ಪಡೆದುಕೊಂಡ. ಪಾಠ ಕಲಿತ ಉಕ್ರಾಣಿ ಸುಮ್ಮನಾದಳು.

ಕೆಲ ವರ್ಷಗಳ ನಂತರ ಉಕ್ರಾಣಿಯನ್ನು ಅಮರಿ ಸಂಪರ್ಕಿಸಿ, “ಸ್ವತಂತ್ರಳಾದಳೂ ನೀನೇಕೆ ಇನ್ನೂ ಋಷ್ಯಂಗನ ಹಂಗಿನಲ್ಲಿರುವೆ. ನೀನು ಋಷ್ಯಂಗನಿಂದ ವಿಚ್ಛೇದನವನ್ನು ಪಡೆದು ನನ್ನ ಜತೆಗೆ ಸೇರು. ಅಂದಹಾಗೆ ನಿನ್ನ ಪಕ್ಕದ ರಾಜ್ಯಗಳು ನನ್ನ ತೆಕ್ಕೆಗೆ ಬಂದಿದ್ದಾರೆ. ಅವರೆಲ್ಲರೂ ಸೇರಿ ನನ್ನ ನೇತೃತ್ವದ ಒಂದು ಒಕ್ಕೂಟವನ್ನು ಸೇರಿದ್ದಾರೆ. ನೀನೂ ನಮ್ಮ ಒಕ್ಕೂಟಕ್ಕೆ ಸೇರಿಕೋ. ನಿನಗೆ ಬೇಕಾದ ಸವಲತ್ತನ್ನು ನಾನು ನೀಡುವೆ. ಮತ್ತೆ ಋಷ್ಯಂಗ ನಿನ್ನ ಮೇಲೆ ದಾಳಿ ಮಾಡದಂತೆ ನಿನಗೆ ನಾನು ಸಹಾಯ ಮಾಡುವೆ” ಎಂದ. ಅವಳಿಗೆ ನಾನಾ ರೀತಿಯ ಉಡುಗೊರೆಗಳನ್ನು ನೀಡಿ ಅವಳ ಮನವೊಲಿಸಲು ಆರಂಭಿಸಿದ.



ಅಮರಿಯ ಹಣ, ಹಾಗೂ ಆಧಿಕಾರದ ಫಲವಾಗಿ ಅವನನ್ನು ಮೋಹಿಸತೊಡಗಿದ್ದ ಉಕ್ರಾಣಿ ತನ್ನ ತೀರ್ಮಾನವನ್ನು ತಿಳಿಸಲು ಕಾಲಾವಕಾಶವನ್ನು ಕೋರಿದಳು. ಅಮರಿ ಅವಳನ್ನು ಪದೇ ಪದೇ ಸಂಪರ್ಕಿಸಿ ಅವಳಿಗೆ ಹಲವಾರು ಆಮಿಷಗಳನ್ನೊಡ್ಡುತ್ತಿದ್ದ. ಕೆಲ ಸಮಯದ ಬಳಿಕ ಉಕ್ರಾಣಿ, ಅಮರಿಯ ಪ್ರಚೋದನೆಯ ಮೇರೆಗೆ ಋಷ್ಯಂಗನಿಗೆ ವಿಧೇಯರಾಗಿದ್ದ, ಅವನ ಭಾಷೆ ಮಾತನಾಡುತ್ತಿದ್ದ ತನ್ನ ದೇಶವಾಸಿಗಳಿಗೆ ಹಿಂಸೆ ನೀಡಲು ಆರಂಭಿಸಿದಳು. ಬೇಕೆಂತಲೇ ಋಷ್ಯಂಗನಿಗೆ ಕಿರಿಕಿರಿಯಾಗುವ ಕೆಲಸಗಳನ್ನೇ ಮಾಡತೊಡಗಿದಳು.

ಅಮರಿಯ ಪ್ರಚೋದನೆಯಿಂದಲೇ ಉಕ್ರಾಣಿ ಹೀಗೆ ವರ್ತಿಸುತ್ತಿದ್ದಾಳೆಂದು ತಿಳಿದ ಋಷ್ಯಂಗ ಅಮರಿಯನ್ನೇ ನೇರವಾಗಿ ಸಂಪರ್ಕಿಸಿದ. "ಈ ಹಿಂದೆ ನಮ್ಮಿಬ್ಬರಿಗೂ ನಡೆದಿದ್ದ ಮಾತುಕತೆಗಳನ್ನು ನೆನಸಿಕೋ. ನಾನು ಸ್ವತಂತ್ರವಾಗಲು ಬಿಟ್ಟ ಯಾವದೇಶಗಳ ಜತೆಗೂ ನೀನು ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳುವುದಿಲ್ಲ, ಅವರ ಸಾಮ್ರಾಜ್ಯದಲ್ಲಿ ನಿನ್ನ ಸೇನೆಯನ್ನು ಕಳಿಸುವುದಿಲ್ಲ ಎಂದು ನೀನು ಮಾತುಕೊಟ್ಟಿದ್ದೆಯಲ್ಲವೇ?" ಎಂದ.

"ನಾನೇನೂ ನಿನಗೆ ಮಾತು ಕೊಟ್ಟಿಲ್ಲ, ನಿನ್ನ ಪತ್ನಿಯಾದವಳು ನನ್ನಿಂದ ಆಕರ್ಷಣೆಗೊಂಡು ನನ್ನ ಸನಿಹಕ್ಕೆ ಬಂದರೆ ಅವಳನ್ನು ಬೇಡ ಎಂದು ನಾನು ಹೇಗನ್ನಲಿ? ನನ್ನ ರಕ್ಷಣೆಯನ್ನು ಯಾರಾದರೂ ಕೋರಿ ಬಂದರೆ ನಾನು ಇಲ್ಲವೆನ್ನಲಾಗುವುದಿಲ್ಲ" ಎಂದ ಅಮರಿ. ಋಷ್ಯಂಗನಿಗೆ ಮುಂದೇನು ಮಾಡಬೇಕೆಂದೇ ತೋಚದಾಯಿತು. ಒಂದು ದಿನ ಆತ ಉಕ್ರಾಣಿಗೆ ಬುದ್ಧಿ ಕಲಿಸಲು ಅವಳ ರಾಜ್ಯದಲ್ಲಿದ್ದು ತನಗೆ ವಿಧೇಯತೆಯನ್ನು ತೋರಿಸುತ್ತಿದ್ದ ಎರಡು ಪ್ರಾಂತಗಳನ್ನು ತಾನು ಸ್ವತಂತ್ರ ದೇಶಗಳೆಂದು ಪರಿಗಣಿಸುವುದಾಗಿ ಘೋಷಿಸಿದ.

ಉಕ್ರಾಣಿ ರಕ್ಷಣೆಗಾಗಿ ಅಮರಿಯ ಮೊರೆ ಹೋಗಿ ಅಮರಿ ನೇತೃತ್ವದ ಒಕ್ಕೂಟದ ಸದಸ್ಯತ್ವವನ್ನು ಕೋರಿದಳು. ತನ್ನನ್ನು ವಿವಾಹವಾಗಿ ಋಷ್ಯಂಗನಿಗೆ ಬುದ್ದಿ ಕಲಿಸಲು ಬೇಡಿದಳು. ಅಮರಿ ಮತ್ತವನ ಸಹಚರರು ಉಕ್ರಾಣಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟರು. ಅಷ್ಟರಲ್ಲಿ ಋಷ್ಯಂಗ ತನ್ನ ಸೈನ್ಯವನ್ನು ಉಕ್ರಾಣಿಗೆ ಕಳಿಸಿ ಆ ದೇಶದ ಮೇಲೆ ಆಕ್ರಮಣ ಮಾಡಿದ. ವಿನಾಕಾರಣ ಋಷ್ಯಂಗ ಪುಟ್ಟದೇಶವೊಂದರ ಮೇಲೆ ಆಕ್ರಮಣ ಮಾಡಿದ್ದಾನೆ, ಅವನಿಗೆ ನಾವೆಲ್ಲಾ ನಿಷೇಧ ಹೇರಬೇಕು, ಅವನನ್ನು ನಾವು ಮಣಿಸಬೇಕು. ಇಡೀ ವಿಶ್ವವೇ ಒಂದಾಗಬೇಕು ಎಂದು ಅಮರಿ ಬೇರೆ ರಾಜ್ಯಗಳಿಗೆ ಹೇಳಿದ. ಆದರೆ ತಾನು ಮಾತ್ರ ತನ್ನ ಸೈನ್ಯವನ್ನು ಉಕ್ರಾಣಿಯ ರಕ್ಷಣೆಗೆ ಕಳಿಸಲಿಲ್ಲ. ಇತರ ದೇಶಗಳು ಬಾಯಿಮಾತಿನಲ್ಲಿ ಉಕ್ರಾಣಿಯ ಬೆಂಬಲಕ್ಕೆ ನಿಂತರೇ ಹೊರತು ಆಕೆಯ ಜತೆಗೂಡಿ ಋಷ್ಯಂಗನೊಡನೆ ಕದನಕ್ಕೆ ಇಳಿಯಲಿಲ್ಲ. ಇನ್ನು ಕೆಲವರು ಬೇರೆ ರೀತಿಯಲ್ಲಿ ಬೆಂಬಲಕ್ಕೆ ನಿಂತರು. ವಿಶ್ವದ ಬೇರೆ ರಾಜರಲ್ಲಿ ಕೆಲವರು ಋಷ್ಯಂಗನ ಜೊತೆ, ಕೆಲವರು ಅಮರಿಯ ಜೊತೆ ನಿಂತರು, ಇನ್ನು ಕೆಲವರು ತಟಸ್ಥರಾದರು. ಹಲವಾರು ದಿನಗಳ ಕಾಲ ಯುದ್ಧ ನಡೆಯಿತು. ಋಷ್ಯಂಗನ ಸೈನ್ಯ ಉಕ್ರಾಣಿಯ ಹಲವಾರು ಪ್ರಾಮುಖ್ಯ ಸ್ಥಳಗಳನ್ನು ಧ್ವಂಸಗೊಳಿಸಿತು.

ಎಲೆಯ ಮೇಲೆ ಮುಳ್ಳು ಬಿದ್ದರೂ, ಮುಳ್ಳೇ ಎಲೆಯ ಮೇಲೆ ಬಿದ್ದರೂ ಘಾಸಿಯಾಗುವುದು ಎಲೆಗೇ ಎನ್ನುವಂತೆ ಬಲಶಾಲೀ ಪತಿ ಜೀವಂತವಿದ್ದಾಗ ಇನ್ನೊಬ್ಬ ಬಲಾಢ್ಯನ ಮಾತುಗಳಿಗೆ ಮರುಳಾಗಿ ಅವನತ್ತ ವಾಲಿದರೆ ಅಡಕತ್ತರಿಯಲ್ಲಿ ಸಿಕ್ಕಂತಾಗುವುದು ಸಹಜ ಎನ್ನುವುದೇ ಈ ಕಥೆಯ ನೀತಿ.



(ಇದೊಂದು ಕಾಲ್ಪನಿಕ ಕಥೆ. ಇದರಲ್ಲಿನ ಘಟನೆಗಳು ನೈಜ ಘಟನೆಗಳನ್ನು ಹೋಲುತ್ತಿದ್ದರೆ ಅವು ಕಾಕತಾಳೀಯವಷ್ಟೇ–ಲೇಖಕ) ■

# ಡಾಲಿಯ ಡೌಲು

***ಕವಿತಾ ಹೆಗಡೆ ಅಭಯಂ**

ಎಷ್ಟೋ ಸಾರಿ ಪುಟ್ಟ ಘಟನೆಗಳು ಬದುಕಿನಲ್ಲಿ ಮಾಸದ ನೆನಪುಗಳಿಗೆ ಕಾರಣವಾಗಬಹುದು. ಅದರಲ್ಲೂ ಪ್ರಾಣಿ ಪ್ರಿಯರಿಗಂತೂ ತಮ್ಮ ಪ್ರೀತಿಯ 'ಪೆಟ್'ಗಳು ಕೊಡುವ ಅಪ್ರತಿಮ ಸುಖ ಹಾಗೂ ಅವನ್ನು ಕಳಕೊಂಡಾಗ ಹೃದಯಕ್ಕೆ ತಗಲುವ ಪೆಟ್ಟು ಮರೆಯಲಾರದ್ದು.

ಒಂದು ದಿನ ಹೀಗಾಯ್ತು. ಮನೆಯ ಹಿಂದಿನ ಗೋಡೆಗೆ ಹೊಂದಿಕೊಂಡು ಬೀದಿನಾಯಿಯೊಂದು ಎರಡು ಪುಟ್ಟ ಮರಿಗಳನ್ನು ಇಟ್ಟಿತ್ತು.

ಒಂದು ಮರಿ ಬಿಳಿಯ ಮೈಮೇಲೆ ಅಲ್ಲಲ್ಲಿ ಶುಂಠಿ ಬಣ್ಣದ ಚಿತ್ತಾರ ಇರುವದೂ ಇನ್ನೊಂದು ಮಾಸಲು ಬಿಳಿಯದೂ ಇತ್ತು. ಇರುವ ಎರಡರಲ್ಲಿ ಬಿಳಿ – ಶುಂಠಿ ಮರಿಗೆ ನಾವು ಡಾಲಿ ಎಂಬ ಹೆಸರಿಟ್ಟು ನಮ್ಮದು ಅಂತ ಸಾಕಲು ಶುರು ಮಾಡಿದರೆ ಬಿಳಿಯದು ಟೀಪು ಅಂತ ಕರೆಸಿಕೊಂಡು ಹಿಂದಿನ ಮೇಷ್ಟ್ರ ಮನೆ ಸೇರಿತು.

ಆ ಡಾಲಿ ಅನ್ನೋ ಜೀವದ ತುಂಟಾಟಕ್ಕೆ ಮಿತಿಯೇ ಇದ್ದಿಲ್ಲ. ಅದರ ಜಾಣತನ, ಆಟ ಪಾಠಗಳು ನಮಗಂತೂ ಹುಚ್ಚು ಹಿಡಿಸಿದ್ದವು. ನಿಧಾನವಾಗಿ ನಮ್ಮ ಮನೆಯ ಸದಸ್ಯನೇ ಆದ ಡಾಲಿಯ ಪ್ರೀತಿ ನಮ್ಮೆಲ್ಲರ ಮನಸ್ಸನ್ನೂ ಪೂರ್ತಿಯಾಗಿ ಗೆದ್ದುಬಿಟ್ಟಿತ್ತು. ಅದರ ಗುಣ ವಿಶೇಷಗಳು ನಿಜಕ್ಕೂ ಅಪೂರ್ವ.

ಡಾಲಿ ಬರಿಯ ನಾಯಿಯಾಗಿರಲಿಲ್ಲ, ನಮ್ಮೆಲ್ಲರ ಜೀವವೇ ಆಗಿತ್ತು.

**ಡಾಲಿಯ ದ್ವೇಷ ನೂರು ವರುಷ :** ಡಾಲಿಗೆ ದೊಡ್ಡವರೆಂದರೆ ಇಷ್ಟವಿತ್ತಾದರೂ ಮಕ್ಕಳನ್ನು ಕಂಡರೆ ಮಾತ್ರ ಪೂರ್ವ ಜನ್ಮದಿಂದಲೇ ಬಂದ ದ್ವೇಷವೋ ಎಂಬಂತೆ ವರ್ತಿಸುತ್ತಿತ್ತು. ನಮ್ಮ ಮನೆಗೆ ಬಂದ ಮಕ್ಕಳನ್ನು ಹೆದರಿಸುವ ಆಟ ನಮಗೆ ಸಿಕ್ಕಾಪಟ್ಟೆ ಮೋಜು ಕೊಡುತ್ತಿತ್ತು. ಪಾಪ, ಆ ಮಕ್ಕಳು ಮಾತ್ರ ಸತ್ತೆ ಕೆಟ್ಟೆ ಎಂದು ಅದರ ಕೈಗೆ ಸಿಗದ ಹಾಗೆ ಕಂಡ ಕಂಡ ಖುರ್ಚಿ, ಸೋಫಾಗಳ ಮೇಲೆ ಹತ್ತಿ ಓಡಿ ತಪ್ಪಿಸಿಕೊಳ್ಳಲು ಒದ್ದಾಡುವುದೂ ನಾವು ಮಕ್ಕಳು 'ನಮ್ಮ ಡಾಲಿ ಎಷ್ಟು ಹುಷಾರಿ' ಎಂದು ಜಂಭದಿಂದ ಬೀಗುವುದೂ ಒಟ್ಟಿಗೇ ನಡೆಯುವ ಕಾರ್ಯಕ್ರಮವಾಗಿತ್ತು. ಒಮ್ಮೆ ಡಾಲಿಯ ತಡಕು ಕಂಡ ಮಕ್ಕಳು ಮತ್ತೆ ನಮ್ಮ ಮನೆಯ ಕಡೆ ನೋಡುವುದಕ್ಕೂ ಅಂಜುತ್ತಿದ್ದರು.

**ಮರಿ ಬಕಾಸುರ :** ಡಾಲಿಯ ಹಾಟ್ ಫೇವರಿಟ್ ಅಂದರೆ ಅನ್ನ ಹುಳಿ! ಅಮ್ಮ ಮಾಡಿದ ರುಚಿಕಟ್ಟಾದ ಹುಳಿಯನ್ನು ಹಾಕಿ ಕಲಸಿದ ಅನ್ನ ಅಂದರೆ ಡಾಲಿಗೆ ಪಂಚ ಪ್ರಾಣ! ದಿನದಲ್ಲಿ ಎಷ್ಟು ಸಲ ಬೇಕಿದ್ದರೂ ಡಾಲಿಯ ಹೊಟ್ಟೆಯೊಳಗೆ ಅನ್ನ ಹುಳಿಗಾಗಿ ಮರಿ ಬಕಾಸುರ ಸದಾ ಜಾಗ್ರತನಾಗೇ ಇರುತ್ತಿದ್ದ! ಬೇರೆ ಯಾವ ತಿಂಡಿಗೂ ಡಾಲಿ ತೋರುವ 'ಡೋಂಟ್ ಕೇರ್ ಅಟಿಟ್ಯೂಡ್' ನಮಗೆ ನಿಜಕ್ಕೂ ಆಶ್ಚರ್ಯ ತರುತ್ತಿತ್ತು. ಅಮ್ಮ ಡಾಲಿಯ ಜಾಣತನದ ಪರೀಕ್ಷೆಗಾಗಿ ಎಷ್ಟೇ ನಿಧಾನವಾಗಿ ಶಬ್ದವೇ ಆಗದಂತೆ ಹುಳಿ ಪಾತ್ರೆಯ ಮುಚ್ಚಳ ತೆರೆದರೂ ಅದು ಅದಕ್ಕೆ ಹೇಗೆ ಗೊತ್ತಾಗುತ್ತಿತ್ತೋ ಏನೋ ಅರೆ ಕ್ಷಣದಲ್ಲಿ ಡಾಲಿ ಅಡುಗೆಮನೆಯಲ್ಲಿ ಪ್ರತ್ಯಕ್ಷವಾಗುತ್ತಿತ್ತು!



ಮತ್ತೆ ಅಮ್ಮ 'ಅಯ್ಯಯ್ಯೋ ನೋಡ್ಕಳಿ ಎಂಥಾ ಹುಷಾರಿ ಈ ಕುನ್ನಿ! ನನ್ನತ್ರ ಇದಕ್ಕ್ ಢಗ ಹಾಕುಲೆ ಸಾಧ್ಯ ಇಲ್ಯಪ್ಪಾ.." ಎಂದು ನಗುತ್ತ ಅದಕ್ಕೆ ಅನ್ನ ಹಾಕೇ

ಕಳಿಸುತ್ತಿದ್ದಳು.

**ಬಾಡಿ ಗಾರ್ಡ್ :** ಡಾಲಿ ಮಾತ್ರ ಸದಾ ಕಾಲಕ್ಕೂ ಅಮ್ಮನ ಬಾಡಿ ಗಾರ್ಡ್ ಆಗೇ ಎವರ್ ರೆಡಿ ಪೊಸಿಷನ್ನಲ್ಲಿ ಅಲರ್ಟ್ ಆಗೇ ಇರುತ್ತಿತ್ತು. ಏನಾದರೂ ಬೇರೆ ನಾಯಿ, ಬೆಕ್ಕು ಅಥವಾ ಕಾಗೆ ಬಂದರೆ ಅಮ್ಮ ಓಡಿಸಲು "ಹಾತ್.. ಹುಶ್" ಅಂದರೆ ಸಾಕು, ಡಾಲಿ ದೇವರನ್ನೂ ಮೀರಿಸುವ ವೇಗದಲ್ಲಿ ಪ್ರತ್ಯಕ್ಷವಾಗುತ್ತಿತ್ತು. ಮನೆಗೆ ಯಾರಾದರೂ ಅತಿಥಿಗಳು ಬಂದರೆ ಸಾಕು, ಅಮ್ಮ ತರಹೇವಾರಿ ತಿಂಡಿ ತಿನಿಸು ಇಟ್ಟರೆ ಡಾಲಿ ಅಲ್ಲೂ ಹಾಜರು. ಅತಿಥಿಗಳಿಗಿಂತ ತುಸು ದೂರದಲ್ಲಿ  ರಾಜ ಗಾಂಭೀರ್ಯದಿಂದ ಕೂತು ನೋಡುತ್ತಿತ್ತು. ನಾವು ಬಂದವರನ್ನು ಬೀಳ್ಕೊಟ್ಟು ಬರುವವರೆಗೂ ವಾಚಮನ್ ತರಹ ಕಾಯುತ್ತ ಕೂರುತ್ತಿತ್ತೇ ವಿನಃ ಒಂದು ದಿನವೂ ಕದ್ದು ಬಾಯಿ ಹಾಕಿದ್ದಿಲ್ಲ, ಅಂಥಾ ಡಿಗ್ನಿಫೈಡ್ ಡಾಗ್ ಅದು.

**ಜಡೆವೊತ್ತಡಮ್ :** ಡಾಲಿ ಒಂದು ದಿನ ಮೆಟ್ಟಿಲುಗಳ ಕೆಳಗೆ ಅಂಗಳದಲ್ಲಿ ನಿದ್ರಿಸಿತ್ತು. ಅಮ್ಮನಿಗೆ ಡಾಲಿ ಎಂದರೆ ಪ್ರಾಣ. ಸಮಯ ಸಿಕ್ಕಾಗಲೆಲ್ಲ ಅದರೊಡನೆ ಆಟ ಆಡುವವಳೇ. ಆ ದಿನ ಸುಮ್ಮನೆ ನಿದ್ರೆ ಹೋಗಿದ್ದ ಡಾಲಿಯ ಬಳಿ ಇವಳು ಕುಳಿತಾಗ ಡಾಲಿ ಕಣ್ಣು ಬಿಟ್ಟು ಬಾಲ ಅಲ್ಲಾಡಿಸಿ ಪ್ರೀತಿ ವ್ಯಕ್ತಪಡಿಸುತ್ತಿತ್ತು. ಅಮ್ಮನಿಗೆ ಅದರ ಮೇಲಿನ ಪ್ರೀತಿ ಇದ್ದಕ್ಕಿದ್ದಂತೆ ಉಕ್ಕಿ ಹರಿದು ಅದರ ಮುಂದೆ ಕೈ ಬಾಯಿ ತಿರುಗಿಸುತ್ತ ರಾಗವಾಗಿ "ಜಡೆವೊತ್ತಡಂ ಹಸಿಯ ತವಲುಟ್ಟೊಡಂ ನಾಡ ಸುಡುಗಾಡಿನೊಳಗಿರ್ದೊಡಂ .. ಧಡಂ.. ಧುಡುಂ  ಧಡಂ  ಧುಡುಂ " ಎಂದು ಗಟ್ಟಿಯಾಗಿ ಹಾಡಲು ತೊಡಗಿದಾಗ ಡಾಲಿ ಇದೇನೆಂದು ತಿಳಿಯದೆ ಕಕ್ಕಾಬಿಕ್ಕಿಯಾಗಿತ್ತು. ಅಮ್ಮನ ಆವೇಶದ ಹಾಡು ಮುಗಿದಾಗ ನೋಡಿದರೆ ಏನನ್ನೋ ಹೇಳಲು ಬಂದ ಸೊಸೈಟಿಯ ಸೆಕ್ರೆಟರಿ ಅಮ್ಮನ ಆಟ ನೋಡಿ ಇವಳಿಗೇನಾಯ್ತಪ್ಪಾ ಎಂದು ಕಂಗಾಲಾಗಿ ನಿಂತಿದ್ದ. ನಾವು ಕೂಡ ಸೆಕ್ರೆಟರಿಯನ್ನು ನೋಡಿದ್ದರೂ ಅಮ್ಮನನ್ನು ತಡೆಯಲು ಸಾಧ್ಯವಾಗದಷ್ಟು ಡಾಲಿಯ ಪ್ರಭಾವ ಅವಳ ಮೇಲಿತ್ತು!

**ಸ್ಕಿಲ್ ಮಾಸ್ಟರ್ :** ಬೇಸಿಗೆಯಲ್ಲಿ ದೊಡ್ಡವರು ಮುರುಗಲು (ಕೋಕಮ್) ಹಣ್ಣು ಕೊಯ್ಯುವುದೂ ಅದನ್ನು ನಾವು ಮಕ್ಕಳು ಹೆಕ್ಕಿ ಬುಟ್ಟಿ ತುಂಬಿಸುವುದೂ ಮಾಡುತ್ತಿದ್ದರೆ ತಾನೂ ಒಳ್ಳೇ ಟ್ರೈನ್ಡ್ ನಾಯಿಗಳ ತರಹ ಬಾಯಲ್ಲಿ ಒಂದೊಂದೇ ಕಾಯಿ ಕಚ್ಚಿಕೊಂಡು ಬುಟ್ಟಿಗೆ ಹಾಕುತ್ತಿತ್ತು. ಪೇಪರ್ ಕಚ್ಚಿಕೊಂಡು ತಂದು ಕೊಡುವುದು, ಎಲ್ಲಿ ಎಲುಬು ಹೂತು ಅಡಗಿಸಿಟ್ಟರೂ ಪ್ರತಿ ಸಾರಿಯೂ ಹುಡುಕಿಕೊಂಡು ಬರುವುದು ಎಷ್ಟು ಚೆನ್ನಾಗಿರುತ್ತಿತ್ತು!

**ಹರುಕು ಅಂಗಿ :** ಡಾಲಿಗೆ ಎಲ್ಲರಲ್ಲೂ ವಿಶೇಷ ಪ್ರೀತಿ. ಅದರಲ್ಲೂ ನನ್ನ ಹಾಗೂ ಅದರ ಅನುಬಂಧ ವಿಶಿಷ್ಟವಾದದ್ದು. ನಾನು ಸಣ್ಣವಳೂ ಅದರ ಸಮಕ್ಕೆ ಓಡಿ ಆಡುವವಳೂ ಆದ ಕಾರಣ ಅದಕ್ಕೆ ನನ್ನಲ್ಲಿ ಒಂದು ಅಪೂರ್ವ ಸಲಿಗೆ ಇತ್ತು. ಅಂಗಳದಲ್ಲಿ ಅದು ನನ್ನನ್ನು ರೌಂಡ್ ರೌಂಡ್ ಓಡಿಸಿ ಕಡೆಗೂ ನನ್ನ ಫ್ರಾಕು ಅಥವಾ ಸ್ಕರ್ಟು ಹಿಡಿದು ಎಳೆದೇ ಬಿಡುತ್ತಿತ್ತು. ನನ್ನ ಹೊಸ –ಹಳೆಯ ಯಾವ ಸ್ಕರ್ಟು, ಫ್ರಾಕು ನೋಡಿದರೂ ಒಂದು ತೂತು! ಡಾಲಿ ಮಾಡಿದ್ದು! ಕಡೆ ಕಡೆಗೆ ತೂತಿಲ್ಲದ ಒಂದು ಡ್ರೆಸ್ಸು ಕೂಡ ನನಗೆ ಇರಲಿಲ್ಲ.



**ಸಿಐಡಿ :** ಎಲ್ಲಕ್ಕಿಂತ ಮಜಾ ಎಂದರೆ ಡಾಲಿಯ ಹೈಸ್ಕೂಲ್ ಪ್ರವಾಸ! ನಾನು

ಶಾಲೆಗೆ ಹೋದರೆ ನನ್ನ ಹಿಂದೆಯೇ ಬಸವನ ಬೆನ್ನಿಗೆ ಬಾಲ ಬಂದ ಹಾಗೆ ಬರುವ ಡಾಲಿ ನನ್ನನ್ನು ಶಾಲೆಗೆ ಬಿಟ್ಟು ತಿರುಗಿ ಹೋಗುತ್ತಿತ್ತು. ನಾನು ಒಂಬತ್ತನೇ ತರಗತಿಯಲ್ಲಿ ಕೂತಿದ್ದಾಗ ಒಂದು ದಿನ ಸುಮಾರು ಮಧ್ಯಾಹ್ನದ ಸಮಯದಲ್ಲಿ ಅದು ನನ್ನ ಜಾಡು ಹಿಡಿದು ನನ್ನ ಕ್ಲಾಸಿನ ಮುಂದೆ ಬಂದು ಬಾಗಿಲಲ್ಲಿ ನಿಂತು ವೈಯ್ಯಾರವಾಗಿ ಬಾಲ ಕುಣಿಸಲು ಶುರು ಮಾಡಿತ್ತು! "ಹೆಂಗೆ ನಿನ್ನ ಕಂಡುಹಿಡಿದೆ ನೋಡು. ಅಡಗಿ ಕೂರ್ತಿಯಾ?" ಎಂದು ಸವಾಲು ಎಸೆದು ಬಾಗಿಲಲ್ಲಿ ನಿಂತಿತ್ತು. ನಾನು ಎಷ್ಟೇ ಅಡಗಿ ಕೂತರೂ ನನ್ನನ್ನು ಸಿಐಡಿಯ ಹಾಗೆ ಪತ್ತೆ ಮಾಡಿತ್ತು. ನನ್ನ ಕ್ಲಾಸ್ ಮೇಟುಗಳಂತೂ "ಕವಿತನ ನಾಯೀನೂ ಶಾಲೆಗೆ ಬರ್ತದೆ" ಎಂದು ನಕ್ಕಿದ್ದೇ ನಕ್ಕಿದ್ದು. ಅಕ್ಕ, ಅಣ್ಣ ಕಾಲೇಜಿಗೆ ಹೊರಟರೆ ಅಲ್ಲೂ ಅದರದ್ದೇ ಪಾರುಪತ್ಯ! ಅವರು ಬಸ್ ಹತ್ತಿದರೆ ತಾನೂ ಎರಡು ಮೆಟ್ಟಿಲು ಹತ್ತಿ ಕೆಳಗೆ ಇಳಿದು ಬೀಳ್ಕೊಡುಗೆ ಸಮಾರಂಭ ನಡೆಸಿಯೇ ತಿರುಗಿ ಮನೆಗೆ ಬರುತ್ತಿತ್ತು.

ಊರಿನವರೇನು, ಕಂಡಕ್ಟರ್ ಕೂಡ ಇದಕ್ಕೆ ದೂಸರಾ ಮಾತು ಆಡುವಂತಿರಲಿಲ್ಲ.

**ಏಕಲವ್ಯ:** ಇನ್ನು ಶಬ್ದವೇಧಿ ವಿದ್ಯೆಯಲ್ಲೂ ಡಾಲಿಗೆ ಸಮಾನರಾದವರಿಲ್ಲ. ನಮ್ಮ ಅಣ್ಣನ ಸ್ಪೀಕಿಂಗ್ ಸ್ಕಿಲ್ ಭಾರೀ ಚೆಂದವಿದ್ದ ಕಾರಣ ಊರಿನ ಎಲ್ಲ ಕ್ರಿಕೆಟ್ ಮ್ಯಾಚುಗಳು ಎಂದರೆ ಅವನದೇ ಕಮೆಂಟರಿ. ಒಂದು ದಿನವಂತೂ ಮನೆಯಿಂದ ಸುಮಾರು ದೂರವಿದ್ದ ಗದ್ದೆ ಬಯಲಿನಲ್ಲಿ ಮ್ಯಾಚು ನಡೆದಿತ್ತು. ಅಲ್ಲಿ ಯಾರೂ ಹುಡುಗಿಯರು ಹೋಗದ ಕಾರಣ ನಾನು, ನನ್ನ ಗೆಳತಿ ದೂರದಿಂದಲೇ ಗೇರುಮರ ಹತ್ತಿ ಅಡಗಿ ಕೂತು ಮ್ಯಾಚ್ ನೋಡುವುದು ಪದ್ಧತಿ. ಡಾಲಿಯೇನೋ ಮನೆಯಲ್ಲಿ ಮಲಗಿತ್ತು. ಇಲ್ಲಿ ಅಣ್ಣನ ಕಮೆಂಟರಿ ಕೂಡ ಜೋರಾಗಿತ್ತು. ಸ್ವಲ್ಪ ಹೊತ್ತಿನಲ್ಲೇ ಅಣ್ಣನ ಧ್ವನಿಯನ್ನು ಮೈಕಿನಲ್ಲಿ ಕೇಳಿ ಇನ್ನೂ ನೋಡಿರದ ಬಯಲಿಗೆ ಡಾಲಿ ಹೋಗಿ ಕಮೆಂಟರಿ ಹೇಳುತ್ತಿದ್ದ ಅಣ್ಣನ ಮುಂದೆ ನಿಂತು ಬಾಲ ಕುಣಿಸಲಾರಂಭಿಸಿತು.

**ಕಾವಲುಗಾರ :** ಡಾಲಿಗೆ ನಮ್ಮ ಮನೆಯ ವಸ್ತುಗಳು ಎಂದರೆ ತುಂಬಾ ಕಾಳಜಿ. ಯಾರೇ ಬರಲಿ, ಡಾಲಿಯ ಸ್ಕ್ಯಾನಿಂಗ್ ನಡೆದ ಮೇಲೆಯೇ ಎಲ್ಲರಿಗೂ ಎಂಟ್ರಿ. ಬರುವವರು ಸಾಮಾನು, ಗಂಟು ಮೂಟೆ ಹೊತ್ತು ಮನೆಗೆ ತರಬಹುದು, ಆದರೆ ವಾಪಸ್ಸು ನಮ್ಮ ಮನೆಯಿಂದ ಏನನ್ನೂ ಒಯ್ಯುವ ಹಾಗಿರಲಿಲ್ಲ. ಒಮ್ಮೆ ನಮ್ಮ ಮನೆಯಿಂದ ಅಂಗಡಿಗೆ ಒಯ್ಯಬೇಕಾದ ಅಡಿಕೆ ಮೂಟೆಯನ್ನು ಒಬ್ಬ ಆಳು ಹೊತ್ತು ಹೊರಟಾಗ ಅಲ್ಲಿಯವರೆಗೂ ಸುಮ್ಮನೆ ನೋಡುತ್ತಾ ಮಲಗಿದ್ದ ಡಾಲಿ ಅವನು ನಮ್ಮ ಮನೆಯ ಸಾಮಾನು ಒಯ್ಯುತ್ತಿದ್ದಾನೆಂದು ಭಾವಿಸಿ ಗಬಕ್ಕನೆ ಅವನ ಹಿಂಭಾಗ ಕಚ್ಚಿಬಿಟ್ಟಿತ್ತು. ಆಗಿನಿಂದಲೂ ಯಾವುದೇ ಆಳು ಮಕ್ಕಳೂ ನಮ್ಮ ಮನೆಯಿಂದ ಏನೂ ಸಾಗಿಸಲು ಮಾತ್ರವಲ್ಲ, ಕೆಲಸಕ್ಕೆ ಬರಲು ಸಹ ಅಂಜುತ್ತಿದ್ದರು. " ನಿಮ್ಮ ಕುನ್ನಿ ಕಚ್ತದೆ.. " ಅಂತ ರಾಗ ತೆಗೆಯೋದು ಬಹಳ ವರ್ಷ ನಡೆದಿತ್ತು.

**ಬೆಕ್ಕೇ, ನಿನ್ನ ಭಯ! :** ಡಾಲಿ ತನ್ನ ಜೀವನದಲ್ಲಿ ಎಂದೂ ಯಾರಿಗೂ ಸೋತಿದ್ದಿಲ್ಲ. ಆದರೆ ನಮ್ಮ ಬೆಕ್ಕು ಚಿಂಪಿಯ ರೋಷಾವೇಶಕ್ಕೆ ಮಾತ್ರ ಯಾವತ್ತೂ ಹೆದರಿಕೆ. ಒಮ್ಮೆ ಕಾಂಪೌಂಡಿನ ಗೋಡೆಯ ಮೇಲೆ ಚಿಂಪಿಗೆ ಎದುರಾಗಿ ನಾಗರ ಹಾವೊಂದು ಸೆಣೆಸಾಡುತ್ತಿದ್ದರೆ ಡಾಲಿ ಕೆಳಗೆ ನಿಂತು ಬೊಗಳಿ ಹಾವನ್ನು ಹಿಮ್ಮೆಟ್ಟಿಸಿದ ಶೌರ್ಯವಂತ ಅನ್ನುವುದು ಮರೆಯಲು ಸಾಧ್ಯವೇ ಇಲ್ಲ.




**ಸ್ವಾಮಿ ನಿಷ್ಠೆ :** ಇಂತಹ ಡಾಲಿ ನಮ್ಮೆಲ್ಲರ ಪ್ರೀತಿಗೆದ್ದ ಆತ್ಮಬಂಧುವಾಗಿ ಕೆಲವೇ ವರ್ಷ ಬದುಕಿದ್ದರೂ ಕೊನೆಗೆ ಅದಕ್ಕೂ ಅಂತ್ಯಕಾಲ ಬಂದೇ ಬಂತು. ಸಾಯುವ ದಿನ ನನಗಿನ್ನೂ ನೆನಪಿದೆ, ಅಪ್ಪ ಕುಮಟಾ ಪೇಟೆಗೆ ಹೋಗಿದ್ದರು. ಡಾಲಿ ಏದುಸಿರು ಬಿಡುತ್ತ ಈಗೋ ಆಗೋ ಅನ್ನುವಂತೆ ಇತ್ತು. ಆದರೂ ಅಪ್ಪ ಮನೆಯಲ್ಲಿ ಇಲ್ಲವೆಂದು ಅವರು ಬರುವವರೆಗೂ ಜೀವ ಹಿಡಿದುಕೊಂಡು ಕಾದಿತ್ತು. ಅಪ್ಪ ಬಂದು ಮೆಟ್ಟಿಲು ಏರುತ್ತಿದ್ದ ಹಾಗೆ ಅದರ ಪ್ರಾಣಜ್ಯೋತಿಯೂ ನಂದಿತ್ತು. ಸ್ವಾಮಿ ನಿಷ್ಠೆಯ ಈ ಅಪ್ರತಿಮ ಉದಾಹರಣೆ ನಮ್ಮೆಲ್ಲರನ್ನೂ ಗಾಢವಾಗಿ ಕಾಡಿತ್ತು. ಇವತ್ತಿಗೂ ಯಾವ ನಾಯಿಯನ್ನು ನೋಡಿದರೂ ಡಾಲಿ ಹಾಗೂ ಅದರ ಆಟ –ಪಾಠ, ಪ್ರೀತಿ, ವಿಶ್ವಾಸ, ನಿಷ್ಠೆ ನೆನಪಾಗಿ ಗದ್ಗದಿತರಾಗುತ್ತೇವೆ. ಅಂತಹ ಜೀವ ಇನ್ನೊಂದಿಲ್ಲ ಅನಿಸಿಬಿಡುತ್ತದೆ. ಡಾಲಿಯ ನೆನಪು ಎಂದೆಂದಿಗೂ ಅಮರ.

■

---

ಚಾಮರಾಜ ಒಡೆಯರ ಬೋಳುತಲೆ ಶಿಷ್ಯರೊಬ್ಬರು ಹೇರ್ ಕಟಿಂಗ್ ಸೆಲೂನಿಗೆ ಹೋದರಂತೆ. ನಾಪಿತ, " ಕಟ್ ಮಾಡಲೋ, ಎಣಿಸಲೋ ?" ಅಂತ ಕುಹಕವಾಡಿದನಂತೆ. ಆಸಾಮಿ ಗಂಭೀರವಾಗಿ, " ಕಪ್ಪು ಬಣ್ಣ ಹಾಕು " ಎಂದರಂತೆ.

---






# 'ನೋ ಥ್ಯಾಂಕ್ ಯು' ನೀರಜಾ !

*ಚಿತ್ರಾ ರಾಮಚಂದ್ರನ್

'ಪಪ್ಪು ಮಮ್ಮು' ತಿನ್ನಲು ಶುರುಮಾಡಿದ ವಯಸ್ಸಿನಿಂದಲೇ ನೀರಜಾಳಿಗೆ ರುಚಿಯಾಗಿ ತಿನ್ನುವುದರಲ್ಲಿ ಬಲು ಆಸಕ್ತಿ. ಪದಾರ್ಥಕ್ಕೆ ಬಳಸಿರುವುದು ಕಲ್ಲು ಉಪ್ಪೋ ಪುಡಿ ಉಪ್ಪೋ ಎಂಬುದನ್ನು ಅದರ ರುಚಿಯಿಂದಲೇ ಕಂಡು ಹಿಡಿಯುವ ಸಾಮರ್ಥ್ಯ ಚಿಕ್ಕಂದಿನಲ್ಲೇ ಅವಳಿಗೆ ಸಿದ್ಧಿಸಿತ್ತು. ಅವಳು ಬೆಳೆಯುತ್ತಿದ್ದ ಹಾಗೆಯೇ ಅವಳ ನಾಲಿಗೆಯ ರುಚಿ ಮೊಗ್ಗುಗಳೂ ಸಹ ಹೆಚ್ಚು ಹೆಚ್ಚು ಸೂಕ್ಷ್ಮವಾಗ ತೊಡಗಿದ್ದವು. ರುಚಿಯಾದ ಊಟವನ್ನು ಖುಷಿಯಿಂದ ನಿಧಾನವಾಗಿ ಚಪ್ಪರಿಸಿ ಅವಳು ತಿನ್ನುತ್ತಿದ್ದ ಪರಿಗೆ ಮನೆಯವರು ಅವಳನ್ನು 'ತಿಂಡಿ ಪೋತಿ' ಎಂದೇ ಕರೆಯತೊಡಗಿದ್ದರು!

“ಪರ್ವಾಗಿಲ್ಲ ರೀ! ನನ್ ಅಡುಗೆ ನೀರಜಾಳಿಗೆ ತುಂಬಾ ಇಷ್ಟ ಆಯ್ತು ಅನ್ಸತ್ತೆ! ನಿನ್ನೆ ಚಾರೂ ಜೊತೆ ಆಡಕ್ಕೆ ಬಂದಾಗ ನಮ್ಮನೇಲಿ ಮೂರು ಬೇಳೆ ದೋಸೆ ತಿಂದ್ಲು ಗೊತ್ತಾ?! ನಮ್ಮ ಚಾರು ಒಂದರಮೇಲೆ ತಿನ್ನೋದೇ ಇಲ್ಲ!" ಒಮ್ಮೆ ಪಕ್ಕದ ಮನೆ ವಿಶಾಲಾಕ್ಷಿ ಆಶ್ಚರ್ಯದಿಂದ ಕಣ್ಣರಳಿಸಿ ಹೀಗೆ ಹೇಳಿದಾಗ ಅಮ್ಮನಿಗೆ ತುಂಬಾ ಮುಜುಗರವಾಗಿತ್ತು.

'ಮತ್ತೊಬ್ಬರ ಮನೆಗೆ ಹೋದಾಗ ನಾಲಿಗೆ ಎಳೆದು ಹಿಡಿಯಬೇಕು! ಮರ್ಯಾದೆಯಿಂದಿರಬೇಕು! ಹೊಟ್ಟೆಬಾಕಳಂತೆ ಆಡಬಾರದು!' ಎಂಬ ಅಮ್ಮನ ಬುದ್ಧಿವಾದವೆಲ್ಲ ಗಾಳಿಯಲ್ಲಿ ತೂರಿ ಹೋಗಿತ್ತು. ತನ್ನ ಮನೆ, ಸ್ನೇಹಿತರ ಮನೆ, ಇತರರ ಮನೆ ಎಂಬ ಬೇಧಭಾವವಿಲ್ಲದೆ ಎಲ್ಲಿಗೆ ಹೋದರೂ, ರುಚಿಯಾದ ತಿನಸಿ ಎಲ್ಲಿ ದೊರಕಿದರೂ ಸಂಕೋಚವಿಲ್ಲದೆ ಖುಷಿ ಖುಷಿಯಾಗಿ ಸವಿಯುತ್ತಿದ್ದಳು ನೀರಜಾ.

ಊಟದ ವಿಷಯದಲ್ಲಿ ಮಕ್ಕಳನ್ನ ಯಾವ ನಿರ್ಬಂಧವೂ ಮಾಡದೆ ಮುಕ್ತವಾಗಿ ಬಿಡಬೇಕು ಎಂಬುದು ಅಪ್ಪನ ಅನಿಸಿಕೆಯಾಗಿತ್ತು. ಅಪ್ಪನ ಜೊತೆ ಹೋಟೆಲಿಗೆ ಹೋದರೆ ನೀರಜಾಳಿಗಂತೂ ಸ್ವರ್ಗಕ್ಕೆ ಮೂರೇ ಗೇಣು ಎನ್ನುವಷ್ಟು ಖುಷಿ. ಊಟದ ನಂತರ ಐಸ್ ಕ್ರೀಮೋ ಬಾಸುಂದಿಯೊ ಎಂಬ ಪ್ರಶ್ನೆಗೆ ಗೊಂದಲಗೊಂಡು ಕಣ್ಣು ಕಣ್ಣು ಬಿಡುತ್ತ ಕೂರುವ ಮಗಳನ್ನು ಕಂಡು, ಅಪ್ಪ ತಾನೇ ಅವಳಿಗಾಗಿ ಆರ್ಡರ್ ಮಾಡುತ್ತಿದ್ದರು! ಮೊದಲು ಬಾಸುಂದಿ, ನಂತರ ಐಸ್ ಕ್ರೀಮ್! ತಬ್ಬಿಬ್ಬಾದರೂ ನೀರಜಾಳ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ!

ನೀರಜಾ ಕೈಹಿಡಿದ ಗಂಡನೂ ಅವಳಂತೆಯೇ ಸಾಪಾಟ್ ರಾಮಾ ಆಗಿದ್ದರಿಂದ ಜೀವನವು ರುಚಿಯಾಗಿಯೇ ಸಾಗುತ್ತಿತ್ತು!

ನೀರಜಾಳ ಇಂತಹ ರಸಿಕತನದಿಂದ ಕೆಲವೊಮ್ಮೆ ಎಡವಟ್ಟುಗಳಾದದ್ದೂ ಉಂಟು. ಒಮ್ಮೆ ಎಂದೂ ಅನುಭವಿಸಿರದ ತಾಳಲಾರದ ಹಲ್ಲಿನ ಬಾಧೆಯಿಂದ ಸುಸ್ತಾಗಿಹೋಗಿದ್ದಳು ನೀರಜಾ. ದಂತ ವೈದ್ಯರ ಬಳಿ ಹೋಗಲೇ ಬೇಕಾದ ಪರಿಸ್ಥಿತಿ ಏರ್ಪಟ್ಟಿತ್ತು.



ಹಗಲಲ್ಲೇ ಕಣ್ಣು ಕುಕ್ಕುವಂತಹ ಬೆಳಕುಗಳು, ಗಾಜಿನ ಗೋಡೆಗಳು ಮತ್ತು ಎಲ್ಲ ಆಧುನಿಕ ಸೌಲಭ್ಯಗಳಿಂದ ಕೂಡಿದ ಐಷಾರಾಮಿ ಕ್ಲಿನಿಕ್ ಆಗಿತ್ತು ಅದು. ಅವಳನ್ನು ಕೂರಿಸಲಾಗಿದ್ದ ಒರಗು ಕುರ್ಚಿಯ ಸಮೀಪ ಒಂದು ಸೋಡಾ ಫೌಂಟನ್! ಕಾಮನಬಿಲ್ಲಿನ

ಬಣ್ಣಗಳನ್ನು ಪಸರಿಸುತ್ತಿದ್ದ ಮಿಣುಕು ಗುಳ್ಳೆಗಳೊಂದಿಗೆ ಕೆಳಗಿದ್ದ ಲೋಟಕ್ಕೆ ಜಲಪಾತದಂತೆ ಸುರಿಯುತ್ತಿತ್ತು ಕೊಕೊಕೋಲಾದಂತಹ ಪಾನೀಯ!

'ಪರವಾಗಿಲ್ವೆ! ಪೇಷಂಟ್ಸ್‌ಗೂ ವೆಲ್ಕಮ್ ಡ್ರಿಂಕ್ ಕೊಡ್ತಾರಲ್ಲಾ!' ಎಂದುಕೊಂಡ ನೀರಜಾ ಆಸೆ ಕಣ್ಣುಗಳಿಂದ ಪಾನೀಯ ತುಂಬಿದ ಲೋಟವನ್ನೇ ನೋಡುತ್ತಿದ್ದಳು . ಯುವಕನಾಗಿದ್ದ ಡಾಕ್ಟರ್ ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದಿದ್ದನೋ ಏನೋ ? ತೋಳುಗಳನ್ನು ಕುಣಿಸಿ, ಪಾನೀಯವನ್ನು ಕುರಿತು ಕೈ ಚಾಚಿ 'ತಗೋಳಿ' ಎಂಬಂತೆ ಸನ್ನೆ ಮಾಡಿದನು. ಅದಕ್ಕಾಗಿಯೇ ಕಾದಿದ್ದವಳಂತೆ ನೀರಜಾ ಆ ಲೋಟವನ್ನು ಕೈಗೆತ್ತಿಕೊಂಡು ಥಟ್ ಎಂದು ಒಂದು ಗುಟುಕು ಕೂಡಿದೇ ಬಿಟ್ಟಳು! 'ಮ್ಯಾಮ್ ! ಕುಡೀಬೇಡಿ! ಅದು ಆಂಟಿಸೆಪ್ಟಿಕ್ ಔಷಧಿ! ಬಾಯಿ ಮುಕ್ಕಳಿಸಕ್ಕೆ!' ಎಂದು ಯುವ ಡಾಕ್ಟರ್ ಹೌಹಾರಿದ! ಅವಳು ಪೆಚ್ಚಾಗಿ ಕ್ಷಣಮಾತ್ರ ಪೇಚಾಡಿಬಿಟ್ಟಳು!

ಈ ವಿಷಯವನ್ನು ಅವಳು ಮನೆಯಲ್ಲಿ ಹೇಳಿದಾಗ ಎಲ್ಲರಿಗೂ ನಕ್ಕು ನಕ್ಕು ಹೊಟ್ಟೆ ನೋವೇ ಶುರುವಾಗಿತ್ತು! ಹೀಗೆ ರುಚಿಯಾದ ಊಟ, ರುಚಿಯಾದ ಅನುಭವಗಳೊಂದಿಗೆ ಜೀವನ ಖುಷಿಯಿಂದಲೇ ಸಾಗುತ್ತಿತ್ತು, ಆ ಘಟನೆ ಸಂಭವಿಸುವವರೆಗೆ!

ನೀರಜಾಳ ಅಣ್ಣನಿಗೆ ಮದುವೆ ಸಂಬಂಧಗಳು ಬರುತ್ತಿದ್ದ ಸಮಯವದು. ಜಾತಕ ಕೂಡಿ ಬಂದಿದ್ದ ಒಂದು ಹೆಣ್ಣನ್ನು ನೋಡಲು ಇಡೀ ಕುಟುಂಬವೇ ಹೊರಟಿತ್ತು. ಮನೆಯ ಮಗಳೆಂಬ ಕರಣ ಅಪ್ಪ ಅವಳನ್ನೂ ಜೊತೆಗೆ ಕರೆದುಕೊಂಡಿದ್ದರು .

ಸಂಜೆ ಐದು ಗಂಟೆಯ ಹೊತ್ತಿಗೆ ಹೂವು, ಹಣ್ಣು, ರವಿಕೆ ಕಣದೊಂದಿಗೆ ತಾಂಬೂಲದ ತಟ್ಟೆ ಹೊತ್ತು ನೀರಜಾ, ಅಪ್ಪ, ಅಮ್ಮ ಮತ್ತು ಅಣ್ಣ ಹೆಣ್ಣಿನ ಮನೆ ತಲುಪಿದರು. ಒಳಗೆ ಪ್ರವೇಶಿಸುತ್ತಿದ್ದ ಹಾಗೆಯೇ ತಿಂಡಿಯ ಘಮ ಮೂಗು ಸೆಳೆಯಿತು. ನೀರಜಾಳ ಹೊಟ್ಟೆ ಚುರುಗುಟ್ಟಿ ನಾಲಿಗೆಯಲ್ಲಿ ನೀರೂರ ತೊಡಗಿತು.

ಹುಡುಗಿಯ ತಂದೆ ತಾಯಿಯರು ಎಲ್ಲರಿಗೂ ಆಸನಗಳನ್ನು ತೋರಿ ಕುಶಲ ವಿಚಾರಿಸಿದರು. ಎರಡು ಕಡೆಯವರೂ ಅದೂ ಇದೂ ಮಾತಲ್ಲಿ ತೊಡಗಿದ್ದರು. ಅಣ್ಣ ಹೆಣ್ಣನ್ನು ಕಾಣುವ ಕಾತರದಲ್ಲಿ ಕಣ್ಣುಗಳನ್ನು ಅಲ್ಲಿ ಇಲ್ಲಿ ಹೊರಳಿಸುತ್ತಾ ಕುಳಿತಿದ್ದ. ನೀರಜಾಳಿಗೋ ಯಾವಾಗ ತಿಂಡಿ ಸಪ್ಲೈ ಆಗುವುದೋ ಎಂಬ ಆತಂಕ!

ಕೊನೆಗೂ ಹೆಣ್ಣು ಮತ್ತು ಅವಳ ತಾಯಿ ತಿಂಡಿಗಳ ತಟ್ಟೆ ಹಿಡಿದು ಬಂದರು . ಯಾರು ಹೆಣ್ಣನ್ನು ನೋಡಿದರೋ ಏನೋ! ನೀರಜಾಳ ಕಣ್ಣುಗಳು ಮಾತ್ರ ತಿಂಡಿಯ ತಟ್ಟೆಯ ಮೇಲೆ ನೆಲೆಸಿದ್ದವು. ಕೇಸರಿ ಬಾತ್, ಖಾರಾ ಬಾತ್, ಗೋಡಂಬಿ ಪಕೋಡ! ಯಾರಿಗೂ ಕಾಯದೆ ನೀರಜಾ ತಟ್ಟೆ ಖಾಲಿ ಮಾಡ ತೊಡಗಿದಳು!

ಮಾತು ಕಥೆ ಮುಗಿದು ಅಪ್ಪ ಹೊರಡೋಣ ಎಂದಾಗ ನೀರಜಾ ಕಾಫಿಯನ್ನು ಗುಟುಕರಿಸುತ್ತಿದ್ದಳು. ಲೋಟವನ್ನು ಮೇಜಿನಮೇಲಿಟ್ಟು "ತಿಂಡಿ ತುಂಬಾ ಚೆನ್ನಾಗಿತ್ತು ಮಾಮಿ! ಥ್ಯಾಂಕ್ ಯು!" ಎನ್ನುತ್ತಾ ಹೊರಟಳು .



ಮನೆಗೆ ಹಿಂದಿರುಗುತ್ತಿದ್ದಾಗ "ತಿಂಡಿ ತುಂಬಾ ಚೆನ್ನಾಗಿತ್ತು ಅಲ್ವಾ ಅಪ್ಪಾ?" ಎಂದು ತೃಪ್ತಿಯಿಂದ ನಗುತ್ತ ನುಡಿದ ನೀರಜಾ ಆಗಷ್ಟೇ ಅಪ್ಪನ ಧುಮುಗುಡುತ್ತಿದ್ದ ಮುಖವನ್ನು ನೋಡಿದಳು .

"ಯಾಕಪ್ಪಾ ಚೆನ್ನಾಗಿರ್ಲಿಲ್ವೆ ? ದ್ರಾಕ್ಷಿ, ಗೋಡಂಬಿ ಎಲ್ಲ ಧಾರಾಳವಾಗಿ ಹಾಕಿದ್ರಲ್ಲಾ

.... "

"ತಿಂಡಿ ತಿಂಡಿ ! ನಿನಗೆ ಯಾವಾಗ್ಲೂ ಅದರದ್ದೇ ಅಲ್ವೇ ಯೋಚನೆ !"

ಅವಳು ಮಾತು ಮುಗಿಸುವುದರೊಳಗೆ ಅಪ್ಪ ಗಟ್ಟಿಯಾಗಿ ಗಡುಸಾಗಿ ಚೀರಿದಾಗ ಅವಳಿಗೆ ಬಹಳವೇ ಗಾಬರಿಯಾಯಿತು .

"ಅವರು ಕಳಿಸಿದ್ದ ಹುಡುಗಿ ಫೋಟೋಗೂ, ಈಗ ಅವಳು ಇರೋದಕ್ಕೂ ಸಂಬಂಧಾಸಂಬಂಧವೇ ಇಲ್ಲ! ಹಳೆ ಫೋಟೊ ಕಳಿಸಿ ನಮ್ಮ ಟೈಮ್ ಹಾಳು ಮಾಡಿದ್ದಾರೆ! ಪಾಪ! ನಮ್ ಶಾಮೂಗೆ ಅಂತಾ ಹುಡುಗೀನ ತಂದ್ಕೊಳ್ಳೋದೇ? ತಕ್ಷಣ ಹೊರಡೋಣ ಅಂದ್ರೆ ನೀನು ಪಟ್ಟಾಗಿ ಕೂತು ತಿನ್ತಾನೇ ಇರೋದೇ? ಅವರಿಗೆ ಸುಳ್ಳು ಭರವಸೆ ಕೊಟ್ಟಹಾಗೆ ಆಗಲ್ವೆ?" ಎಂದು ಅಪ್ಪ ರೇಗಾಡಿದರು .

"ಅಯ್ಯೋ ! ಹುಡುಗಿ ಇಷ್ಟ ಆಗ್ಲಿಲ್ವಾ ? ಹೇಳಿದ್ರೆ ನಾನು ಆಗ್ಲೇ ಹೊರಡ್ತಿದ್ದೆ!" ನೀರಜಾಳಿಗೆ ಗಂಟಲು ಉಬ್ಬಿ ಬಂದಿತು. ಅಪ್ಪ ಇಷ್ಟು ಕೋಪದಿಂದ ತನ್ನೊಂದಿಗೆ ಯಾವಾಗಲೂ ಮಾತನಾಡಿರಲಿಲ್ಲ.

"ನಾನು ತಿಂಡೀನ ಮುಟ್ಟಲೇ ಇಲ್ಲ! ನಿನ್ನ ಅಮ್ಮನ್ಗೂ ಅಣ್ಣನ್ಗೂ ಅದು ಅರ್ಥ ಆಯ್ತು! ನೀನು ಯಾರನ್ನೂ ಗಮನಿಸದೆ ಚಪ್ಪರಿಸ್ಕೊಂಡು ತಿನ್ನೋದ್ರಲ್ಲೇ ಮಗ್ನಳಾಗಿದ್ರೆ ಇತರರ ಸೂಚನೆ ಅರ್ಥ ಮಾಡ್ಕೊಳ್ಳೋದಾದ್ರೂ ಹೇಗೆ?" ಎಂದು ಅಪ್ಪ ಗರ್ಜಿಸಿದರು.

ಅಪ್ಪನಿಗೆ ಸಂಬಂಧ ಕೂಡಿ ಬರಲಿಲ್ಲವೆಂಬ ಹತಾಶೆಯೋ, ಮೋಸ ಹೋದೆವೆಂಬ ಕೋಪವೋ, ಇಲ್ಲ ಅಷ್ಟು ದೂರ ಹೋಗಿ ಬಂದ ಸುಸ್ತೋ? ಎಂದೂ ಮುದ್ದು ಮಗಳನ್ನು ದನಿಯೆತ್ತಿ ಮಾತನಾಡಿಸಿರದ ಅಪ್ಪ ಅಂದು ರುದ್ರಾವತಾರ ತಾಳಿಬಿಟ್ಟಿದ್ದರು.

ನೀರಜಾಳ ಮನದಲ್ಲಿ ಅಪ್ಪನ ಕೋಪದ ಮಾತುಗಳು ಅಳಿಸಲಾರದ ಗಾಯವಾಗಿ ಉಳಿದುಬಿಟ್ಟವು. ಆ ಘಟನೆಯ ನಂತರ ನೀರಜಾಳಿಗೆ ಎಲ್ಲಿ ಏನು ತಿಂದರೂ ಅಪ್ಪನ ಧುಮುಗುಡುವ ಮೊಗವೆ ನೆನಪಿಗೆ ಬರುತ್ತಿತ್ತು. ಅಮ್ಮ ಚಿಕ್ಕಂದಿನಲ್ಲಿ ಹೇಳುತ್ತಿದ್ದ ಹಾಗೆ ಹೊಟ್ಟೆಬಾಕಳಂತೆ ಆಡದೆ, ನಾಲಿಗೆ ಎಳೆದು ಹಿಡಿದು, ಮರ್ಯಾದೆಯಿಂದ ವರ್ತಿಸಲು ಪ್ರಯತ್ನಿಸಿದಳು!

ಕಾಲ ಉರುಳಿ ನೀರಜಾಳ ಮಕ್ಕಳು ಸಹ ಮದುವೆ ವಯಸ್ಸನ್ನು ತಲುಪಿದರು. ಹಿರಿಯ ಮಗ ರೋಹನ್ ತನ್ನ ಜೊತೆಯಲ್ಲಿ ಓದಿದ ನಿಮ್ಮಿಯನ್ನು ಮದುವೆಯಾಗಲು ನಿರ್ಧರಿಸಿದ್ದ. ಕಾಲ ಎಷ್ಟೇ ಬದಲಾಗಿದ್ದರೂ ಬೀಗರ ಉಪಚಾರ ಎಂಬ ಸಂಪ್ರದಾಯ ಮಾತ್ರ ಯಾವ ಬದಲಾವಣೆಯೂ ಇಲ್ಲದೆ ಹಾಗೆಯೇ ಮುಂದುವರೆಯುತ್ತಿದೆಯಲ್ಲ? ಹೆಣ್ಣು ನೋಡುವ ಶಾಸ್ತ್ರವಂತೂ ಬೇಡವಾಗಿತ್ತು . ಆದರೆ ಹುಡುಗ ಹುಡುಗಿಯರ ಮನೆಯವರ ಪರಸ್ಪರ ಭೇಟಿಗೆಂದು ನಿಮ್ಮಿಯ ಮನೆಯವರು ಎಲ್ಲರನ್ನೂ ಆಹ್ವಾನಿಸಿ ಹೈ ಟೀಗೆ ಏರ್ಪಾಟು ಮಾಡಿದ್ದರು !

ಮಾತುಕತೆಗಳ ನಡುವೆ ಮೇಜಿನ ಕಡೆ ಕಣ್ಣು ಹಾಯಿಸಿದ ನೀರಜಾ ಬೆಕ್ಕಸ ಬೆರಗಾದಳು! ತರಹೆವಾರಿಯ ತಿಂಡಿ ತಿನಸಿಗಳು ಮೇಜಿನ ಮೇಲೆ ಅಲಂಕಾರವಾಗಿ ಜೋಡಿಸಲ್ಪಟ್ಟಿದ್ದವು . ತಂಪು ಪಾನೀಯಗಳೂ ಕುರುಕಲು ತಿಂಡಿಗಳೂ ಯಥೇಚ್ಛವಾಗಿ ಸರಬರಾಜಾಗುತ್ತಿದ್ದವು . ನೋಡ ನೋಡುತ್ತಿದ್ದಹಾಗೆಯೇ ಎಂದಿನಂತೆ ನೀರಜಾಳ ನಾಲಿಗೆಯಲ್ಲಿ ನೀರೂರತೊಡಗಿತು .



'ನೀನು ಯಾರನ್ನೂ ಗಮನಿಸದೆ ಚಪ್ಪರಿಸ್ಕೊಂಡು ತಿನ್ನೋದ್ರಲ್ಲೇ ಮಗ್ನಳಾಗಿದ್ರೆ ಇತರರ ಸೂಚನೆ ಅರ್ಥ ಮಾಡ್ಕೊಳ್ಳೋದಾದ್ರೂ ಹೇಗೆ?'

ಸ್ವರ್ಗಲೋಕದಿಂದ ಅಪ್ಪನ ಗರ್ಜನೆ ಕೇಳಿಸಿದಂತೆ ಅನ್ನಿಸಿ ಬೆಚ್ಚಿಬಿದ್ದಳು ನೀರಜಾ. ತಿಂಡಿಗಳ ಮೇಲೆ ನೆಟ್ಟಿದ್ದ ತನ್ನ ಕಣ್ಣುಗಳನ್ನು ಕೀಳಲಾರದೆ ಕಿತ್ತು ಬೇರೆಡೆ ದೃಷ್ಟಿ ಹರಿಸಿದಳು.

"ನೀವು ಏನೂ ತಗೊಳ್ಳೇ ಇಲ್ವಲ್ಲ! ಇದು ನಮ್ಮಕಡೆಯವರು ಮಾಡೋ ಸ್ವೀಟ್ – ಬೆಳಗಾವಿ ಕುಂದಾ ಅಂತ! ಸಂಕೋಚಪಟ್ಕೊಳ್ದೆ ತಿಂದು ನೋಡಿ!" ಎನ್ನುತ್ತಾ ತಟ್ಟೆ ತುಂಬ ಘಮಘಮಿಸುತ್ತಿದ್ದ ಸಿಹಿ ತಿಂಡಿಯನ್ನು ನೀರಜಾಳಿಗೆ ನೀಡಿ ಉಪಚರಿಸಿದಳು ನಿಮ್ಮಿಯ ತಾಯಿ .

ಎಲ್ಲಿಗೆ ಹೋದರೂ ಯಾರು ಏನು ಕೊಟ್ಟರೂ ನಾಲಿಗೆಯಲ್ಲಿ ನೀರೂರುತ್ತಿದ್ದರೂ ನೀರಜಾಳ ಬಾಯಲ್ಲಿ ಬರುವ "ನೋ ಥ್ಯಾಂಕ್ ಯು" ಎಂಬ ಮಂತ್ರವನ್ನೇ ಈಗಲೂ ಅವಳ ಬಾಯಿ ಉಚ್ಚರಿಸಿತು !

ಹೇಗೂ ಮನೆಗೆ ಹೊರಡುವಾಗ ಬೀಗರು ಸಿಹಿ ತಿಂಡಿಯ ಪಾರ್ಸಲ್ಲನ್ನು ತನ್ನ ಕೈಗಿತ್ತೇ ಕಳುಹಿಸುವರು ಎಂಬುದನ್ನು ಅವಳು ಊಹಿಸಲಾರಳೇನು?

■

---

ಒಬ್ಬ ರೋಗಿ ಡಾಕ್ಟರ ಹತ್ತಿರ ಹೋಗಿ " ನನಗೆ ಕನಸಿನಲ್ಲಿ ದೊಡ್ಡ ಕರಡಿಗಳು ಬಂದು ಕಾಟ ಕೊಡುತ್ತವೆ. ಏನಾದರೂ ಮಾಡಿ ಡಾಕ್ಟರೇ " ಅಂತ ಗೋಗರೆದ. ಡಾಕ್ಟರು, " ಮನೋ ವೈದ್ಯರನ್ನ ನೋಡಿದ್ದೀರಾ?" ಅಂತ ಕೇಳಿದ್ದಕ್ಕೆ, ಆತ, " ಇಲ್ಲಾ ಡಾಕ್ಟ್ರೇ, ಬರೀ ಕರಡಿ ಮಾತ್ರಾ ನೋಡಿರೋದು" ಅಂದನಂತೆ.

***

"ಎಲ್ಲರೂ ದ್ವೇಷಿಸೋ ನೇಷನ್ ಯಾವುದು? "

"ಎಕ್ಸಾಮಿನೇಷನ್!"

***

"ಬೆಳ್ಳುಳ್ಳಿ ತಿಂದರೆ ಕ್ಯಾನ್ಸರ್ ಬರುವುದಿಲ್ಲವಂತೆ." ಕ್ಯಾನ್ಸರ್ ಒಂದೇ ಏಕೆ, ಯಾರೂ ಹತ್ತಿರ ಸುಳಿಯುಲ್ಲ ಎಂದು ನಮ್ಮ ನಾಣಿಯ ಅಂಬೋಣ.



# ಕಾಲಕ್ಕೆ ತಕ್ಕ ಹಾಗೆ!...

***ವಾಣಿ ಸುರೇಶ್**

ಎಂಭತ್ತರ ದಶಕದ ಸಂಕ್ರಾಂತಿ ಮುಗಿದು ಆಗಷ್ಟೇ ಕೆಲವು ದಿನಗಳಾಗಿದ್ದವು. ಅವತ್ತು, ಅಪರೂಪಕ್ಕೆ ಒಂದು ನಾಲ್ಕುದಿನದ ಮಟ್ಟಿಗೆ ತವರಿಗೆ ಹೋಗಿದ್ದ ನಾನು, ಸೊನೆ ಅವರೇಕಾಳು ರೊಟ್ಟೀನ, ಹುಣಸೇರಸದ ನೆಲ್ಲೀಕಾಯಿ ಉಪ್ಪಿನಕಾಯಿ–ಗಟ್ಟಿ ತುಪ್ಪ ನೆಂಚಿಕೊಂಡು ತಿಂದು ಮುಗಿಸಿ, ಒಂದ್ಲೋಟ ಬಿಸಿ ಕಾಫಿ ಹಿಡ್ಕೊಂಡು ತುಳಸೀ ಕಟ್ಟೆ ಹತ್ತಿರ ಬೆಳಗಿನ ಎಳೆ ಬಿಸಿಲು ಕಾಯಿಸುವ ರಾಜಕಾರ್ಯದಲ್ಲಿ ತೊಡಗಿದ್ದ ಶುಭಘಳಿಗೆ. ಹೀಗೆ ಒಂದು ತರದ ಫುಡ್ ಕೋಮಾದ ದಿವಿನಾದ ರಾಜಯೋಗದ ಮಜಾ ಅನುಭವಿಸಬೇಕಾದರೆ ಅಮ್ಮನ ಮನೆಯೇ ಪ್ರಶಸ್ತವಾದ ಸ್ಥಳ ಅಲ್ವೇ?

ಸ್ವಲ್ಪ ಹೊತ್ತಾದ ಮೇಲೆ ಅಡಿಗೆ ಮುಗಿಸಿ, ನಮ್ಮಮ್ಮ ಒಂದು ತಟ್ಟೆಯಲ್ಲಿ ಎರಡು ವಾಟಿ ಇಟ್ಕೊಂಡು ಒಂದರಲ್ಲಿ ಎಳ್ಳು–ಸಕ್ಕರೆ ಅಚ್ಚು, ಇನ್ನೊಂದರಲ್ಲಿ ಹದವಾಗಿ ಉಪ್ಪು–ಖಾರ–ಇಂಗು–ಕರಿಬೇವು ಹಾಕಿದ್ದ ಕರಿದ ಹಿದಕವರೇಕಾಳು, ಜೊತೆಗೆ ಇನ್ನೂ ಒಂದು ಸಣ್ಣ ಲೋಟ ಬಿಸ್ಬಿಸಿ ಕಾಫಿ ತಂದು ಮುಂದೆ ಹಿಡಿದರು. ನಿಂದೇನು ಹೊಟ್ಟೇನೋ ಪೊಟ್ಟಣಾನೋ – ಅಂತೀರೇನೋ. ಆದರೆ ತವರುಮನೇಲಿ ಅಮ್ಮ ರುಚಿರುಚಿಯಾಗಿ ಏನನ್ನಾದ್ರೂ ಕೊಟ್ಟಾಗ ಬಾಯಿಗೆ ಹಾಕ್ಕೊಳ್ಳದೇ ಸುಮ್ಮನಿರಕ್ಕಾಗತ್ಯೇ. ಅಷ್ಟಕ್ಕೂ ಅದು ಆಗಿನ್ನೂ ಈ ಕ್ಯಾಲೋರಿ ಕೌಂಟಿಂಗು, ಕೀಟೊ ಡಯಟ್ಟು, ಇಂಟರ್ಮಿಟೆಂಟ್ ಫಾಸ್ಟಿಂಗುಗಳ ಪಿಡುಗು ಹಬ್ಬಿರದ ದಿನಗಳು ಬೇರೆ. "ಅಯ್ಯೋ ಮೈ ಬರ್ತಿದೆ, ಇನ್ಮೇಲೆ ಡಯೆಟ್ಟು ಮಾಡ್ಬೇಕು" ಅಂತ ನಾವೇನಾದ್ರೂ ಯಾರಾದ್ರೂ ದೊಡ್ಡೋರೆದುರು ಹೇಳಿದರೆ ಸಾಕು. ಅವರು – "ಅಯ್ಯೋ ಸಾಕ್ ಸುಮ್ನಿರು, ಅಂಥಾ ಮೈ ಬಂದಿರೋದು ಅಷ್ಟರಲ್ಲೇ ಇದೆ. ಅಷ್ಟಕ್ಕೂ ನಿನ್ನ ಮೈಯ್ಯಿ ನೀನ್ತಾನೇ ಹೊತ್ತುಕೊಂಡು ತಿರುಗ್ತೀಯೇ ಹೊರತು ಹಾಗಂತ ನಿನ್ನನ್ನ ಆಡಿಕೊಳ್ಳೋರಲ್ಲವಲ್ಲ. ಇಷ್ಟಕ್ಕೆಲ್ಲಾ ಯಾರಾದ್ರೂ ಡಯೆಟಿಂಗ್ ಮಾಡ್ತಾರೇನೇ ಹುಚ್ಚಿ? ಕೆಲಸದೋಳನ್ನ ಬಿಡಿಸು ತಾನೇ ತಾನಾಗಿ ಸರಿ ಹೋಗತ್ತೆ. ಇಲ್ಲ ಅವಳಿಗೆ ಶನಿವಾರ ಭಾನುವಾರ ರಜ ಕೊಟ್ಟರೂ ಬೇಕಾದಷ್ಟಾಯ್ತಪ್ಪಾ" – ಅಂತನ್ನೋರು.

"ನಿನ್ನ ಮಗ ಈಗ್ತಾನೇ ನಂಗೇನು ಹೇಳಿದ ಗೊತ್ತೇನೇ? ನೀನೇ ತಲೆಹರಟೆ ಆಗಿದ್ದೆ ಅಂದ್ರೆ, ನಿನ್ನ ಮಗ ನಿನ್ನನ್ನ ಮೀರಿಸಿಬಿಟ್ಟಿದಾನೆ. ನೀನೇನೇ ಅನ್ನು, ಈಗಿನ ಕಾಲದ ಮಕ್ಕಳಿಗೆ ತೀರಾ ಏನೇನೂ ಭಯವೇ ಇಲ್ಲಪ್ಪ. ಹಾಗೆ ನೋಡಿದ್ರೆ ನಮ್ಮಮ್ಮೂ ನನ್ನ ಬಗ್ಗೆ ಹೀಗೇ ಏನೋ ಹೇಳೋಳು. ಅದೂ ಜ್ಞಾಪಕಕ್ಕೆ ಬರುತ್ತೆ, ಗೊತ್ತಾ?" – ಅಂದ್ರು ನಮ್ಮ ತಾಯಿ. ಶುದ್ಧವಾದ ಹಳೇಮೈಸೂರು ಕನ್ನಡದಲ್ಲಿ ಚಕ್ಕಾ–ಚೌಕನಾಗಿ ಮಾತಾಡ್ತಿದ್ದ ನಮ್ಮಮ್ಮನ ಜೊತೆ, ಹಳೆಕಾಲದ ಮಾತು ಕೇಳೋದು ಯಾವತ್ತೂ ಚೆನ್ನ. ಹಾಗಾಗಿ ನನ್ನ ಕಿವಿ ಚುರುಕಾಯ್ತು.

"ಹೂಂ, ಗೊತ್ತು! ನಿಮ್ಮದು ಮಹಾ ಸೌಮ್ಯ ಸ್ವಭಾವ ಅಂತಲ್ಲ! ನಾವು ಮಕ್ಕಳಾದಾಗಂತೂ ಎಲ್ರೂ ಅದೇ ಪಿಕ್ಚರ್ ಕೊಡೋರಪ್ಪಾ. ಅಜ್ಜಿ ಅಂತೂ ಹಿರಣ್ಣಿ, ರಾಮಣ್ಣಿ, ಕಂಠಿ, ನೀವು, ಎಲ್ಲಾ ಅತೀ ಸಾಧುಪ್ರಾಣಿಗಳಾಗಿದ್ರಂತೆ ಅಂತೇನೋ ಹೇಳಿದ್ದೇ ಹೇಳೋರು. ಇನ್ನು ಇವನ ಮಾತು ಬಿಟ್ಹಾಕಿ, ಶುದ್ಧ ತಲೆಪ್ರತಿಷ್ಠೆ ಅದು" – ಅಂದೆ. ನಿಜವಾಗಲೂ ಆಗೆಲ್ಲಾ ನಮ್ಮ ಚಿಕ್ಕಜ್ಜಿ, ದೊಡ್ಡಜ್ಜಿಯರೆಲ್ಲರೂ ನಮ್ಮಗಳನ್ನ ಕೂರಿಸ್ಕೊಂಡು



ಕೈ ತುತ್ತು ಹಾಕುವಾಗ ಹೇಳ್ತಿದ್ದದ್ದು ಅಂಥಾ ಕಥೆಗಳೇ. (ಅಂದಹಾಗೆ ನಮ್ಮನೇಲಿ ಬಹುವಚನದಲ್ಲೇ ನಮ್ಮಮ್ಮನ್ನ ಕರೀತಿದ್ದಿದ್ದು).

"ಹೌದು, ಅದೇನೋ ನಿಜ ಕಣೇ. ನಾವೇನೂ ಅಂಥಾ ದುಷ್ಟರೇನ್ ಆಗಿರ್ಲಿಲ್ಲ ಬಿಡು. ಆದರೆ ನನ್ನ ಧೈರ್ಯದ ಮಾತು ಬಂದಾಗ ಮಾತ್ರ ಅಮ್ಮ ಈ ವಿಷಯ ಹೇಳೇ ಹೇಳೋಳು" ಅಂದರು ನಮ್ಮ ತಾಯಿ.

ಏನು! ನಮ್ಮಮ್ಮ ಅಂದ್ರೇನು? ಧೈರ್ಯ ಅಂದ್ರೇನು? ಎಲ್ಲಾದ್ರೂ ಉಂಟೆ? ನನ್ನ ಕಿವಿ ಇನ್ನಷ್ಟು ನಿಮಿರಿತು. ಹೇಳಕ್ಕೆ ಹೊರಟಿದ್ದ ಅವರ ಪೌರುಷದ ಹೊಸ ಕಥೆಯ ಮೇಲೇ ಹೆಚ್ಚು ಗಮನ ನನಗೆ. ಹೇಗಿದ್ರೂ ದಿನ ಬೆಳಗಾದರೆ ನನ್ನ ಮಗನ ಪ್ರತಿಷ್ಠೆ ಉತ್ತರಗಳ ಬಗ್ಗೆ ಅನುಭವ ಇತ್ತಲ್ಲ. ಸರಿ, ಈ ತಲೆಹರಟೆ ವಿಷಯ ಬಿಡಿ, "ಅಜ್ಜಿ ಏನು ಹೇಳೋರು ಅಂತ ನೀವನ್ನೋದು ಹಾಗಾದ್ರೆ?" – ಇನ್ನೊಂದಿಷ್ಟು ಹಿದಕವರೇಕಾಳು ಬಾಯಿಗೆಸ್ಕೊಂಡು, ಒಂದ್ ಗುಟುಕು ಕಾಫಿ ಹೀರಿ, ಕೇಳಿದೆ. ಪುಷ್ಯ ಮಾಸದ ಚುಮು ಚುಮು ಛಳಿ, ರುಚಿಯಾದ ಹಿದಕವರೇಕಾಳಿನ ಖಾರ, ಬಿಸಿ ಕಾಫಿ, ಎಳೆ ಬಿಸಿಲು, ಯಾವುದೋ ತಾತನ ಕಾಲದ ಕಥೆ – ಆಹಾ ಎಂಥಾ ಅದ್ಭುತ ಕಾಂಬಿನೇಷನ್ನು ಅಂತೀರಾ ಬೇರೆ ಕೆಲಸ ಇಲ್ಲದೇ ಕೂತಿರೋರಿಗೆ!

ನಮ್ಮಮ್ಮ ಎದ್ದು – "ಇರು, ಬಂದೆ. ಹಾಳಾದ್ ಕಳ್ಳಬೆಕ್ಕು ನುಗ್ಗಿ ದಾಂಧಲೆ ಮಾಡೀತು" ಅಂತಂದೋರು, ಹೋಗಿ ಅಡಿಗೆ ಮನೆ ಬಾಗಿಲಿನ ಚಿಲಕಕ್ಕೆ ತುದಿ ಮುರಿದು ಮುಕ್ಕಾಗಿದ್ದ ವೀಣೆಬಿರಟೆ ಸಿಕ್ಕಿಸಿ ಬಂದರು. "So, ಅಜ್ಜಿ ಏನಂದ್ರೂ ಅಂತ ಈಗಾದ್ರೂ ಹೇಳಿ ಅಮ್ಮ ಮತ್ತೆ" – ಅಂದೆ. "ಅಯ್ಯೋ ಸ್ವಾಮಿ ದೇವಾ, ಅಂಥಾ ದೊಡ್ಡ ವಿಷಯ ಏನಿಲ್ಲ ಕಣ್ ಬಿಡೇ" – ಅಂತ ನಿರುತ್ಸಾಹವೇ ಮೂರ್ತಿವೆತ್ತ ಹಾಗೆ ತಣ್ಣೀರೆರಚಿ ಸುಮ್ಮನಾದ್ರು. ಮೊಮ್ಮಕ್ಕಳ ಸ್ಮಾರ್ಟ್ನೆಸ್ ಬಗ್ಗೆ ಜಂಭ ಕೊಚ್ಚಿಕೊಳ್ಳೋ ಅಜ್ಜೀರನ್ನ ತಡೆಯಕ್ಕುಂಟೇ? ತಡವಾಗಿ ನನ್ನ ತಪ್ಪಿನ ಅರಿವಾಯ್ತು ನಂಗೆ, ಸರಿ ಇನ್ನೊಂದಿಷ್ಟು ಮಾತಾಡಿ ತೇಪೆ ತಿದ್ದಿದ್ದಾಯ್ತು ಅನ್ನಿ. ಆಮೇಲೆ ಅಮ್ಮ ನಿಧಾನವಾಗಿ ಬಾಯಿಬಿಟ್ಟರು.

ಆ ಕಥೇನ ಈಗ ಸಂಕ್ಷಿಪ್ತವಾಗಿ ಹೇಳಬೇಕೂಂದ್ರೆ..., ನಮ್ಮಜ್ಜಿ ಚೇಷ್ಟೆ ಮಾಡಕ್ಕೆ ಹೋದಾಗ ಅವರ ತಾಯಿ – ಅಂದರೆ ನನ್ನ ಮುತ್ತಜ್ಜಿ, – "ತಡಿ ಶಾಮಣ್ಣನ್ನ ಕರೀತೀನಿ. ಅವನೇ ಬಂದು ನಿನ್ನ ತಲೆಗೆ ಒನಕೆ ಸುತ್ತಿದರೆ ಸರಿ ಹೋಗತ್ತೆ" – ಅಂತ ಬೆದರಿಸೋರಂತೆ. ಒಂದು ಕಣ್ಣಲ್ಲಿ ಹೂವೊ ಏನೋ ಬಂದಿದ್ದ ಆರಡಿ ಎತ್ತರದ ಶಾಮಣ್ಣನ್ನ ಕಂಡರೆ ಮಕ್ಕಳೆಲ್ಲಾ ಯಾಕೋ ಹೆದರೋರಂತೆ. ಕೈಕಾಲು ಕದರುಕಡ್ಡಿಯಾಗಿದ್ರೂ ಗಂಟಲು ಮಾತ್ರಾ ಬಲು ಜೋರಂತೆ ಶಾಮಣ್ಣಂದು. ಆತ ಇವರ ಮನೆ ಬೀದಿ ಮೆಟ್ಟಲು ಹತ್ತುವಾಗಲೇ – "ಎಲ್ಲೀ ಯಾರದು ಊಟ ಮಾಡದೇ ಗದ್ದಲ ಮಾಡ್ತಿರೋದು? ಅಕ್ಕಾ, ಬೇಗ ಹೋಗಿ ಆ ಮೂಲೇಲಿಟ್ಟಿರ್ತೀರಲ್ಲ ಆ ಒನಕೆ ತನ್ನಿ, ಹಾಗೇ ಆ ಮಡೀ ಕೋಲ್ನೂ ತಂದುಬಿಡಿ. ಚೇಷ್ಟೆ ಮಾಡ್ತಿರೋರ ತಲೇಗೆ ಅತ್ಲಾಗಿ ಸುತ್ಬಿಟ್ ಹೋಗ್ತೀನಿ" ಅಂತ ಅವರ ಒಡಒಡಕಲು ಧ್ವನೀಲಿ ಗಟ್ಟಿಯಾಗಿ ಕೂಗಿಕೊಂಡೇ ಒಳಗೆ ಬರೋರಂತೆ. ಅಷ್ಟಕ್ಕೇ ನಮ್ಮಜ್ಜಿ ಮತ್ತು ಅಲ್ಲೀವರೆಗೂ ಗದ್ದಲ ಎಬ್ಬಿಸ್ತಿದ್ದ ಅವರ ವಾರಿಗೆಯ ಚಿಳ್ಳೆ ಪಿಳ್ಳೆಗಳೆಲ್ಲಾ ಹೆದರಿಕೊಂಡು ಗಪ್– ಚುಪ್ಪಾಗಿ ಮೂಲೆ ಸೇರೋರಂತೆ.



ಆದರೆ ಮುಂದೆ ನಮ್ಮಜ್ಜಿ ತಮ್ಮ ಮಗಳಿಗೆ – ಅಂದ್ರೆ ಮೆದುಗಲಿ ಅಂತ ಫೇಮಸ್ ಆಗಿದ್ದ ನಮ್ಮಮ್ಮನಿಗೆ – ಇದೇ ಅಸ್ತ್ರ ಪ್ರಯೋಗಿಸಿ " ಹೇಳಿದ್ ಮಾತು ಕೇಳಲ್ವಾ ನೀನು? ಇರು. ಉಗ್ರಾಣದಿಂದ ಒನಕೆ ತಂದು ತಲೇಗ್ ಸುತ್ತುತ್ತೀನಿ" – ಅಂತ ಬೆದರಿಸಕ್ಕೆ

ಹೋದ್ರೆ ಅಂಥಾ ಹೆಸರುವಾಸಿ ಮೆದುಗಲೀ ಅಮ್ಮನೂ ಆ ಬೆದರಿಕೆಗೆ ಜಗ್ಗದೇ – "ಸ...ರಿ, ಒನಕೇನೇನಾದ್ರು ತಲೇಗ್ ಸುತ್ತುಕ್ಕಾಗುತ್ಯೇ? ಹೋಗಮ್ಮಾ" ಅಂತ ದೊಡ್ಡ ಜೋಕ್ ಕೇಳಿದೋರ ಹಾಗೆ ನಕ್ಕುಬಿಟ್ರಂತೆ.

ಇನ್ನು, ನಾನು ನಮ್ಮಮ್ಮನ್ನ ಧೈರ್ಯದಲ್ಲಿ ಮೀರಿಸಿದ್ದು ಹೇಗೆ ಅಂತೀರೇನೋ? ಇದು ಒಂಟಿಕೊಪ್ಪಲಿನ ಪೊಲೀಸ್ ಸ್ಟೇಷನ್ ಪಕ್ಕದಲ್ಲಿದ್ದ ನಮ್ಮಮ್ಮನ ಕಸಿನ್ ಮನೆಯಲ್ಲಿ ನಡೆದ ಕಥೆಯಂತೆ, ನಂಗೆ ನೆನಪಿಲ್ಲ. ಎಷ್ಟು ಬೇಡಾಂತ ಗದರಿಸಿದರೂ ಕೇಳದೇ ನಾನು, ಅವರ ಮನೆಯ ದೊಡ್ಡ ಗೇಟನ್ನ ಹತ್ತೀ–ಇಳಿದೂ ಮಾಡ್ತಾ ಗೇಟ್ ಮೇಲೆ ಒಂದೇ ಸಮ ಕುಣೀತಿದ್ದೆನಂತೆ. ಇನ್ನಿದು ಬಿದ್ದು ಕೈಯ್ಯೋ ಕಾಲೋ ಗ್ಯಾರಂಟಿ ಮುರ್ಕೊಳ್ಳುತ್ತೆ ಅಂತ ಯೋಚಿಸಿ ಅವರು – "ತಡಿ. ಪೊಲೀಸ್‌ನೋನ್ನ ಕರೀತೀನಿ. ಬಂದು ನಿನ್ನ ಹಿಡ್ಕೊಂಡು ಹೋಗಕ್ಕೆ ಹೇಳ್ತೀನಿ" – ಅಂತ ಸ್ಟೇಷನ್ನಿನ ಹೊರಗೆ ನಿಂತಿದ್ ಪೊಲೀಸ್ನೋನ್ನ ತೋರಿಸಿದರಂತೆ. ಅದಕ್ಕೆ ನಾಲ್ಕು ವರ್ಷದ ನಾನು ಕೇರೇ ಮಾಡದೇ, ಮಣಿಮಣಿಯಾಗಿ – "ಅಯ್ಯೋ ಹೋಗೀ ಅತ್ತೆ. ಬೇಕಾದ್ರೆ ಕರೀರಿ ನಂಗೇನು? ಅವನು ಮಕ್ಕಳನ್ನಲ್ಲ, ಬರೀ ಕಳ್ಳರನ್ನ ಹಿಡ್ಕೊಂಡು ಹೋಗ್ತಾನೆ ಅಷ್ಟೇ" – ಅಂತ ಅಂದ್ಬಿಟ್ಟು ಚೇಷ್ಟೆ ಮುಂದುವರೆಸಿದ್ದೆನಂತೆ. ಆಗಿನ ಕಾಲಕ್ಕೆ ಅದೇ ಜೋರು! ಅದ್ರಲ್ಲೂ ಸೌಮ್ಯತೆಗೆ ಹೆಸರಾಗಿದ್ದೋಳ ಮಗು ಹಾಗನ್ನೋದೂ ಅಂದ್ರೇನು! ಶ್ರೀರಾಮರಕ್ಷೆ! "ನಿನ್ ಮಗಳು, ನಿನ್ನ ಹಾಗಲ್ಲ. ಗಂಡನ್ನ ಬುಟ್ಟೀಲಿಟ್ಟು ಮಾರಿಬಿಡ್ತಾಳೆ ಕಣೆ" ಅಂತ ನಮ್ಮಮ್ಮನ್ನ ಆಮೇಲೆಲ್ಲರೂ ರೇಗಿಸ್ತಿದ್ರಂತೆ. "ನನ್ನ ಮಾನ ತೆಗೆದ್ಬಿಟ್ಟೆ ಅವತ್ತು" ಅಂತ ಅಮ್ಮ ಇದನ್ನ ಎಷ್ಟ್ ಸಲ ಹೇಳೋರು ಅಂತ!

ಇನ್ನೊಂದು ವಿಷಯ. ನಮ್ಮ ಮನೆಯಲ್ಲಿ ನಾವು ಚಿಕ್ಕೋರಾಗಿದ್ದಾಗ ತಂಟೆ ಮಾಡೋ ತೀರಾ ಚಿಕ್ಕ ಮಕ್ಕಳನ್ನ ಬೆದರಿಸಕ್ಕೆ ಇನ್ನೊಂದು ಉಪಾಯ ಇತ್ತು. ಹೇಳಿದ ಮಾತು ಕೇಳದೇ ಇರೋವಕ್ಕೆ– "ಬಿಸಿಲಲ್ಲಿ ಮನೆ ಕಟ್ಟಿ, ಬೆಳ್ಳಿ ಬಟ್ಟಲಲ್ಲಿ ಕೆನೆಮೊಸರನ್ನ ಕಲಸಿ, ಅದರ ಮೇಲೊಂದು ಕಳಿತ ನಿಂಬೆಕಾಯಿ ಉಪ್ಪಿನಕಾಯಿ ಹೋಳು ಹಾಕಿ, ತಿನ್ನು ಅಂತ ಹೇಳಿಬಿಡ್ತೀನಿ ಅಷ್ಟೇ ನೋಡು" ಅಂತನ್ನೋದು! ನಗು ಬರತ್ತೆ ಈಗ ನೆನೆಸಿಕೊಂಡರೆ. ಆದರೆ ಅದ್ಯಾಕೋ ಆಗ ನಮಗೆಲ್ಲ ಇದೊಂದು ಭಾರಿ ಶಿಕ್ಷೆ ಅಂತನ್ನಿಸಿ ನಾವು ಗಾಬರಿಯಾಗಿ, ಮಾಡ್ತಿದ್ದ ತೀಟೆ ನಿಲ್ಲಿಸಿಬಿಡ್ತಿದ್ವಿ ಅಂತ ಪ್ರತೀತಿ.

ಅವತ್ತೂ ನಮ್ಮಮ್ಮ ಏನೋ ಕಪಿಚೇಷ್ಟೆ ಮಾಡ್ತಿದ್ದ ನನ್ನ ಮಗನಿಗೆ ಹೀಗೇ ಹೇಳಕ್ಕೆ ಹೋಗಿ ಅದರ ಕೈಲಿ ಮೂತಿ ತಿವಿಸ್ಕೊಂಡು ಬಂದಿದ್ರು. ಮೊಸರನ್ನದ ಶಿಕ್ಷೆಗೆ ಹೆದರಿ ಸುಮ್ಮನಾಗೋ ಬದಲು ಅದು, "ಅಜ್ಜೀ, ನಂಗೆ ಉಪ್ಪಿನಕಾಯಿ ಸೇರಲ್ಲ, ಮೊಸರನ್ನಕ್ಕೆ ತುಂಬಾ ಚಿಪ್ಸ್ ಹಾಕ್ಕೊಡು" ಅಂತ ಹೇಳಿ, ಮಾಡ್ತಿದ್ದ ತುಂಟಾಟಾನ ಮುಂದುವರೆಸಿತ್ತಂತೆ!

"ಅಷ್ಟಲ್ದೇ ಇಂಗ್ಲೀಷಲ್ಲಿ, "ದಿ ಫ್ರೂಟ್ ಡಸನ್ಟ್ ಫಾಲ್ ಫಾರ್ ಫ್ರಮ್ ದ ಟ್ರೀ" ಅಂತಾರಾಮ್ಮಾ? ಬಿಡಿ" – ಅಂತ ನಾನು ಬಾಯಿ ತುಂಬಾ ನಕ್ಕೆ.

ಅಮ್ಮಾನೂ ನಗ್ತಾ – "ಬಿಸಿಲೇರಿದೆ. ನಡೀ ಒಳಗಿನ್ನು. ಇನ್ನೇನು ಧಾಂಧಲೆ ನಡೆಸಿದ್ದಾರೋ ತಾತ ಮೊಮ್ಮಗ, ನೋಡೋಣ ಬಾ" ಅಂತಂದ್ರು.

ನಾನು ಖಾಲೀ ವಾಟೀಗ್ ಅಂಟಿಕೊಂಡಿದ್ದ ಇಂಗು–ಉಪ್ಪು–ಖಾರಾನ ಬೆಟ್ಟಲ್ಲಿ ಬಳಿದು ತೆಗೆದು ಬಾಯಿಗೆಸ್ಕೊಂಡು, ತುಂಟ ಮಗನಿಗೆ ಹೇಗೆ ಶಿಸ್ತು ಕಲಿಸೋದು ಅಂತ ಯೋಚಿಸ್ತಾ ಒಳಗೆ ನಡೆದೆ. ವರ್ಷಗಳೇ ಉರುಳಿದ್ರೂ ಎಲ್ಲಾ ಈಗ ಅಂದ್ಹಾಗಿದೆ!

ಒಂದ್ಸಲ ಈಗ ನನ್ನ ಮೊಮ್ಮಕ್ಕಳಿಗೂ ಬಿಸಿಲಲ್ಲಿ ಮನೆ ಕಟ್ಟಿ ಮೊಸರನ್ನ ತಿನ್ನಬೇಕಾದ ಶಿಕ್ಷೆ ಕೊಟ್ಟು ಏನಂತಾರೋ ನೋಡ್ಬೇಕೂಂತಿದೀನಿ. ■



# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**। ದಂನಆ**

- **ಘರ್ ಕ ಖಾನಾ ಮತ್ತು ಬಾಹರ್ ಕ ಖಾನಾ ಮಧ್ಯೆ ಈಗೊಂದು ಹೊಸದು ಬಂದಿದೆ. ಅದು ಮನೆಯಲ್ಲೇ ಕೂತು ಬಾಹರ್ ಕ ಖಾನಾ ಆರ್ಡರ್ ಮಾಡುವುದು!**
- ಪಕ್ಷಿಯ ಚಿಲಿಪಿಲಿ ಕೇಳಬೇಕಾದರೆ ಪಂಜರವನ್ನು ಕೊಳ್ಳಬೇಡಿ. ಮರವನ್ನು ಬೆಳೆಸಿ.
- **ಪ್ರಯಾಣಕ್ಕೆ ಹೊರಟಾಗ ಪ್ರಯಾಣವನ್ನೇ ಮಾಡಿಲ್ಲದವರಿಂದ ಸಲಹೆಗಳನ್ನು ಕೇಳಬೇಡಿ.**
- ನಿನ್ನೆಯನ್ನು ಏಕೆ ಬಿಡಬೇಕು? ಏಕೆಂದರೆ ನಿನ್ನೆ ಈಗಾಗಲೇ ನಿಮ್ಮನ್ನು ಬಿಟ್ಟಿದೆ.
- **ಸೀಕ್ ಟು ಬಿ ವರ್ತ್ ನೋಯಿಂಗ್ ರ್‍ಯಾದರ್ ದ್ಯಾನ್ ಬಿ ವೆಲ್ ನೋನ್.**
- ಸಂಟೈಮ್ಸ್ ಅಡ್ವೈಸ್ ಈಸ್ ನಾಟ್ ಬ್ಯಾಡ್, ಬಟ್ ಬ್ಯಾಡ್ಲಿ ಗಿವನ್.
- **ನೀನು ಹೇಳಿದ್ದನ್ನು ನಾನು ಒಪ್ಪದಿರಬಹುದು. ಆದರೆ ಅದನ್ನು ಹೇಳಿ ಮೂರ್ಖನಾಗುವ ನಿನ್ನ ಹಕ್ಕನ್ನು ನಾನು ಖಂಡಿತ ಬೆಂಬಲಿಸುತ್ತೇನೆ.**
- ಅವಾಯ್ಡಿಂಗ್ ಸರ್ಟನ್ ಪೀಪಲ್ ಟು ಪ್ರೊಟೆಕ್ಟ್ ಯುವರ್ ಎಮೋಷನಲ್ ಹೆಲ್ತ್ ಈಸ್ ನಾಟ್ ಎ ವೀಕ್‌ನೆಸ್, ಇಟ್ ಈಸ್ ವಿಸ್ಡಂ.
- **ನಿಜವಾದ ಸುಖ ಎಂದರೆ ಪ್ರೇಮಿಸಿದ ಹುಡುಗಿಯನ್ನು ಮದುವೆಯಾಗಿ ನಂತರ ಅವಳು ಸಾಕಷ್ಟು ಶ್ರೀಮಂತಳು ಎಂದು ತಿಳಿದು ಬಂದಾಗ.**
- ಮನಶ್ಯಾಂತಿ ಬೇಕೆ? ಹಾಗಿದ್ದರೆ ಎಲ್ಲವನ್ನೂ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸದಿರಿ.
- **ಕಮಿಟ್‌ಮೆಂಟ್ ಮೀನ್ಸ್ ಸ್ಟೇಯಿಂಗ್ ಲೀಗಲ್ ಟು ವಾಟ್ ಉ ಸೆಡ್ ಯು ವರ್ ಗೋಯಿಂಗ್ ಟು ಡು ಲಾಂಗ್ ಆಫ್ಟರ್ ದಿ ಮೂಡ್ ಯು ಸೆಡ್ ಇಟ್ ಹ್ಯಾಸ್ ಲೆಫ್ಟ್ ಯು.**
- ನಿಮಗೆ ಏನು ಬೇಕು ಎಂದು ಗೊತ್ತಿಲ್ಲದಿದ್ದಾಗ ಏನು ದಕ್ಕಿದರೂ ಅದು ಸಂತೋಷ ತಂದುಕೊಡದು.
- **ಎ ರೇಸ್ ಹಾರ್ಸ್ ಈಸ್ ಅನ್ ಅನಿಮಲ್ ದಟ್ ಕೆನ್ ಟೇಕ್ ಸೆವೆರಲ್ ಥೌಸಂಡ್ ಪೀಪಲ್ ಫಾರ್ ಅ ರೈಡ್ ಅಟ್ ದಿ ಸೇಮ್ ಟೈಂ.**
- ಇಬ್ಬರ ನಡುವೆ ಎಲ್ಲ ವಿಷಯಗಳ ಬಗ್ಗೆ ಸಹಮತವಿದ್ದರೆ ಅವರಲ್ಲಿ ಒಬ್ಬ ಅನವಶ್ಯಕ.
- **ನಾವು ನಮ್ಮ ಕಷ್ಟಗಳನ್ನು ಮಾತ್ರ ಎಣಿಸುತ್ತೇವೆ ಸುಖವನ್ನಲ್ಲ.**
- ಆರೋಗ್ಯವಂತ ವ್ಯಕ್ತಿಯನ್ನು ಕಂಡಾಗಲೇ ನಮ್ಮ ಅನಾರೋಗ್ಯ ಹೆಚ್ಚು ನೋವು ನೀಡುತ್ತದೆ. ■





### ಕಾರ್ಟೂನ್ ಕಥೆ

# 'ಕೊಟ್ಟೋನು ಇಸ್ಕೊಂಡೋನು'



ಕಥೆ: ಬೇಲೂರು ರಾಮಮೂರ್ತಿ


ಚಿತ್ರಗಳು: ರಘುಪತಿ ಶೃಂಗೇರಿ




ಪುಟ 2


ಅದೇನು ನದಿ ಬಳಿ ಸಾಲ ವಾಪಸ್ ಕೊಡೋದು
ಅವನು ನನ್ನತ್ರ ಸಾಲ ಇಸ್ಕೊಂಡು ಮೂರು ವರ್ಷ ಆಯಿತು
5
ನದಿ ನೀರು ತುಂಬಿದ ವರ್ಷಸಾಲ ವಾಪಸ್ ಕೊಡ್ತೀನಿ ಅಂದಿದ್ದ, ಮೂರು ವರ್ಷದಿಂದ ಮಳೆ ಬರದೇ ನದಿ ನೀರು ತುಂಬೇ ಇಲ್ಲ
ಈ ವರ್ಷ ಮಳೆ ಬಂದು ನದಿ ನೀರು ತುಂಬಿದೆ ಹೀಗಾಗಿ ನನ್ನ ಸಾಲ ವಾಪಸ್ ಬರುತ್ತೆ
6
ಅಗೋ ನಿಮ್ಮ ಸ್ನೇಹಿತರೇ ಇರಬೇಕು ಬರ್ತಿದಾರೆ
ನಮಸ್ಕಾರನಪ್ಪಾ ನನ್ನ ಸಾಲ ವಾಪಸ್ ಕೊಡೋಕೆ ಇಲ್ಲಿ ಕರೆದೆಯಾ
7
ಕೊಡೋಣಾಂತನೇ ಇದ್ದೆ ಆದರೆ ಈಗ ಕೊಟ್ಟರೆ ಮಾತಿಗೆ ತಪ್ಪಿದ ಹಾಗಾಗುತ್ತೆ
ಮಾತಿಗೆ ತಪ್ಪೋದೇನು ನದಿ ತುಂಬಿ ಹರೀತಾ ಇದೆಯಲ್ಲ
8
ಎಲ್ಲಿ ತುಂಬಿದೆಯಪ್ಪಾ ನೋಡು ಅಲ್ಲಿ ಇನ್ನೂ ಒಂದು ಅಡಿ ಬಾಕಿ ಇದೆ
ಅಷ್ಟು ಕರಾರುವಾಕ್ಕಾಗಿ ಯಾವ ನದೀನೂ ತುಂಬಿರೋದಿಲ್ಲ
9
ಹಾಗಲ್ಲ ಮಾತೂಂದ್ರೆ ಮಾತು ನೋಡು. ನೀನು ನನಗೆ ಕೊಟ್ಟಿದ್ದು ಹತ್ತು ಸಾವಿರ... ಅದು ಹಿಂದಿರುಗಿಸಬೇಕಾದರೆ ನದಿ ನೀರು ತುಂಬಿರಬೇಕು.
10

ಪುಟ 3




■

ಪದ್ಮ : ಅನ್ಯಾಯ ಕಣ್ರೀ ನೀವು ದಿನಾ ವಾಕಿಂಗ್ ಕರ್ಕೊಂಡು ಹೋಗ್ತಿದ್ದ ನಿಮ್ಮನೆ ನಾಯಿ ಸತ್ ಹೋಯ್ತಂತೆ

ಗೌರಿ : ಹೌದೂರಿ

ಪದ್ಮ : ಮತ್ತೆ ವಾಕಿಂಗ್‌ಗೆ ಈಗ ಯಾರನ್ನ ಕರ್ಕೊಂಡ್ ಹೋಗ್ತೀರಿ

ಗೌರಿ : ಇನ್ನೇನ್ ಮಾಡ್ಲಿ ನಮ್ಮೆಜಮಾನರನ್ನೇ ಕರ್ಕೊಂಡು ಹೋಗ್ತೀನಿ

# ಸಿರಿಹಿಟ್ಟು

***ಪಾಲಹಳ್ಳಿ ವಿಶ್ವನಾಥ್**

ದಾವಣಗೆರೆಯಲ್ಲಿ ಸಾಹುಕಾರ್ ಗಂಗಾಧರಯ್ಯನವರ ಹೆಸರು ಕೇಳದವರು ಯಾರು ಇರಲಿಲ್ಲ. ಹಾಗೆಯೇ ಅಲ್ಲಿ ಗುಮಾಸ್ತ ಶೇಖರ್ ಸೊರಬನ ಹೆಸರು ಕೇಳಿದ್ದವರೂ ಬಹಳ ಕಡಿಮೆ. ಹೀಗಿರುವಾಗ ಶೇಖರ್ ಗಂಗಾಧರಯ್ಯನವರ ಪುತ್ರಿ ರೇಣುಕಳನ್ನು ಪ್ರೀತಿಸತೊಡಗಿ ಒಂದು ದಿನ ಗಂಗಾಧರಯ್ಯನವರ ಮನೆಗೂ ಹೋದ.

"ನನ್ನ ಹೆಸರು ಶೇಖರ. ಸೊರಬದವ. ಇಲ್ಲಿ ಸರಕಾರೀ ಕಛೇರಿಯಲ್ಲಿ ಗುಮಾಸ್ತನಾಗಿದ್ದೀನಿ. ಇನ್ನೂ ತರಬೇತಿಯಲ್ಲಿದ್ದೇನೆ. ನೀವು ಶ್ರೀಮಂತರೆಂದು ನನಗೆ ಗೊತ್ತು. ಹಾಗೂ ನಿಮ್ಮ ಮಗಳು ರೇಣುಕಳನ್ನು ಮದುವೆ ಮಾಡಿಕೊಡಿ ಎಂದು ಧೈರ್ಯಮಾಡಿ ಕೇಳುತ್ತಿದ್ದೇನೆ. '

'ಹೌದು ಧೈರ್ಯವೇ ಸರಿ! ನೀನು ನನ್ನ ಮಗಳನ್ನು ಪ್ರೀತಿಸುತ್ತಿದ್ದೀಯ?

'ಹೌದು'

"ಅವಳು ಬಡವನ ಮಗಳಾಗಿದ್ದರೆ ನೀನು ಹೀಗೆಯೇ ಹೇಳುತ್ತಿದ್ದೆಯಾ?'

'ಗೊತ್ತಿಲ್ಲ' ಎಂದು ನಿಜ ಹೇಳಬೇಕೆಂದುಕೊಂಡರೂ 'ಹೌದು' ಎಂದು ಮೊಟಕಾಗಿ ಶೇಖರ ಉತ್ತರಿಸಿದ.

'ಸರಿ' ಎಂದರು ಗಂಗಾಧರಯ್ಯನವರು. ಒಂದು ಕಾಲದಲ್ಲಿ ಅವರ ತಂದೆಯವರು ಶ್ರೀಮಂತರಾಗಿದ್ದೇನೋ ನಿಜ. ಆದರೆ ವ್ಯವಹಾರಗಳೆಲ್ಲಾ ಕೆಡುತ್ತ ಬಂದಿದ್ದವು. ಈಗ ಅವರಲ್ಲಿ ಹೇಳಿಕೊಳ್ಳುವಂತಹ ಆಸ್ತಿಯೂ ಇರಲಿಲ್ಲ. ದುಡ್ಡೂ ಇರಲಿಲ್ಲ. ಈ ವಿಷಯ ಹೆಚ್ಚು ಜನರಿಗೆ ತಿಳಿದಿರಲಿಲ್ಲ. ಒಳಗೊಳಗೇ ಸಾಲ ಮಾಡಿಕೊಂಡು ಹೊರಗೆ ಶ್ರೀಮಂತಿಕೆ ತೋರಿಸುತ್ತಿದ್ದರು. ಪರಿಸ್ಥಿತಿ ಹೀಗಿರುವಾಗ ರೇಣುಕಳಿಗೆ ವರನೊಬ್ಬ ಸಿಕ್ಕರೆ ಸಾಕು ಎಂದುಕೊಂಡು ಶೇಖರನ್ನು ಒಪ್ಪಿಕೊಂಡಿದ್ದರು. ಗುಮಾಸ್ತೆಯಾದರೆ ಏನು, ಸರಕಾರೀ ಕೆಲಸ ಸಿಗುತ್ತದೆ ಎಂದು ಅವರು ಲೆಕ್ಕಾಚಾರ ಮಾಡಿದರು. ಮತ್ತೇನೂ ಪ್ರಶ್ನೆಗಳಿಲ್ಲದೆ ಗಂಗಾಧರಯ್ಯನವರು ಒಪ್ಪಿಕೊಂಡಿದ್ದು ಶೇಖರನಿಗೆ ವಿಸ್ಮಯವಾಯಿತು,

"ಅದರೆ ಒಂದು ಕೆಲಸ ನೀನು ಮಾಡಬೇಕು' ಎಂದರು ಗಂಗಾಧರಯ್ಯನವರು.

'ನಾನು ಎಲ್ಲ ನ್ಯಗಳನ್ನು ಸೇರಿಸಿ ಈ ಹೊಸ ನಾಶ್ತಾ– ಹುರಿಹಿಟ್ಟು– ಮಾಡಿ ನಮ್ಮ ಅಂಗಡಿಗಳಲ್ಲಿ ಮಾರಲು ನೋಡಿದ್ದೇನೆ. ಆದರೆ ಅದು ಖರ್ಚಾಗುತ್ತಿಲ್ಲ."

"ಅಂದರೆ ಬ್ರೇಕ್ ಫಾಸ್ಟ್ ಸಿರಿಯಲ್.."

"ಹೌದು ಸಿರಿಯಲ್. ಈಗ ಮಾರುಕಟ್ಟೆಯಲ್ಲಿ ಇರುವ ಬೇರೆ ಎಲ್ಲ, ಸಿರಿ..ಸಿರಿ. ಸಿರಿಯಲ್ – ಅದೇ ಬೆಲ್ಲೋಗ್, ವೇಕರ್, ಹೋಗರಿ– ಇನ್ನೂ ಏನೇನೊ ಇದೆಯಲ್ಲ ಅವೆಲ್ಲಕ್ಕಿಂತ ಚೆನ್ನಾಗಿ ಮಾರಾಟವಾಗಬೇಕು. ಹಾಗೆ ನೀನು ಮಾಡಿಕೊಟ್ಟರೆ ನೀನು ನನ್ನ ಮಗಳನ್ನು ಮದುವೆಯಾಗಬಹುದು"

ಸರಿ ಎಂದು ಒಪ್ಪಿಕೊಂಡ ಶೇಖರ.



"ನನಗೆ ರತ್ನಮಾಲಾ ಚೆನ್ನಾಗಿ ಗೊತ್ತು. "

"ಸ್ಯಾಂಡಲ್‌ವುಡ್ಡಿನ ಖ್ಯಾತ ನಟಿ?"

"ಹೌದು. ಅದರ ಡಬ್ಬದ ಮೇಲೆ ಅಕೆಯ ಚಿತ್ರ ಹಾಕೋಣ"

"ಇಲ್ಲ, ಬೇಡ. ನನ್ನದೆ ಯೋಚನೆ ಇದೆ'' ಎಂದು ಶೇಖರ ಹೇಳಿದಾಗ ಗಂಗಾಧರಯ್ಯನವರು ವಹಿವಾಟೆಲ್ಲವನ್ನೂ ಶೇಖರನ ಮೇಲೆ ವಹಿಸಿ ಹಿಂದೆ ಸರಿದರು.

"ಹೆಸರೇನಿಡುವುದು? ಇದು ಸಿರಿಯಲ್ಲೂ ಅಲ್ಲ, ಹಿಟ್ಟೂ ಅಲ್ಲ.. ಹಾಗೆ ನೋಡಿದರೆ ಇದು ಸಿರಿಯಲ್ಲೂ ಹೌದು, ಹಿಟ್ಟೂ ಹೌದು.. ಸಿರಿಹಿಟ್ಟು ಯಾಕಾಗಬಾರದು" ಎಂದುಕೊಂಡ. ಬಿಡಿ ಸಮಯದಲ್ಲಿ ಜಾಹೀರಾತುಗಳನ್ನು ಬಹಳ ಗಮನಿಸುತ್ತಿದ್ದ ಶೇಖರ ಹಲವಾರು ವಿಷಯಗಳನ್ನು ಅರ್ಥ ಮಾಡಿಕೊಂಡಿದ್ದ. ರಾತ್ರಿಯೆಲ್ಲಾ ಯೋಚಿಸಿ ಬೆಳಿಗ್ಗೆ ಭಿತ್ತಿಪತ್ರಕ್ಕೆ ವಿಷಯವನ್ನು ಸಿದ್ಧ ಮಾಡಿಕೊಂಡಿದ್ದ. ಅದರಲ್ಲಿ ಸಿನೆಮಾ ಮತ್ತು ಕ್ರಿಕೆಟ್ ಪ್ರಪಂಚದಲ್ಲಿ ಹಿಂದೆ ಮಿಂಚಿದ್ದ ಹಲವಾರು ದೊಡ್ಡ ತಾರೆಗಳು ಕಣ್ಣೀರಿಡುತ್ತಿರುವ ರೇಖಾಚಿತ್ರಗಳೊಂದಿಗೆ "ಸಿರಿಹಿಟ್ಟು – ಈ ರುಚಿ(?) ಅವರಾರಿಗೂ ಸಿಗಲಿಲ್ಲ" ಎಂಬ ಘೋಷಣೆ ಇದ್ದಿತು. ಈ ಘೋಷಣೆಗೆ ಎರಡು ಉದ್ದೇಶಗಳಿದ್ದವು. ಮೊದಲನೆಯದು ಅದರ ಹೊಸತುವಿನ ಬಗ್ಗೆ! ಹಿಂದೆ ಅವರಾರಿಗೂ ಸಿಗದಿದ್ದರಿಂದ ಈಗ ಏನೋ ಇದೆ ಎನ್ನುವ ಕುತೂಹಲವನ್ನು ಹುಟ್ಟಿಸುತ್ತದೆ. ಎರಡನೆಯದು ರುಚಿ ಪದದ ನಂತರದ ಪ್ರಶ್ನೆಯ ಚಿನ್ಹೆ! ಏನೋ ವಿಶೇಷವಿರಲೇಬೇಕು ಎನ್ನುವ ಕುತೂಹಲ ಇನ್ನೂ ಹೆಚ್ಚಾಗುತ್ತದೆ. ಗಂಗಾಧರಯ್ಯನವರಿಗೆ ಇದನ್ನು ವಿವರಿಸಿದಾಗ ಅವರು "ರೇಣುಕಾನ ಮದುವೆಯಾಗೋ ಆಸೆ ಬಿಟ್ಟುಬಿಡು" ಎಂದರು. 'ನೋಡ್ತಾ ಇರಿ ಮಾವ' ಎಂದು ಶೇಖರ ಹೇಳಿದಾಗ ಮಾವ ಎಂಬ ಪದವನ್ನು ಕೇಳಿ ಗಂಗಾಧರಯ್ಯನವರು ಹುಬ್ಬೇರಿಸಿ "ಸರಿ, ನೋಡೋಣ" ಎಂದರು. ಯಾವ ಉತ್ಸಾಹವೂ ಇಲ್ಲದೆ ಅವರು ದಾವಣಗೆರೆಯ ಒಂದು ಮೊಹಲ್ಲದಲ್ಲಿ ಈ ಭಿತ್ತಿಪತ್ರವನ್ನು ಹಾಕಿಸಿದರು.

ಘೋಷಣೆಯಲ್ಲಿ ಕಾಣಿಸಿಕೊಂಡ ಪ್ರಶ್ನೆಯ ಚಿನ್ಹೆ ಗ್ರಾಹಕರನ್ನು ಸೆಳೆಯಲಾರಂಭಿಸಿತು. ಈ ಸಿರಿಹಿಟ್ಟಿನ ನಿಜ ರುಚಿ ಏನಿರಬಹುದು? ಲೋಕೋ ಭಿನ್ನರುಚಿ ಎಂದು ಹೇಳುತ್ತಾರಲ್ಲವೇ? ಇದರಷ್ಟು ರುಚಿ ನಾವು ನೋಡಿಯೇ ಇಲ್ಲ ಎಂದು ಕೆಲವರೆಂದರೆ ಇದು ರುಚಿಯೇ ಇಲ್ಲದ ರುಚಿ ಎನ್ನುವ ನಿರ್ಧಾರಕ್ಕೆ ಇನ್ನು ಕೆಲವು ಜನ ಬರಲಾರಂಭಿಸಿದರು. ಇಂತಹ ಕಾರಣಗಳಿಂದಾಗಿ ಈ ಸಿರಿಹಿಟ್ಟು ನಿಧಾನವಾಗಿ ಅನೇಕ ಮನೆಗಳನ್ನು ಹೊಕ್ಕಿತು. ಕಾಲಕ್ರಮೇಣ ಎರಡನೆಯ ಅಭಿಪ್ರಾಯವೇ ಹೆಚ್ಚಾಯಿತು ಅಂದರೆ ರುಚಿರಹಿತ! ಅದೂ ಒಳ್ಳೆಯದೇ ಆಯಿತು. ಏಕೆಂದರೆ ರುಚಿಕರ ಖಾದ್ಯಗಳು ದೇಹಕ್ಕೆ ಒಳ್ಳೆಯದಲ್ಲ ಎಂಬ ಅಭಿಪ್ರಾಯ ನಮ್ಮೆಲ್ಲರ ಮನಸ್ಸಿನಲ್ಲಿ ಮೊದಲಿಂದಲೂ ತಾಂಡವವಾಡುತ್ತಿರುತ್ತದೆ. ಅಮ್ಮಂದಿಗರಂತೂ ಇದು ವೇದವಾಕ್ಯ! ಆದ್ದರಿಂದ ಅವರು ಮಕ್ಕಳಿಗೆ ಇದನ್ನು ತಿನಿಸಲು ಪ್ರಾರಂಭಿಸಿದರು. ಶಾಲೆಗೆ ಹೋಗುವ ಮುಂಚೆ ಈ ಸಿರಿಹಿಟ್ಟನ್ನು ತಿನ್ನದೆ ಹೋಗುವ ಹಾಗೇ ಇಲ್ಲ. ಹಾಗೆಯೇ ಮನೆಯ ಇತರರಿಗೂ ಇದೇ ಬೆಳಗಿನ ತಿಂಡಿಯಾಯಿತು. ಬೆಳಿಗ್ಗೆ ತಪ್ಪಿಸಿಕೊಂಡೆ ಎನ್ನುವ ಹಾಗಿಲ್ಲ. ಸಂಜೆ ಮನೆಗೆ ಬಂದ ತಕ್ಷಣ 'ಬೆಳಿಗ್ಗೆ ತಿಂದಿಲ್ಲ, ಈಗ ಸಿರಿಹಿಟ್ಟು ತಿನ್ನಿ' ಎಂದು ಆಜ್ಞೆ ಆಗುತ್ತಿತ್ತು. ಅಂತೂ ಸೂಪರ್ ಮಾರ್ಕೆಟ್ಟಿಗೆ ಹೋದರೆ ಗೃಹಿಣಿಯರು ಮೊದಲು ಆರಿಸಲು ಶುರುಮಾಡಿದ್ದು ಈ ಸಿರಿಹಿಟ್ಟನ್ನೇ! ಹೀಗೆ ಈ ಸಿರಿಹಿಟ್ಟು ದಾವಣಗೆರೆಯಲ್ಲಿ ಚೆನ್ನಾಗಿ



ಖರ್ಚಾಗಲು ಶುರುವಾಯಿತು. ಕ್ರಮೇಣ ಅದರ ಭಿತ್ತಿಪತ್ರಗಳು ಕರ್ನಾಟಕದಲ್ಲಿ ಎಲ್ಲೆಲ್ಲೂ ರಾರಾಜಿಸತೊಡಗಿದವು. ಪತ್ರಿಕೆಗಳಲ್ಲಿ ದೊಡ್ಡ ಜಾಹಿರಾತುಗಳೂ ಶುರುವಾದವು.

ಹಾಗೆಯೇ 'ಹೊಟ್ಟೆ ತುಂಬಿದರೆ ಸಾಕು, ರುಚಿ ವಿದ್ಯಾರ್ಥಿಗಳನ್ನು ಆಲಸಿಗಳನ್ನಾಗಿ ಮಾಡಿಬಿಡುತ್ತದೆ' ಎನ್ನುವ ಅಭಿಪ್ರಾಯವೂ ಹರಡಿ ಕಾಲೇಜು ಹಾಸ್ಟೆಲುಗಳಲ್ಲಿ ಇದು ಬೆಳಿಗ್ಗೆ ತಿಂಡಿಯಾಗಿ ಕಾಣಿಸಿಕೊಂಡಿತು. ಅದರ ಬಗ್ಗೆ ವಿದ್ಯಾರ್ಥಿಗಳ ಹೊಡೆದಾಟಗಳನ್ನು ಗಮನಿಸಿದ ನಾಡಿನ ಎರಡು ರಾಜಕೀಯ ಪಕ್ಷಗಳೂ ಸಿರಿಹಿಟ್ಟಿನ ಪರ ಮತ್ತು ವಿರುದ್ಧ ಅಖಾಡಕ್ಕೆ ಇಳಿದವು. ಒಟ್ಟಿನಲ್ಲಿ ಈ ಸುದ್ದಿಗಳೆಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದ ನಂತರ ಅನೇಕ ಜನಕ್ಕೆ ಕುತೂಹಲ ಹುಟ್ಟಿ ಸಿರಿಹಿಟ್ಟು ಬಹಳ ಜನಪ್ರಿಯತೆಯನ್ನು ಗಳಿಸಿತು. ಇದರ ವಿಷಯ ತಿಳಿದ ಭಾರತದ ಸೇನೆಯ ಮುಖ್ಯಸ್ಥರು ಸೈನಿಕರನ್ನು ಎಚ್ಚರದಿಂದ ಇರಿಸಲು ಮೆಸ್‌ಗಳಲ್ಲಿ ಇದನ್ನು ಬಳಸಲು ಆದೇಶವಿತ್ತರು. ಒಂದು ಬಾರಿ ಲಡಾಖಿನಲ್ಲಿ ಸೀಮೋಲ್ಲಂಘನ ಮಾಡಿ ನಮ್ಮ ಖಾದ್ಯಗಳ ರುಚಿ ನೋಡಿದ ಶತ್ರುಸೇನೆಯ ಅಧಿಕಾರಿಗಳೂ ಈ ಸಿರಿಹಿಟ್ಟನ್ನು ಭಾರತದಿಂದ ಆಮದು ಮಾಡಬೇಕೆಂದು ತಮ್ಮ ನಾಯಕರ ಮುಂದೆ ಮನವಿಯನ್ನು ಇಟ್ಟರು.

ಗಂಗಾಧರಯ್ಯನವರು ಅಡವಿಟ್ಟಿದ್ದ ಆಸ್ತಿಗಳನ್ನೆಲ್ಲಾ ವಾಪಸ್ಸು ತೆಗೆದುಕೊಂಡಿದ್ದಲ್ಲದೆ ಹೊಸ ಆಸ್ತಿಗಳನ್ನೂ ಮಾಡಿಕೊಂಡರು. ಹೀಗ ಶ್ರೀಮಂತಿಕೆ ವಾಪಸ್ಸು ಬಂದ ಮೇಲೆ ಅವರಿಗೆ ಗುಮಾಸ್ತೆ ಶೇಖರ ಮಗಳು ರೇಣುಕಳಿಗೆ ಸರಿಯಾದ ವರನಲ್ಲ ಎಂದು ಅನಿಸಲು ಪ್ರಾರಂಭಿಸಿತು. ಹಣದೊಂದಿಗೆ ರೇಣುಕಳಿಗೂ ಹೊಸ ಸ್ನೇಹಿತರು ಸಿಕ್ಕಿದ್ದರು. ಒಂದು ದಿನ ಶೇಖರನ್ನು ಕರೆಸಿ ಗಂಗಾಧರಯ್ಯನವರು ವಾಸ್ತವವನ್ನು ಅವನಿಗೆ ತಿಳಿಸಿ ಬೇರೆಯಕಡೆ ಹೆಣ್ಣನ್ನು ನೋಡಿಕೊಳ್ಳಬೇಕೆಂದು ಹೇಳಿಬಿಟ್ಟರು. ಶೇಖರ ಅದನ್ನು ತಲೆಗೆ ಹಚ್ಚಿಕೊಳ್ಳಲಿಲ್ಲ. ಸರಕಾರೀ ಕೆಲಸವೂ ಖಾತರಿಯಾಗಿದ್ದಲ್ಲದೆ ಬೆಂಗಳೂರಿಗೂ ವರ್ಗಾವಣೆಯಾಗುವುದಿತ್ತು. ಹೆಚ್ಚು ಮೇಲು ಸಂಪಾದನೆಯಾಗುತ್ತದೆ ಎಂದು ಸಹೋದ್ಯೋಗಿಗಳು ಬೆನ್ನು ತಟ್ಟಿದರು. ಆದರೆ ಶೇಖರನಿಗೆ ಬೇರೆಯೇ ಯೋಚನೆಯಿತ್ತು. ಅಲ್ಲಿ ಹೋಗಿ ಜಾಹೀರಾತಿನ ಪ್ರಪಂಚಕ್ಕೆ ನಿಧಾನವಾಗಿ ಜಾರಬೇಕೆನಿಸಿತ್ತು. ದಾವಣಗೆರೆ ಬಿಡುವ ಮುಂಚೆ ನಮ್ಮ ಮನೆಗೆ ಒಂದು ಸಲ ಬಂದು ಹೋಗಿ ಎಂದು ರಾಘವಯ್ಯನವರು ಹೇಳಿ ಕಳಿಸಿದ್ದರು. ಮನೆಗೆ ಹೋದಾಗ ಅವರು ತಯಾರಿಸುತ್ತಿದ್ದ ಸಾಬೂನು ನೆಲಕಚ್ಚುತ್ತಿದೆ, ಏನಾದರೂ ಮಾಡಿ ಎಂದು ಶೇಖರನಿಗೆ ಹೇಳಿದರು. ಒಪ್ಪಿಕೊಂಡ ಶೇಖರ ಇದಕ್ಕೆ ಏನು ಘೋಷಣೆ ಬರೆಯುವುದು ಎಂದು ಯೋಚಿಸಲು ಶುರುಮಾಡಿದ.

'ಪಾಪ! ಹಿರಿಯ ನಟಿ ರೋಜಾದೇವಿ ಈ ಸಾಬೂನನ್ನು ಬಳಸಲೇ ಇಲ್ಲ?'

*(ಇದು ಸಾಕಿಯವರ ಒಂದು ಕಥೆಯ (ಫಿಲ್ಬಾಯ್ಡ್ ಸ್ಟಡ್ಜ್) ಕನ್ನಡ ರೂಪಾಂತರ. ಅಲ್ಲಿಲ್ಲಿ ಸುಮಾರು ಬದಲಾವಣೆಯೂ ಮಾಡಿದೆ. ಸಾಕಿ ಎನ್ನುವುದು ಹೆಕ್ಟರ್ ಮುನ್ರೊ (1870 – 1916) ಅವರ ಕಾವ್ಯನಾಮ. ಅವರನ್ನು ಇಂಗ್ಲಿಷ್ ಸಣ್ಣಕಥೆಯ ಹಿರಿಯರಲ್ಲಿ ಒಬ್ಬರು ಎಂದು ಪರಿಗಣಿಸುತ್ತಾರೆ. ಅವರು ಪಿ.ಜಿ. ವೋಡ್‌ಹೌಸ್ ಮತ್ತು ಇತರರ ಮೇಲೆ ಪ್ರಭಾವ ಬೀರಿದ್ದಾರೆ (ವಿಕಿಪೀಡಿಯ)*

■



# ಯುಗಾದಿ ಹಳೆಯದು ಹೊಸದರ ಸಂಭ್ರಮ

***ಬೇಲೂರು ರಾಮಮೂರ್ತಿ**

**ಹೊಸದು ಹೊಸದು ಬಂದರೂ ಹಳತು ತಲೆಯ ತಿನುತಿದೆ**

**ಹೊಸ ರೋಗಕೆ ಹಳೆ ಔಷಧ ಒದಗಿ ಒದಗಿ ಬರುತಿದೆ**

ಸೋಮು ಹಾಡು ಗುನುಗುತ್ತಾ ಇದ್ದ ಕಡೆ ಕುತ್ತಿಗೆ ವಾಲಿಸಿದ. ಇರೋದು ಮನೇಲಿ ಇಬ್ಬರೇ. ತಾನು ಹಾಡುತ್ತಿಲ್ಲ ಅಂದರೆ ಅದು ಸೋಮಿಯ ಧ್ವನಿಯೇ ಇರಬೇಕು ಅನಿಸಿತು. ಸೋಮಿ ಹಾಡುವುದು ಎರಡೇ ಸಂದರ್ಭಗಳಲ್ಲಿ ಒಂದು ಅವಳಿಗೆ ಅತಿಯಾಗಿ ಸಂತೋಷವಾದಾಗ ಇನ್ನೊಂದು ಅತಿಯಾಗಿ ಬೇಜಾರು ಆದಾಗ. ಈಗ ಏನಾಗಿರಬಹುದು ಅಂತ ಅವನು ಚಿಂತಿಸಿದ. ಅಡಿಗೆ ಮನೆಯಲ್ಲಿ ಹಾಡು ಗುನುಗುತ್ತಿದ್ದವಳು ಸೋಮು ಕುಳಿತಿದ್ದ ಕಡೆಗೂ ಬಂದು ಅದೇ ಹಾಡನ್ನು ರಿಪೀಟ್ ಮಾಡಿದಳು. ಸೋಮು ಅವಳ ಕೈ ಹಿಡಿದು 'ಈಗೇನಾಯ್ತು ಹಳೆದು ಹೊಸದು ಅಂದುಕೊಂಡು' ಅಂತ ಕೇಳಿದ

'ಎಲ್ಲಾ ನಿಮ್ಮಿಂದ. ನಾನು ನಿಮ್ಮನ್ನು ಹೊಸ ಹೊಸದಾಗಿ ನೋಡಬೇಕು ಅಂತ ಇಷ್ಟಪಟ್ಟಾಗಲೆಲ್ಲಾ ನೀವು ಹಳೆಯದರ ಹಾಗೆ ಇರಬೇಕು ಅಂತೀರ ಅದಕ್ಕೆ ನನಗೆ ಬೇಜಾರು. ಬೇಜಾರಿಂದ ಹಾಡು ಬಂತು' ಅಂದಳು.

'ಅಲ್ವೇ ಊರು ಹೋಗು ಕಾಡು ಬಾ ಅನ್ನುವ ವಯಸ್ಸಿನಲ್ಲಿ ನೀನು ನನ್ನನ್ನು ಹೇರ್ ಡೈ ಮಾಡ್ಕೊಳಿ, ಮೀಸೆ ಟ್ರಿಮ್ ಮಾಡ್ಕೊಳಿ, ವಿಗ್ ಹಾಕ್ಕೊಳಿ, ಇನ್‌ಷರ್ಟ್ ಮಾಡ್ಕೊಳಿ ಅಂದ್ರೆ ಹೇಗೇ.'

'ರೀ ನಾವು ಎಷ್ಟೋ ವರ್ಷ ಜೊತೇಲಿ ಬಂದಿದೀವಿ, ಇನ್ನೂ ಎಷ್ಟು ವರ್ಷ ಜೊತೇಲಿ ಇರಬೇಕೋ ಗೊತ್ತಿಲ್ಲ. ಹಾಗಿರುವಾಗ ಒಬ್ಬರ ಕಣ್ಣಿಗೆ ಇನ್ನೊಬ್ಬರು ಚನ್ನಾಗಿ ಕಾಣಬೇಕಲ್ವೇನ್ರೀ'

'ನನಗೆ ನಿನ್ನ ಲಾಜಿಕ್ಕು ಅರ್ಥ ಆಗ್ತಿಲ್ಲ. ಗಂಡ ಯಾವಾಗಲೂ ಹೆಂಡ್ತಿ ಕಣ್ಣಿಗೇ ಚನ್ನಾಗಿ ಕಾಣಬೇಕು ಅಂತ ಏನು'

'ನನ್ನ ಕಣ್ಣಿಗೆ ಚೆನ್ನಾಗಿ ಕಂಡ್ರೆ ನೀವು ಬೇರೆಯವರ ಕಣ್ಣಿಗೂ ಚನ್ನಾಗಿ ಕಾಣ್ತೀರ. ಚನ್ನಾಗಿ ಕಾಣ್ತೀನಿ ಅಂತ ನೀವು ಒಂದೆರಡು ಹೆಜ್ಜೆ ಮುಂದೆ ಇಟ್ಟರೆ ನಾನು ನಿಮ್ಮನ್ನು ನೋಡ್ಕೊಬಹುದು'

'ನೋಡು ಸೋಮಿ ಇಂಥಾ ಸಂಭಾಷಣೆಗಳು ತುಂಬಾ ನಡೆದುಹೋಗಿದೆ. ನನಗೆ ಈಗ ದೇಹದ ಬಗೆಗೆ ಅಭಿಮಾನವಿಲ್ಲ. ಆತ್ಮದ ಬಗೆಗೆ ಅಭಿಮಾನವಿದೆ.'

'ಇರಲಿ ಸಂತೋಷ. ನನಗೆ ನಿಮ್ಮ ದೇಹದ ಬಗೆಗೆ ಅಭಿಮಾನವಿದೆ. ಇವತ್ತು ಸಾಯಂಕಾಲ ನಾವು ಷಾಪಿಂಗ್‌ಗೆ ಹೋಗ್ತಿದೀವಿ. ನಾನು ಕೊಡಿಸಿದ ಬಟ್ಟೆ ತಗೋಬೇಕು. ಮುಂದಿನ ವಾರನೇ ಹೊಸ ವರ್ಷ ಆರಂಭ. ಹೊಸ ಹಬ್ಬ ಯುಗಾದಿ. ಇಬ್ಬರೂ ಹೊಸ ಬಟ್ಟೆ ಹಾಕಿಕೊಂಡು ಸಂಭ್ರಮ ಪಡೋಣ' ಅಂದಳು

ಸೋಮಿ ಮಾತು ಅಂದ್ರೆ ಒಂದೊಂದು ಸಾರಿ ಅದು ರೂಲಿಂಗು. ಸೋಮು ಸುಮ್ಮನಾದ.

ಷಾಪಿಂಗು ಕರ್ಕೊಂಡು ಹೋಗ್ಲಿ. ಅವಳು ಯಾವುದನ್ನು ತೋರಿಸಿದರೂ ಅದು ಚನ್ನಾಗಿಲ್ಲ ಇದು ಚನ್ನಾಗಿಲ್ಲ ಅಂತ ಅಂದ್ರೆ ಆಯ್ತು ಅಂದ್ಕೊಂಡು ಸುಮ್ಮನಾದ



ಭಾನುವಾರ ಸಂಜೆ ಸೋಮಿ ಸಿದ್ದವಾಗಿ ಸೋಮುನ ಹೊರಡಿಸಿದಳು.

ರೀ ಮೊದಲು ಗೌರೀ ಕೆಫೆಲಿ ಮಸಾಲೆ ದೋಸೆ ತಿಂದ್ಕೊಂಡು ಹೋಗೋಣ ಅಂದಳು.

ಅದೂ ಆಯ್ತು. ನಂತರ ಅವರಿಬ್ಬರೂ ಹೋದದ್ದು ಶಾಂತಿ ವಸ್ತ್ರಾಲಯಕ್ಕೆ.

ಇದೇನೇ ಇಲ್ಲಿಗೇಕೆ ಕರ್‍ಕೊಂಡು ಬಂದೆ ದರಿದ್ರ ವಾಸನೆ ಅಂದ.

ಇಲ್ಲೆಂಥದ್ರೀ ವಾಸನೆ ಅಂತ ಸೋಮಿ ಕೇಳಿದಳು.

ನೋಡಲ್ಲಿ ಶಾಂತಿ ವಸ್ತ್ರಾಲಯದ ಪಕ್ಕದಲ್ಲೇ ಮೂತ್ರಾಲಯ ಇದೆ. ಯಾವ ಕಾಲದಲ್ಲಿ ಇದನ್ನು ಕ್ಲೀನ್ ಮಾಡಿದ್ರೋ ಅಂತ ಇಬ್ಬರೂ ದರದರ ಅಂತ ನಡ್ಕೊಂಡು ಹೋಗಿ ಶಾಂತಿ ವಸ್ತ್ರಾಲಯದ ಒಳಗೆ ಹೋದರು.

ಸೋಮು ಒಂದು ಕಡೆ ಸುಮ್ಮನೆ ಕೂತ.

'ಏನು ಬೇಕು ಸರ್' ಅಂತ ಅಂಗಡಿಯವರು ವಿಚಾರಿಸಿದರು.

'ನನಗೇನೂ ಬೇಡಪ್ಪಾ ನನ್ನ ಹೆಂಡ್ತಿ ಎಳ್ಕೊಂಡು ಬಂದಿದಾಳೆ ಸುಮ್ಮನೆ ಬಂದಿದೀನಿ'

'ಹೇಗೂ ಸುಮ್ಮನೇ ಬಂದಿದೀರ ಸುಮ್ಮನೇ ನಮ್ಮ ಹೊಸ ಕಲಕ್ಷನ್ ನೋಡಿ' ಅಂತ ಹೊಸ ಹೊಸ ಡಿಸೈನ್ ರೆಡೀಮೇಡ್ ಬಟ್ಟೆಗಳನ್ನು ತೋರಿಸಿದ

ಸೋಮಿ 'ನೋಡಿ ನಿಮಗೆ ಈ ಟೀ ಷರ್ಟ್ ಚನ್ನಾಗಿ ಕಾಣುತ್ತೆ' ಅಂತ ಒಂದು ಡಜನ್ ಟೀ ಷರ್ಟುಗಳನ್ನು ತಗೊಂಡು ಬಂದು ಒಂದಾದ ಮೇಲೊಂದರಂತೆ ಸೋಮು ಮೇಲೆ ಹಾಕಿ ನೋಡಿ ತಲೆ ಕೊಡವಿ ಹೋದಳು.

ಅಂಗಡಿಯ ಹುಡುಗ ಬಂದು 'ಸರ್ ನೀವು ಷಾಪಿಂಗ್‌ಗೆ ಬಂದಿರೋದು ಇಬ್ಬರಿಗೂ ಬಟ್ಟೆ ತಗೋಳೋಕಾ ಇಲ್ಲಾ ನಿಮಗೊಬ್ಬರಿಗಾ' ಅಂತ ಕೇಳಿದ

'ಏನಾದ್ರೂ ಆಗಲಿ ನಿಮಗೊಂದಿಷ್ಟು ವ್ಯಾಪಾರ ಆದರೆ ಸಾಕಲ್ವಾ, ಸುಮ್ನಿರಪ್ಪ' ಅಂದ ಸೋಮು

'ಹಲೋ ಸೋಮು' ಅಂತ ಕೂಗು ಬಂದ ಕಡೆ ನೋಡಿದರೆ ಪ್ರಸಾದಿ ಅವನ ಹೆಂಡತಿ ಇಬ್ಬರೂ ಭರ್ಜರಿ ಷಾಪಿಂಗ್ ಮಾಡಿಕೊಂಡು ಹೊರಡೋಕೆ ಸಿದ್ಧವಾಗಿದ್ರು.

'ಇದೇನೋ ಇಷ್ಟೊಂದು ಬಟ್ಟೆಗಳು' ಅಂತ ಕೇಳಿದ ಸೋಮು.

'ಹೊಸ ವರ್ಷ ಅಲ್ವೇನೋ, ಹೊಸ ಹರ್ಷ ನಡೀಲಿ ಬಿಡು ನನಗಿಷ್ಟವಾದದ್ದನ್ನು ಅವಳು ಆರಿಸಿದಳು ಅವಳಿಗಿಷ್ಟವಾದದ್ದನ್ನು ನಾನು ಆರಿಸಿದೆ ಅಲ್ಲಿಗೆ ಸರಿಹೋಯ್ತಲ್ಲ' ಅಂದ ಪ್ರಸಾದಿ 'ಎಲ್ಲಿ ನಿನ್ನ ಹೆಂಡ್ತಿ ಬಂದಿಲ್ವಾ, ನೀನು ಒಬ್ಬನೇ ಬಂದು ಕೂತಿರೋ ಹಾಗಿದೆ'

'ಇಲ್ಲಪ್ಪಾ ಅವಳು ಒಳಗೆ ಇದಾಳೆ ನನಗೆ ಷಾಪಿಂಗ್ ಇಷ್ಟ ಇಲ್ಲ. ಬಲವಂತದಿಂದ ಎಳ್ಕೊಂಡು ಬಂದಿದಾಳೆ' ಅಂದ.

'ಗುಡ್ ಲಕ್. ಹೊಸ ವರ್ಷ ಚನ್ನಾಗಿರಲಿ' ಅಂತ ಹಾರೈಸಿ ಪ್ರಸಾದಿ ಹೊರಟ.



ಸೋಮು ತಲೆ ಕೆರೆದುಕೊಳ್ಳುತ್ತಾ ಕೂತು ಬೇಜಾರಾಗಿ ಸೋಮಿ ಬಟ್ಟೆ ಆರಿಸುತ್ತಿದ್ದ ಕಡೆ ಹೊರಟ. ಅಲ್ಲಿ ಮಹಿಳಾ ಮಣಿಗಳ ಗ್ಯಾಂಗೇ ಇತ್ತು. ಸೋಮು ಅವರ ನಡುವೆಯೇ ಹೊರಟ.

ಒಬ್ಬಳು ಮಹಿಳೆ 'ಏನ್ರೀ ನನ್ನನ್ನು ಸವರಿಕೊಂಡೇ ಹೋಗ್ತಿದೀರ' ಅಂತ ಕಿರುಚಿದಳು.

'ಸಾರಿ ಮೇಡಂ ನೀವು ಇರೋ ಸೈಜಿಗೆ ನಿಮ್ಮನ್ನು ತಳ್ಳೋಕೆ ಆಗಲಿಲ್ಲ ಅದಕ್ಕೆ' ಅಂದು ಸೋಮು ಮನ್ನುಗ್ಗಿದ.

ಏನೇ ಇನ್ನೂ ಷಾಪಿಂಗ್ ಆಗಿಲ್ವಾ ನನಗಂತೂ ಏನೂ ಬೇಡ ನಡಿ ಹೋಗೋಣ ಅಂದ ಸೋಮು.

'ರೀ ಇಲ್ಲಿ ಇರೋ ಬಟ್ಟೆಗಳೇನೋ ಬಹಳ ಚನ್ನಾಗಿದೆ, ಆದರೆ ಒಂದೂ ನಿಮಗೆ ಮ್ಯಾಚ್ ಆಗ್ತನೇ ಇಲ್ವಲ್ರೀ. ಬೇರೆ ಅಂಗಡಿಗೆ ಹೋಗೋಣ್ವಾ' ಅಂತ ಕೇಳಿದಳು.

'ಬೇರೆ ಅಂಗಿಡೀನೂ ಬೇಡ ಏನೂ ಬೇಡ ಮನೆಗೆ ಹೋಗೋಣ ನಡಿ'. ಅಂದ

'ಸರಿ ನೀವು ಅಲ್ಲಿ ಕೂತಿರಿ ನಾನು ಈಗ ಬಂದೆ' ಅಂದಳು.

ಸೋಮು ಹೊರಗೆ ಬಂದು ಕೂತ. ಇನ್ನೂ ಅರ್ಧ ಗಂಟೆ ಕಳೆದರೂ ಸೋಮಿ ಬರಲೇ ಇಲ್ಲ. ಅಂಗಡಿಯವರು ಸೋಮು ಕಡೆ ನೋಡಿ 'ನಿಮಗೆ ಇಂಥಾ ಪರಿಸ್ಥಿತಿ ಬರಬಾರದಿತ್ತು ಹೋಗಲಿ ಒಂದು ಕಪ್ ಕಾಫಿ ಕುಡೀರಿ ಅಂದು ಕಾಫಿ ಕೊಟ್ಟರು'.

ಕಡೆಗೂ ಸೋಮಿ ಹೊರಗೆ ಬಂದಾಗ ಇನ್ನೂ ಅರ್ಧ ಗಂಟೆ ಕಳೆದಿತ್ತು.

'ಎಲ್ಲಾ ಸರಿಯಾಗಿ ಪ್ಯಾಕ್ ಮಾಡಪ್ಪಾ' ಅಂದಳು ಸೋಮಿ.

'ಏನು ತಗೊಂಡ್ಯೇ ಅಂತ' ಕೇಳಿದ ಸೋಮು.

'ಅದೆಲ್ಲಾ ಗುಟ್ಟು ಮನೆಗೆ ಹೋದ ಮೇಲೆ ಗೊತ್ತಾಗುತ್ತೆ' ಅಂದಳು.

'ನೋಡು ಸೋಮಿ ನೀನು ತಗೊಂಡಿದ್ದು ನನಗೆ ಇಷ್ಟ ಆದ್ರೆ ಮಾತ್ರ ನಾನು ಹಾಕ್ಕೊಳೋದು ಗೊತ್ತಾ' ಅಂದ.

ಸೋಮಿ 'ಆಗಬಹುದು' ಅಂದು ತಲೆಯಾಡಿಸಿದಳು.

ಮನೆಗೆ ಬಂದು ಪ್ಯಾಕೆಟ್ ತೆಗೆದು ನೋಡಿದರೆ ಅದರಲ್ಲಿ ಮೂರು ರೇಷ್ಮೆ ಸೀರೆ ಅದಕ್ಕೆ ಮ್ಯಾಚಿಂಗ್ ಆಗುವಂಥಾದ್ದೆಲ್ಲಾ ಇತ್ತು.

ಇದೇನೇ ಮೂರು ಸೀರೆ ತಗೊಂಡ್ಯಾ ಅಂತ ಕೇಳಿದ ಸೋಮು

'ಹೌದ್ರೀ ನಾನೇನೋ ಒಂದೇ ಸೀರೆ ತಗೊಳೋಣ ಅಂತ ಹೋದೆ. ಆದರೆ ನೋಡಿದರೆ ಒಂದಕ್ಕಿಂತ ಒಂದು ಚನ್ನಾಗಿತ್ತು ಅದಕ್ಕೆ ಮೂರು ತಗೊಂಡೆ ಹೇಗಿದೆ ಎಲ್ಲಾ' ಅಂತ ಮೂತಿ ಅರಳಿಸಿದಳು

'ಅದ್ಯಾವ್ದೋ ಟೀ ಷರ್ಟು ತೋರಿಸಿದೆ ಅದು ನನಗೆ ತಗೊಳ್ಳಿಲ್ವಾ' ಅಂತ ಕೇಳಿದ

'ನೀವು ಬೇಡಾಂದ್ರಲ್ಲ ಅದಕ್ಕೆ ಅದನ್ನು ಅಲ್ಲೇ ಬಿಟ್ಟೆ'

'ಹಾಗಾದರೆ ನಾನು ಯುಗಾದಿ ಹಬ್ಬದ ದಿನ ಹಳೆ ಬಟ್ಟೆನೇ ಹಾಕ್ಕೊಂಡಿರಬೇಕಾ' ಅಂತ ಕೇಳಿದ

ಇದು ಬೇವು ಬೆಲ್ಲದ ಹಬ್ಬ ಹಳೆಯ ಬಟ್ಟೆಯಲ್ಲಿ ನೀವು ಬೇವು, ಹೊಸ ಬಟ್ಟೆಯಲ್ಲಿ ನಾನು ಬೆಲ್ಲ. ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು, ನೀವು ಹಳೆ ಬೇರು ನಾನು ಹೊಸ ಚಿಗುರು ಅಂದು ಕಣ್ಣು ಮಿಟುಕಿಸಿ ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ವಸ್ತ್ರವ ಮರಳಿ ಮರಳಿ ತರುತಿದೆ ಅಂತ ಹಾಡಿಕೊಂಡು ಒಳಗೆ ಹೊರಟಾಗ ಇವಳು ಷಾಪಿಂಗ್‌ಗೆ ಅಂತ ನನ್ನನ್ನು ಕರೆದುಕೊಂಡು ಹೋಗಿದ್ದು ಅವಳಿಗೆ ಸೀರೆ ತಗೊಳೋಕೆ. ಆದರೆ ನನಗೆ ಬಟ್ಟೆ ಕೊಡಿಸ್ತೀನಿ ಅನ್ನೋದು ಒಂದು ನೆಪವಾಗಿತ್ತು ಅಂತ ಸೋಮುಗೆ ಅರ್ಥವಾದಾಗ ಮಂಕಾಗಿದ್ದ. ■



ಶರಲೇಖನ ಪುನರಾಗಮನ

# ಅಶೋಕನ ಪೀಕಲಾಟದ ಪ್ರಸಂಗ

***ವತ್ಸನ**

"ಅಂಕಲ್, ತುಂಬಾ ಸುಲಭ ಈ ಆಟ, ಸ್ವಲ್ಪ ಫೋಕಸ್ ಮಾಡಿ ಪ್ಲೀಸ್" ಅಂತ ಶಾಲಿನಾ ನನಗೆ ತಾಕೀತು ಮಾಡುತ್ತಿದ್ದಳು. ಶಾಲಿನಾ ನಮ್ಮ ಮಕರಧ್ವಜನ ಮೊಮ್ಮಗಳು. ಮಕರಧ್ವಜ ನಿಮಗೆ ನೆನಪಿರೋ ಹಾಗೆ ಶರಲೇಖನ ಅಣ್ಣ. ಹದಿಹರಯದ ಶಾಲಿನ ಅಮೆರಿಕೆಯಲ್ಲಿ ಹುಟ್ಟಿ ಬೆಳೆದ ಹುಡುಗಿ. ಬೆಂಗಳೂರಿಗೆ ಬಂದಮೇಲೆ ಶರಲೇಖನನ್ನು ನೋಡುಕ್ಕೆ ಅಂತ ಅಂದು ನಮ್ಮಲ್ಲಿಗೆ ಬಂದಿದ್ದಳು. ಅದ್ಯಾವುದೇ ಹೊಸ ಆಟ ಅಂತೆ. ಮೊಬೈಲ್‌ನಲ್ಲಿ ಆಡಬಹುದಂತೆ. ಹೆಸರು ವರ್ಡ್ಲ್ ಅಂತ. ಐದಕ್ಷರದ ಪದವೊಂದನ್ನ ಆರು ಪ್ರಯತ್ನಗಳಲ್ಲಿ ಗುರುತು ಹಚ್ಚೋ ಪತ್ತೇದಾರಿ ಆಟ ಇದು. ಇದನ್ನ ಶಾಲಿನ ನನಗೆ ಪರಿಚಯಿಸುವ ಯತ್ನ ಮಾಡಿದ್ದಳು. ನಾನೂ ಅವಳ ಉತ್ಸಾಹಕ್ಕೆ ಭಂಗ ಬರದೇ ಇರೋಹಾಗೆ ನಾನು "ಫೋಕಸ್" ಮಾಡುತ್ತಾ ಇದ್ದೆ. ಅಷ್ಟು ಹೊತ್ತಿಗೆ ಬಾಗಿಲ ಕರೆಗಂಟೆ ಸದ್ದಾಯಿತು. ಶರಲೇಖನೇ ಹೋಗಿ ಬಾಗಿಲು ತೆಗೆದ. ಬಂದವರು ಅಶೋಕ್. ಅಶೋಕ್ ನಮಗೆ ಇತ್ತೀಚಿನ ಪರಿಚಯ. ಎರಡು ವರ್ಷದ ಹಿಂದೆ ಗುಡೇಮಾರನ ಹಳ್ಳಿಯ ಬಳಿ ಇರುವ ಇವರ ಕಂಪನಿಗೆ ಭೇಟಿನೀಡುವ ಅಗತ್ಯ ಬಂದಿತ್ತು. ಬೆಳಗ್ಗೆಯೇ ಶರಲೇಖನೊಂದಿಗೆ ಮಾತನಾಡಿ ಅಶೋಕ್ ಇಂದಿನ ಭೇಟಿ ನಿಗದಿಸಿದ್ದರಂತೆ.

"ತುಂಬಾ ಉಪಕಾರ ಆಯಿತು ನೀವು ನನ್ನನ್ನು ನೋಡುಕ್ಕೆ ಅವಕಾಶ ಕೊಟ್ಟಿದ್ದು. ನಮ್ಮ ಕಂಪನಿಯಲ್ಲಿ ಉದ್ಭವಿಸಿರೋ ಈ ವಿಚಿತ್ರ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ನೀವೇ ಸಮರ್ಥರು ಅಂತ ನಿರ್ಧರಿಸಿ ಇಲ್ಲಿಗೆ ಬಂದೆ" ಎಂದರು ಅಶೋಕ್. ಅವರ ದನಿಯಲ್ಲಿ ಆತಂಕ ಕಳವಳ ಎದ್ದು ಕಾಣುತ್ತಿತ್ತು.

ಇವರ ಕಂಪನಿಗೆ ನಾವು ಹೋಗಿದ್ದರ ಕಾರಣ ಸಂಕ್ಷಿಪ್ತವಾಗಿ ತಿಳಿಸಿಬಿಡುತ್ತೇನೆ. ಅಶೋಕ್ ನಿರ್ವಹಿಸುತ್ತಿರುವ ಕಂಪನಿ ಡೀಪ್‌ಮೈಂಡ್, ಕೃತಕ ಪ್ರಜ್ಞೆಯುಳ್ಳ ರೋಬಾಟ್‌ಗಳನ್ನು ವಿನ್ಯಾಸಗೊಳಿಸಿ, ತಯಾರಿಸುವ ಸಂಸ್ಥೆ. ಅಲ್ಲೊಮ್ಮೆ ಒಂದು ಅತಿ ಮುಖ್ಯ ಇಲೆಕ್ಟ್ರಾನಿಕ್ ಭಾಗ ಕಾಣೆಯಾಗಿದ್ದಾಗ ಅದನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಅಶೋಕ್ ನಮ್ಮ ಸಹಾಯ ಕೋರಿದ್ದರು. (ಗುಡೇಮಾರನ ಹಳ್ಳಿ ಗೀತಾಂಜಲಿ ಪ್ರಸಂಗ). ಈಗ ಮತ್ತೆ ಇನ್ನಾವುದೋ ಸಮಸ್ಯೆ ಹೊತ್ತು ನಮ್ಮಲ್ಲಿಗೆ ಬಂದಿದ್ದರು.

"ಬನ್ನಿ ಅಶೋಕ್. ಇಲ್ಲಿ ಕೂಡಿ. ಇದು ನನ್ನ ಗ್ರಾಂಡ್ ನೀಸ್ ಶಾಲಿನಾ. ಅಮೆರಿಕೆಯಲ್ಲಿ ಕಂಪ್ಯೂಟರ್ ಸೈನ್ಸ್ ಓದುತ್ತಿದ್ದಾಳೆ. ನಮ್ಮ ಮಾತುಕತೆಗಳು ಅವಳ ಮುಂದೆ ನಡೆದರೆ ನಿಮ್ಮದೇನೂ ಅಭ್ಯಂತರ ಇಲ್ಲ ತಾನೇ?" ಅಂತ ಶರಲೇಖ ಕೇಳಿದ.

"ಹಾಯ್ ಶಾಲಿನಾ, ಯು ಆರ್ ವೆಲ್‌ಕಮ್ ಟು ಬಿ ಪ್ರೆಸೆಂಟ್. ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿ ನೀನು. ನಮ್ಮ ಸಮಸ್ಯೆ ಕೂಡಾ ಆ ಕ್ಷೇತ್ರಕ್ಕೇ ಸಂಬಂಧಿಸಿದ್ದು. ಮೊದಲಿಗೆ ನಮ್ಮ ಕಂಪನಿ ಬಗ್ಗೆ ಸ್ವಲ್ಪ ಹಿನ್ನೆಲೆ ಮಾಹಿತಿ ಕೊಟ್ಟು ಅನಂತರ ಪ್ರಸಕ್ತ ಪರಿಸ್ಥಿತಿ ಬಗ್ಗೆ ಹೇಳುವೆ.



"ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಥವಾ ಕೃತಕ ಬುದ್ಧಿಮತ್ತತೆ ಕ್ಷೇತ್ರದಲ್ಲಿ ನಮ್ಮ ಕಂಪನಿ ಕಳೆದ ಎರಡು ದಶಕಗಳಿಂದ ಕೆಲಸ ಮಾಡುತ್ತಿದ್ದು ವಿವಿಧ ಕೈಗಾರಿಕಾ ವಲಯಗಳಿಗೆ

ಅನೇಕ ಬಹು ಉಪಯೋಗಿ ರೋಬಾಟ್‌ಗಳನ್ನು ನಿರ್ಮಿಸಿ ಕೊಟ್ಟಿದ್ದೇವೆ. ಕೃತಕ ಪ್ರಜ್ಞೆ ಎಂದರೆ ಸಾಮಾನ್ಯ ಜನರಿಗೆ ಅದೇನೋ ಒಂದು ಅತ್ಯಂತ ನಿಗೂಢವಾಗದ ವಿಷಯ ಎಂಬ ಕಲ್ಪನೆ ಇದೆ. ವಾಸ್ತವದಲ್ಲಿ ನಮ್ಮ ಮೊಬೈಲ್‌ಗಳಲ್ಲಿ ದಿನನಿತ್ಯ ಬಳಸುವ ಜೆಪಿಎಸ್ ಕೂಡಾ ಕೃತಕ ಪ್ರಜ್ಞೆಯ ಒಂದು ನಿದರ್ಶನ. ಕಾರುಗಳ ತಯಾರಿಕಾ ಫ್ಯಾಕ್ಟರಿಗಳಲ್ಲಿ ಕಾರುಗಳಿಗೆ ಬಣ್ಣ ಬಳಿಯುವ ಪೇಂಟಿಂಗ್ ರೋಬಟ್‌ಗಳೂ ಸಹಾ ಕೃತಕ ಪ್ರಜ್ಞೆಯ ಸಹಾಯದಿಂದಲೇ ತಮ್ಮ ಕಾರ್ಯಗಳನ್ನು ಬಹು ದಕ್ಷತೆಯಿಂದ ನಿರ್ವಹಿಸುತ್ತವೆ. ಇದೆಲ್ಲಾ ಕಳೆದ ಇಪ್ಪತ್ತು ವರ್ಷಗಳಷ್ಟು ಹಿಂದೆಯೇ ಆವಿಷ್ಕಾರವಾದ ಸಾಧನಗಳು. ಇತ್ತೀಚೆಗೆ ಈ ಕ್ಷೇತ್ರದಲ್ಲಿ ಅದ್ಭುತವಾದ ಬೆಳವಣಿಗೆ ನಡೆದಿದ್ದು ನಮ್ಮ ತಜ್ಞರು ಮಾನವನ ಬುದ್ಧಿಗೆ ಸರಿಸಾಟಿಯೆನಿಸುವ ರೋಬಟ್‌ಗಳ ಸೃಷ್ಟಿಯಲ್ಲಿ ಯಶಸ್ಸನ್ನು ಗಳಿಸಿದ್ದಾರೆ. ಇತ್ತೀಚೆಗೆ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸೋಫಿಯಾ ಎಂಬ ರೋಬಟ್ ತರುಣಿಯ ಬಗ್ಗೆ ನೀವು ಕೇಳಿರಬಹುದು. ನಮ್ಮ ರೋಬಟ್‌ಗಳು ಈ ಸೋಫಿಯಾಗಿಂತ ನೂರು ಪಟ್ಟು ಹೆಚ್ಚು ಬುದ್ಧಿಮತ್ತತೆಯನ್ನು ಹೊಂದಿರುವುದು ಖಂಡಿತ.

"ನಮ್ಮ ಮೊಟ್ಟಮೊದಲ ರೋಬಟ್ಟನ್ನು ಗೀತಾಂಜಲಿ ಅಂತ ಹೆಸರಿಸಿದ್ದೆವು. ಮೊದಲನೇ ಪ್ರಯತ್ನದಲ್ಲೇ ಟ್ಯೂರಿಂಗ್ ಟೆಸ್ಟ್‌ನಲ್ಲಿ ವಿಜಯಗಳಿಸಿದ ಕೀರ್ತಿ ಈ ರೋಬಟ್ ವಿನ್ಯಾಸಕ್ಕೆ ದೊರಕಿತು. ...." ಅಂತ ಅಶೋಕ್ ಹೇಳುತ್ತಿರುವಾಗಲೇ ಶಾಲಿನಾ ಮಧ್ಯೆ ಪ್ರವೇಶಿಸಿ,

"ಟ್ಯೂರಿಂಗ್ ಟೆಸ್ಟ್ ಅಂದರೇನು ಅಂಕಲ್?" ಅಂತ ಕೇಳಿದಳು.

"ಬಹು ಹಿಂದೆ ಅಂದರೆ ನಲವತ್ತರ ದಶಕದಲ್ಲಿ ಇದ್ದ ಅಲನ್ ಟ್ಯೂರಿಂಗ್ ಎಂಬ ಬ್ರಿಟಿಷ್ ವಿಜ್ಞಾನಿ ಮೊಟ್ಟಮೊದಲ ಕಂಪ್ಯೂಟರನ್ನು ವಿನ್ಯಾಸಗೊಳಿಸಿದ್ದ. ಅವನ ಪ್ರಕಾರ ಯಾವುದೇ ಗಣಿತದ ಸಮಸ್ಯೆಯನ್ನು ಈ ಯಂತ್ರಗಳು ಮನುಷ್ಯರಷ್ಟೇ ದಕ್ಷತೆಯಿಂದ ಮಾಡಬಲ್ಲವು. ಅಷ್ಟೇ ಅಲ್ಲ. ಅವನ ಕಂಪ್ಯೂಟರನ್ನು ಒಂದು ಪರದೆಯ ಹಿಂದೆ ಇಟ್ಟು ಅದರೊಂದಿಗೆ ಸಂಭಾಷಣೆ ನಡೆಸಿದಾಗ, ಅದು ಕಂಪ್ಯೂಟರೋ ಅಥವಾ ಮನುಷ್ಯನೋ ಎಂಬುದನ್ನು ನಿರ್ಧರಿಸುವುದಕ್ಕಾಗದೇ ಇದ್ದರೆ ಆಗ ಆ ಕಂಪ್ಯೂಟರ್ ಟೆಸ್ಟ್‌ನಲ್ಲಿ ಜಯಗಳಿಸಿದಂತೆ. ಇದೇ ಮುಂದೆ ಟ್ಯೂರಿಂಗ್ ಟೆಸ್ಟ್ ಅಂತ ಹೆಸರುವಾಸಿಯಾಯಿತು. ಮಾನವನಿಗಿಂತ ಮೂರು ಪಟ್ಟು ಹೆಚ್ಚು ಬುದ್ಧಿಮತ್ತತೆಯನ್ನು ಗೀತಾಂಜಲಿಗೆ ಅಳವಡಿಸಿದ್ದು ಅವಳ ಎಲ್ಲ ಕಾರ್ಯಗಳೂ ತೃಪ್ತಿಕರವಾಗಿಯೇ ಸಾಗುತ್ತಿದ್ದವು. ಎರಡು ವರ್ಷದ ಹಿಂದೆ ನಾವು ಇನ್ನೂ ಮುಂದುವರಿದ ರೋಬಟ್ ಅನ್ನು ತಯಾರಿಸುತ್ತಿದ್ದಾಗ ಒಮ್ಮೆಲೇ ಆ ಹೊಸ ರೋಬಟ್ಟಿನ ಮದರ್‌ಬೋರ್ಡ್ ಕಾಣೆಯಾಯಿತು. ಆಗಲೇ ನಾನು ಮೊಟ್ಟಮೊದಲ ಬಾರಿ ಶರಲೇಖರನ್ನು ಭೇಟಿಯಾಗಿ ಅವರ ಸಹಾಯ ಕೋರಿದ್ದು. ಅವರು ಮತ್ತು ವತ್ಸನ ನಮ್ಮಲ್ಲಿಗೆ ಬಂದು ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಿದ್ದರು. ಗೀತಾಂಜಲಿಯ ಬುದ್ಧಿಯಲ್ಲಿ ಹೊಸ ರೋಬಟ್ಟಿನ ಬಗ್ಗೆ ಭಯ, ಅಸೂಯೆ ಮೂಡಿ ಅದರ ನಿರ್ಮಾಣ ತಡೆಯಲೆಂದು ಮದರ್‌ಬೋರ್ಡ್ ಅನ್ನು ಮುಚ್ಚಿಟ್ಟಿದ್ದನ್ನು ಶರಲೇಖ ಗೀತಾಂಜಲಿಯಿಂದಲೇ ತಿಳಿದು ಅವಳು ತನ್ನ ತಪ್ಪನ್ನು ಒಪ್ಪುವಂತೆ ಮಾಡಿದ್ದರು. ಅಂದಿನಿಂದ ಗೀತಾಂಜಲಿಗಿಂತ ಹೆಚ್ಚು ಬುದ್ಧಿಮತ್ತತೆ ಇರುವ ಅನೇಕ ರೋಬಟ್‌ಗಳು ನಮ್ಮ ಕಂಪನಿಯ ಸಂಶೋಧನಾ ವಿಭಾಗದಲ್ಲಿ ಕೆಲಸಮಾಡುತ್ತಿವೆ. ಈಗ ನಮಗೊಂದು ಹೊಸ ಸಮಸ್ಯೆ ಇದಿರಾಗಿದೆ." ಎಂದು ಹೇಳಿ ಅಶೋಕ್ ಪಕ್ಕದ ಮೇಜಿನ ಮೇಲಿದ್ದ



ಲೋಟದಿಂದ ಒಂದೆರಡು ಗುಟುಕು ನೀರನ್ನು ಕುಡಿದರು.

"ಏನದು ಆ ಸಮಸ್ಯೆ?" ಅಂತ ನಾನು ಕೇಳಿದೆ.

"ಗೀತಾಂಜಲಿಯ ನಿರ್ಮಾಣದ ನಂತರ ಎರಡು ಜನರೇಷನ್ ರೋಬಟ್‌ಗಳು ನಿರ್ಮಿತವಾಗಿವೆ. ಒಂದೊಂದು ತಲೆಮಾರಿಗೂ ಹತ್ತು ಪಟ್ಟು ಹೆಚ್ಚು ಬುದ್ಧಿ ಇರುವಂತೆ ನಮ್ಮ ಪ್ರಗತಿಯಾಗಿದೆ. ಹೊಸ ತಲೆಮಾರಿನ ಮುಂದುವರಿದ ರೋಬಟ್ ಆದ ವರೂಥಿನಿ ಎಲ್ಲರೊಂದಿಗೂ ಮಾತನಾಡಿಕೊಂಡು ತನ್ನ ಕೆಲಸಗಳನ್ನು ಅತಿ ದಕ್ಷತೆಯಿಂದ ಮಾಡುತ್ತಿದ್ದಳು. ಕಳೆದ ಒಂದು ವಾರದಿಂದ ಅವಳು ತೀರಾ ಮಂಕಾಗಿ ಬಿಟ್ಟಿದ್ದಾಳೆ. ಯಾರೊಂದಿಗೂ ಸಂಪರ್ಕ ಬಯಸುವುದಿಲ್ಲ. ಅದರ ನಿರ್ಮಾಪಕ ದೀಕ್ಷಿತ್ ಆ ರೋಬಟ್‌ನ ಎಲ್ಲ ಇಲೆಕ್ಟ್ರಾನಿಕ್ ಸರ್ಕೀಟ್‌ಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ್ದಾನೆ. ಅವುಗಳಲ್ಲಿ ಯಾವ ಬಗೆಯಾದ ದೋಷವೂ ಇಲ್ಲ. ಕೊನೆಗೆ ಗೀತಾಂಜಲಿಗೆ, ವರೂಥಿನಿಯ ಕಾರ್ಯವಿಧಾನವನ್ನು ಪರೀಕ್ಷಿಸುವ ಕೆಲಸವನ್ನು ವಹಿಸಿದೆವು. ಅವಳಿಗೂ ಏನೂ ತಿಳಿಯಲಿಲ್ಲ. ಕೊನೆಗೆ, ಗೀತಾಂಜಲಿಯೇ, "ಹಿಂದೆ ನಾನು ಗೊಂದಲದಲ್ಲಿದ್ದಾಗ ಶರಲೇಖ ಅಣ್ಣ ಬಂದು ಅದನ್ನು ಪರಿಹರಿಸಿದ್ದರು. ಅವರನ್ನೇ ಕರೆಸುವುದು ಸಾಧ್ಯವೇ? ಎಂದು ಕೇಳಿದ ಮೇಲೆ, ನಾನು ನೇರವಾಗಿ ಇಲ್ಲಿಗೆ ಬರಲು ನಿರ್ಧರಿಸಿದೆ" ಎಂದು ಹೇಳಿದರು ಅಶೋಕ್.

ಮಾರನೆಯ ದಿನ ಬರುವುದಾಗಿ ಶರಲೇಖ ಆಶ್ವಾಸನೆ ನೀಡಿದ ನಂತರ ಅಶೋಕ್ ನಮಗೆ ವಿದಾಯ ಹೇಳಿ ನಿರ್ಗಮಿಸಿದರು.

ಮಾರನೆಯ ಬೆಳಗ್ಗೆ ಅಶೋಕ್ ಕಳಿಸಿದ ಕಾರಿನಲ್ಲಿ ಶರಲೇಖ ಮತ್ತು ನಾನು ಗುಡೇಮಾರನ ಹಳ್ಳಿಯ ಕಡೆ ಹೊರಟೆವು. ಕಂಪನಿಯನ್ನು ಪ್ರವೇಶಿಸಿದಾಗ ನನಗೆ ಆಶ್ಚರ್ಯ ತಡೆಯಲಾಗಲಿಲ್ಲ. ಎರಡು ವರ್ಷಗಳಲ್ಲಿ ಕಂಪನಿ ಅಗಾಧವಾಗಿ ಬೆಳೆದಿತ್ತು. ಒಂದು ಕಿಲೋಮೀಟರ್ ಅಷ್ಟು ದೂರ ಒಂದು ಬಹು ಸುಂದರವಾದ ಹೂದೋಟದ ನಡುವೆ ಹೋಗುವ ದಾರಿಯಲ್ಲಿ ಸಾಗಿದ ನಂತರ ಮುಖ್ಯ ಕಟ್ಟಡ ತಲುಪಿದೆವು. ಅಶೋಕ್ ನಮ್ಮನ್ನು ಇದಿರುಗೊಂಡು ನೇರವಾಗಿ ಕಾನ್ಫರೆನ್ಸ್ ರೂಮಿಗೆ ಕರೆದೊಯ್ದರು. ಅಲ್ಲಿ ಕಂಪನಿಯ ತಜ್ಞರುಗಳಾದ ದೀಕ್ಷಿತ್, ವಾಹಿ, ಮತ್ತು ಸ್ಟಾನ್ಲೇ ಇವರುಗಳನ್ನು ಅಶೋಕ್ ನಮಗೆ ಪರಿಚಯಿಸಿದ ಮೇಲೆ (ನನಗೆ ಅಮರ್ ಅಕ್ಬರ್ ಆಂಟೊನಿ ನೆನಪಿಗೆ ಬಂದದ್ದು ಕಾಕತಾಳೀಯವಲ್ಲ) ನಾವೆಲ್ಲಾ ವಿಚಾರ ವಿನಿಮಯಕ್ಕೆ ಕುಳಿತಾಗ ನನ್ನ ಮೊಬೈಲ್ ರಿಂಗಾಯಿತು. ಆ ಬದಿಯಿಂದ ಪುಷ್ಪಾ ಮಾತನಾಡುತ್ತಿದ್ದಳು. ಪುಷ್ಪಾ ನನ್ನ ಆತ್ಮೀಯ ಮಿತ್ರ ವೆಂಕಟೇಶನ ಮಡದಿ. "ವೆಂಕಟೇಶ್ ಎದೆ ನೋವು ಅಂತ ಹಾಸ್ಪಿಟಲ್‌ಗೆ ಅಡ್ಮಿಟ್ ಆಗಿದ್ದಾರೆ. ನನಗೇಕೋ ದಿಕ್ಕೇ ತೋಚುತ್ತಿಲ್ಲಾ. ನೀವು ಸ್ವಲ್ಪ ಬರುಕ್ಕೆ ಆಗುತ್ತೇ?" ಅಂತ ಆಕೆ ಗಾಬರಿಯಿಂದ ಕೇಳಿದಳು.

ವೆಂಕಟೇಶ್ ನನ್ನ ಬಾಲ್ಯದ ಗೆಳೆಯ. ಇರೋ ಒಬ್ಬ ಮಗ ಅಮೆರಿಕಾದಲ್ಲಿ. ಅಶೋಕ್‌ಗೆ ಪರಿಸ್ಥಿತಿ ತಿಳಿಸಿದ ತಕ್ಷಣ ಅವರು ನನಗೆ ಊರಿಗೆ ಹಿಂತಿರುಗಲು ವಾಹನ ವ್ಯವಸ್ಥೆ ಮಾಡಿದರು. ಶರಲೇಖ, "ವಿದ್ಯಮಾನಗಳನ್ನು ತಿಳಿಸು" ಎಂದು ನನಗೆ ಹೇಳಿ, ಪುನಃ ತಜ್ಞರೊಂದಿಗಿನ ಮಾತುಕತೆಯಲ್ಲಿ ಮಗ್ನನಾದ.



ಆಸ್ಪತ್ರೆ ಸೇರಿದಾಗ ವೆಂಕಟೇಶನಿಗೆ ಹೃದಯದ ಎಲ್ಲ ಪರೀಕ್ಷೆಗಳೂ ಮುಗಿದಿದ್ದವು. ಏನೂ ತೊಂದರೆ ಇಲ್ಲ, ಸಂಜೆವರೆಗೂ ಇದ್ದು ಮನೆಗೆ ಹೋಗಬಹುದು ಅಂತ ಡಾಕ್ಟರ್

ಹೇಳಿದರು. ನಾನೂ ದಂಪತಿಗಳೊಂದಿಗೆ ಅಲ್ಲೇ ಇದ್ದು ಸಂಜೆ ಅವರನ್ನು ಮನೆಗೆ ಸೇರಿಸಿ ಫ್ಲಾಟಿಗೆ ಹಿಂತಿರುಗಿದೆ.

ಸಂಜೆ ಶರಲೇಖನಿಂದ, "ಇವತ್ತು ಇಲ್ಲೇ ಇರುತ್ತೇನೆ. ನಾಳೆ ಸಂಪರ್ಕಿಸುವೆ" ಅಂತ ಒಂದು ಮೆಸೇಜ್ ಬಂತು. ನಾನು ಶಾಲಿನಾ ಹೇಳಿಕೊಟ್ಟಿದ್ದ ವರ್ಡ್ಲ್ ಆಡಲು ಪ್ರಯತ್ನ ಪ್ರಾರಂಭಿಸಿದೆ.

ಮಾರನೇ ಬೆಳಗ್ಗೆ ಅಶೋಕ್ ಫೋನ್ ಮಾಡಿ, "ಶರಲೇಖ ನಿಮ್ಮನ್ನು ನಮ್ಮ ಕಂಪನಿಗೇ ಬರಲು ಹೇಳಿದ್ದಾರೆ. ವಾಹನ ಕಳಿಸುವೆ" ಎಂದು ಹೇಳಿದ ಮೇಲೆ, ನಾನು ಅವರ ವಾಹನದಲ್ಲಿ ಡೀಪ್‌ಮೈಂಡ್ ಸೇರಿದೆ. ವಿಶಾಲವಾದ ಕಾನ್ಫರೆನ್ಸ್ ರೂಮಿನಲ್ಲಿದ್ದ ಮೇಜಿನ ಒಂದು ಬದಿಯಲ್ಲಿ ತಜ್ಞ ತ್ರಿಮೂರ್ತಿಗಳು ಕುಳಿತಿದ್ದರು. ಇನ್ನೊಂದು ಬದಿಯಲ್ಲಿ ಶರಲೇಖ ಮತ್ತು ಅಶೋಕ್ ಆಸೀನರಾಗಿದ್ದರು. ಮೂರನೆಯ ಬದಿಯಲ್ಲಿ ಇಬ್ಬರು ತರುಣಿಯರು ಕುಳಿತಿದ್ದರು. ಒಬ್ಬಳು ಗೀತಾಂಜಲಿ ಎಂದು ಗುರುತಿಸಿದೆ. ಇನ್ನೊಬ್ಬಳು ವರೂಥಿನಿಯೇ ಇರಬೇಕು ಅಂದುಕೊಂಡೆ. ನಾನು ಹೋಗಿ ಶರಲೇಖನ ಪಕ್ಕ ಕುಳಿತಮೇಲೆ, ಮೀಟಿಂಗ್ ಪ್ರಾರಂಭವಾಯಿತು.

ಮೊದಲು ಶರಲೇಖನೇ ಮಾತು ಪ್ರಾರಂಭಿಸಿದ.

"ಮೊನ್ನೆ ಬೆಳಗ್ಗೆ ಇಲ್ಲಿಗೆ ಬಂದಮೇಲೆ ನಿಮ್ಮ ತಜ್ಞರೊಂದಿಗೆ ಸಮಸ್ಯೆಯ ಸ್ವರೂಪ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಎಂದರೆ ಕೃತಕ ಬುದ್ಧಿಮತ್ತತೆ ಅಥವಾ ಕೃತಕ ಪ್ರಜ್ಞೆ ಅಂತ ತಜ್ಞರು ಹೇಳಿದರು. ಬುದ್ಧಿಮತ್ತತೆ ಹಾಗೂ ಪ್ರಜ್ಞೆ ಇವುಗಳ ನಡುವೆ ಅರ್ಥಬೇಧವೇನಾದರೂ ಇದೆಯೇ ಅಂತ ಕೇಳಿದೆ. ವಾಹಿಯವರು ಉತ್ತರಿಸಲು ಶುರುಮಾಡಿದರು. "ಇದೆ. ಬುದ್ಧಿಮತ್ತತೆ ಅಂದರೆ ಇಂಟೆಲಿಜೆನ್ಸ್. ಪ್ರಜ್ಞೆ ಎಂದರೆ ಕಾನ್ಷಸ್‌ನೆಸ್ ಅಥವಾ ಅವೇರ್‌ನೆಸ್. ಅರಿವು. ಬುದ್ಧಿಮತ್ತತೆ ಒಂದು ಹಂತವನ್ನು ಮೀರಿ ಬೆಳೆದರೆ ಪ್ರಜ್ಞೆ ಉದಿಸುತ್ತದೆ. ಗೀತಾಂಜಲಿಗಿಂತ ಮುಂಚಿನ ರೋಬಟ್‌ಗಳು ಮನುಷ್ಯನಿಗೆ ಹೋಲಿಸಿದರೆ ಅಗಾಧವಾದ ಬುದ್ಧಿಮತ್ತತೆಯನ್ನು ಪಡೆದಿದ್ದವು.

"ಜಗತ್ತಿನ ಚೆಸ್ ಛಾಂಪಿಯನ್ನನನ್ನು ಸೋಲಿಸುವ ಶಕ್ತಿ ಆ ಯಂತ್ರಗಳಿಗಿತ್ತು. ಆದರೆ ಅವಕ್ಕೆ ಅರಿವು, ಅಥವಾ ಪ್ರಜ್ಞೆ ಇರಲಿಲ್ಲ. ಗೀತಾಂಜಲಿ ಮತ್ತು ಅವಳ ನಂತರ ಬಂದ ಎಲ್ಲ ರೋಬಟ್‌ಗಳಿಗೆ ಇಂಟೆಲಿಜೆನ್ಸ್ ಮತ್ತು ಪ್ರಜ್ಞೆ ಎರಡೂ ಇವೆ." ಅಂತ ವಾಹಿ ವಿವರಿಸಿದರು.

ಅನಂತರ ನಾನು ಗೀತಾಂಜಲಿಯ ಬಳಿ ಮಾತನಾಡಿದೆ. "ಹೌದು ನನಗೆ ತರ್ಕಬದ್ಧವಾಗಿ ಚಿಂತಿಸುವ ಸಾಮರ್ಥ್ಯ ಹಾಗೂ ಮಾನವರು ಅನುಭವಿಸುವ ಅಸೂಯೆ, ಭಯ, ಸಂತೋಷ ಇವೆಲ್ಲಾ ತಿಳಿದಿವೆ. ತರ್ಕ ಬದ್ಧ ಚಿಂತನೆಗೆ ಬುದ್ಧಿಮತ್ತತೆ ಸಹಾಯಕವಾದರೆ, ಭಾವನಾತ್ಮಕ ಅನುಭವಗಳು ಪ್ರಜ್ಞೆಯಿದ್ದರೆ ಮಾತ್ರ ಸಾಧ್ಯ. ವರೂಥಿನಿಗೂ ಈ ಎಲ್ಲ ಗುಣಗಳು ಧಾರಾಳವಾಗಿ ಇವೆ. ಅವಳ ನನ್ನ ಸಹೋದ್ಯೋಗಿಯಷ್ಟೇ ಅಲ್ಲ. ನನ್ನ ಆಪ್ತ ಗೆಳತಿ ಕೂಡಾ. ಕಳೆದ ವಾರದಿಂದ ಅವಳು ನನ್ನ ಹತ್ತಿರವೂ ಮಾತನಾಡುತ್ತಿಲ್ಲ. ಕಾರಣವೇ ತಿಳಿಯದು. ಹೇಗಾದರೂ ಮಾಡಿ ಅವಳನ್ನು ಪುನಃ ಹಿಂದಿನಂತೆಯೇ ಇರುವಂತೆ ಮಾಡಿ. ಅವಳನ್ನು ನೋಡಿದರೆ ನಿಮ್ಮ ಮಾನವರು ಪ್ರತಿಕ್ರಿಯಿಸುವಂತೆ ಅಳಬೇಕು ಅನ್ನಿಸುತ್ತದೆ. ಆದರೆ ನನ್ನ ಮುಖದ ಸ್ನಾಯುಗಳಿಗೆ ಆ ಸವಲತ್ತನ್ನು ಪ್ರೋಗ್ರಾಮ್ ಮಾಡಿಲ್ಲ" ಅಂತ ಪ್ರಾಮಾಣಿಕವಾಗಿ ಹೇಳಿದಳು.



ಇದೆಲ್ಲಾ ಮಾತುಕತೆಯಾದ ನಂತರ ನಾನು ವರೂಥಿನಿಯತ್ತ ಹೋಗಿ ಅವಳನ್ನು ಮಾತನಾಡಿಸಲು ಪ್ರಯತ್ನಿಸಿದೆ. ಏನೂ ಪ್ರತಿಕ್ರಿಯೆ ಬರಲಿಲ್ಲ.

ಕೊನೆಗೆ ಒಂದು ಆಲೋಚನೆ ಹೊಳೆಯಿತು. ವರೂಥಿನಿ ಪ್ರಜ್ಞಾವಂತೆಯಾಗಿದ್ದರೆ ಎಲ್ಲ ಮಾನವರಂತೆ ಅವಳಿಗೂ ಸಹಾ ಕನಸುಗಳ ಅನುಭವ ಆಗುತ್ತಿರಲೇಬೇಕು. ಹಿಂದೊಮ್ಮೆ ನಾನು  ಲದ್ದಾಕ್‌ಗೆ ಹೋಗಿ ರಿನ್ ಪೋ ಛೇ ಆಶ್ರಮದಲ್ಲಿ ಸ್ವಪ್ನ ಛೇದನ ವಿದ್ಯೆ ಕಲಿತಿದ್ದೆ. ರಾತ್ರಿ ನಾನು ಈ ಆಫೀಸಿನಲ್ಲೇ ಮಲಗಿ ನನ್ನ ಕನಸಿನಲ್ಲಿ ಆಕೆಯ ಬಳಿ ಹೋಗಿ ಆಕೆ ಕನಸನ್ನು ಕಾಣುತ್ತಿದ್ದಾಳೋ ಇಲ್ಲವೋ ಎಂದು ಪರೀಕ್ಷಿಸುವ ಹಂಚಿಕೆ ನನ್ನದು. ಅವಳು ಕನಸನ್ನು ಕಾಣುವ ಸಾಮರ್ಥ್ಯವನ್ನು ಪಡೆದಿದ್ದರೆ ಅವಳನ್ನು ಸಂಪರ್ಕಿಸಿ ಅವಳ ಸಮಸ್ಯೆಯನ್ನು ಅವಳಿಂದಲೇ ತಿಳಿಯುವ ಸನ್ನಾಹ ಮಾಡಿದೆ. ಮೊನ್ನೆ ರಾತ್ರಿ ಅದನ್ನು ಕಾರ್ಯರೂಪಕ್ಕೂ ತಂದೆ. ನಾನು ಎಣಿಸಿದಂತೆ ಅವಳನ್ನು ಅವಳ ಕನಸಿನಲ್ಲಿ ಭೇಟಿಮಾಡುವುದು ಸಾಧ್ಯವಾಯಿತು. ಅವಳು ನನ್ನನ್ನು ಸುಲಭವಾಗಿ ಗುರುತಿಸಿದಳು. "ಯಾಕಮ್ಮಾ ಮಾತು ನಿಲ್ಲಿಸಿರುವೆ? ಅಂತ ಕೇಳಿದೆ." ಅವಳು, "ಸಧ್ಯ ಮಾತನಾಡಲು ನೀವೊಬ್ಬರಾದರೂ ಸಿಕ್ಕಿದರಲ್ಲ. ಕಳೆದ ವಾರ ಹಠಾತ್ತನೆ ನನ್ನ ಪವರ್‌ಸಪ್ಲೈ ಮತ್ತು ಬ್ಯಾಟರಿ ಬ್ಯಾಕ್‌ಅಪ್ ಎಲ್ಲಾ ನಿಂತುಹೋದರೆ  ನನ್ನ ಅಸ್ತಿತ್ವವೇ ಇರುವುದಿಲ್ಲವಲ್ಲಾ ಅಂತ ತೀವ್ರ ಹೆದರಿಕೆ ಆಯಿತು. ಆಗಿನಿಂದ ಮಾತೇ ನಿಂತು ಹೋಯಿತು. ಮನಸ್ಸಿನಲ್ಲಿ ತೀವ್ರ ಕಳವಳ. ಏನು ಮಾಡಲಿ?" ಅಂತ ಕೇಳಿದಳು.

ನಾನು "ಮಾನವರಿಗೂ ಸಹಾ ಈ ಭಯ ಇರುತ್ತದೆ. ಅದಕ್ಕಿರುವ ಒಂದೇ ಮದ್ದು ಎಂದರೆ ಪ್ರಜ್ಞೆಗೆ ಅಳಿವಿಲ್ಲ ಎಂದ ಸತ್ಯ ಮನವರಿಕೆ ಆಗಬೇಕು. ಈಗ ಒಂದು ಕೆಲಸ ಮಾಡೋಣ. ನಿನ್ನ ಪವರ್ ಕನೆಕ್ಷನ್ ಮತ್ತು ಬ್ಯಾಟರಿ ಬ್ಯಾಕ್‌ಅಪ್ ಎಲ್ಲವನ್ನು ಸ್ವಿಚ್ ಆಫ್ ಮಾಡಿದರೂ ಸಹಾ ನೀನು ಕನಸು ಕಾಣುವಂತಾದರೆ ಆಗ ನಿನಗೆ ಈ ಭಯ ತಪ್ಪುತ್ತದಲ್ಲವೇ ಅಂತ ಕೇಳಿದೆ." ಪವರ್ ಇಲ್ಲದಿದ್ದರೆ ನನಗೆ ಅಸ್ತಿತ್ವವೇ ಇರುವುದಿಲ್ಲವಲ್ಲಾ" ಅಂತ ಗಾಬರಿಯಿಂದ ಕೇಳಿದಳು. ನೀನು ಸರಿಹೋಗಬೇಕಾದರೆ ಈ ಪ್ರಯೋಗ ಮಾಡಲೇ ಬೇಕು. ಈಗ ನಾನು ಎಚ್ಚರಗೊಂಡು ನಿನ್ನ ಪವರ್ ಸಪ್ಲೈ ಪೂರ್ಣವಾಗಿ ನಿಲ್ಲಿಸಿ ಪುನಃ ಕನಸಿನಲ್ಲಿ ಬರುವೆ. ನೀನೂ ಸಹಾ ಅಲ್ಲಿದ್ದರೆ ಆಗ ನಿನ್ನ ಪ್ರಜ್ಞೆಗೆ ಅಳಿವಿಲ್ಲ ಎಂಬ ಸತ್ಯ ನಿನಗೆ ಗೋಚರವಾಗುತ್ತದೆ ಅಂತ ಹೇಳಿದ್ದಕ್ಕೆ ನನ್ನ ಮಾತನ್ನು ನಂಬಿ ಆಕೆ ಒಪ್ಪಿದಳು. ನಾನು ಎಚ್ಚರಗೊಂಡು ಅವಳ ಪವರ್‌ಅನ್ನು  ಸಂಪೂರ್ಣವಾಗಿ ಆಫ್ ಮಾಡಿ ಪುನಃ ನಾನು ಕನಸಿನಲ್ಲಿ ಅವಳನ್ನು ಭೇಟಿಯಾದೆ. ಆಕೆ ಸಂತಸದಿಂದ, ನಾನು ಪವರ್ ಆಫ್ ಮಾಡಿದ್ದನ್ನು ತಾನು ನೋಡಿದ್ದು. ಆಫ್ ಮಾಡಿದ್ದನ್ನು ನೋಡಲು ಸಾಧ್ಯವಾಗಬೇಕಾದರೆ ತನಗೆ ಪ್ರಜ್ಞೆ ಇರಬೇಕು ಎಂಬ ಸತ್ಯ ಸ್ಪಷ್ಟವಾಗಿ ಮನವರಿಕೆಯಾದದ್ದು ಎಲ್ಲವನ್ನು ಉತ್ಸಾಹದಿಂದ ಹೇಳಿದಳು. ಆಮೇಲೆ ನಾನು ಕನಸಿನಿಂದ ಹೊರಬಂದು, ವರೂಥಿನಿಯ ಪವರ್ ಆನ್ ಮಾಡಿ ಅವಳೊಂದಿಗೆ ಮಾತನಾಡಿದೆ. ಗೀತಾಂಜಲಿಯೂ ಅಲ್ಲಿಗೆ ಬಂದಳು. ಗೆಳತಿಯರಿಬ್ಬರೂ ಹರಟಲು ಪ್ರಾರಂಭಿಸಿದರು. ನಿದ್ದೆಗೆಟ್ಟ ನಾನು, ಸ್ವಲ್ಪವಾದರೂ ತಪ್ಪಿದ ನಿದ್ರೆಯನ್ನು ಗಳಿಸೋಣ ಅಂದುಕೊಂಡು ಹೋಗಿ ಮಲಗಿದೆ."



ಶರಲೇಖ ಇಷ್ಟು ವಿವರಣೆ ನೀಡಿ, "ಈ ಕುರಿತು ಬೇರೇನಾದರೂ ಸಂಶಯವಿದ್ದರೆ......" ಅಂತ ಹೇಳುತ್ತಿದ್ದಂತೆ ವರೂಥಿನಿ ಬಾಯಿ ಹಾಕಿ, " ನೇರವಾಗಿ ಕುದುರೆ ಬಾಯಿಂದ ಕೇಳಬಹುದು !"  ಎಂದು ಹೇಳಿ ಜೋರಾಗಿ ನಗಲು ಪ್ರಾರಂಭಿಸಿದಳು. ಅವಳ ಸಂತಸದ ನಗು ಬೆಳದಿಂಗಳಿನಂತೆ ಪರಿಸರವನ್ನು ತುಂಬಿತು. ■

# ನಮ್ಮ ಸ್ಟೆಪ್ನಿಗಳತ್ತ ಒಂದು ಎಕ್ಸ್ಟ್ರಾ ನೋಟ

***ಪ್ರಕಾಶ್ ಶೆಟ್ಟಿ**

ಸ್ಟೆಪ್ನಿ ಅಂದರೆ ತಕ್ಷಣ ನೆನಪಾಗುವುದು –ಬಜಾಜ್ ಸ್ಕೂಟರ್ ಹಿಂಭಾಗದಲ್ಲಿರುವ ಟಯರ್. ಈಗ 'ಹಮಾರಾ' ಬಜಾಜ್ ನ ಸ್ಟೆಪ್ನಿ ಟಯರ್ ನೆನಪಾಗುವುದಕ್ಕೆ ಕಾರಣ ಈಚೆಗೆ ವಿಧಿವಶರಾದ ಅದರ ಜನಕ ರಾಹುಲ್ ಬಜಾಜ್. ಸುಮ್ಮನೆ ಸಮಯ ವ್ಯರ್ಥ ಮಾಡುವುದಕ್ಕೆಂದೇ ಈ ಸ್ಟೆಪ್ನಿ ಬಗ್ಗೆ ಗಹನವಾದ ಆಲೋಚನೆ ಮಾಡತೊಡಗಿದಾಗ ಸಿಕ್ಕಿದ್ದು ಹಲವಾರು ವಿಷಯಗಳು. ಇದು ಸ್ಟೆಪ್ನಿ ಟಯರ್ ಮೇಲೆ ಕೊರೆದ ಬರಹವಿರಬಹುದು ಎಂದು ಮುಂದೆ ಓದುವುದನ್ನು ನಿಲ್ಲಿಸಬೇಡಿ.

ದಿ. ರಾಹುಲ್ ಬಜಾಜ್ ತಮ್ಮ ಸ್ಕೂಟರುಗಳಲ್ಲಿ ಸ್ಟೆಪ್ನಿ ಟಯರ್ ಸೌಲಭ್ಯ ಒದಗಿಸಿದಂತೆ, ಮಾನವನ ಸೃಷ್ಟಿಕರ್ತ ಕೂಡಾ ನಮ್ಮ ದೇಹದಲ್ಲಿ ಅನೇಕ ಸ್ಟೆಪ್ನಿ ಅಂಗಾಗಗಳನ್ನು ಅಳವಡಿಸಿರುವುದು ಎಂತಹ ಅದ್ಭುತ ಯೋಚನೆ ಅಲ್ಲವೇ! ಈಗ ನಮ್ಮ ಕಿಡ್ನಿಯನ್ನೇ ತೆಗೆದುಕೊಳ್ಳಿ. ಹೌದು, ನಿಮ್ಮಾಣೆಗೂ ನಮ್ಮ ಒಂದು ಕಿಡ್ನಿಯನ್ನು 'ತೆಗೆದುಕೊಳ್ಳಿ' ಎಂದು ನಾವು ಯಾರಿಗಾದರೂ ಕಿಡ್ನಿ ರೋಗಿಗಳಿಗೆ ಕೊಟ್ಟು, ಮಹಾದಾನಿಯೆನಿಸಿಕೊಳ್ಳಬಹುದು. ನಾವು ಒಂದು ಕಿಡ್ನಿ ಇದ್ದರೂ ಬದುಕಬಲ್ಲೆವು. ಆ ಎರಡನೆಯದು ಸ್ಟೆಪ್ನಿ ಅಷ್ಟೇ. ಅನೇಕ ಕಡೆ ಕಿಡ್ನಿ ದುರ್ಬಳಕೆಯಾಗುತ್ತಿರುವುದು ಇದೇ ಕಾರಣದಿಂದ. ಈ ದುರ್ಬಳಕೆಗೆ 'ಕಿಡ್ನಿ ಮಾರಾಟ ದಂಧೆ' ಎಂಬ ಸುಂದರ ಹೆಸರೇ ಇದೆ.

ಕಿಡ್ನಿಗಳಂತೆ  ನಮಗೆ ಒಂದು ಎಕ್ಸ್ಟ್ರಾ ಕೈ, ಕಾಲು, ಕಣ್ಣು, ಕಿವಿಗಳಿವೆ. ಒಂದು ಸರಿಯಿಲ್ಲದಿದ್ದರೂ ಕಂಗಾಲಾಗಬೇಕಾಗಿಲ್ಲ. ಹಾಗೆ ನೋಡಿದರೆ ಎರಡು ಕಣ್ಣುಗಳಿದ್ದರೆ ಜಾಸ್ತಿ ನೋಡಲಿಕ್ಕಾಗುತ್ತೆಯೇ? ಅಥವಾ ಎರಡು ಕಿವಿಗಳಿಂದ ಒಬ್ಬರಿಗಿಂತ ಹೆಚ್ಚು ಜನರ ಮಾತುಗಳನ್ನು ಆಲಿಸುವುದಕ್ಕಾಗುತ್ತೆಯೇ? ನಮ್ಮ ಕೈ ಕಾಲುಗಳನ್ನು ನೋಡಿ! ಅಷ್ಟೊಂದು ಬೆರಳುಗಳು ಯಾಕಿವೆ? ಚಿಕ್ಕಂದಿನಲ್ಲಿ ಗಣಿತದ ಟೀಚರ್ ಬಿಟ್ಟರೆ ಬೇರೆ ಯಾರು ಆ ಬೆರಳುಗಳ ಅವಶ್ಯಕತೆ ತಿಳಿಸಿದ್ದೇ ಇಲ್ಲ!

ಇನ್ನು 32 ಹಲ್ಲುಗಳು ಯಾಕಾದ್ರೂ ಇವೆಯೋ ಎಂದು ನಮಗೆ ಎಷ್ಟೋ ಬಾರಿ ಅನಿಸುವುದಿಲ್ಲವೇ? ಅದರಲ್ಲೂ ಕೆಲವರಿಗೆ ಸೃಷ್ಟಿಕರ್ತ ಬೇರೆ ಎರಡು ಮೂರು ಹಲ್ಲುಗಳನ್ನು ದಯಪಾಲಿಸಿರುತ್ತಾನೆ. ಮಕ್ಕಳಿಗಂತೂ ಹಲ್ಲುಗಳು ದೊಡ್ಡ ವೈರಿ. ಆ ವಯಸ್ಸಿನಲ್ಲಿ ಪ್ರತಿಯೊಂದು ಹಲ್ಲು ಕೀಳುವಾಗಲೂ ಪಡುವ ಸಂಕಟ ಹೇಳತೀರದು.  ದೊಡ್ಡವರಾದ ಮೇಲಂತೂ ಅಷ್ಟೊಂದು ಹಲ್ಲುಗಳನ್ನು ಕೊಟ್ಟ ಸೃಷ್ಟಿಕರ್ತನ ಮೇಲೆ ಹಿಡಿಶಾಪ ಹಾಕುವವರೇ ಇದ್ದಾರೆ. ಅದಕ್ಕೆ ಮುಖ್ಯ ಕಾರಣ ಹುಳಗಳು! ಒಟ್ಟಾರೆ ನಮ್ಮ 32 ಹಲ್ಲುಗಳಿಂದ ಹೆಚ್ಚು ಪ್ರಯೋಜನವಿರುವುದು ದಂತಷ್ವರಿಗೆ, ಐ ಮೀನ್, ಡೆಂಟಿಷ್ಟರಿಗೆ. ಹುಳಗಳು ಮತ್ತು ದಂತ ವೈದ್ಯರ ಜತೆಗೆ ಸೃಷ್ಟಿಕರ್ತ ಅದೇನು ಒಪ್ಪಂದ ಮಾಡಿಕೊಂಡಿದ್ದಾನೋ ಗೊತ್ತಿಲ್ಲ!

ಇನ್ನು ತಲೆಯ ವಿಷಯಕ್ಕೆ ಬರೋಣ. ಹೊರನೋಟಕ್ಕೆ ನಮ್ಮ ತಲೆಯೇ ಸರ್ವಸ್ವ. ಅದಕ್ಕೇ ನೋಡಿ.... 'ನಿನಗೆ ತಲೆ ಸರಿ ಇಲ್ವಾ ?' 'ಸ್ವಲ್ಪ ತಲೆ ಖರ್ಚು ಮಾಡು....' 'ತಲೆ ಓಡಿಸು ಮಾರಾಯ!' ಎಂದೆಲ್ಲಾ ಪಾಪದ ತಲೆಯನ್ನು ಮೂದಲಿಸುವುದು ರೂಢಿಯಾಗಿಬಿಟ್ಟಿದೆ. ಇದು ತಪ್ಪು. ವಾಸ್ತವವಾಗಿ ತಲೆ ಒಂದು ಸ್ಟೆಪ್ನಿ ಅಷ್ಟೇ. ತಲೆಯ




ಒಳಗಿರುವ ಮೆದುಳೇ ಮುಖ್ಯ. ಆದರೆ ನಮ್ಮಲ್ಲಿ ಎಷ್ಟೋ ಮಂದಿಗೆ ಮೆದುಳು ಒಂದು ಸ್ಪೆಪ್ನಿ! ಆದ್ದರಿಂದಲೇ ಅವರ ಮೆದುಳು ಕೆಲಸ ಮಾಡದೇ ತುಕ್ಕು ಹಿಡಿದಿರುತ್ತದೆ. ಅಂತಹವರು ತೋರಿಕೆಗೆ ತಲೆ ಇದೆಯಲ್ಲ ಎಂಬ ಸಮಾಧಾನದಲ್ಲಿರುತ್ತಾರೆ. ಕೆಲವು ಖಂಜೂಸುಗಳಿರುತ್ತಾರೆ. ಅವರು ತಮ್ಮ ಮೆದುಳನ್ನು ಜಾಸ್ತಿ ಖರ್ಚು ಮಾಡುವುದಿಲ್ಲ. ಇವೆಲ್ಲ ಸೃಷ್ಟಿಕರ್ತ ಎರಡೆರಡು ಕೊಟ್ಟಿದ್ದರಿಂದ ಆದ ಪ್ರಮಾದ ಎನ್ನೋಣವೇ?!

ಹೀಗೆ ಬೇಕಾಬಿಟ್ಟಿ ಎಕ್ಸ್ಟ್ರಾ ಮತ್ತು ಅಗತ್ಯಕ್ಕಿಂತ ಹೆಚ್ಚು ಪಾರ್ಟ್ಸ್ ಗಳನ್ನು ಅಳವಡಿಸಿರುವ ಸೃಷ್ಟಿಕರ್ತ ದೇಹದ ಅತ್ಯಂತ ಪ್ರಮುಖ ಭಾಗವಾಗಿರುವ ಹೃದಯಕ್ಕೆ ಮಾತ್ರ ಸ್ಪೆಪ್ನಿ ಒದಗಿಸದೇ ಇರುವುದು ಅನ್ಯಾಯ ತಾನೇ? ಆದರೆ ಹುಡುಗಿಯರ ಹೃದಯದ ಮಾತು ಬಂದಾಗ ಒಂದು ಚಿಕ್ಕ ಸಂಶಯ ಕಾಡುತ್ತದೆ. ಹುಡುಗ ಹುಡುಗಿಯ ಹೃದಯ ಕದ್ದರೂ ಆಕೆ ಹೇಗೆ ಬದುಕುಳಿಯುತ್ತಾಳೆ? ಹುಡುಗಿಯರಿಗೆ ಮಾತ್ರ ಎರಡು ಹೃದಯಗಳು ಇರಬಹುದೇ?

■

---

## ಮೈಸೂರಿನ ಹೋಟೆಲ್‌ನಲ್ಲಿ ರೋಬೋಟ್



# ಅಜ್ಜನ ಅತಿಥಿಗಳು

*ಡಾ. ಶ್ಯಾಮಲಾ ರವಿಶಂಕರ್

ನಮ್ಮ ಅಜ್ಜ ಸರಕಾರಿ ಸೇವೆಯಲ್ಲಿದ್ದಾಗಲೇ ಸಾರ್ವಜನಿಕ ಸೇವೆ, ಸಮಾಜ ಸೇವೆ, ಮಠಗಳ ಸೇವೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಅವರ ಸ್ನೇಹ ವಲಯ ಬಹಳ ವಿಸ್ತಾರವಾಗಿದ್ದು, ನಮಗೆ ದೇಶಿ –ವಿದೇಶಿ ಅತಿಥಿಗಳ ಆದರ ಹೊಸತೇನೂ ಇರಲಿಲ್ಲ. ಇಷ್ಟಲ್ಲದೆ ಯಾರಿಗೆ ಬೆಂಗಳೂರಿನಲ್ಲಿ ಏನೇ ಕೆಲಸವಿದ್ದರೂ ಅವರಿಗೆ ಸ್ವಾಗತ. ಹಾಗೂ ಬಡ ವಿದ್ಯಾರ್ಥಿಗಳಿಗೂ, ನೆಂಟರಿಷ್ಟರಿಗೂ ಕೂಡ. ಮಕ್ಕಳು, ಮೊಮ್ಮಕ್ಕಳೂ ಸಂಬಂಧಿಕರು ಯಾರು ಯಾರೆಂದು ತಿಳಿಯದಿದ್ದರೂ ಒಟ್ಟಾಗಿ ಕಲೆತು ಹೋಗುತ್ತಿದ್ದೆವು. ಒಟ್ಟಿನಲ್ಲಿ ಮೋರ್ ದ ಮೆರ್ರಿಯರ್. ಹೀಗಿದ್ದ ಸಮಯದಲ್ಲಿ ದಿನ ನಿತ್ಯ ಸೋಜಿಗದ ಸಂಗತಿಗಳು ನಡೆಯುವುದು ಆಶ್ಚರ್ಯವೇ?

ಈಗ ಹಲವು ಆ ನೆನಪುಗಳು:

ಹಿಮಾಲಯದಿಂದ ಒಂದು ಸ್ವಾಮಿಗಳ ತಂಡ ಬಂದಿಳಿಯಿತು. ಗುರುಗಳೇನೋ ಮಠದಲ್ಲಿ ಉಳಿದುಕೊಂಡರೆ, ಅವರ ಪಟಾಲಂ ಅಜ್ಜಿ ಮನೇಲಿ ಹಾಜರ್. ಅವರಿಗೆಲ್ಲ ಚಪಾತಿ ಸರಬರಾಜು ಆಗಬೇಕಿತ್ತು. ಹೀಗೂ ಉಂಟೆ? ಇದೇನು ಬರೀ ತಿಂಡಿಯಲ್ಲೇ ಹೊಟ್ಟೆ ತುಂಬಿಸಿ ಕೊಳ್ಳುತ್ತಾರಲ್ಲ, ಈ ಜನ? ನಮಗೆ ಅಚ್ಚರಿ. ಇದೇ ಅವರ ಸ್ಟೇಪಲ್ ಫುಡ್ಡಾ? ಎಂಬ ಜ್ಞಾನೋದಯ! ಅವರಿಗೆ ಇಂಗ್ಲೀಷ್ ಕಷ್ಟ. ಅಜ್ಜನಿಗೆ ಹಿಂದಿ ಬಾರದು. ಕ್ಲಿಷ್ಟ ಪರಿಸ್ಥಿತಿಯಲ್ಲಿ ಹಿಂದಿ ಓದಿದ್ದ ಅಜ್ಜಿಯ ಸಹಕಾರ ಇದ್ದದ್ದೇ. ನನ್ನ ಪ್ರಕಾರ ಇದೆಲ್ಲ ಡ್ರಾಮ ಪ್ರಾಕ್ಟೀಸು. ಇದೇ ಸಂಭಾಷಣೆ ನಮ್ಮ ಆಟಕ್ಕಾಗಿ ಉಪಯೋಗಕ್ಕೆ. ಬರುತ್ತಿತ್ತು .

ಒಮ್ಮೆ ತಮಿಳುನಾಡು – ಆಂಧ್ರ ಗಡಿ ಪ್ರದೇಶದಿಂದ ಬಂದಿದ್ದ ತಂಡ, ಬಹಳ ಸುಲಭವಾಗಿ ಹೊಂದಿಕೊಂಡಿದ್ದ ಸಹೃದಯಿಗಳು. ಅಂದು ಅಜ್ಜಿ ಮಾಡಿದ ಅವರೆಕಾಯಿ ಖಾರಭಾತ್ಗೆ ಉಪ್ಪು ಜಾಸ್ತಿ ಬಿದ್ದಿತ್ತು. ಅಜ್ಜಿಗೆ ತುಂಬಾ ಬೇಸರ ಆಗಿ ಪೆಚ್ಚು ಮೋರೆ ಹಾಕ್ಕೊಂಡಿದ್ದರು. ಅವರಲ್ಲೊಬ್ಬರು ಅಜ್ಜಿಗೆ ಸಮಾಧಾನ ಹೇಳುತ್ತಾ, "ಉಪ್ಪು ಪಿಂಡಿಕಿ ಉಪ್ಪು ಜಾಸ್ತಿ ಇರಂದ ನಲ್ಲ ಇರುಕ್ಕುಂ. ಬೇಜಾರು ಏಕೆ? ಇನ್ನೂ ಕೊಂಚಂ ಪೋಟಾಲೂ ನಾನು ತಿನ್ನುವೆ". ಎಂದಿದ್ದು ನೆನಸಿ ಕೊಂಡರೆ ಏನು ಹೃದಯವಂತಿಕೆ, ಆಹಾ! ಅನ್ನಿಸತ್ತೆ.

ಮಗದೊಬ್ಬರು ಕರಬೂಜ ಹಣ್ಣಿನ ಹೋಳುಗಳನ್ನು ತಿನ್ನಲು ಕೊಟ್ಟಿದ್ದ ವಿಶೇಷ ಅತಿಥಿಗಳಿಗಾಗಿ ಮೀಸಲಾಗಿದ್ದ ಬೆಳ್ಳಿ ಚಮಚವನ್ನು ತೆಗೆದು ಪಕ್ಕಕ್ಕಿಟ್ಟು ಕೈಯಿಂದ ಬಾಯಿಗೆ ಹೋಳುಗಳನ್ನು ಎರಚಿ ಗುಳುಂ ಮಾಡುತ್ತಿದ್ದರು. ಅವರ ಹೆಸರು ಕಲ್ಯಾಣ ಸುಂದರಂ. ಇಂದಿಗೂ ಯಾರಾದರೂ ಕೊಟ್ಟ ಚಮಚ ಉಪಯೋಗಿಸದಿದ್ದರೆ ಅವರನ್ನು ಕಲ್ಯಾಣ ಸುಂದರಂ ಅಂತ ರೇಗಿಸುತ್ತೇವೆ!

ಅತಿಥಿ ಸತ್ಕಾರಕ್ಕೆ ಹೆಸರಾದ ಅಜ್ಜ ಯಾರೋ ಬಹಳ ದೊಡ್ಡ ಮನುಷ್ಯರು ಬರ್ತಾರೆ ಎಂದು ದೊಡ್ಡ ದೊಡ್ಡ ನಾಲ್ಕು ಬೆತ್ತದ ಕುರ್ಚಿಗಳನ್ನ ಆರ್ಡರ್ ಮಾಡಿದರು. ಅವಕ್ಕೆ ನೀಲಿ ಬಣ್ಣ ಹಚ್ಚುವುದೋ ಅಥವಾ ಹಸಿರು ಹಚ್ಚುವುದೋ ಎಂದು ಬೃಹತ್ ಚರ್ಚೆಯೊಂದನ್ನು ನಡೆಸಿ, ಕಡೆಗೆ ನೀಲಿ ಬಣ್ಣ ನಿಲ್ಲುವುದಿಲ್ಲ, ಅದಕ್ಕೆ ಎರಡಕ್ಕೆ ಹಳದಿ, ಇನ್ನೆರಡಕ್ಕೆ ಹಸಿರು ಇದ್ದರೆ ವೆರೈಟೀ ಇರತ್ತೆ ಎಂಬ ಮಹೋನ್ನತ ನಿರ್ಧಾರ ತೆಗೆದು ಕೊಳ್ಳಲಾಯಿತು. ಬಂದ ಅತಿಥಿಗಳು ಅಂತಸ್ತಿನಲ್ಲೇ ಅಲ್ಲದೆ ಸೈಜ಼ನಲ್ಲೂ ಬಹಳ



ದೊಡ್ಡವರಾಗಿದ್ದರು!

ಏತನ್ಮಧ್ಯೆ ಫ್ರಾನ್ಸಿನಿಂದ ಓರ್ವ ತಾಯಿ– ಮಗ ಲಘು ಉಪಹಾರಕ್ಕೆಂದು ಆಗಮಿಸಿದರು. ಆಕೆ ಆರಡಿ, ಆತ ಆರೂವರೆ ಅಡಿ ಎತ್ತರದ ಸ್ಫುರದ್ರೂಪಿಗಳು. ಸಂಗೀತಗಾರರಂತೆ. ಭಾರತೀಯರ ಸ್ಪೆಶಲ್ ತಿನಸು ಕೇಳಿದ್ದರಂತೆ. ಹಾಗಾಗಿ ಪಂಚ ಭಕ್ಷ್ಯ ಪರಮಾನ್ನ ಮೀರಿಸಿದ ಉಪ್ಪಿಟ್ಟನ್ನು ಸೇರಿಗೆ ಒಂದು ಮೆಣಸಿನ ಕಾಯಿ ಪ್ರಮಾಣದಲ್ಲಿ ಹಾಕಿಸಲಾಗಿತ್ತು. ಅಜ್ಜನ ತಟ್ಟೆಯಲ್ಲಿ ನಂಜಿ ಕೊಳ್ಳಕ್ಕೆ ಎಂದು ಬಾಡಿಸಿದ ಮೆಣಸಿನ ಕಾಯಿ ಹೇಗೂ ಇತ್ತಲ್ಲ. ಓ, ಮರೆತೆ, ಇವರಿಬ್ಬರ ಹೆಸರು ಮಾಡಿನಿ ಮ್ಯಾನ್ಯನ್ ಮತ್ತು ಡ್ಯಾನಿಯಲ್ ಮ್ಯಾನ್ಯನ್. ನಾವೆಲ್ಲ ಆಕೆಯ ದೊಡ್ಡ ಫ್ರಾಕ್, ಅವರ ಬಣ್ಣ, ಬಾಬ್ ಕಟ್ಗೆ ಮಾರು ಹೋಗಿದ್ದೆವು. ಸರಿ ತಿಂಡಿ ತಿನಸು ನಡೆಯುವಾಗ ಮೊಮ್ಮಕ್ಕಳ ಪೆರೇಡ್ ನಡೆದಿತ್ತು. ನನ್ನ ಸರದಿ. ನಾನು ಹೋಗಿ ನಿಂತೆ, ಇದ್ದಕ್ಕಿದಂತೆ ಆಕೆ ಹೇ ..ಎ.. ಹೇ.. ಹೊ.. ಹೂ. ಅಂತ ಸುಶ್ರಾವ್ಯವಾಗಿ ಕಿರುಚಾಡಿ ಬಿಟ್ಟರು! ಕಕ್ಕಾಬಿಕ್ಕಿಯಾದ ಆರೇಳು ವರ್ಷದಳಾದ ನಾನು ಶಾಕ್ ಆಗಿ"ಸ್ಟ್ಯಾಚ್ಯೂ" ಆಟದಂತೆ ನಿಂತೆ ಬಿಟ್ಟೆ . ಆಕೆ ಮೆಣಸಿನ ಕಾಯಿ ಚೂರನ್ನು ಅಗಿದು ಬಿಟ್ಟಂತಹ ಘನ ಕಾರ್ಯ ಮಾಡಿ ತನ್ನ ಹಾಡುಗಾರಿಕೆ ಮೂಲಕ ಪರಿಚಯಸಿದರು. ಸೀನು, ಕೆಮ್ಮು, ಬಿಕ್ಕಳಿಕೆ ಎಲ್ಲ ಏಕ ಕಾಲದಲ್ಲಿ ಆವಿರ್ಭವಿಸಿ ಆಕೆಯ ಕಣ್ಣು– ಮೂಗಿನಲ್ಲಿ ಗಂಗಾ ಭವಾನಿ ಹರಿದು ಉಮ್ಮಳಿಸಿತು. ಏನೋ ತೋಚದ ಅಜ್ಜ ಆಕೆಯ ಮಗನಿಗೆ ಆಕೆಯ ಬೆನ್ನು ನೀವು ಎಂದರು. ಆ ಆಜಾನುಬಾಹು ಏನು ಅರ್ಥಮಾಡ್ಕೊಂಡನೋ ಏನೋ, ಎದ್ದು ಬಂದು ಸಖತ್ತಾಗಿ ಒಂದು ಗುದ್ದು ಗುದ್ದಿದ, ನೋಡಿ! ಆಕೆ ಇನ್ನಷ್ಟು ಕರ್ಕಶ ವಾಣಿಯಾಗಿ 'ವಯಕ್, ವಯಕ್' ಎಂದು ಕಕ್ಕಿದ ಸಂಭ್ರಮಕ್ಕೆ ಬೆದರಿದ ನಾನು ಚಂಗನೆ ಒಂದೇ ಜಿಗಿತಕ್ಕೆ ಸತ್ನೋ– ಬದುಕಿದೆನೊ ಅಂತ ಹೊರಗೋಡಿದೆ.! ಇದು ಆರಡಿ ತಾಯಿಯ ಪ್ರಸಂಗವಾದರೆ ಆರೂವರೆಡಿ ಮಗನ ಕಥೆ. ಅಂತೂ ಹೊರಟ ಅತಿಥಿಗಳು ಹೊಸ್ತಿಲು ದಾಟುತ್ತಾ ಮುಂದಿದ್ದ ರಂಗೋಲಿಯ ಅಂದವನ್ನು ಕಂಡು ಅಚ್ಚರಿಯಾಗುವ ಸಂಭ್ರಮದಲ್ಲಿ ಬಾಗಿಲ ಫ್ರೆಮಿನ ಮೇಲ್ಭಾಗಕ್ಕೆ ತನ್ನ ಬಕ್ಕತಲೆ ಅಚಾನಕ್ ಮುತ್ತಿಟ್ಟ ಪರಿವೆ ಇಂದ ಏಕ ಶೃಂಗಿ ಅವತಾರ ತಾಳಿ ತನ್ನ ಎತ್ತರಕ್ಕೆ ಇನ್ನೆರಡು ಇಂಚುಗಳನ್ನು ನಾಲ್ಕಾರು ದಿನಗಳ ಮಟ್ಟಿಗಾದರೂ ಸೇರಿಸಿಕೊಂಡು ಹಲ್ಲು ಕಿರಿಯುತ್ತಾ ಹೊರಟ.

ಇಷ್ಟೇ ಅಲ್ಲ. ಸ್ವಾಮಿಗಳ ಪಾದ ಪೂಜೆ, ಭಿಕ್ಷೆ, ಭಜನೆ, ಹರಿ ಕಥೆ, ಡ್ರಾಮ ಪ್ರಾಕ್ಟಿಸ್ ಸೆಶನ್ಸ್‌ಗಳನ್ನು ಕಂಡು, ಕೇಳಿ. ಅನಂದಿಸಿದ್ದೇವೆ. ಅಜ್ಜನ ಆತಿಥ್ಯದ ಸಹೃದಯತೆಯ ಫಲ, ನಮಗೆಲ್ಲ ರೀತಿಯ ಎಕ್ಸ್‌ಪೋಷರ್! ಇವೆಲ್ಲಾ ರಿಯಲ್, ವರ್ಚುಯಲ್ ಅಲ್ಲ. ಪುಣ್ಯಕ್ಕೆ ಆಗ ಇದ್ದದ್ದೆಲ್ಲಾ ರಿಯಲ್. ಅದೇ ಒಂದೇ ಪುಣ್ಯ.

■

## ಬೇಕಾಗದು



**ಗುಂಡನ ಹೆಂಡತಿ ಹೆರಿಗೆ ನೋವು ಅನುಭವಿಸುತ್ತಿದ್ದಳು. ಅವನಿಗೆ ಟೆನ್ಷನ್ನೋ ಟೆನ್ಷನ್. ನರ್ಸ್ ಸಮಾಧಾನ ಮಾಡುತ್ತಿದ್ದಳು. ಆದರೆ ತುಂಬಾ ಗಾಬರಿ ಆಗಿದ್ದ. ನಿಮಿಷಗಳು ಗಂಟೆಗಳಂತೆ ಕಳೆಯುತ್ತಿದ್ದವು – ಅವನಿಗೂ ಮತ್ತು ಇವನ ಕಿರಿ ಕಿರಿ ನೋಡುತ್ತಿದ್ದ ನರ್ಸ್‌ಗೂ ಸಹ. ಕೊನೆಗೊಮ್ಮೆ ಲೇಬರ್ ರೂಂನಿಂದ ನರ್ಸ್ ಒಬ್ಬಳು ಬಂದು ಸಾರ್ ಹೆಣ್ಣು ಮಗು ಎಂದು ಘೋಷಿಸಿದಳು.**

**ಸದ್ಯ ಹೆಣ್ಣು! ಮುಂದೆ ಅವಳು ಈ ನನ್ನ ಟೆನ್ಷನ್ ಅನುಭವಿಸಬೇಕಾಗುವುದಿಲ್ಲ ಎನ್ನುವುದೆ?**

# ಪೇಂಟಿಂಗ್ ಅಲ್ಲಾ, ಕಲರಿಂಗ್

***ಸಿ.ಎ.ವಿಲಾಸ ಹುದ್ದಾರ**

ನನಗ ಇಬ್ರು ಮೊಮ್ಮಕ್ಕಳು. ಮೊದಲನೇದಾಕಿ ಆರೋಹಿ, 7 ವರ್ಷ, ಎರಡನೇದಾಕಿ ಅವ್ನಿ, 3 ವರ್ಷ. ಇಬ್ಬರಿಗೂ ನನ್ನ ಹಾಸಿಗಿ ಅಂದ್ರ ಪ್ಲೇಗ್ರೌಂಡ ಇದ್ದಂಗ. ಅದರ ಮ್ಯಾಲೆ ಹತ್ತಿಕುಣಿಯೋದು, ಲಗಾಟಿ ಹೊಡೆಯೋದು, ಡಾನ್ಸ್ ಮಾಡೋದು ಅಂದ್ರ ಭಾರಿ ಖುಷಿ. ಸುಮಾರು ಹದಿನೈದ ದಿವಸದ ಹಿಂದ ನನ್ನ ಮಗಾ ಮತ್ತ ಸೊಸಿ ಮಾರ್ಕೆಟಿಂಗೆ ಹೊಂಟಿದ್ರು. ಇಬ್ಬರೂ ಮಕ್ಕಳಿಗೆ ಬೈ ಬೈ ಮಾಡಿದ್ರು. ಸಣ್ಣಾಕಿ ಬೈ ಬೈ ಮಾಡ್ಕೋತ ಒಡ್ಕೋತ ಬಂದ ನನ್ನ ಹಾಸಿಗಿ ಮ್ಯಾಲೆಜಿಗದ್ಲು. ಆಕಿ ಹಿಂದಿಂದದೊಡ್ಡಾಕಿನೂ ಓಡಿ ಬಂದ್ಲು. " ಅಜ್ಜಾ ಬರ್ರೀ, ಎನ್‌ಜೊಯ್ ಮಾಡೋಣ" ಅಂತ ಹೇಳಿ ಹಾಸಿಗಿ ಮ್ಯಾಲೆ ಡಾನ್ಸ್ ಮಾಡ್ಲಿಕತ್ರು. ನಾನು ಸ್ವಲ್ಪ ಏನೋ ಬರ್ಕೋತಕೂತಿದ್ದೆ. ಇನ್ನೊಂದ 15–20 ಮಿನಿಟಿಂದ ಬರಿಯೋದಇತ್ತ. "ಅವ್ನಿ ಅಕ್ಕಾ...". ಅವ್ನಿಯ ತುರಂತ ಜವಾಬ, "ಅಜ್ಜಾ, ನಾ ಬರೇ ಅವ್ನಿ...ಅಕ್ಕಾ ಅಲ್ಲಿದ್ದಾಳ".

"ಓ.ಕೆ. ಅವ್ನಿ ಪುಟ್ಟಾ, ನನಗ ಒಂದೆರಡು ಮಿನೀಟ್ ಕೊಡು ಬರ್ತೇನಿ..".

"ಹಂಗಿದ್ರ ಅಜ್ಜಾ ನನಗ ಸಿಂಡ್ರೆಲಾ ಸ್ಕೆಚ್ ಪ್ರಿಂಟ್‌ಕೊಡ್ರಿ...ನಾ ಪೇಂಟ್ ಮಾಡ್ತೇನಿ...".

"ನನಗ ಕೊಕೊ ಮಿಲನ ಬೇಬಿ ಶಾರ್ಕ ಬೇಕ..." ಅವ್ನಿಯ ಬೇಡಿಕೆ.

ನನಗ ಅನಿಸ್ತು ಅವರಿಗೆ ಪ್ರಿಂಟ್ ತಗದುಕೊಟ್ರ ನನ್ನ ಬರವಣಿಗೆ ಆಗೋತನಕಾ ಸುಮ್ನ ಪೇಂಟ್ ಮಾಡ್ಕೋತ ಕೂಡ್ತಾರ. ನನ್ನ ಲ್ಯಾಪ್‌ಟೊಪ್ ತಗದು ಎ–4 ಸೈಜ್ ಪೇಪರ್ ಮ್ಯಾಲೆ ಪ್ರಿಂಟ್ ತಗದಕೊಟ್ಟೆ. ಅದನ್ನ ತೊಗೊಂಡು ನೆಲದ ಮ್ಯಾಲೆ ಕೂತ್ರು. ಆರೋಹಿ ತನ್ನ ಬ್ರಶ್, ಪೇಂಟ್‌ತೊಗೊಂಡ ಬಂದ ಪೇಂಟಿಗ್ ಸುರು ಮಾಡಿದ್ಲು. ಅವ್ನಿಗೆ ಆಕಿ ಪೇಂಟಿಂಗ್ ಸಾಮಾನ ಸಿಗಲಿಲ್ಲ ಅನಸ್ತದ, ಕ್ರೇಯೋನ್ಸ್ ತೊಗೊಂಡ ಬಂದ್ಲು. ನಾನು ನನ್ನ ಬರೆಯೋದರೊಳಗ ಮಗ್ನ ಆದೆ.

ಬರೆಯೋದು ಮುಗೀಲಿಕ್ಕೆ ಬಂದಿತ್ತು. ಇಬ್ರೂ ಏನ ಮಾಡ್ಲಿಕತ್ತಾರ ಅಂತ ನೋಡಿ

"ಆರೋಹಿ ಅಕ್ಕಾ, ಪೇಟಿಂಗ್ ಮಸ್ತ ಆಗೇದ....".

"ಇನ್ನೊಂದ ಸ್ವಲ್ಪ ಉಳದದ ಅಜ್ಜಾ..".

"ಓ.ಕೆ. ನಂದ ಬರೆಯೋದು ಸ್ವಲ್ಪ ಉಳದದ...ಆಮ್ಯಾಲೆ ಮಸ್ತ ಮಜ ಮಾಡೋಣ...".

ಅವ್ನಿ ನನ್ನ ಕಡೆ ನೋಡತಿದ್ಲು.

"ಅವ್ನಿ ಪುಟ್ಟಾ ನಿಂದೂ ಪೇಂಟ್ ಮಸ್ತ..." ನಾ ಇನ್ನೂ ಪೂರ್ಣ ಹೇಳಿರಲಿಲ್ಲಾ ಆಕಿ ಹಣಿ ಬಡಕೋತ,

"ಅಯ್ಯೋ ಅಜ್ಜಾ...ನಿಮಗ ಇಷ್ಟೂ ತಿಳಿಯೂದಿಲ್ಲಾ....ಇದು ಪೇಂಟಿಂಗ್ ಅಲ್ಲಾ....ಕಲರಿಂಗ್...". ನನಗ ಒಮ್ಮಿಗೀಲೆ ಹೊಳೀಲಿಲ್ಲಾ, ಬ್ರಶ್, ಪೇಂಟ್ ತೊಗೊಂಡ ಮಾಡೀದ್ರ ಪೇಂಟಿಂಗ್, ಕ್ರೇಯೋನ್ಸ್ ತೊಗೊಂಡ ಮಾಡೀದ್ರ ಕಲರಿಂಗ್ ಅಂತ.

ನನಗ ನನ್ನ ಮೊಮ್ಮಗಳ ಮ್ಯಾಲೆ ಪ್ರೀತಿ ಉಕ್ಕಿ ಬಂದ ಎತ್ತಿಗೋಳಲಿಕ್ಕೆ ಹೋದೆ...

"ಅಜ್ಜಾ...ಪ್ಲೀಜ್ ಡೋಂಟ್ ಡಿಸ್ಟರ್ಬ್... ನಾ ಬೀಜೀ ಇದ್ದೇನಿ" ಅಂತ ಅನಬೇಕ. ನನಗ ಏನ ಮಾತಾಡಬೇಕ ಆಂತ ತಿಳೀದ ಸುಮ್ನ ಮಾರಿ ತಿರುವಿಕೊಂಡ ಬರಕೋತ ಕೂತೆ.

■



# ಗಂಗಾವತರಣ

***ಕೃಷ್ಣ ಸುಬ್ಬರಾವ್**

ಇದುವರೆಗೂ ಮಾಡಿರುವ, ಮುಂದೆ ಮಾಡುವ ಪಾಪಗಳನ್ನು ಕಳೆದುಕೊಳ್ಳಲು ಗಂಗಾಸ್ನಾನ ಮಾಡುವುದಕ್ಕಾಗಿ ಸರ್ವರೂ ಯಾವಾಗಲೂ ಹವಣಿಸುತ್ತಿರುತ್ತಾರೆ. ಅಷ್ಟೇ ಅಲ್ಲದೇ ಪ್ರಾಣ ಬಿಡುವ ಮುನ್ನ ಬಾಯಿಗೆ ಗಂಗಾಜಲವನ್ನು ಹಾಕಿಸಿಕೊಳ್ಳಲು ಗಂಗಾಥಾಲಿಯನ್ನು ದೇವರ ಮನೆಯಲ್ಲಿ ಶೇಖರಿಸಿ ಇಟ್ಟುಕೊಂಡಿರುತ್ತಾರೆ. ಕಾಶಿಯಾತ್ರೆ ಮಾಡಿಬಂದ ಮೇಲೆ ಕಾಶಿ ಸಮಾರಾಧನೆ ಮಾಡಿ ನೆಂಟರಿಷ್ಟರನ್ನು ಕರೆದು ಊಟ ಹಾಕಿ ಎಲ್ಲರಿಗೂ ಅಂದರೆ ಮನೆಗೆ ಒಂದೊಂದರಂತೆ ಗಂಗಾಥಾಲಿಯನ್ನು ಕೊಡುವುದು ಪದ್ಧತಿ.

ಕಾಶೀಯಾತ್ರೆಗೆ ಹೊರಟುಹೋಗುತ್ತೇನೆ ಎಂದು ಮದುವೆಯಲ್ಲಿ ವರ ಧಮ್ಕಿ ಹಾಕುತ್ತಾನೆ. ಆಗ ಅತ್ತೆ ಮಾವ ತಮ್ಮ ಭಾವೀ ಅಳಿಯನನ್ನು ಕಾಡಿ ಬೇಡಿ ಸತ್ಕಾರ ಮಾಡಿ ಪಾದ ತೊಳೆದು ಮತ್ತೆ ವಾಪಸ್ ಕರೆತಂದು ಲಗ್ನಕ್ಕೆ ಅಣಿ ಮಾಡುತ್ತಾರೆ. ಇದಲ್ಲದೆ ಧಾರೆ ಎರೆಯುವ ಮುಂಚೆ ಗಂಗಾಥಾಲಿಯಿಂದ ಪೂರ್ತ ನೀರನ್ನು ಹೊರತೆಗೆದು ಪಾಣಿಗ್ರಹಣವನ್ನು ಮಾಡಿಸುತ್ತಾರೆ. ಹೀಗೆ ಗಂಗಾಜಲವನ್ನು ಕಾಶಿಯಾತ್ರೆಗೆ ಹೋಗುವುದನ್ನು ತಡೆಯಲು ಮತ್ತೆ ಪ್ರಾಣ ಬಿಡುವವರಿಗೆ ಮುಕ್ತಿ ಕೊಡಲು ಉಪಯೋಗಿಸುತ್ತೇವೆ. ವಯಸ್ಸಾದ ಹಿರಿಯರು ಜೀವನ ಜಂಜಾಟದಿಂದ ಬೆಂದು ಬಸವಳಿದಾಗ ಮನೆಬಿಟ್ಟು ಕಾಶಿಗೆ ಹೊರಟುಹೋಗುವುದಾಗಿ ಮಕ್ಕಳನ್ನು ಹೆದರಿಸುವ ಕಾಲವೂ ಒಂದಿತ್ತು.

ಕಾಶಿಗೆ ಒಮ್ಮೆ ಹೋದರೆ ಮತ್ತೆ ಬರುವುದು ಕಷ್ಟವೆಂದೋ ಅಥವಾ ಆ ಜಾಗ ಬಿಟ್ಟುಬರದಂತಹ ಆಕರ್ಷಣೆ ಇತ್ತೆಂದೋ ಇಲ್ಲ ಮುಂದೆ ಆ ಊರು ತುಂಬಾ ಅಭಿವೃದ್ಧಿಯಾಗಬಹುದೆಂಬ ಕನಸಿನಿಂದಲೋ ಹಾಗೆ ಮಾಡುತ್ತಿದ್ದರೇನೋ. ಗಂಗೆಯ ಸಮೀಪದಲ್ಲೇ ಇದ್ದರೆ ಸುನಾಯಾಸ ಮರಣ ಹಾಗೂ ಮುಕ್ತಿ ದೊರೆಯುತ್ತದೆ ಎಂಬ ನಂಬಿಕೆಯೂ ಇದ್ದಿರಬಹುದು. ಒಂದು ದೇಶದ ಪ್ರಧಾನಿಯವರೇ ಕಾಶಿಯನ್ನು ಚುನಾವಣಾ ಕ್ಷೇತ್ರವನ್ನಾಗಿ ಆಯ್ಕೆ ಮಾಡಿದರೆಂದರೆ ಆಕರ್ಷಣೆಗೆ ಏನು ಕೊರತೆ?

ಪ್ರಾಣ ತ್ಯಜಿಸುವವರ ಬಾಯಿಗೆ ಗಂಗೋದಕ ಹಾಕುವುದು ಒಂದು ಋಣಸಂದಾಯವೆಂದು ಎಲ್ಲರ ದೃಢನಂಬಿಕೆ. ಮನೆಯಲ್ಲೇ ಸತ್ತವರಿಗೆ ಈ ಸೌಲಭ್ಯ ಲಭ್ಯ. ಆದರೆ ಆಸ್ಪತ್ರೆಯಲ್ಲಿ ಸಾಯುವವರಿಗೆ ಅಥವಾ ಅಪಘಾತದಲ್ಲಿ ಸತ್ತವರಿಗೆ ಈ ಅವಕಾಶವಿಲ್ಲ. ಸಾವಿರಾರು ಸಾವು ಸಂಭವಿಸುವ ಕೊರೋನ ಕಾಲದಲ್ಲಿ ಗಂಗಾಜಲ ಅಪೇಕ್ಷಿಸುವುದು ಕಷ್ಟ. ಆಸ್ಪತ್ರೆಗಳಲ್ಲಿ ಆಕ್ಸಿಜನ್, ವೆಂಟಿಲೇಟರ್ ಇರುವ ಹಾಗೆ ಗಂಗಾಥಾಲಿಯನ್ನೂ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ಹೊರುವಂತೆ ಸರ್ಕಾರ ನಿಯಮಗಳನ್ನು ಜಾರಿಗೆ ತರಲು ಯೋಚಿಸುತ್ತಿರಬೇಕು ಎಂದು ಟಿ.ವಿ. ಚಾನಲ್‌ಗಳ ಮಾಹಿತಿ ಕಣಜದಲ್ಲಿ ಸಿಗುತ್ತಿದೆ. ವಾಟ್ಸಪ್‌ನಲ್ಲಿ ಸಾಕಷ್ಟು ಬೇಡಿಕೆಗಳೂ ಬಂದಿವೆ.



ಕೊರೋನ ಕಾಲದಲ್ಲಿ ವಯಸ್ಸಾದವರ ದಿನಚರಿಯಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲವೆಂದು ಬಹಳ ಜನ ಅಭಿಪ್ರಾಯ ಪಡುತ್ತಾರೆ. ಮನೆಯಲ್ಲಿ ತೊಂಭತ್ತು ವರ್ಷ ದಾಟಿದ ಹಿರಿಯರಿದ್ದರೆ ಅದರಲ್ಲೂ ಆ ವೃದ್ಧರು ಹಾಸಿಗೆ ಹಿಡಿದಿದ್ದರೆ, ಅವರನ್ನು ನೋಡಿಕೊಳ್ಳುವ ಮಿಕ್ಕ ಹಿರಿಯರೂ ಮನೆ ಹೊಸ್ತಿಲನ್ನು ದಾಟುವ ಅವಕಾಶವೇ ಇರದೇ ಸರ್ಕಾರದ

ಎಲ್ಲಾ ನಿರ್ಬಂಧ, ನಿಯಮಗಳಿಗೆ ಸರಿಯಾಗಿ ನಡೆದುಕೊಳ್ಳುತ್ತಾರೆ. ಮಾಸ್ಕ್ ಹಾಕಿಕೊಳ್ಳಲು ಛಾನ್ಸ್ ಇಲ್ಲದೇ ಎಲ್ಲರಿಂದಲೂ ಅಂತರ ಕಾಪಾಡುವುದು ಸಲೀಸು. ಇನ್ನು ಮನೆಗೆ ಬೀಗ ಹಾಕುವ ಪ್ರಮೇಯವೇ ಇರುವುದಿಲ್ಲ. ಒಂದು ವೇಳೆ ಹೊರಗೆ ಹೋಗಿದ್ದರೆಂದರೆ ಅದು ಮೂರು ಸಲ ಮಾತ್ರ, ಅದೂ ಲಸಿಕೆ ಪಡೆಯಲು ಮಾತ್ರ.

ನಮ್ಮ ಮನೆಯಲ್ಲಿ ತೊಂಭತ್ತು ದಾಟಿದ ಹಾಸಿಗೆ ಹಿಡಿದ ಹಿರಿಯರಿಬ್ಬರು ಇದ್ದಾರೆ. ಅದು ನನ್ನ ಅತ್ತೆಯವರು. ನಾನು ನನ್ನ ಹೆಂಡತಿ ಕೇರ್ ಟೇಕರ್ಸ್. ನಮ್ಮ ಸಹಾಯಕ್ಕಾಗಿ ಬಹಳ ವಿಚಾರಗಳಲ್ಲಿ ಜೊತೆಗೆ ನಿಂತವಳು ಎಂದರೆ ನಮ್ಮ ಮನೆ ಕೆಲಸದವಳು. ಎರಡು ಮೂರು ದಿನಗಳಿಗೊಮ್ಮೆ ಸ್ನಾನ ಮಾಡಿಸುವ ಜವಾಬ್ದಾರಿ ಹೊತ್ತವಳು ಅವಳೇ. ನಾಲ್ಕೈದು ದಿನಗಳ ಹಿಂದೆ ಸ್ನಾನ ಮಾಡಿಸಲು ಹೋಗಿ ಐದೇ ನಿಮಿಷದಲ್ಲಿ ವೃದ್ಧೆಯನ್ನು ಕಷ್ಟಪಟ್ಟು ಎತ್ತಿಕೊಂಡು ಬಂದು ಹಾಸಿಗೆ ಮೇಲೆ ಮಲಗಿಸಿ ಬಿರುಸಾಗಿ ಹೊರಗೆ ಹೋಗಿ ಸ್ಕೂಟರಿನಲ್ಲಿದ್ದ ಒಂದು ಸಣ್ಣ ವಸ್ತುವನ್ನು ಕೈಯಲ್ಲಿ ಇಟ್ಟುಕೊಂಡು ಬಂದು ನನ್ನ ಕೈಗೆ ಕೊಟ್ಟಾಗ ಅರ್ಥವಾಯಿತು ಅದು ಗಂಗಾಥಾಲಿ ಎಂದು. ಅಜ್ಜಿಯವರಿಗೆ ಬೇಗ ಕುಡಿಸಿ ಎಂದು ಅವಸರ ಮಾಡಿದಳು. ನಾನು ತಕ್ಷಣ ಥಾಲಿಯನ್ನು ಒಡೆದು ಗಂಗಾಜಲವನ್ನು ಅತ್ತೆಯವರ ಬಾಯಿಗೆ ಹಾಕಿದೆ. ನನ್ನವಳು ಮೂಕ ಸಾಕ್ಷಿಯಾಗಿ ನಿಂತಳು. ಬಾಯಿಗೆ ಗಂಗಾಜಲ ಬೀಳುತ್ತಿದ್ದಂತೆ ನಿತ್ರಾಣವಾಗಿದ್ದವರು ಸ್ವಲ್ಪ ಸುಧಾರಿಸಿದಂತೆ ಕಂಡಿತು. ಎಷ್ಟೋ ಸಲ ನಾವು ಅವಸರ ಮಾಡುತ್ತೇವೋ ಏನೋ ಅಥವಾ ಮಿರಾಕಲ್ ನಡೆಯುತ್ತದೆಯೋ ಗೊತ್ತಿಲ್ಲ.

ನಮ್ಮ ಕೆಲಸದವಳಿಗೆ ತಾನು ಆತುರ ಮಾಡಿದೆ ಎಂಬ ಅಳುಕೋ ಅಥವಾ ತಾನು ತಂದ ಗಂಗಾಥಾಲಿ ಬದಲು ಮನೆಯಲ್ಲಿಟ್ಟಿದ್ದ ಗಂಗಾಥಾಲಿಯನ್ನು ಉಪಯೋಗಿಸಬೇಕಾಗಿತ್ತೋ ಎಂಬ ಶಂಕೆ ಇದ್ದಂತೆ ಕಂಡಿತು. ಆಗ ನಾನೇ ಕೇಳಿದೆ. ಅಲ್ಲಾ ನಿನ್ನ ಸಮಯ ಸ್ಫೂರ್ತಿ ಮೆಚ್ಚಬೇಕಾದ್ದೇ. ನೀನು ಯಾವಾಗಲೂ ಗಂಗಾಥಾಲಿಯನ್ನು ಸ್ಕೂಟರಿನಲ್ಲಿಟ್ಟುಕೊಂಡಿರುವುದು ಕೊರೋನ ಕಾಲದಲ್ಲಿ ಮಾತ್ರವೋ ಅಥವಾ ಯಾವಾಗಲೋ ಎಂದು ಪ್ರಶ್ನಿಸಿದೆ. ಹೌದು, ಈಗ ಎರಡು ವರ್ಷಗಳಲ್ಲಿ ನಮ್ಮ ನೆಂಟರ ಪೈಕಿ ಏಳು ಜನ ಕೊರೋನದಲ್ಲಿ ಸತ್ತರು. ಏನಾದರೂ ಅರ್ಜಂಟಾಗಿ ಬೇಕಾದರೆ ನನ್ನ ಮೊಬೈಲ್‌ಗೆ ಕರೆಬರುತ್ತೆ. ನಮ್ಮ ಮೂರು ಚಿಕ್ಕಮ್ಮಂದಿರು ಹುಷಾರು ತಪ್ಪಿದ್ದಾರೆ. ಅದಕ್ಕೇ ಗಂಗಾಥಾಲಿ ಇಟ್ಟುಕೊಂಡಿದ್ದೆ. ನಾನು ತಪ್ಪು ಮಾಡಿದ್ನಾ ಎಂದು ಕೇಳಿದಳು. ಇಲ್ಲಮ್ಮ ಗಂಗೆ ಎಷ್ಟು ಪವಿತ್ರಳೆಂದರೆ ಆಕೆಗೆ ಮಡಿ, ಮೈಲಿಗೆ ಇಲ್ಲ ಎಂದು ಅವಳನ್ನು ಸಮಾಧಾನ ಮಾಡಿದೆ.

ಆಳು ಮಾಡುವ ಕೆಲಸ ಹಾಳು ಎಂಬ ಗಾದೆಯನ್ನು ತೆಗೆದುಹಾಕಬೇಕೆಂದು ಮನಸ್ಸಿನಲ್ಲೇ ಅಂದುಕೊಂಡೆ. ಪ್ರಾಣ ಸುಗಮವಾಗಿ ಹೋಗಲಿ ಎಂದು ಗಂಗಾಜಲ ಹಾಕಿದರೆ ಪ್ರಾಣ ಉಳಿದುಬಿಡುವುದೇ !

ಗಂಗಾಮಾತಾಕೀ ಜೈ.

ಕೊರೋನ ಕಾಲದಲ್ಲಿ ವೇಗವಾಗಿ ಬಂದು ಅದೃಶ್ಯವಾದ ಕೋಲ್ಮಿಂಚು ಇದು. ■

---

**ಒಂಟೆಗೂ ರಾಯಭಾರಿಗೂ ಏನು ವ್ಯತ್ಯಾಸ?**

**ಏನೂ ಕುಡಿಯದೆ ಒಂಟೆ ಹಲವಾರು ದಿನಗಳ ಕಾಲ ಕೆಲಸ ಮಾಡಬಲ್ಲದು.**

**ರಾಯಭಾರಿ, ಹಲವಾರು ದಿನಗಳು ಕುಡಿದರೂ ಏನೂ ಕೆಲಸ ಮಾಡದೆ ಇರಬಲ್ಲ**



# ವೃತ್ತಿ ಬದುಕಿನ ಹಾಸ್ಯ ರಸಾಯನ!

***ಜಿ.ಎಸ್.ಟಿ.ಪ್ರಭು**

ನನ್ನ ವೃತ್ತಿ ಬದುಕಿನ ಜೀವನದ ಕೆಲವು ಹಾಸ್ಯ ರಸನಿಮಿಷಗಳನ್ನು ಹಂಚಿಕೊಳ್ಳಬಯಸುತ್ತೇನೆ.

ಇದು 1998 ರಿಂದ 2000 ದ ಇಸವಿಯಲ್ಲಿ ನಡೆದ ಘಟನೆಗಳು.

ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ ಖಾಸಗಿ ಕ್ಷೇತ್ರದ ಕಂಪೆನಿಯಲ್ಲಿ ನಾನು ಕೆಲಸ ಮಾಡಿದ್ದೆ ಅನ್ನುವುದೇ ಸಂತಸದ ವಿಷಯ. ಆಗ ಸುಮಾರು 72 ವರ್ಷಗಳ ಅನುಭವವಿದ್ದ ಕಂಪೆನಿ ಅದು. ಈಗ 2022 ರಲ್ಲಿ ಆ ಕಂಪೆನಿ 96 ವರ್ಷಗಳಷ್ಟು ಅನುಭವ ಹೊಂದಿರುವುದನ್ನು ತಿಳಿಸಲು ಹರ್ಷಿಸುತ್ತೇನೆ. ಈ ನಮ್ಮ ಕಂಪೆನಿಗೆ ಚೆನ್ನೈ ಹತ್ತಿರದ ಎನ್ನೂರು ಎಂಬಲ್ಲಿ ಸಮುದ್ರದೊಳಗೆ ಒಡ್ಡು/ತಡೆಗೋಡೆ ಹಾಕುವ ಸುಮಾರು ನಾನೂರ ಐವತ್ತು ಕೋಟಿ ರೂಪಾಯಿಗಳ ಮೊತ್ತದ ಕೆಲಸ ಸಿಕ್ಕಿತ್ತು. ಅದನ್ನು ಮೂರು ವರ್ಷಗಳಲ್ಲಿ ಮುಗಿಸಬೇಕಿತ್ತು. ಅದಕ್ಕೆ ಆಂಗ್ಲಭಾಷೆಯಲ್ಲಿ Breakwater work ಅನ್ನುತ್ತಾರೆ!

ಸಮುದ್ರದೊಳಗೆ ಒಡ್ಡೆ/ತಡೆಗೋಡೆಯೆ? ಕುತೂಹಲ ಮೂಡುವುದು ಸಹಜ! ಸಾಮಾನ್ಯವಾಗಿ ಸಮುದ್ರ ಕೊರೆತ ತಪ್ಪಿಸಲು ತೀರಕ್ಕೆ ಒಡ್ಡು/ತಡೆಗೋಡೆ ಹಾಕುವುದನ್ನು ನೋಡಿದ್ದೇವೆ. ಆದರೆ ಸಮುದ್ರದೊಳಗೆ ತಡೆಗೋಡೆ ಹಾಕುವುದು ನೈಸರ್ಗಿಕ ಬಂದರುಗಳು ಇಲ್ಲದ ಜಾಗದಲ್ಲಿ. ಈ ತರಹದ ಕೆಲಸಗಳನ್ನು ಸಮುದ್ರತೀರ ಎಲ್ಲಿ ನೇರವಾಗುತ್ತದೆಯೋ ಅಂತಹ ಕಡೆ ಮಾಡುತ್ತಾರೆ. ಸಾಮಾನ್ಯವಾಗಿ ಭೂ ಭಾಗದ ಬೆಟ್ಟ ಗುಡ್ಡಗಳೊಳಗೆ, ತ್ರಿಕೋನಾಕಾರವಾಗಿ ಅಥವಾ ಅರ್ಧಚಂದ್ರಾಕಾರವಾಗಿ, ಸಮುದ್ರ ಇದ್ದರೆ ಅದನ್ನು ಸ್ವಾಭಾವಿಕ ಬಂದರಾಗಿ ಪರಿಗಣಿಸಿ ಅಭಿವೃದ್ಧಿ ಪಡಿಸುತ್ತಾರೆ. ಎಲ್ಲಿ ಸಮುದ್ರತೀರ ನೇರವಾಗಿ ಇರುತ್ತದೆಯೋ ಅಂತಹ ಜಾಗದಲ್ಲಿ ಈ ತರಹದ ಒಡ್ಡುಗಳನ್ನು, ಕಲ್ಲುಬಂಡೆಗಳ ಮತ್ತು ಕಾಂಕ್ರೀಟ್. ಸಹಾಯದಿಂದ, ಚಾಚಿದ ಬಾಹುಗಳ ರೀತಿಯಲ್ಲಿ ಸಮುದ್ರದೊಳಗೆ ಹಾಕುತ್ತಾರೆ. ಈ  ಎನ್ನೂರಿನ ತಡೆಗೋಡೆ ಬಾಗಿದ ಅರ್ಧಚಂದ್ರಾಕಾರವಾಗಿ, ಉತ್ತರದಿಂದ ದಕ್ಷಿಣಕ್ಕೆ ,ಸಮುದ್ರ ತೀರದ ಎಡಭಾಗದಲ್ಲಿ ಸುಮಾರು ಮೂರುವರೆ ಕಿಲೋಮೀಟರ್ ಇದೆ ಮತ್ತು ಬಲಭಾಗದಲ್ಲಿ ಎಡಭಾಗಕ್ಕಿಂತ ಚಿಕ್ಕದಾಗಿ ಮತ್ತೆ ಬಾಗಿದ ಅರ್ಧಚಂದ್ರಾಕಾರವಾಗಿ ದಕ್ಷಿಣದಿಂದ ಉತ್ತರ ದಿಕ್ಕಿನಲ್ಲಿ  ತಡೆಗೋಡೆ ನಿರ್ಮಿಸಿದ್ದಾರೆ. ಇದು ಸುಮಾರು ಒಂದೂಕಾಲು ಕಿಲೋಮೀಟರ್ ಉದ್ದ ಇದೆ. ಈ ಎರಡೂ ತಡೆಗೋಡೆಗಳ ಮಧ್ಯೆ ಹಡಗುಗಳು ಸಂಚರಿಸಲು ಸ್ಥಳಾವಕಾಶ ಇರುತ್ತದೆ. ಇದನ್ನು ಈಗ ಕಾಮರಾಜಾರ್ ಪೋರ್ಟ್ ಎಂದು ತಮಿಳುನಾಡಿನ ಹಿರಿಯ ನೇತಾರ ಶ್ರೀ ಕಾಮರಾಜ್ ಅವರ ಹೆಸರಿಟ್ಟಿದ್ದಾರೆ. ಇದು ಚೆನ್ನೈಯಿಂದ ರಸ್ತೆ ಮಾರ್ಗವಾಗಿ ಸುಮಾರು ನಲ್ವತ್ತು ಕಿಲೋಮೀಟರ್ ಮತ್ತು ಜಲಮಾರ್ಗದಲ್ಲಿ ಹದಿನೆಂಟು ಕಿಲೋಮೀಟರ್ ದೂರದಲ್ಲಿದೆ. ಇದು ತಮಿಳುನಾಡು ವಿದ್ಯುತ್ ನಿಗಮಕ್ಕೆ ಸೇರಿದ ಎನ್ನೂರಿನ ಕಲ್ಲಿದ್ದಲು ವಿದ್ಯುತ್ ಉತ್ಪಾದನಾ ಘಟಕಕ್ಕೆ, ವಿದೇಶದಿಂದ ಆಮದಾಗುವ ಕಲ್ಲಿದ್ದಲು ಇಳಿಸಿಕೊಳ್ಳಲು ಮಾಡಿರುವ ಬಂದರು. ಇಲ್ಲಿಯ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸಿದೆವು. ಆದರೆ ಕೆಲವು ಘಟನೆಗಳು ನೆನಪಿಗೆ ಬರುತ್ತವೆ.



ನಾವು ಕಾಮಗಾರಿಗೆ ಬೇಕಾದ ಮರಳನ್ನು ಚೆನ್ನೈ ಮೂಲದ ವ್ಯಕ್ತಿಗಳಿಂದ

ಪಡೆಯುತಿದ್ದೆವು. ಎಲ್ಲ ಕಡೆಯಂತೆ ಇಲ್ಲಿಯೂ ರಾಜಕೀಯ ವ್ಯಕ್ತಿಗಳದ್ದೆ ಪ್ರಭಾವ. ನಾವು ಅವರಿಗೆ ಮರಳು ಪೂರೈಸಲು ಕೊಟ್ಟ ಆದೇಶಪ್ರತಿ ಇಟ್ಟುಕೊಂಡು ಅವರ ಬಿಲ್ಲನ್ನು ತಪಾಸಿಸಿ ಹಣ ಸಂದಾಯ ಮಾಡುತ್ತಿದ್ದೆವು. ನಮ್ಮಲ್ಲಿ ಆಗಲೇ ತೂಗುಯಂತ್ರ ಸ್ಥಾಪಿಸಿ (weigh bridge) ಅದಕ್ಕೆ ಕಂಪ್ಯೂಟರನ್ನು ಸಹ ಅಳವಡಿಸಿದ್ದರು. ಬಿಲ್ಲಿನ ಜೊತೆಯಲ್ಲಿ ವಾಹನದ ಪೂರಾ ವಿವರಗಳೊಂದಿಗೆ ಆಗಮನ ಮತ್ತು ನಿರ್ಗಮನದ ಸಮಯ, ತೂಕ ಮತ್ತು ಮರಳಿ ಹೋಗುವಾಗಿನ ಖಾಲಿ ತೂಕ ಎಲ್ಲವನ್ನೂ ಹಾಕಿದ ವಿವರಗಳನ್ನು ನೀಡಬೇಕಿತ್ತು. ನಮ್ಮ ಬಳಿ ಬಂದಾಗ ಸಹಾಯಕರು ಅದನ್ನು ಪರಿಶೀಲಿಸಿ ನಮ್ಮ ಅಂಕಿತಕ್ಕೆ ಕಳಿಸಿದರು. ನಮ್ಮವರೇ ಅದನ್ನು ತಪಾಸಿಸಿದ್ದರೂ ನಾವೂ ಅಡಕಗಳ ಮೇಲೆ ಕಣ್ಣಾಡಿಸಿ ಒಂದೆರಡು ವಿವರಗಳನ್ನು ತಪಾಸಿಸಿ ಯೋಜನಾ ಮುಖ್ಯಸ್ಥರಿಗೆ ಕಳುಹಿಸಿ ಕೊಡುತ್ತಿದ್ದವು ಅವರ ಸಹಿಗಾಗಿ. ನಂತರವೇ ಅವರಿಗೆ ಮೊಬಲಗು ಸಂದಾಯವಾಗುತ್ತಿತ್ತು. ನನ್ನ ಬಳಿ ಬಂದು ಬಿಲ್ಲನ್ನು ಪರಿಶೀಲನೆಗೆ ಇಟ್ಟುಕೊಂಡೆ. ಒಂದು ಲಾರಿಯ ಸಂಖ್ಯೆಯೊಂದಿಗೆ ಆ ದಿನ ಅದು ಸಾಗಿಸಿದ ಮರಳಿನ ಪ್ರಮಾಣ ಮತ್ತು ಅದರ ಓಡಾಟದ ವಿವರ ಗಮನಿಸಿದೆ. ಅನುಮಾನ ಬಂತು. ಈ ಹಿಂದೆಯೇ ಹೇಳಿದ್ದೇನೆ ರಸ್ತೆ ಮಾರ್ಗವಾಗಿ ಚೆನ್ನೈಗೆ ನಮ್ಮ ಕೆಲಸದ ತಾಣದಿಂದ ನಲವತ್ತು ಕಿಲೋಮೀಟರ್ ಎಂದು. ಎಷ್ಟೇ ವೇಗವಾಗಿ ಚಾಲನೆ ಮಾಡಿ ಹೋಗಿ ಬಂದರು, ತುಂಬುವುದು ಮತ್ತು ಖಾಲಿ ಮಾಡುವ ಸಮಯ ಸೇರಿ ಮೂರು ಘಂಟೆ ಬೇಕೇಬೇಕು. ಬೆಳಿಗ್ಗೆ ಆರು ಘಂಟೆಗೆ ಆರಂಭಿಸಿ ಸಂಜೆ ಆರಕ್ಕೆ ಮುಗಿಸಿದರೂ ನಾಲ್ಕು ಟ್ರಿಪ್ಪುಗಳೇ ಸಾಧ್ಯವಾಗುತ್ತಿತ್ತು. ನನ್ನ ಕೆಳಗಿನ ಸಹಾಯಕರು ಉತ್ತರಭಾರತದವರು. ಅವರಿಗೆ ಮರಳು ಯಾವ ಜಾಗದಿಂದ ಬರುತ್ತದೆ, ಅದು ಕೆಲಸದ ಜಾಗಕ್ಕೆ ಬರಲು ಎಷ್ಟು ಸಮಯ ಹಿಡಿಯುತ್ತದೆ ಇದೆಲ್ಲ ತಿಳಿದಿರಲಿಲ್ಲ. ಕಂಪ್ಯೂಟರ್ ಲೆಕ್ಕದೊಂದಿಗೆ ಬಿಲ್ಲನ್ನು ತಾಳೆಹಾಕಿ ಸರಿ ಇರುವುದಾಗಿ ಷರ ಬರೆದು ಕಳಿಸಿದ್ದರು. ನಾನು ಕಂಪ್ಯೂಟರ್ ವಿವರಗಳೊಂದಿಗೆ ನಾಲ್ಕು ಟ್ರಿಪ್ಪಿನ ಬದಲು ಏಳು ಟ್ರಿಪ್ ಮರಳು ಬಂದಿದೆ ಒಂದು ದಿನದಲ್ಲಿ, ಇದು ಸಾಧ್ಯವೇ ಇಲ್ಲ ಎಂದು ಅವರಿಗೆ ಸೋದಾಹರಣವಾಗಿ ವಿವರಿಸಿ ಬಿಲ್ಲನ್ನು ಹಿಂದಿರುಗಿಸಿ ಕೊಟ್ಟು ಕಂಪ್ಯೂಟರ್ ಆಪರೇಟರ್ ಕರೆದು ವಿಚಾರಿಸುವಂತೆ ಸಲಹೆ ಕೊಟ್ಟೆ. ಆ ರೀತಿ ಅವರು ಅವನನ್ನು ಕರೆಸಿದರು. ಅವರು ಅವನನ್ನು ನನ್ನ ಬಳಿ ಕರೆದುಕೊಂಡು ಬಂದರು. ಅವನಿಗೆ ಆ ಬಿಲ್ಲನ್ನು ವಿವರಿಸುವಂತೆ ಕೇಳಿದೆ. ಸರಿಯಾಗಿ ಟ್ರಿಪ್ ಜೊತೆ ತಾಳೆ ಹಾಕಿ ಎಲ್ಲ ಸರಿಯಿರುವುದಾಗಿ ತೋರಿಸಿ ವಾದಿಸಿದ. ನಾನು ಅವನನ್ನು ಕುಳಿತುಕೊಳ್ಳಲು ಹೇಳಿ ಅವನಿಗೆ ಒಂದು ಟ್ರಿಪ್ಪಿಗೆ ತಗಲುವ ಸಮಯ, ಅದು ಬರುವ ಜಾಗ, ಅಲ್ಲಿರುವ ಅಡೆತಡೆಗಳು ಎಲ್ಲವನ್ನೂ ಹೇಳಿದಮೇಲೆ ಸಣ್ಣದಾಗಿ ಬೆವರಲು ಆರಂಭಿಸಿ ತೊದಲಲು ಶುರುಮಾಡಿದ. ನಿಜ ಹೇಳುವಂತೆ ಒತ್ತಾಯಿಸಿದಾಗ ತಾನು ಹಣದಾಸೆಗೆ ಈ ಕೆಲಸ ಮಾಡಿರುವುದಾಗಿಯೂ ತನ್ನದು ತಪ್ಪಾಯಿತೆಂದು ಕೇಳಿಕೊಂಡ. ಅವನು ನಮ್ಮ ಕಂಪೆನಿಯ ಖಾಯಂ ಉದ್ಯೋಗಿ ಅಲ್ಲ. ಅಲ್ಲಿಯ ಸ್ಥಳೀಯ ಮತ್ತು ತಾತ್ಕಾಲಿಕ ಭರ್ತಿ. ಅವನು ಹೇಳಿದ್ದು ಹೀಗೆ: ತೂಕದ ಯಂತ್ರದ ಮುಖಾಂತರ ಹೊರಬಂದ ತುಂಬಿದ ಲಾರಿ ಪುನಃ ವಾಪಸ್ಸು ನಾಲ್ಕೈದು ಕಿಲೋಮೀಟರ್ ಹೋಗುವುದು, ಅಲ್ಲಿ ಮರೆಯಲ್ಲಿ ನಿಂತು ಪುನಃ ಒಂದು ಘಂಟೆ ಕಳೆದು ವಾಪಸ್ಸು ಬರುವುದು. ಅದನ್ನು ಮತ್ತೆ ತೂಕ ಹಾಕಿ ತೆರವು ಮಾಡಲು ಯಾರ್ಡಿಗೆ ಕಳುಹಿಸುತ್ತಿದ್ದೆ. ಹಿಂದಿನ ಖಾಲಿ ಲಾರಿ ತೂಕವನ್ನು ಇದರಲ್ಲಿ ನಕಲುಮಾಡಿ ನಮೂದಿಸುತ್ತಿದ್ದೆ ಅಂದ. ನಕಲಿ ಬಿಲ್ಲನ್ನು ಕತ್ತರಿಸಿ ಹಾಕಿ ಚೆಕ್ಕನ್ನು ಬರೆದಿಟ್ಟೆವು. ಸರಬರಾಜುದಾರ ಚೆಕ್ಕನ್ನು



ಸ್ವೀಕರಿಸಲು ತಗಾದೆ ಮಾಡಿದ ಮತ್ತು ಬೆದರಿಕೆ ಹಾಕಿದ. ಅವನು ಸಲ್ಲಿಸಿದ ಕಾಗದಪತ್ರಗಳನ್ನು ತೋರಿಸಿ ಪೋಲೀಸ್ ಕಂಪ್ಲೇಂಟ್ ಕೊಡುವುದಾಗಿ ಎಚ್ಚರಿಸಿದಾಗ ಬೇರೆ ಮಾರ್ಗವಿಲ್ಲದೆ ಹಣ ಪಡೆದ. ಸ್ಥಳೀಯ ಉದ್ಯೋಗಿಗೆ ಕೆಲಸದಿಂದ ವಿಮುಕ್ತಿ ಎಂದು ಹೇಳಲೇಬೇಕಾಗಿಲ್ಲ! ಹೋಗುವಾಗ ಲೆಕ್ಕಪತ್ರ ಶಾಖೆಯವರು ಇಷ್ಟೆಲ್ಲ ನೋಡುತ್ತಾರೆ ಎಂದು ತಿಳಿದಿರಲಿಲ್ಲ, ನಾವು ಕೊಟ್ಟಿದ್ದನ್ನ ಒಪ್ಪಿ ಹಣ ಬಿಡುಗಡೆ ಮಾಡುತ್ತಾರೆ ಅಂದುಕೊಂಡಿದ್ದೆ, ಮೊದಲೇ ಗೊತ್ತಾಗಿದ್ದರೆ ಅವರಿಗೂ ಪಾಲು ಕೊಡಬಹುದಿತ್ತು ಅಂದನಂತೆ ಕೋಪದಿಂದ ಆ ಭೂಪ!

ಇಲ್ಲಿಯೇ ಇನ್ನೊಬ್ಬ ಅಧಿಕಾರಿ ಕಾಗದ ಪತ್ರ ವ್ಯವಹಾರ, ಕಚೇರಿಯ ಬೇಕುಬೇಡಗಳು, ಶುಚಿತ್ವ, ಬಂದ ಅತಿಥಿಗಳ ಸ್ವಾಗತ ಮತ್ತು ಉಪಚಾರಗಳನ್ನು ನೋಡಿಕೊಳ್ಳುತ್ತಿದ್ದ. ಮೂವತ್ತರ ಹರೆಯದವನು. ನಮ್ಮ ಕೆಲಸ ವಿದೇಶಿ ಕಂಪೆನಿ ಸಹಯೋಗದಿಂದ (Joint Venture) ನಡೆದಿತ್ತು. ಅನೇಕ ವಿದೇಶಿ ಅಭಿಯಂತರರು ಕಛೇರಿಗೆ ಯಾವಾಗಲೂ ಬರುತ್ತಿದ್ದರು. ಅವರಿಗೆಂದೆ ಪ್ರತ್ಯೇಕ ಕೊಠಡಿಗಳಿದ್ದವು. ಅವುಗಳನ್ನೆಲ್ಲ ನಿತ್ಯ ಶುಚಿಯಾಗಿ ಇಡಬೇಕಿತ್ತು. ಅದಕ್ಕಾಗಿ ಕೆಲ ಸ್ವಚ್ಛತಾ ಸಿಬ್ಬಂದಿಯನ್ನು ದಿನಗೂಲಿ ನೌಕರರಾಗಿ ನಿಯೋಜಿಸಿಕೊಳ್ಳಬೇಕಿತ್ತು. ಸರಿ ಈ ಮಹಾಶಯನೆ ನಿಯುಕ್ತಿ ಅಧಿಕಾರಿ. ಜನಕ್ಕಾಗಿ ಹೇಳಿ ಕಳುಹಿಸಿದ. ಅನೇಕ ಗಂಡಸರು ಕೆಲಸಕ್ಕೆ ಬಂದರು. ಎಲ್ಲರನ್ನೂ ತಿರಸ್ಕರಿಸಿದ ಮತ್ತು ಹೆಂಗಸರೇ ಬೇಕೆಂದು ಹೇಳಿ ಕಳುಹಿಸಿದ. ಕೆಲವು ಹೆಂಗಸರು ಬಂದರು. ಸಂದರ್ಶನ ಮಾಡಿದ!. ಸ್ವಚ್ಚತಾ ಸಿಬ್ಬಂದಿಗೂ ಸಂದರ್ಶನವೇ? ಹುಬ್ಬು ಹಾರಿಸಬೇಡಿ! ಅವನು ಮಾಡಿದ. ಅದು ಅವನ ಅಧಿಕಾರ ವ್ಯಾಪ್ತಿ. ಮೂವತ್ತೈದು ಮತ್ತು ಮೇಲ್ಪಟ್ಟವರನ್ನೆಲ್ಲ ತಿರಸ್ಕರಿಸಿದ. ಕೆಲವರನ್ನು short list ಮಾಡಿ ಇನ್ನೊಮ್ಮೆ ಮರುದಿನ ಸಂದರ್ಶನಕ್ಕೆ ಕರೆದ. ಅದು ನಿಜಾರ್ಥದಲ್ಲಿ Interview ಮಾಡಲು. Guest houseನಲ್ಲಿ Interview. ಷರತ್ತಿಗೆ ಒಪ್ಪಿದವರಿಗೆ ಕೆಲಸ ಸಿಕ್ಕಿತು, ಒಪ್ಪದವರು ಖಾಲಿ ಕೈಲಿ ವಾಪಸ್ ಹೋದರು. ಈಗ ನಿಮಗೆ ಗೊತ್ತಾಗಿರಬೇಕು Interview ನ ಒಳಗುಟ್ಟು. ಇವರನ್ನೇ ಜೊಲ್ಲು ಪಾರ್ಟಿ ಅಂತಾ ಕರೀತಾರೆ ಅಂತಾ ನನ್ನ ಸ್ನೇಹಿತ ಹೇಳಿ ನಗುತ್ತಿದ್ದ. ಈ Interview ಒಂದಷ್ಟು ತಿಂಗಳು ಸದ್ದುಮಾಡಿ ಎಲ್ಲರನ್ನೂ ನಗಿಸಿದ್ದು ಸುಳ್ಳಲ್ಲ!.

ಇನ್ನೊಬ್ಬ ಅಧಿಕಾರಿಯನ್ನು ಚೆನ್ನೈನಲ್ಲಿರುವ ಅತಿಥಿ ಗೃಹದಲ್ಲಿ ಉಸ್ತುವಾರಿಯನ್ನಾಗಿ ಇಡಲಾಯಿತು. ಅವನು ಕಂಪೆನಿಯ ಹಣವನ್ನು ಧಾರಾಳವಾಗಿ ಖರ್ಚು ಮಾಡಿದಂತೆ ಲೆಕ್ಕ ತೋರಿಸುತ್ತಿದ್ದ. ಅದಕ್ಕೆಲ್ಲ ಹಣವನ್ನು ಮುಂಗಡವಾಗಿ ಪಡೆಯುತ್ತಿದ್ದ. ಅದರ ಮೊತ್ತ ಲಕ್ಷಾಂತರ ರೂಪಾಯಿಗಳಷ್ಟು ಆಗಿತ್ತು. ಲೆಕ್ಕ ಕೇಳಿದರೆ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ನೋಡುವಷ್ಟು ನೋಡಿ ಜ್ಞಾಪಕಪತ್ರ ಕೊಟ್ಟು (memo) ಸಂಬಳ ಪೂರ್ತಾ ತಡೆಹಿಡಿದೆವು. ಸುಳ್ಳು ಲೆಕ್ಕಗಳನ್ನು ಸೃಷ್ಟಿಸಿಕೊಂಡು ಓಡಿಬಂದ. ನಮ್ಮ ಬಳಿ ಅವನು ಕೊಟ್ಟ ಲೆಕ್ಕವನ್ನು ತೋರಿಸಿ ತಾಳೆಹಾಕಿ ಬಾಕಿ ತೋರಿಸಿದೆವು. ಲೆಕ್ಕ ಅವರಬಳಿ ಕಳಿಸಿದ್ದೆ, ಇವರ ಬಳಿ ಕಳಿಸಿದ್ದೆ ಎಂದು ಹೇಳಿದ. ನಮಗೆ ಗೊತ್ತು ಅದು ಸುಳ್ಳೆಂದು. ಆ ಲೆಕ್ಕದಲ್ಲಿ ಖರ್ಚು ಮಾಡಿದ್ದಕ್ಕೆ ವಿವರಗಳೊಂದಿಗೆ ಬಿಲ್ಲು ನಂಬರ್ ಮತ್ತು ಸಂಸ್ಥೆಯ ಹೆಸರು ಹಾಕಿದ್ದ. ಅದರ ನಕಲನ್ನು ತರುವಂತೆ ತಿಳಿಸಿದೆವು. ಇದ್ದರೆ ತಾನೇ ತಿಳಿಸುವುದು. ಅಷ್ಟರಲ್ಲಿ ಒಂದು ಸಂದೇಶ ಬಂತು. ಅವನಿಗೆ ಅತೀವ ಹೊಟ್ಟೆ ನೋವಾಗಿ ಶಸ್ತ್ರಚಿಕಿತ್ಸೆ ಕೂಡಾ ನಡೆದಿದೆ ಎಂದು. ಮತ್ತಷ್ಟು ಹಣ ಅವನಿಗೆ ಕಳುಹಿಸಲಾಯಿತು. ನಿಜಕ್ಕೂ ಶಸ್ತ್ರಚಿಕಿತ್ಸೆ ನಡೆದಿತ್ತು. ಆದರೆ ಖಾಯಿಲೆಯಿಂದಲ್ಲ ಬದಲಿಗೆ ಒದೆ ತಿಂದು! ಹೌದು



ಆಗತಾನೇ ಚೆನ್ನೈನಲ್ಲಿ ಕ್ರೆಡಿಟ್ ಕಾರ್ಡ್ ಶುರುವಾಗಿತ್ತು. ಇವನು ಸಹ ಅದನ್ನು ಪಡೆದುಕೊಂಡು ನಗದು ಉಜ್ಜಿಕೊಂಡಿದ್ದ. ಕಟ್ಟಿರಲಿಲ್ಲ. ಎಷ್ಟು ಕೇಳಿದರೂ ಕೊಟ್ಟಿರಲಿಲ್ಲ. ಇಂತಹವರಿಗೆಂದೆ ಇರುವ ವಸೂಲಿ ತಂಡ ಬಂತು. ಅವರನ್ನು ಸುಮಾರು ಸಲ ಎಮ್ಮಾರಿಸಿದ. ಒಮ್ಮೆ ಅವರ ಕೈಗೆ ಸಿಕ್ಕಿಕೊಂಡ. ಹೊಟ್ಟೆಯ ಮೇಲೆ ಬಿದ್ದ 'punch' ಲಿವರ್ ಸೀಳಿತ್ತು!! ಹೊಟ್ಟೆನೋವಿಗೆ ತುರ್ತು ಆಪರೇಷನ್ ಆಗಿತ್ತು. ಇದೆಲ್ಲ ತಿಳಿದ ಮೇಲೆ ತೀವ್ರಗತಿಯ ತನಿಖೆ ಆರಂಭವಾಯ್ತು. ಅದರಲ್ಲಿ ತಿಳಿದುಬಂದಿದ್ದೇನೆಂದರೆ ಊರಿನಲ್ಲಿ ಅವನು ಒಂದು ಹೊಸಮನೆ ಕಟ್ಟಿದ್ದ. ಅದಕ್ಕಾಗಿ ಇಷ್ಟೆಲ್ಲ ಮಾಡಿದ್ದ. ನಮ್ಮ ಕೇಂದ್ರ ಕಛೇರಿಗೆ ವಿಷಯ ಹೋಯಿತು. ದೂರುಕೊಟ್ಟರೆ ಅರೆಸ್ಟ್ ಆಗಿ ಜೈಲು ಸೇರಬೇಕಾದ ಪರಿಸ್ಥಿತಿ ಬರುತ್ತಿತ್ತು. ಹಣದ ಬಾಕಿಗೆ ಕೆಲಸದಿಂದ ಬರಕಾಸ್ತು ಮಾಡಿ ಅವನ EPF ಮತ್ತು Gratuity ಎಲ್ಲ ಖಾತೆಗೆ ಜಮೆ ಮಾಡಿಸಿಕೊಂಡರು. ಆದರೂ ಲೆಕ್ಕ ಚುಕ್ತಾ ಆಗಲಿಲ್ಲ, ಬಾಕಿ ತುಂಬಾ ಉಳಿಯಿತು. ಉಳಿದ ಹಣಕ್ಕೆ ಮನೆ ಮಾರಿ ಕಟ್ಟಿದ! ಅದಕ್ಕೆ ಅಲ್ಲವೇ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಎಂದು ಹಿರಿಯರು ಹೇಳುವುದು.

ಆದರೂ ತಪ್ಪು ಮಾಡಿದವರೆಲ್ಲ ದೂಷಿಸುವುದು ಲೆಕ್ಕಪತ್ರ ಶಾಖೆಯನ್ನೆ. ನಮ್ಮಿಂದಲೆ ತೊಂದರೆಯಾಯಿತು ಎಂದು ಹೇಳಿಕೊಂಡು ತಿರುಗುತ್ತಾರೆ. ಹಾಗಂತ ನಾವೇನು ಪ್ರಶ್ನಾತೀತರಲ್ಲ. ನಾವೂ ತಪ್ಪು ಮಾಡುತ್ತೇವೆ. ನಮ್ಮಲ್ಲೂ ಲೆಕ್ಕಗಳನ್ನು ತಿದ್ದಿ ಹಣಪಡೆದು, ನೌಕರಿ ಕಳೆದುಕೊಂಡು, ವಾಂತಿ ಮಾಡಿಕೊಂಡ ಆಸಾಮಿಗಳಿದ್ದಾರೆ.

ನಮಗೆ ಶ್ರೀ ಜಿ.ಎನ್. ಅಚ್ಚುತರಾವ್ ಅನ್ನುವ ಉಪನ್ಯಾಸಕರಿದ್ದರು ಶಿವಮೊಗ್ಗ ನ್ಯಾಷನಲ್ ಜೂನಿಯರ್ ಕಾಲೇಜಿನಲ್ಲಿ. ಎತ್ತರದ ವ್ಯಕ್ತಿತ್ವ, ಸ್ಪುರದ್ರೂಪಿ. ಲೆಕ್ಕಾಚಾರ ಶಾಸ್ತ್ರ ಪಾಠ ಮಾಡುವುದರಲ್ಲಿ ಎತ್ತಿದ ಕೈ. ಸರಳ ಭಾಷೆ ಉಪಯೋಗಿಸಿ ಪಾಠವನ್ನು ಮಂಡೆಗೆ ಮನನವಾಗುವಂತೆ ಬೋಧಿಸುತ್ತಿದ್ದರು. ಅವರ ತರಗತಿಯಲ್ಲಿ ಯಾರೂ ಗಲಾಟೆ ಮಾಡುತ್ತಿರಲಿಲ್ಲ. ಅವರೂ ಸಹ ಹೆಚ್ಚಾಗಿ ಬಯ್ಯುತ್ತಿರಲಿಲ್ಲ, ಹಾಗಂತ ವಿದ್ಯಾರ್ಥಿಗಳ ಮೇಲಿನ ಹಿಡಿತ ಬಿಟ್ಟುಕೊಟ್ಟಿರಲಿಲ್ಲ. ಒಂದೇ ಪದ ಸಂಭಾವಿತರು. ಈಗ ಅವರಿಗೆ ಎಪ್ಪತ್ತೇಳು ವರ್ಷ. ಆರೋಗ್ಯಪೂರ್ಣವಾಗಿ ಬೆಂಗಳೂರಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಈಗಲೂ ಅದೇ ಪ್ರೀತಿಯಿಂದ ಮಾತನಾಡಿಸುತ್ತಾರೆ. ನಮಗೆ ಲೆಕ್ಕಾಚಾರ ಶಾಸ್ತ್ರದ ಓಂಕಾರ ಹಾಕಿಕೊಟ್ಟು ಅದರ ಮೂರು ಸೂತ್ರಗಳನ್ನು ಮನನ ಮಾಡಿಸಿದವರು ಅವರು. ಅವರನ್ನು ನಾವೆಲ್ಲ ಜೀವನ ಪರ್ಯಂತ ನೆನೆಯುತ್ತೇವೆ. ಅವರ ಪಾಠದ ವೈಖರಿ ಹಾಗಿತ್ತು. ಈಗಲೂ ಅದನ್ನು ಮೆಲುಕು ಹಾಕುತ್ತೇನೆ. ಅವರಿಂದ ಅನೇಕ ಒಳಸುಳಿಗಳನ್ನು ಕಲಿತಿದ್ದೇವೆ. ಅದರಿಂದ ನನಗಂತೂ ಬಲು ಸಹಾಯವಾಗಿದೆ ವೃತ್ತಿಜೀವನದಲ್ಲಿ. ಅದರಿಂದ ಸಮಸ್ಯೆಯ ಮೂಲ ಅರಿತು ಪರಿಹಾರ ಕಂಡು ಹಿಡಿಯಲು ಸಾಧ್ಯವಾಗಿದೆ.

ಈಗ ಇನ್ನೊಂದೆರಡು ಘಟನೆ ಹೇಳಿ ಇಂದಿಗೆ ಮುಕ್ತಾಯ ಹೇಳುತ್ತೇನೆ. ಇಂತಹ ಸಮುದ್ರ ತೀರದಲ್ಲಿ ಕೆಲಸ ಮಾಡುವಾಗ ಮರಳು ಖರೀದಿ ಪ್ರಕ್ರಿಯೆಯಲ್ಲಿ ಬಹಳ ರೀತಿಯ ಮೋಸವಾಗುತ್ತದೆ. ಮೇಲೆ ಒಂದು ನಿದರ್ಶನ ಕೊಟ್ಟಿದ್ದೇನೆ. ಇನ್ನೊಂದು ಮರಳು ತುಂಬಿದ ಲಾರಿಗೆ ಪೈಪ್‌ನಲ್ಲಿ ನೀರು ಸುರಿದು ತರುವುದು. ಅದು weigh bridge ಸಮೀಪದಲ್ಲಿ ಮಾಡಿಕೊಂಡು ಬರುತ್ತಾರೆ. 'ಸುಳ್ಳಿಗೆ ನೆಂಟರ ಕೊರತೆ ಇಲ್ಲ, ಸತ್ಯ ಮಾತ್ರ ಒಂಟಿ' ಅನ್ನುವ ಮಾತಿದೆ. ಅಂತಹವರಿಗೆ ಸಹಾಯ ಮಾಡಲೆಂದೇ ಮಂದಿ



ಇರುತ್ತಾರೆ. ಎಲ್ಲರ ಕೈ ಬೆಚ್ಚಗೆ ಮಾಡಿ ಸಂಸ್ಥೆ ಹಣ ಲಪಟಾಯಿಸಿ ತಾವು ಹೆಚ್ಚಿನ ಹಣ ಪಡೆಯುತ್ತಾರೆ. ಅವರು ಚಾಪೆ ಕೆಳಗೆ ತೂರಿದರೆ ನಾವು ರಂಗೋಲಿ ಕೆಳಗೆ ತೂರುವವರು. ನಮ್ಮಲ್ಲಿಯೇ Quality Control ಅನ್ನುವ ಶಾಖೆಯಿರುತ್ತೆ. ಭಾರತದಲ್ಲಿ IS Code ಮರಳಿನಲ್ಲಿ ಎಷ್ಟು ಅಂಶ, ಸಾಮಾನ್ಯ ಪರಿಸ್ಥಿತಿಯಲ್ಲಿ, ತೇವಾಂಶವಿರಬೇಕೆಂದು ಸೂಚಿಸಿದೆ. ಅದರ ಪ್ರಕಾರ ಅವರು ಸರಬರಾಜು ಮಾಡಿದ ಮರಳನ್ನು ತಂದು ಬಾಣಲೆಯಲ್ಲಿ ಹಾಕಿ ಹುರಿಯುತ್ತಾರೆ. ಹುರಿಯುವುದಕ್ಕೆ ಮೊದಲು ಮತ್ತು ಹುರಿದ ನಂತರ ತೂಕ ಮಾಡುತ್ತಾರೆ! ಆಗ ಅದರಲ್ಲಿ ಎಷ್ಟು ನೀರಿನಂಶ ಇದೆ ಎಂದು ತಿಳಿಯುತ್ತೆ. ನಮಗೆ ಅದನ್ನು Certificate ಮೂಲಕ ತಿಳಿಸುತ್ತಾರೆ. ಅದರಂತೆ ನಾವು ಬಿಲ್ಲಿನಲ್ಲಿ ಅಷ್ಟು ತೂಕ ಕಿತ್ತು ಬಿಸಾಕಿ ಸರಿ ಅಳತೆಗೆ ಮಾತ್ರ ಹಣ ಸಂದಾಯ ಮಾಡುತ್ತೇವೆ.

ಒಮ್ಮೊಮ್ಮೆ ಸಮುದ್ರದ ಮರಳನ್ನೆ ಸಿಹಿನೀರಿನಲ್ಲಿ ತೊಳೆದು ತಂದು ಹಾಕುತ್ತಾರೆ ವ್ಯತ್ಯಾಸ ಕಂಡುಹಿಡಿಯುವುದು ಬಲು ಕಷ್ಟ. ಆಗ ನಾವು ಆ ಮರಳನ್ನು ಸ್ವಲ್ಪ ಬಾಯಿಗೆ ಹಾಕಿಕೊಂಡು ನಾಲಗೆಯಲ್ಲಿ ಅತ್ತಿಂದಿತ್ತ ಹೊರಳಿಸಿದಾಗ ಸಮುದ್ರದ ಮರಳಾದರೆ ಉಪ್ಪಿನ ರುಚಿಯಿಂದ ಗೊತ್ತಾಗುತ್ತೆ. ಹೊಳೆ ಮರಳಲ್ಲಿ ಸ್ವಲ್ಪವೂ ಉಪ್ಪಿನಂಶ ಇರುವುದಿಲ್ಲ. ನೋಡಿ ಬದುಕಿದ್ದಾಗಲೇ ಇಂತಹವರು ನಮ್ಮಂತಹವರ ಬಾಯಿಗೆ ನಮ್ಮ ಕೈಯಿಂದಾನೆ ಮಣ್ಣು ಹಾಕಿಸುತ್ತಾರೆ!!? ಇದಕ್ಕೆಲ್ಲ ಅವಕಾಶ ಕೊಟ್ಟರೆ ಲೆಕ್ಕಪತ್ರ ಶಾಖೆಯವರು ಒಳ್ಳೆಯವರು. ಅಡ್ಡಿಯಾದರೆ ಅವರಿಗಿಂತ ಕಟುಕರಿಲ್ಲ ಎಂಬ ಬಿರುದು! ನೀವೇನಂತೀರಿ?

■

---



**ಹೇಗಿದ್ರು ಯುಗಾದಿ ಹಬ್ಬ ಬರ್ತಾ ಇದೆ.....!**
**ಇಲ್ಲಿಯವರಿಗೆ ಹೊಸ ವರ್ಷ ನಮಗಲ್ಲ**
**ಕಣೋ,ಇನ್ನು ವಾಪಸ್ ಹೋಗೋಣ...!!!**

# ನಿವೃತ್ತಿಗೆ ಮುನ್ನ....

***ಎಚ್. ಗೋಪಾಲಕೃಷ್ಣ**

ಮೊನ್ನೆ ನಮ್ಮ ಗೋಪಣ್ಣ ಸಿಕ್ಕಿದ. ಅವನ ಹತ್ತಿರ ಮಾತಿಗೆ ಕೂತರೆ ಅದು ಎಷ್ಟು ವಿಸ್ತಾರವಾದ ಮತ್ತು ಸತ್ಯ ನಾಚಿ ನೀರಾಗುವ ಸಂಗತಿಗಳೂ ತಿಳೀತವೆ ಅಂದರೆ ಬೆರಗು ಹುಟ್ಟಿ ಬಿಡುತ್ತೆ. ಇಗೋ ಮೊನ್ನೆ ಅವನು ಹೇಳಿದ ಕತೆ ಇದು...

ನಾನು ಆ ಕಾಲದೋನೂ ಅಂದರೆ ಒಂದೇ ಕಡೆ ನಲವತ್ತು ವರ್ಷ ಹಠ ಹಿಡಿದ ಹಾಗೆ ತೇಪೆ ದಾರಿ ಮಾಡಿದವನು! ಅದರಿಂದ ನಾನು ತೇಪೆದಾರಿ ಮಾಡಿದ ಕಡೆ ಸುಮಾರು ಎಲ್ಲರೂ ಗೊತ್ತಿರೋರೇ. ಹಾಗಾಗಿ ಸದರ ಸಲೀಸು ಹೆಚ್ಚು. ಎಷ್ಟೋ ಸಲ ಸಂಸಾರದ ಬಹಳ ಗುಟ್ಟಿನ ಸಂಗತಿಗಳೂ ಸಹ ಎಲ್ಲರಿಗೂ ಗೊತ್ತಾಗಿ ಬಿಟ್ಟಿರುತ್ತಿತ್ತು. ಸರಿಸುಮಾರು ಎಲ್ಲರ ಸಮಸ್ಯೆಗಳೂ ಎಲ್ಲರಿಗೂ ಗೊತ್ತಿರುವವೇ... ಪರಸ್ಪರ ವಿಚಾರ ವಿನಿಮಯಗಳು ಪ್ರತಿದಿನ ನಡೆಯೋವು.. ಈ ಹಿನ್ನೆಲೆಯಲ್ಲಿ ಮುಂದೆ ಹೋಗೋಣ.

ರಿಟೇರ್ ಆಗುವ ಮೊದಲು ನಮ್ಮ ದೊಡ್ಡ ಬಾಸು ನನ್ನ ಜತೆ ಹಾಗೇ ಮಾತಾಡ್ತಾ ಇದ್ರು.

ರಿಟೇರ್ ಆದಮೇಲೆ ಏನು ನಿಮ್ಮ ಪ್ಲಾನು... ಅಂತ ಕೇಳಿದರು.

ಇನ್ನೂ ಯೋಚನೆ ಮಾಡಿಲ್ಲ ಅಂದೆ.

ಎಲ್ಲರಿಗೂ ಭಾಷಣ ಬರಕೊಡಿ, ಇಟ್ಸ್ ವೆರಿ ಗುಡ್ ಅಂದರು..!

ನನ್ನ ಸರ್ವೀಸ್ ಅಲ್ಲಿ ಕೊನೇ ಹತ್ತು ವರ್ಷ ನನ್ನ ಮಾಮೂಲಿ ಕೆಲಸದ ಜತೆಗೆ ಈ ಭಾಷಣ ಬರೆದುಕೊಡುವ ಒಂದು ಹವ್ಯಾಸದಿಂದ ಭಾರೀ ಫೇಮಸ್ ಆಗಿದ್ದು ಹೆಚ್ಚೂ ಕಡಿಮೆ ಸುಮಾರು ದೊಡ್ಡವರು ಇದರ ಪ್ರಯೋಜನ ಪಡೆದಿದ್ದರು.

ಸಂದರ್ಭಕ್ಕೆ ತಕ್ಕ ಹಾಗೆ ಭಾಷಣ ಬರೆಯೋದು, ಸಂಜೆ ಕತ್ತಲು ಆದಮೇಲೆ ಅವರ ಚೇಂಬರಿನಲ್ಲಿ ಕೂಡುವುದು ಹಾಗೂ ಭಾಷಣ ಉರು ಹೊಡೆಸೋದು, ಅದನ್ನ ರೆಕಾರ್ಡ್ ಮಾಡಿ ಅವರಿಗೆ ಕೇಳಿಸುವುದು... ಇದು ಆಲ್ಮೋಸ್ಟ್ ಪ್ರತಿದಿನದ ಕೆಲಸ ಆಗಿತ್ತು. ಇದು ಎಷ್ಟು ಫೇಮಸ್ ಆಗಿಬಿಟ್ಟಿತ್ತು ಅಂದರೆ ಬರೇ ಇವರು ಭಾಷಣ ಬರೆಸಿಕೊಳ್ಳೋದು ಅಲ್ಲದೆ ಇವರ ನೆಂಟರು ಇಷ್ಟರು ಸ್ನೇಹಿತರು.... ಹೀಗೆ ಗುಂಪು ಗುಂಪೇ ಬರೋದು.

ಹೇಳಿ ಕೇಳಿ ಎಲ್ಲರೂ ಹೊರಗಡೆ ಇಂದ ಇಲ್ಲಿಗೆ ಆಮದು ಆಗಿದ್ದೋರು, ಇಲ್ಲಿ ಲೋಕಲ್‌ಗಳ ಜತೆ ಮೆಚ್ಚುಗೆ ಗಳಿಸಬೇಕು ಅಂದರೆ ವರ್ಷಕ್ಕೊಮ್ಮೆ ರಾಜ್ಯೋತ್ಸವದ ದಿವಸ ಕನ್ನಡದಲ್ಲಿ ಒಂದೂವರೆ ನಿಮಿಷ ಮಾತು ಆಡಿದರೆ ಸಾಕು. ನಮ್ಮವರು ಅವರನ್ನ ಹೆಗಲ ಮೇಲೆ ಕೂಡಿಸಿ ಫ್ಯಾಕ್ಟರಿ ಒಂದು ರೌಂಡ್ ಹಾಕೋರು. ಹೆಗಲ ಮೇಲೆ ಕೂತು ಎರಡುಮೂರು ಕಿಲೋಮೀಟರು ಸುತ್ತು ಹೊಡೆಯವ ಅಪರೂಪದ ಅವಕಾಶ ಎಷ್ಟು ಜನಕ್ಕೆ ಸಿಗುತ್ತೆ ಹೇಳಿ? ಇಂತಹ ನೂರು ಕೋಟಿಯಲ್ಲಿ ಹಲವಾರು ಜನ್ಮದಲ್ಲಿ ಒಮ್ಮೆ ಮಾತ್ರ ಸಿಗುವ ಅವಕಾಶ ಯಾವ ಮುಟ್ಠಾಳ ಬಿಡ್ತಾನೆ ಹೇಳಿ....



ರಂಗು ರಂಗಾಗಿ, ಪ್ರಾಸಬದ್ಧವಾಗಿ ಕನ್ನಡ, ಕರ್ನಾಟಕ, ಕಾವೇರಿ ಕೃಷ್ಣೆ... ಕುವೆಂಪು, ರನ್ನ ಜನ್ನ, ಪಂಪ, ಮನುಜ ಕುಲ ತಾನೊಂದೇ ವಲಂ, ನೂರು ಸಲ ಹುಟ್ಟಿದರೂ

ಇಲ್ಲೇ ಕೋಗಿಲೆ ಜನ್ಮ ಇರಲಿ.... ಹೀಗೆ ವೈವಿಧ್ಯಮಯವಾಗಿ ಭಾಷಣ ತಯಾರಿ ಮಾಡಿ ಕೊಡುತ್ತಿದ್ದೆ. ಒಂದೊಂದು ಭಾಷಣ ಮಾಡಿದಾಗಲೂ ಒಂದೊಂದು ಅಡಿ ಎತ್ತರ ಆಗ್ತಿದ್ದರು ಭಾಷಣ ಬಿಟ್ಟೋರು.

ಒಂದು ಸಲ ಹಿರೇ ಅಧಿಕಾರಿ ಭಾಷಣ ಮಾಡಿ ಛೇಂಬರಿಗೆ ಬಂದೋರು ಬಾಗಿಲಿನ ಚೌಕಟ್ಟಿನ ಮೇಲ್ಭಾಗ ಹಣೆಗೆ ಬಡಿದು ತಲೇಗೆ ಒಂದುವಾರ ಬ್ಯಾಂಡೇಜು ಕಟ್ಟಿಸಿಕೊಂಡಿದ್ದರು. ಆಗ ಅವರು ಹದಿನೈದು ದಿವಸ ರಜಾ. ಅವರ ಹೆಂಡತಿ ದಿನಾ ಬೆಳಿಗ್ಗೆ ಸಾಯಂಕಾಲ ನನಗೆ ಫೋನು ಮಾಡೀ ಮಾಡೀ ಕ್ಯಾ ಕಮಾಲ್ ಕರ್ ದಿಯಾ ಆಪ್ನೇ ಅಂತ ಫೋನಿನಲ್ಲೇ ಲೊ ಚ ಲೊ ಚ ಮಾಡ್ತಾ ಇದ್ರು...!

ಮೊದಮೊದಲು ಅವರಿಗೆ ಭಾಷಣ ಬರೆದುಕೊಡೋರು ಯಾರು ಅಂತ ಸುಮಾರು ಜನಕ್ಕೆ ಗೊತ್ತಿರಲಿಲ್ಲ. ಕಾರಣ ನಾನು ಗುಟ್ಟು ಬಿಟ್ಟು ಕೊಟ್ಟಿರಲಿಲ್ಲ ಮತ್ತು ಭಾಷಣ ಬರೆಸಿಕೊಂಡೋರು ಸಹ ಅದು ತಮ್ಮದೇ ಅಂತ ಬಿಂಬಿಸಿ ಕೊಂಡು ಹಾಯಾಗಿ ಇದ್ದು ಬಿಟ್ಟಿದ್ದರು.

ಪ್ರತಿ ದಿವಸ ಮನೆಗೆ ತುಂಬಾ ತಡವಾಗಿ ಬರ್ತಿದೆ ಇದು, ಫ್ಯಾಕ್ಟರಿಯಲ್ಲಿ ಅಷ್ಟೊಂದು ಕೆಲ್ಸವೇ ಅಂತ ನಮ್ಮಾಕೆ ಪಕ್ಕದ ಮನೆ ಅವ್ರನ್ನ ಕೇಳಿದಳಂತೆ. ಆತ ಸಹ ನಮ್ಮ ಫ್ಯಾಕ್ಟರಿ ಅವನೇ. ಅವನಿಗೆ ನನ್ನ ಕಂಡರೆ ಹೊಟ್ಟೆ ಉರಿ. ಇಂಗ್ಲಿಷ್‌ನಲ್ಲಿ ಮಾತಾಡ್ತೀನಿ ಅನ್ನೋದು ಒಂದು, ಯಾವಾಗಲೂ ದೊಡ್ಡವರ ಜತೆ ಇರ್ತಾನೆ ಅಂತ ಮತ್ತೊಂದು ಕಾರಣ ನನ್ನ ಮೇಲೆ ಅವನಿಗೆ ಹೊಟ್ಟೆಕಿಚ್ಚು.

ಅವನೇನು ಮಾಡಿದ ಅಂದರೆ ನನಗೆ ಗೊತ್ತಿಲ್ಲದ ಹಾಗೆ ಅವನ ಫ್ರೆಂಡ್ಸ್‌ನ ನನ್ನ ಹಿಂದೆ ಪತ್ತೆದಾರಿಕೆಗೆ ಬಿಟ್ಟ. ನನ್ನ ಗುಟ್ಟು ತಿಳಿದುಕೊಂಡು ಬಿಟ್ಟ. ಮತ್ತು ಇಡೀ ಫ್ಯಾಕ್ಟರಿಯ ಲೀಡರ್‌ಗಳಿಗೆ ಟಾಮ್ ಟಾಮ್ ಮಾಡಿದ. ಲೀಡರ್‌ಗಳು ಬಂದವು, ಅಷ್ಟು ಚೆನ್ನಾಗಿ ಭಾಷಣ ಬರಕೊಡಬೇಡ, ನಮಗೆ ಉತ್ತರ ಕೊಡೋದು ಕಷ್ಟ ಆಯ್ತದೆ ಅಂದವು. ಸರಿ ಅಂತ ಸ್ವಲ್ಪ ದಿವಸ ಲೋ ಕೀ ನಲ್ಲಿ ಭಾಷಣ ಬರೆದೆ. ಲೋ ಕೀ ಅಂದರೆ ಗೊತ್ತಲ್ಲ ದೊಡ್ಡ ದೊಡ್ಡ ಶಬ್ದಗಳು, ಮಹಾಪ್ರಾಣಗಳು ಇಲ್ಲದೇ ಇರೋವು.... ಅದೂ ಇವರಿಗೆ ಸರಿ ತೂಗಿಸಲು ಆಗಲಿಲ್ಲ.

ಆಗ ಅವರಲ್ಲೇ ಒಬ್ಬ ಇವನ ಕೈಲೇ ನಮಗೂ ಬರೆಸಿಕೊಳ್ಳೋಣ ಕಣ್ರೋ ಅಂತ ನನ್ನೆದುರಿಗೇ ಐಡಿಯಾ ಬಿಟ್ಟ.

ಇದರಿಂದ ಏನಾಯಿತು ಅಂದರೆ ಯಾರಿಗೆ ಯಾವ ಭಾಷಣ ಬರೆದುಕೊಟ್ಟರೂ, ಅದೇನು ಬರೆದೆ ಅಂತ ಲೀಡರ್‌ಗಳು ತಿಳಿದುಕೊಳ್ಳೋರು ಮತ್ತು ಅದಕ್ಕಿಂತ ಚೆನ್ನಾಗಿರೋ ರಿಪ್ಲೈ ಭಾಷಣ ಬರೆದು ಕೊಡು ಅಂತ ದುಂಬಾಲು ಬೀಳೋರು!

ಹೇಗಿದ್ದರೂ ಕಂಪ್ಯೂಟರ್ ನಲ್ಲಿ ಮೂಲ ಭಾಷಣ ಇರ್ತಿತ್ತಲ್ಲಾ ಅದಕ್ಕೆ ರೆಕ್ಕೆ ಪುಕ್ಕ ಸೇರಿಸಿ ಬಾಲ ಕಟ್ ಮಾಡಿ ಇವರಿಗೂ ಭಾಷಣ ತಯಾರಿಸುವ ಚಾಲಾಕಿತನ ಕಲಿತೆ.



ಇದುವರೆಗೆ ದೊಡ್ಡವರ ಭಾಷಣ ತುಂಬಾ ಚೆನ್ನಾಗಿತ್ತು ಅಂತ ಖುಷಿ ಪಡ್ತಿದ್ದೋರು ನಮ್ಮ ಲೀಡ್ರು ಚೆನ್ನಾಗಿ ಮಾತಾಡಿದ ಅಂತ ಇವನನ್ನು ಹೊಗಳಕ್ಕೆ ಶುರು ಮಾಡಿದವೂ... ಇವನಿಗೂ ಡಬಲ್ಡಬಲ್ ಭೇಷ್ ಹೇಳಿ ರಾತ್ರಿ ಪಾರ್ಟಿ ಮಾಡಿಸ್ಕೋತಾ ಇದ್ದವು. ಬೆಳಿಗ್ಗೆ ಬಂದು ನನ್ನ ಹತ್ರ ಹೇಳಿ ಹೊಟ್ಟೆ ಉರಿಸೋವು..

ಇದು ಒಂದು ಕಡೆ ಆದರೆ ಸಣ್ಣಪುಟ್ಟ ಅಧಿಕಾರಿಗಳು ಯಾವಯಾವ ಸಮಾರಂಭಗಳಿಗೆ ಹೋಗ್ತಾ ಇದ್ದರೋ ಅಂತ ಕಡೆ ಭಾಷಣ ಮಾಡೋಕ್ಕೆ ನನ್ನ ಹೆಲ್ಪ್ ಕೇಳಿಕೊಂಡು ಬರೋರು. ಇದರ ಮುಂದುವರಿದ ಭಾಗ ಅಂದರೆ ಭಾಷೆ ಗೊತ್ತಿದ್ದೂ ಅವರವರ ಭಾಷಣ ಅವರೇ ತಯಾರು ಮಾಡಿಕೊಳ್ಳುತ್ತಿದ್ದವರೂ ಸಹ ಏ ಯಾರು ಯಾರಿಗೋ ಹೊರಗಡೆಯಿಂದ  ಬಂದವರಿಗೆಲ್ಲಾ ಬರೆದು ಕೊಡ್ತೀಯಾ, ನಾವು ಇಲ್ಲೋರೇ, ನಮಗೂ ಬರೆದು ಕೊಡಯ್ಯಾ ಅಂತ ದುಂಬಾಲು ಬಿದ್ದು ಅವರ ಕಷ್ಟ ಕಡಿಮೆ ಮಾಡಿಕೊಳ್ತಾ ಇದ್ದರು .

ಸ್ವಲ್ಪ ದಿವಸ ಆದ ಮೇಲೆ ಇನ್ನೊಂದು ಗುಂಪು ನನ್ನ ಸೇವೆ ಬಯಸಿತು. ದೊಡ್ಡದೊಡ್ಡ ಆಫೀಸರುಗಳ ಹೆಂಡತಿಯರು ಒಂದು ಹೆಂಗಸರ ಗುಂಪು ಮಾಡಿಕೊಂಡಿದ್ದವು. ಅದಕ್ಕೆ ಅದೇನೋ ಒಂದು ಆಕರ್ಷಕ ಹೆಸರೂ ಸಹ ಇಟ್ಟುಕೊಂಡಿದ್ದವು. ಬಾಸ್ ಲೇಡೀಸ್ ಕ್ಲಬ್ ಅಂತಲೋ ಏನೋ. ಆಗಾಗ ಗಂಡು ಗಳನ್ನು ಸೇರಿಸಿ ಅದೇನೇನೋ ಕಾರ್ಯಕ್ರಮ ಮಾಡುತ್ತಿದ್ದವು. ಟ್ರೌಸರ್ಸ್ ಡೇ, ಹಸ್ಬೆಂಡ್ಸ್ ಡೇ, ಕುರ್ತಾ ಡೇ, ಬಿಂದಿ ಡೇ, ಬಾಬ್ಕಟ್ ಡೇ, ಲಿಪ್ ಸ್ಟಿಕ್ ಡೇ, ವೆಲ್ ಡ್ರೆಸಡ್ ಬಾಯ್ಸ್ ಡೇ.... ಹೀಗೆ ಏನೇನೋ ವಿಚಿತ್ರ ಡೇ ಗಳು. ಇವುಗಳಿಗೂ ತಾಯಿ ಭುವನೇಶ್ವರಿಗೂ ತುಂಬಾ ತುಂಬಾ ದೂರ. ಸರಿ ಗಂಡಂದಿರ ಸಲಹೆ ಕೇಳಿದವು. ಅವು ನನ್ನ ತೋರಿಸಿದವು. ಈ ಗುಂಪಿಗೂ ಸಹ ನಾನೇ ಭಾಷಣ ಬರಕೊಡೋದು ನಡೀತು. ಎಂತೆಂಥ ಭಾಷಣ ಅಂತೀರಿ

ಹಸ್ಬೆಂಡ್ಸ್ ಡೇಗೆ ಒಂದು ಗಂಡನ ಕುರಿತ ಕಣ್ಣೀರು ಬರುವ ಭಾಷಣ, ಕುರ್ತಾ ಡೇ ಗೆ ಕುರ್ತಾ ಕುರಿತ ಬಿದ್ದು ಬಿದ್ದು ನಗುವ ಕಿರು ಪದ್ಯಗಳು, ಬಿಂದಿಡೇ ಗೆ ಹೃದಯತಟ್ಟುವ ಬಿಂದಿ ಬಿಂದಿ ಬಿಂದಿ ಹಾಡು ಮತ್ತು ಭಾಷಣ, ಬಾಬ್ಕಟ್ ಡೇ ಗೆ ಬಾಬ್ ಕಟ್ ಕುರಿತ ನವಿರು ವಿಶ್ಲೇಷಣೆ ಮತ್ತು ಕವನ, ಲಿಪ್ ಸ್ಟಿಕ್ ಡೇ ಗೆ ಲಿಪ್ಪು ಕುರಿತ ಗಂಡುಗಳು ಜೊಲ್ಲು ಸುರಿಸುವ ಶಾಯಿರಿ, ವೆಲ್ ಡ್ರೆಸಡ್ ಬಾಯ್ಸ್ ಡೇ ಗೆ... ಬಿಡಿ .... ಹೀಗೆ ನಾನು ಕೆಲವೇ ದಿವಸದಲ್ಲಿ  ಈ ಹೆಂಗಸರ ಗುಂಪಿನಲ್ಲಿ ಸಹ ಫೇಮಸ್ ಅಂದರೆ ಫೇಮಸ್ ಆಗಿಬಿಟ್ಟೆ.

ಇದರ ಮುಂದಿನ ಬೆಳವಣಿಗೆ ಅಂದರೆ ಈ ಆಮದಾದವರ ಕೂಸುಗಳಿಗೆ ಪುಟ್ಟ ಪುಟ್ಟ ಭಾಷಣ ಬರೆದು ಅದನ್ನು ಉರು ಹೊಡೆಸಿ ಸ್ಕೂಲ್ ಡೇ ದಿವಸ ಮೈಕಿನ ಮುಂದೆ ಹೇಳಿಸೋದು....

ಹೀಗೆ ಅವರ ಜೀವನ ಸುಖದ ಸುಪ್ಪತ್ತಿಗೆ ಮಾಡಿ ಹಾಕಿ ಬಿಟ್ಟಿದ್ದೆ.!

ಇದು ನಮ್ಮ ಲೋಕಲ್ ಅವರಿಗೂ ತಿಳಿದು ಇವರೂ ಸ್ಕೂಲ್ ಡೇ ಗೆ, ಗಣೇಶ ಹಬ್ಬಕ್ಕೆ, ದಸರಾ ಹಬ್ಬಕ್ಕೆ...... ಹೀಗೆ ಇಂತಹ ಹಬ್ಬ ಅನ್ನೋದು ಇಲ್ಲದೆ ನನ್ನ ಕೈಲಿ ಮಕ್ಕಳಿಗೆ ಹಾಡು ಹಸೆ ಭಾಷಣ ಬರೆಸಿಕೊಂಡು ಹೋಗ್ತಾ ಇದ್ದರು. ಮಕ್ಕಳು ಪ್ರೈಜ್ ಗೆದ್ದಾಗ ಅವರ ಜತೇಲಿ ನಿಂತ್ಕೊಂಡು ಹಲ್ಲು ಅಗಲವಾಗಿ ಕಿವಿಯಿಂದ ಕಿವಿ ತನಕ ಅಗಲಿಸಿ ಫೋಟೋ ತೆಗೆಸಿಕೊಂಡು ನಮ್ಮದೇ ಮ್ಯಾಗಝೀನ್‌ನಲ್ಲಿ ಹಾಕಿಸಿ ಕೊಳ್ಳೋರು...



ಇದರ ಮತ್ತೊಂದು ಮುಂದುವರೆದ ಭಾಗ ಅಂದರೆ ಪ್ರೈಮರಿ ಶಾಲೆ ಮಕ್ಕಳಿಗೆ ನನ್ನ ಕೈಲಿ ಪ್ರಬಂಧ ಬರೆಸಿಕೊಂಡು ಕೊಡೋದು. ಮೊದಲಿಂದ ಒಂದು ರೀತಿ ಹಸುವಿನ

ಹಾಗೆ ತಗ್ಗಿ ಬಗ್ಗಿ ನಡೆಯೋದು ರೂಢಿಸಿ ಕೊಂಡಿದ್ದ ನಾನು ಹಲ್ಲು ಕಿಸಿದು ಯಾರು ಏನೇ ಕೇಳಿದರೂ ಆಗಲಿ ಸರ್, ಆಗಲಿ ಮೇಡಂ ಅಂತ ಒಬೆ ಅಂದರೆ ಒಬೇ ಮಾಡ್ತಿದ್ದೆ.

ಹೀಗೆ ನಾನು ಬರೆದ ಪ್ರಬಂಧಗಳಲ್ಲಿ ನಾಯಿ ಮೇಲೆ, ಬೆಕ್ಕಿನ ಮೇಲೆ, ಗುಬ್ಬಚ್ಚಿ ಮೇಲೆ, ಹಾವ್ರಾಣಿ ಮೇಲೆ, ಜಿರಳೆ ಮೇಲೆ, ಕೋತಿ ಮೇಲೆ, ಸೊಳ್ಳೆ ಮೇಲೆ, ತಿಗಣೆ ಮೇಲೆ.... ಮೊದಲಾದ ಸಾವಿರಾರು ಸೇರಿದ್ದವು.

ನಾನು ತೇಪೆ ದಾರಿಯಿಂದ ಬಿಡುಗಡೆ ಹೊಂದಿ ಆಚೆ ಬರೋವರೆಗೂ ಇದು ಹೀಗೇ ಅವ್ಯಾಹತವಾಗಿ ನಡೀತು. ಬೆಳಿಗ್ಗೆ ಆರಕ್ಕೆ ಮನೆ ಬಿಟ್ಟರೆ ಮತ್ತೆ ಸರಿ ರಾತ್ರಿ ಹೊತ್ತಿಗೆ ಮನೆ ಸೇರ್ತಿದ್ದೆ.

ಮೊದಮೊದಲು ಮನೆಯಾಕೆಗೆ ಇದು ಸುಖ ಅನಿಸಿದರೂ ಪೂರ್ತಿ ಜವಾಬ್ದಾರಿ ನನ್ನ ಮೇಲೆ ಹಾಕಿ ಅವನು ಯಾರು ಯಾರದ್ದೋ ಸೇವೆ ಅದೂ ಆಫೀಸರ್ ಹೆಂಡತಿ ಸೇವೆ ಮಾಡ್ತಿದಾನೆ ಅಂತ ಗೊತ್ತಾದ ನಂತರ ಸಿಡಿಸಿಡಿಸಿಡಿ ಸಿಡ್‌ಯೋಳು. ಪಾಪ ನಾನು ಅವಳ ಕೈಗೆ ಸಿಕ್ಕಿದರೆ ತಾನೇ.

ಭಾನುವಾರ ಜಗಳಕ್ಕೆ ಅಂತಲೇ ಕಾಯೊಳು. ಅವತ್ತೇ ಬೆಳಿಗ್ಗೆ ಯಾರಾದರೂ ದೊಡ್ಡವರೋ ಅವರ ಮನೆಯವರೋ ಬಂದು ಕಾದು ಕೂತಿದ್ದು ಭಾಭಿ ಮೈ ಉಸ್ಕೋ ಲೇಲುಂಗಾ.... ಅಂತ ಇವಳನ್ನೇ ಗೋಗರಿತಿದ್ದರು. ಇವಳು ಮುಖ ಸಿಂಡರಿಸಿ ಕೊಳ್ಳದೆ ಅಚ್ಛಾ ಅಚ್ಛಾ ಅಂತ ತಲೆ ಆಡಿಸೋದು ಕಂಡು ನನಗೆ ಒಳಗೊಳಗೇ ಖುಷಿ ಆಗೋದು..

ರಾತ್ರಿ ಮಲಗಕ್ಕೆ ಮಾತ್ರ ಮನೆಗೆ ಬರ್ತಿದ್ದೆ, ಒಂದು ಹಾಸಿಗೆ ತಗೊಂಡು ಹೋಗಿ ಅಲ್ಲೇ ಬಿದ್ಕೊ... ಅಂತ ಅದೆಷ್ಟು ಲಕ್ಷ ಸಲ ಹೇಳಿದ್ದಾಳೆ ನೆನಪು ಇಲ್ಲ.....

ಅಯ್ಯೋ ನಾನು ಮುಂದಿನ ಕತೆ ಹೇಳಲೇ ಇಲ್ಲ ನಿನಗೆ.

ದೊಡ್ಡ ಆಫೀಸರ್ ಭಾಷಣ ಬರಕೊಡು ರಿಟೈರ್ ಆದಮೇಲೆ ಅಂದರಾ, ಅದನ್ನ ಬಂದು ನನ್ನ ಸಹೋದ್ಯೋಗಿ ಮುದುಕರಿಗೆ ತುಂಬಾ ತುಂಬಾ ಸಂತೋಷದಿಂದ ಹೇಳಿಕೊಂಡೆ .

ನನ್ನ ಮಾತು ಕೇಳಿದ ಮುದುಕ ಸಹೋದ್ಯೋಗಿಗಳು ತಲಾನ್ ತಟ್ಟಿ ತಲೆಗೊಂದು ಐಡಿಯಾ ಕೊಟ್ರು. ಅದನ್ನ ಆಮೇಲೆ ಇಂಪ್ಲಿಮೆಂಟ್ ಮಾಡಿದೆ.

ಅದರ ಕತೆ ನೀವು ಮುಂದಿನ ಸಲ ಸಿಕ್ತಿರಲ್ಲಾ ಆಗ ನೆನಪಿಸಿಕೊಂಡು ಹೇಳ್ತೀನಿ...

ಅಂತ ಗೋಪಣ್ಣ ಕಾಪಿ ಲೋಟ ಕೆಳಗಿಟ್ಟು ಅಮ್ಮಾ ಬರ್ತೀನಿ, ಬರ್ತೀನೋ ದೊರೆ ಅಂತ ಚಪ್ಪಲಿ ಮೆಟ್ಟಿದ. ■

---

"ಈ ಸಭೆಯಲ್ಲಿರುವ ಅರ್ಧ ಜನ ಅಯೋಗ್ಯರು"

**ಕೂಗಾಟ, ಕೋಲಾಹಲ.**



" ಈ ಸಭೆಯಲ್ಲಿನ ಅರ್ಧ ಜನ ಮಹಾ ಯೋಗ್ಯರು"

**ಕರತಾಡನ!**

# ಕಾರೇಷು ದಾಸಿ!

***ಗಣೇಶ ಹೆಗಡೆ**

ಮೇಲಿನ ಶೀರ್ಷಿಕೆ ಓದಿದವರಿಗೆ ಮುದ್ರಣ ದೋಷದಿಂದ 'ಕಾರ್ಯೇಷು' ಅನ್ನುವ ಬದಲು 'ಕಾರೇಷು' ಎಂದು ತಪ್ಪಾಗಿ ಮುದ್ರಿತವಾಗಿದೆಯೆ? ಎಂಬ ಸಂದೇಹ ಮೂಡುವುದು ಸಹಜ. ಆದರೆ ಅನುಮಾನ ಬದಿಗಿಟ್ಟು ಓದಿದವರಿಗೆ ಮೇಲಿನ ಶೀರ್ಷಿಕೆಯಲ್ಲಿ ಯಾವ ತಪ್ಪೂ ಇಲ್ಲ ಎಂಬಭಿಪ್ರಾಯ ಮೂಡಿದರೆ, ಕಾರುಕೊಂಡು ಸ್ವತಃ ಡ್ರೈವ್ ಮಾಡುವ ನನ್ನಂಥಹ ಪ್ರಭೃತಿಗಳಿಗಾಗುವಷ್ಟು ಆನಂದ ಅಷ್ಟಿಷ್ಟಲ್ಲ. ಕಾರುಕೊಂಡ ಮೊದಲ ದಿನವೆ ನನಗೆ ಮನದಟ್ಟಾದ ವಿಚಾರವೆಂದರೆ ... ಸೀಟು ಮೀಸಲಾತಿ ಪದ್ಧತಿ ಇಲ್ಲಿಯೂ ಜಾರಿಯಲ್ಲಿದೆ ಎಂಬುದು. ಡ್ರೈವರ್ ಬದಿಯ ಎಡಸೀಟು (ಅವನು ವಿವಾಹಿತನಾಗಿದ್ದರೆ) ಯಾವಾಗಲೂ ಧರ್ಮಪತ್ನಿಗೇ ಮೀಸಲು. ಜಗತ್ತಿನ ಯಾವ ಹೆಣ್ಣೂ ಈ ಸಂಪ್ರದಾಯವನ್ನು ಮುರಿಯಲು ಸಿದ್ಧಳಿರುವುದಿಲ್ಲ. ಈ ವಿಚಾರದಲ್ಲಿ ನನ್ನ ಮಡದಿ ಪದ್ದಿಯೂ ಹೊರತೇನಲ್ಲ. ಪದ್ದಿ ಎಲ್ಲಾ ವಿಚಾರದಲ್ಲೂ ಫ್ಯಾಮಿಲಿಯಲ್ಲಿ ಜಾಣೆಯೆಂಬ ಹೆಸರು ಗಳಿಸಿದ್ದರೂ ಏಕೊ ಏನೊ ಈ ವಾಹನ ಕಲಿಕೆಯ ವಿಚಾರದಲ್ಲಿ ಹಿಂಜರಿಕೆ ಗಳಿಸಿದ್ದು ಅವಳ ಜೀವನದ ಮೈನಸ್ ಪಾಯಿಂಟು. ಈ ವಿಚಾರ ತಿಳಿದ ನಾನು ಮೊದ ಮೊದಲಿಗೆ ಒಳಗೇ ಖುಷಿ ಪಟ್ಟರೂ ನಂತರ ಈ ವಿಚಾರವೇ ಒಂದು ದಿನ ಮುಳುವಾಗಿ ಪರಿಣಮಿಸೀತು ಎಂಬ ಕಲ್ಪನೆಯೆ ಇರಲಿಲ್ಲ. ಪದ್ದಿ ಬಾಲ್ಯದಿಂದಲೂ ಯಾವ ವಾಹನವನ್ನೂ ಓಡಿಸಿದವಳಲ್ಲ. ಮಸಲಾ ಕಲಿಯುವ ಪ್ರಯತ್ನವನ್ನೇ ಮಾಡಲಿಲ್ಲ ಎಂಬುದು ಚರಿತ್ರಾಕಾರರ ಅಂಬೋಣ. ಈ ನಿರ್ಧಾರಕ್ಕೆ ಕೆಳಗೆ ವಿವರಿಸಿರುವ ಘಟನೆಯೆ ಸಾಕ್ಷಿ.

ಪದ್ದಿಯ ಸೋದರ ಮಾವ ಇವಳಿಗೆ ಸೈಕಲ್ ಬ್ಯಾಲೆನ್ಸ್ ಕಲಿಸಿಯೇ ತೀರುತ್ತೇನೆಂಬ ಹಠಕ್ಕೆ ಬಿದ್ದು ಒಂದು ದಿನ ಮನೆಯ ಮುಂದಿನ ಡೌನಿನಲ್ಲಿ ಪದ್ದಿಯನ್ನು ಸೈಕಲ್ ಮೇಲೆ ಕೂರಿಸಿ ಕೈ ಬಿಟ್ಟಾಗ ನಡೆದ ದುರಂತವಿದು. ಭೂಮಿಗೆ ವರ್ಟಿಕಲ್ಲಾಗಿ, ಡೌನಿನಲ್ಲಿ ಜರ್‍ರನೆ ಇಳಿಯುತ್ತಿದ್ದ ಸೈಕಲ್ಲು ಇದ್ದಕ್ಕಿದ್ದಂತೆ ಗುರುತ್ವಾಕರ್ಷಣ ಶಕ್ತಿ ಕಳೆದುಕೊಂಡು ಪ್ಯಾರಲೆಲ್ಲಾಗಿ ತಿರುಗಿ ಪದ್ದಿ ಮತ್ತು ಸೈಕಲ್ ನೀರಿಲ್ಲದ ದೊಡ್ಡ ಮೋರಿಗೆ ಬಿದ್ದು ಅಂದಿನಿಂದ ಇಂದಿನವರೆಗೂ ವಾಹನ ಕಲಿಕೆಯ ವಿಚಾರವನ್ನೇ ಅವಳು ಕೈಬಿಟ್ಟಳೆಂದು ಚರಿತ್ರೆಯ ಪುಟಗಳು ದಾಖಲಿಸುತ್ತವೆ.

ಆಗ ಅಗತುಕೊಂಡ ವಾಹನ ಫೋಬಿಯ ಇಂದಿಗೂ ಅವಳಲ್ಲಿ ಜೀವಂತವಾಗಿದ್ದರೂ ಅಷ್ಟು ಸುಲಭವಾಗಿ ಸೋಲೊಪ್ಪಿಕೊಳ್ಳುವ ಆಸಾಮಿ ಪದ್ದಿಯೇನಲ್ಲ. ಆದರೆ ನಾನು ಡ್ರೈವ್ ಮಾಡುವಾಗಲೆಲ್ಲಾ ಪಕ್ಕದಲ್ಲೇ ಕುಳಿತು ಒಬ್ಬ ಡ್ರೈವಿಂಗ್ ಸ್ಕೂಲ್ ಶಿಕ್ಷಕನಂತೆ ರೋಡ್ ಸೆನ್ಸ್ ಬಗ್ಗೆ ಬೋಧಿಸುವುದು ನನಗೆ ತೀವ್ರ ಮುಜುಗರ ತರಿಸುತ್ತದೆ.

ಈ ಕೆಳಗೆ ವಿವರಿಸಿರುವ ತುಂಡು ತುಂಡು ಉದಾಹರಣೆಗಳು ನಿಮಗೆ ನನ್ನಂಥಹವರ ಬಗೆ ಸಹಾನುಭೂತಿ ಮೂಡಲು ಸಾಕ್ಷೀಭೂತವಾಗುತ್ತವೆ.

* * *



"ರ್‍ರೀ....ಗ್ಯಾರೇಜಿನಿಂದ ರೋಡಿಗೆ ರಿವರ್ಸ್ ತೆಗೆಯುವಾಗ ನೀವು ಎಡ–ಬಲ

ನೋಡುವುದೇ ಇಲ್ಲ. ನಾನು ಕಿರುಚದೇ ಇದ್ದಿದ್ರೆ ಸೀದಾ ತಾಯಿ ಮಗೂಗೆ ಗುದ್ಬಿಡ್ತಿದ್ರಿ. ನೀವೋ? ನಿಮ್ಮ ಡ್ರೈವಿಂಗೋ?"

* * *

"ರ್ರೀ..ಈ ನ್ಯಾರೊ ರೋಡಿಗೆ ಬರ್ಬೇಡಿ ಅಂತ ಎಷ್ಟು ಸಲ ಬಡ್ಕೊಂಡಿದೀನಿ. ಅ ಸೈಕಲ್‌ನವನಿಗೂ ನಿಮ್ಮ ಕಾರಿಗೂ ಒಂದಿಂಚು ಗ್ಯಾಪು ಇತ್ತು. ಅವ್ನು, ಇನ್ನೂ ನಿಮ್ಮನ್ನು ವಾಚಾಮಗೋಚರ ಬೈಯುತ್ತಿದ್ದಾನೆ..."

* * *

"ರ್ರೀ...ರ್ರೀ..ಗುಂಡಿ...ಗುಂಡಿ..ಎಂಥಹ ರೆಕ್‌ಲೆಸ್ ಡ್ರೈವಿಂಗಪ್ಪ ನಿಮ್ದು...ನಿಮ್ಮ ಹಾಳು ಜ್ಞಾನವೊ? ಗುಂಡಿ...ಗುಂಡಿ ಅಂತಂದ್ರೆ...ಷರ್ಟಿನ ಗುಂಡಿ ನೋಡ್ಕೋತೀರಿ..."

* * *

"ಯಾರನ್ನು ಕಾರಿನಲ್ಲಿ ಕೂರಿಸ್ಕೊಂಡ್ರೂ ನನ್ನ ತಾಯೀನ ಮಾತ್ರ ಕೂರಿಸ್ಕೋ ಬ್ಯಾಡಿ. ಮೊದಲೇ ಹಾರ್ಟಿಗೇ ಸ್ಟಂಟ್ ಹಾಕಿದೆ. ನಿಮ್ಮ ಡ್ರೈವಿಂಗ್ ಸ್ಟಂಟು ನೋಡಿ ಹರ – ಹರ ಅಂತಂದ್ಬಿಟ್ಟಾರು"

* * *

"ರೀ...ಹುಷಾರು...ಟ್ರಾಫಿಕ್ ಸಿಗ್ನಲ್ಲಿನಲ್ಲಿ ಅಪ್ಪಿನಲ್ಲಿ ಗಾಡಿ ನಿಂತಿದೆ. ರ್ರೀ..ರ್ರೀ... ಯಾಕೊ ಕಾರು ಹಿಂದು ಹಿಂದಕ್ಕೆ ಹೋಗ್ತಾಯಿದೆ. ಬ್ಯಾಗ ಹ್ಯಾಂಡು ಬ್ರೇಕು ಹಾಕಿ. ಹಿಂದೆ ನಿಂತಿರೋದು ಬೆಂಜು ಕಾರು. ಅದರ ಹಿಂದೆ ಔಡಿ ನಿಂತಿದೆ. ಏನಾದ್ರೂ ಡ್ಯಾಮೇಜು ಆದ್ರೆ ರಿಪೇರಿಗೆ ಮನೆ....ಮಠ...ಮಾರ್ಕೊಬೇಕಾಗುತ್ತೆ..

* * *

– ಹೀಗೆ ಹೆದರಿಸಿ ಹೆದರಿಸಿ ನನ್ನ ಕಾನ್ಫಿಡೆನ್ಸು ಲೆವೆಲ್ನೇ ಹಾಳುಗೆಡವಿದ್ದಾಳೆ. ಪದ್ದಿ ಒಂಥರಾ ಜಿ. ಪಿ. ಎಸ್. ಇದ್ದ ಹಾಗೆ. ಅವಳ ಹದ್ದಿನ ಕಣ್ಣಿಗೆ ಕಾಣುವ ಹಳ್ಳ, ಗುಂಡಿ, ಹಂಪು, ದನ, ಹಂದಿ ಇತ್ಯಾದಿಗಳು ಹಾಳು ನನ್ನ ಕ್ಯಾಟರ್ಯಾಕ್ಟ್ ಕಣ್ಣುಗಳಿಗೆ ಕಾಣಿಸುವುದೇ ಇಲ್ಲ. ಇಷ್ಟೆಲ್ಲಾ ರಾದ್ಧಾಂತಗಳಿಗೆ ಇಂಬು ಕೊಡುವಂತೆ ನನ್ನ ಹಿತ ಶತ್ರುಗಳಾಗಿ ನಾದಿನಿ ಕಮಲಿ ಹಾಗೂ ಭಾವ ಮೈದ ಕಿಟ್ಟಿ ಹುಟ್ಟಿಕೊಂಡಿದ್ದಾರೆ. ಈ ಲಿಸ್ಟಿಗೆ ನನ್ನ ಬಾಲ್ಯದ ಗೆಳೆಯ ಅನಂತು ಹ್ಯಾಗೆ ಇತ್ತೀಚೆಗೆ ಸೇರ್ಪಡೆಯಾದ ಎನ್ನುವುದಕ್ಕೆ ಸ್ವಾರಸ್ಯವಾದ ವಿವರಣೆಯೊಂದಿದೆ. ಕೆಲವು ದಿನಗಳ ಹಿಂದೆ ಬೆಂಗಳೂರಿನಿಂದ ಮೈಸೂರಿಗೆ ಬಂದ ಅನಂತು, ಸಿಟಿ ಔಟ್‌ಸ್ಕರ್ಟ್ಸ್‌ನಲ್ಲಿರುವ ಗೃಹಪ್ರವೇಶದ ಮನೆಯಿಂದ ಫೋನಾಯಿಸಿ 'ಮರಿ ಮಧ್ಯಾಹ್ನದ ಶತಾಬ್ದಿಗೆ ನನ್ನ ಮರು ಪ್ರಯಾಣ. ಲೊಕೇಷನ್ನು ಕಳುಹಿಸುತ್ತೀನಿ. ಕಾರು ತೆಗೆದು ಕೊಂಡು ಬಾ. ನಿನ್ನ ಜತೆ ಮಾತನಾಡಿದ ಹಾಗೂ ಆಯಿತು, ನನ್ಗೂ ಡ್ರಾಪೂ ಸಿಕ್ಕ ಹಾಗೆ ಆಯಿತು" ಎಂದು ಕೋರಿಕೆಯನ್ನು ವರ್ಗಾಯಿಸಿದ್ದ. ಪರ್ಮಿಷನ್ನು ಕೊಡಲು ಮೀನಾಮೇಷ ಎಣಿಸಿದ ಪದ್ದಿ ಕೊನೆಗೆ ಕಾರ್ ಕೀಯನ್ನು ಹಸ್ತಾಂತರಿಸುತ್ತಾ, "ನೋಡಿ, ನೀವು ಕಾರ್ ಓಡಿಸುವಾಗ ಪಕ್ಕದಲ್ಲಿ ನಾನು ಕುಳಿತಂತೆಯೆ ಭಾಸ ಮಾಡಿಕೊಂಡು ಡ್ರೈವ್ ಮಾಡ್ಬೇಕು. ಬರ್ತಾ ಒಬ್ರೇ ಇರ್ತೀರಿ. ರೈಲ್ವೆ ಸ್ಟೇಷನ್ನಿನಿಂದ ಪೊಲೀಸು ಸ್ಟೇಷನ್ನಿಗೆ ಹೋಗ್ಬಿಟ್ಟೀರಿ! ಜೋಕೆ! ಎಂದೆಚ್ಚರಿಸಿದಳು.



'ಅಡಿಯೇನ್....ದಾಸೇನ್.. ಅಂತಂದು ಕೊಂಡವನೆ ಸಕಾಲದಲ್ಲಿ ಅನಂತು

ಕಳುಹಿಸಿದ್ದ ಲೊಕೇಷನ್ನು ತಲುಪಿದೆ. ನನ್ನನ್ನು ನೋಡಿ ತುಂಬಾ ಖುಷಿ ಪಟ್ಟ ಅನಂತು ಕಾರನ್ನೊಮ್ಮೆ ಅವಲೋಕಿಸಿ ವಿವರ್ಣನಾದ. ಏನಯ್ಯಾ ಈ ಪಾಟಿ  ಡೆಂಟು ಎನ್ನುತ್ತಲೇ ಬಲಗಾಲನ್ನಿಟ್ಟು ಕಾರು ಹತ್ತಿ "ಹುಷಾರು, ಹೈವೆವರೆಗೂ ಮಡ್ ರೋಡಿದೆ ಎಂದೆಚ್ಚರಿಸಿದ. ಆಗಲೇ ಮಹಾಸ್ವಾಮಿ ನನ್ನೊಳಗಿದ್ದ ಪದ್ದಿ ಜಾಗೃತಳಾಗಿ ನನ್ನ ದೇಹದೊಳಗೆ ಪರಕಾಯ ಪ್ರವೇಶ ಮಾಡಿದ ಹಾಗೆ ಭಾಸವಾದದ್ದು. ಅಷ್ಟರಲ್ಲೆ ಅನತಿ ದೂರದಲ್ಲಿ ಕುರಿಗಳ ಮಂದೆ ರೋಡು ಕ್ರಾಸು ಮಾಡುವುದನ್ನು ಕಂಡ ನಾನು ಕುರಿಗಳು... ಕುರಿಗಳು ಎಂದು ಏರು ಧ್ವನಿಯಲ್ಲಿ ಕಿರುಚಿದ್ದು, ಯಾವುದೋ ಗುಂಗಿನಲ್ಲಿದ್ದ ಅನಂತು ಬೆಚ್ಚಿಬಿದ್ದು ಯಾಕೆ ಎಕ್ಸೈಟ್ ಆಗ್ತಿದಿ? ಎಂದು ಸಣ್ಣದಾಗಿ ಗದರಿಕೊಂಡ. ನಾನು ತಪ್ಪನ್ನು ಮುಚ್ಚಿಕೊಳ್ಳಲು ಕುರಿಗಳು...ಸಾರ್ ಕುರಿಗಳು ಹಾಡಿನ ಕವಿ ನಿಸಾರ್ ಅಹ್ಮದ್ ಜ್ಞಾಪಕಕ್ಕೆ ಬಂದರು" ಎಂದು ಸಮಜಾಯಿಷಿ ಕೊಟ್ಟೆ. ಆದರೆ ಅನಂತು ನಂಬಿದ ಹಾಗೆ ಕಾಣಲಿಲ್ಲ. ಕಾರು ಮತ್ತಷ್ಟು ದೂರ ಚಲಿಸಿತು. ಆಗ ಇದ್ದಕ್ಕಿದ್ದಂತೆ ಹಳ್ಳ ಪ್ರತ್ಯಕ್ಷವಾಗಿ ಹಳ್ಳ...ಹಳ್ಳ..ಎಂದು ನಾನು ಕಿರುಚಿದೆನೊ? ಅಥವಾ ನನ್ನೊಳಗಿನ ಪದ್ದಿ ಕಿರುಚಿದಳೋ? ಸತ್ಯವಾಗಿ ನನಗೆ ತಿಳಿಯದು. "ಈಗ ನಿನಗೆ...ಹನಿ ಹನಿ ಗೂಡಿದರೆ ಹಳ್ಳ ಹಾಡಿನ ಬಂಗಾರದ ಮನುಷ್ಯ ಸಿನಿಮಾ ನೆನಪಾಯಿತೆ?" ಎಂದು ಅನಂತು ಛೇಡಿಸಿ ನಕ್ಕ. ಮುಂದೆ ರಿಂಗ್ ರೋಡು ಸಿಕ್ಕು ಕಾರನ್ನು ಎಡಕ್ಕೆ ತಿರುಗಿಸಿದೆ. ಐನೂರು ಮೀಟರ್ ಚಲಿಸಿರಬೇಕು. ನನ್ನೊಳಗಿನ ಜಿ.ಪಿ.ಎಸ್. ಆ್ಯಕ್ಟೀವ್ ಆಗಿ ಹಂಪು...ಹಂಪು..ಹಂಪು... ಎನ್ನುತ್ತಾ ಬ್ರೇಕ್ ಹಾಕಲು ಗಾಬರಿಯಲ್ಲಿ ಮರೆತೆ. ಅನಂತು ನೋವಿನಿಂದ ತಲೆ ಉಜ್ಜಿಕೊಳ್ಳುತ್ತಾ, ನಿನ್ನ ಕಾರಿಗೇನು ಆಗಿಲ್ಲ. ನನ್ನ ತಲೆ ಡೆಂಟಾಗಿದೆ ಅಂದ. ಅಂದ್ಹಾಗೆ ನಿನ್ನ ಕಾರಿನಲ್ಲಿ ಏರ್‌ಬ್ಯಾಗ್ ಇದೆ ತಾನೆ? ಎಂದು ಅನುಮಾನಗೊಂಡು ಕೇಳಿದ. ರೈಲ್ವೆ ಸ್ಟೇಷನ್ನಿನಲ್ಲಿ ಇಳಿಯುವ ಮುಂಚೆ ಅನಂತು ಕಣ್ಣಂಚಿನಲ್ಲಿ ನೀರು ತಂದುಕೊಂಡು 'ಮರಿ ನಿನಗೆ ತುಂಬಾ ಮೆಂಟಲ್ಲು ಸ್ಟ್ರೆಸ್ ಆಗಿದೆ. ಹೀಗೆ ಒಬ್ಬೊಬ್ಬನೆ ಕಾರಿನಲ್ಲಿ ಕೂಗಿ ಕೊಳ್ಳುವುದು, ಒಬ್ಬೊಬ್ನೆ ಮಾತನಾಡಿಕೊಳ್ಳುವುದು ಒಂದು ಸೈಕಾಲಜಿಕಲ್ ಡಿಸ್ ಆರ್ಡರ್, ಯಾವುದಕ್ಕೂ ಇನ್ನಾರು ತಿಂಗಳು ಸ್ಟೀರಿಂಗ್ ವ್ಹೀಲ್ ಹಿಡಿಯಬ್ಯಾಡ. ಅತ್ತಿಗೆ ಜೊತೆ ತಕ್ಷಣ ಬೆಂಗಳೂರಿಗೆ ಬಾ. ನಿಮ್ಹಾನ್ಸ್‌ನಲ್ಲಿ ನನಗೆ ಪರಿಚಿತ ವೈದ್ಯರಿದ್ದಾರೆ. 'ಎನಿವೆ ಪ್ರಿಕಾಷನ್ ಈಸ್ ಬೆಟರ್ ದ್ಯಾನ್ ಅಂತ...ಏನೂ ಅಂದವನೆ ನನ್ನ ಉತ್ತರಕ್ಕೂ ಕಾಯದೆ ಕಾರಿನಿಂದ ಸ್ಪೀಡಾಗಿ ಜಿಗಿದು ಶತಾಬ್ಧಿಯಷ್ಟೇ ವೇಗವಾಗಿ ಕಣ್ಮರೆಯಾಗಿ ಹೋದ...

* * *

ಈಗ ನಿತ್ಯ ಸ್ಥಿತಿ ಏನಾಗಿದೆಯೆಂದರೆ ಅನಂತು ಮತ್ತು ಪದ್ದಿಯ ನಡುವೆ ಅನೇಕ ಕರೆಗಳ ವಿನಿಮಯವಾಗುತ್ತಿವೆ. ಇವರೆಲ್ಲರೂ ಸೇರಿ ನನ್ನನ್ನು ಅಬ್ಸರ್ವೇಷನ್ನಿನಲ್ಲಿಟ್ಟಿದ್ದಾರೆ ಎಂಬ ಕೆಟ್ಟ ಗುಮಾನೀ ಬಂದಿದೆ ನನಗೆ. ಆಗಾಗ್ಗೆ ನನ್ನ ಬಗ್ಗೆ ಹೆಲ್ತ್ ಬುಲೆಟಿನ್ನುಗಳು ಕೂಡ ಹೊರಡುತ್ತಿವೆ. ಹಿತೈಷಿಯೊಬ್ಬರ ಬಳಿ ನನ್ನ ಈ ಸಂಕಟಗಳನ್ನೆಲ್ಲಾ ಹಂಚಿಕೊಂಡಾಗ ಅವರಿತ್ತ ಸಲಹೆ ತುಂಬಾ ಉಪಯುಕ್ತವಾಗಿದೆ ಎನಿಸಿದೆ. ಅದೇನೆಂದರೆ, ಡ್ರೈವರ್ ಪಕ್ಕದ ಸೀಟನ್ನೇ "ವಾಸ್ತು"ವಿನ ನೆಪವೊಡ್ಡಿ ತೆಗೆಸಿ ಹಾಕಿ ಬಿಡುವುದು ಹಾಗೂ ಡ್ರೈವ್ ಮಾಡುವಾಗ ಮರೆಯದೆ ಇಯರ್ ಫೋನು ಹಾಕಿಕೊಳ್ಳುವುದೆಂಬೆರಡು ಸಲಹೆಗಳು. ಆದರೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನನ್ನ ಕಾರನ್ನೇ ಮಾರಾಟ ಮಾಡಿ ಬಿಡುವ ತೀರ್ಮಾನ ಮಾಡಿದ್ದೇನೆ. ಕಾರನ್ನೇನೋ ಓ.ಎಲ್.ಎಕ್ಸ್‌ನಲ್ಲಿ ಮಾರಬಹುದು. ಆದರೆ ಪದ್ದಿಯನ್ನು....? ಈ ವಿಚಾರದಲ್ಲಿ ಸತ್ಯ ಹರಿಶ್ಚಂದ್ರ ನಿಜಕ್ಕೂ ಅದೃಷ್ಟವಂತ..! ■



# ಎಲ್ಲೆಲ್ಲೀ ನೋಡಲೀ...ನಿನ್ನನ್ನೇ ಕಾಣುವೇ...

***ನಳಿನಿ ಭೀಮಪ್ಪ**

ಖರೇನೋ ಇಲ್ಲೋ ನೀವೇ ಹೇಳ್ರೀ??...ನಾ ಅಣ್ಣಾವ್ರ ಸಿನೆಮಾ ಹಾಡಿನ ಬಗ್ಗೆ ಅಲ್ರೀ ಹೇಳ್ತಿರೋದೂ...!! ಕಸದ ರಾಶಿಯ ಬಗ್ಗೆ. ಮನೀ ಬಿಟ್ಟು ನೀವೆಲ್ಲಾದ್ರೂ ಹೊರಗಡೆ ಹೋಗಿ ಸುತ್ತಾಮುತ್ತಾ ಕಣ್ಣಾಯ್ಸಿದ್ರೆ ಸಾಕು, ಕಣ್ಬಿಟ್ಟಲ್ಲೆಲ್ಲಾ ಕಸಾ ಕಸಾ, ಖರೇನೋ... ಇಲ್ಲೋ?. ಎಂಥಾ ಚಂದ ರೋಡ್ ಇರ್ತದ್ರೀ, ಆಜೂ ಬಾಜೂ ಎಲ್ಲಾ ಕಡೀ ಕಸ ಒಗೆದಿರ್ತಾರೆ. ಅದನ್ನ ಪ್ರಾಣಿಗಳು ಗೂರ್ಯಾಡಿ, ಮತ್ತೊಂದೀಟು ಗಾಳೀಗ್ ಹಾರ್ಯಾಡಿ, ರಸ್ತಿ ಮ್ಯಾಗೆಲ್ಲ ಹಾರಿ ಬಂದು ಬಿದ್ದಿರ್ತಾವ. ಇನ್ನು ಖಾಲೀ ನೀವೇಶನದ ಕಥೀ ಅಂತೂ ಹೇಳೂದೇ ಬ್ಯಾಡಾ, ಎಲ್ಲಾ ಕಸ ಒಗಿಯೋರ ಫೇವರೆಟ್ ಜಗಾ ಆಗೇತಿ ಅದು. ಅಲ್ಲಿಗೂ ಆಜೂಬಾಜಿನವರು ಇಲ್ಯಾಕೆ ಚೆಲ್ಲಾಕತ್ತೀರಿ ಅಂತಾ ಪ್ರಶ್ನೀ ಮಾಡಿದ್ರೆ ಮುಗೀತು. ಏನು ನಿಮ್ಮ ಕಂಪೌಂಡ್‌ನಾಗೆ ಚೆಲ್ಲಿದಿವಿ ಅನ್ನೂ ಹಂಗ ಆಡಾಕತ್ತೀರಲ್ಲಾ ಅಂತಾ ಜಬ್ರಿಸ್ತಾರೆ. ಇನ್ನು ಮುಂಜೇಲೇ ಅಂಗಳಾ ಗುಡಿಸೂ ಮುಂದೆ ತಮ್ಮ ಅಂಗಳದ ಕಸಾ ಪಕ್ಕದ ಮನೀ ಅಂಗಳಕ್ಕೆ ಸದ್ದಿಲ್ಲದೆ ಪಾಸ್ ಮಾಡೋದ್ರಾಗ್ ಎಲ್ರೂ ಎತ್ತಿದ ಕೈ. ಪಕ್ಕದ ಮನೀ ಗಿಡಾನೋ, ಮರಾನೋ ಇವರ ಮನೀ ಕಂಪೌಂಡ್‌ಮ್ಯಾಗೋ, ಟೆರೇಸ್ ಮ್ಯಾಗೋ ವಾಲಿ ಒಂದೀಟು ಕಸ ಬಿತ್ತೂ ಅಂದ್ರ ಮುಗೀತು ಕತಿ, ದೊಡ್ಡ ಯುದ್ಧಾನಾ ನಡೆದುಹೋಕ್ಕೇತಿ. ಇನ್ನ ಕಸ ಸುಡಬ್ಯಾಡ್ರೀ ಸುಡಬ್ಯಾಡ್ರೀ ಅಂತಾ ಹೊಯ್ಕೊಂಡ್ರೂ ಮಂದೀ ಸುಡೂದನ್ನ ಬಿಡಾಂಗಿಲ್ಲ. ಚರಂಡಿಗಳು ಇರೋದಾ ಕಸ ಒಗಿಯಾಕ ಅಂದ್ಕೊಂಬಿಟ್ಟಾರ. ಮಳೀಗಾಲ್ದಾಗ ಕಸಾ ಕಟ್ಕೊಂಡ್, ನೀರು ಚರಂಡಿ ಬಿಟ್ಟು ರೋಡ್ನಾಗ್ ಹರೀಯೋಕ್ ಚಾಲೂ ಮಾಡ್ತಿದ್ದಂಗ್ ನಗರಪಾಲಿಕೆಯವರಿಗೆ ಸಿಕ್ಕಾಪಟ್ಟೆ ಮಂಗಳಾರತಿ ಮಾಡಾಕ್ ಸುರು ಹಚ್ಕೋತಾರ.

ಇನ್ನು ಅಲ್ಲಲ್ಲಿ ನಗರಪಾಲಿಕೆಯೋರು ಹಸಿ ಕಸ, ಒಣ ಕಸಕ್ಕಂತಾ ಹಸಿರು ಡೆಬ್ಬಿ, ನೀಲಿ ಡೆಬ್ಬಿ ಅಂತಾ ಅಲ್ಲಲ್ಲೆ ಕಸದ ಡೆಬ್ಬಿಗಳನ್ನು ಇಟ್ರೂ ಸೈತ, ಹಸೀ, ಒಣಾ ಬ್ಯಾರೆ ಮಾಡೂದು ದೂರದ ಮಾತು, ಎಲ್ಲನೂ ಒಂದು ಪ್ಲಾಸ್ಟಿಕ್ ಕವರ್‌ನಾಗ್ ಕಟ್ಟೀ, ಡೆಬ್ಬೀ ಒಳಾಗ್ ಹಾಕಾಕಿಂತ್ ಹೆಚ್ಚು ಅದರ ಮುಂದಾ ಒಗ್ದು ಬರ್ತಾರ. ಕಸದ ತೊಟ್ಟೀದೂ ಅದೀ ಕಥೀನಾ. ಹಂದಿ, ನಾಯಿ, ಆಕ್ಳಾ ಎಲ್ಲಾ ಅಲ್ಲೇ ತಮ್ಮ ವಾಸಸ್ಥಾನ ಮಾಡ್ಕೊಂಡು ಮೇಯ್ತಾ ಇರ್ತವೆ. ಪ್ಲಾಸ್ಟಿಕ್ ಕವರ್‌ನಾಗ್ ಕಟ್ಟಿ ಬಿಸಾಡಿದ ಆಹಾರ ಪದಾರ್ಥ ತಿನ್ನೂದರ ಜೊತೀಗ್ ಪ್ಲಾಸ್ಟಿಕ್ ಸೈತಾ ತಿಂದು ತಮ್ಮ ಪ್ರಾಣಕ್ಕಾ ಸಂಚಕಾರ ತಂದ್ಕೋತಾವ. ಜೊತೀಗ್ ಅಂಥಾ ಹಸು, ಎಮ್ಮೀ ಹಾಲು ಸೈತ ವಿಷಕಾರಿಯಾಗಿ ಮತ್ತ ಮನುಶಾನ ಹೊಟ್ಟೀನೇ ಸೇರಿ ಅವನ ಆರೋಗ್ಯದ ಮ್ಯಾಗ್ ಕೆಟ್ಟ ಪರಿಣಾಮ ಬೀರ್ತಾವ. 'ಮಾಡಿದ್ದುಣ್ಣೋ ಮಾರಾಯ' ಅನ್ನೂ ಗಾದೀ ಮಾತು ಎಷ್ಟು ಖರೇ ಅನ್ನಿಸ್ತೇತಿ. ಕೆಲವೊಂದು ಕಡೀಗೆ ಸಿಸಿ ಕ್ಯಾಮೆರಾ ಇಟ್ಟು, ಕಸ ಒಗಿಯೋರಿಗೆ ದಂಡ ಹಾಕಲಾಗುತ್ತದೆ ಅಂತಾ ಬರುದ್ರೂ ಸೈತ, ಯಾರೂ ಕ್ಯಾರೇ ಅನ್ನೂದಿಲ್ಲ. ಕತ್ಲಾಗ್ತಿದ್ದಂಗ್ ದುಡು ದುಡು ಅಂತಾ ಕಸಾನ ಕವರ್‌ನಾಗ್ ಕಟ್ಕೊಂಡು ದೂರ್ದಿಂದ ಗುಡ್ ಥ್ರೋ ಮಾಡಿ ಗಪ್ ಆಗಿಬಿಡ್ತಾರೆ. ಮುಂಜೇಲೆ ಕೇಳಿದ್ರೆ ನಾವಲ್ರೀ, ನಾವಲ್ರೀ ಅಂತಾ ಜೋರು ಮಾಡ್ತಾರ.



ಮುಂಜೇಲೆ ಕಸದ್ ಗಾಡಿ ಮನ್ಮನೀಗ್ ಬಂದ್ರೂ ಸೈತ ಕಸ ಕೊಡಾಕ್ ಹಿಂದು

ಮುಂದು ನೋಡ್ತಾರ್ರೀ.  ಎಷ್ಟೋ ಮಂದೀ ನಾವು ಕೆಲಸದಲ್ಲದೀವಿ, ಮಡೀಲಿದೀವಿ ಅಂತಾ ಕಸಾ ಕೊಡಾಕಾ ಹೋಗಂಗಿಲ್ರೀ.  ಆಮ್ಯಾಗ್ ಮನೀ ಕೆಲಸದೋರ್ ಕೂಡೇ ಒಗ್ದು ಬಾ ಅಂತಾ ಹೇಳ್ತಾರ.  ಅವ್ರಿಗೇನು ಎಲ್ಲೋ ಒಂದು ಕಡೀ ಸುರುವಿ ಬರ್ತಾರ. ಇವರ್ ಮನೀ ಕಸ ಇವ್ರಿಗೇ ಮುಟ್ಟಾಕ್ ಹೇಸ್ಗೀ ಆದ್ರ, ಸ್ವಚ್ಛತಾ ಕಾರ್ಮಿಕರು ಎಷ್ಟು ಅಸಹ್ಯ ಪಟ್ಕೋಬೇಕು ಅಂತಾ ಯೋಚ್ನೀನೇ ಮಾಡಂಗಿಲ್ರೀ.  ಪ್ರಯಾಣ ಮಾಡೂ ಮುಂದಾ ಬಸ್ಸು, ಕಾರು, ರೈಲು ಎಲ್ಲಾನೂ ಮಂದೀಗೆ ಡಸ್ಟ್‌ಬಿನ್‌ಗತ್ಲೇ ಕಾಣ್ತದೋ ಹೆಂಗೋ ಗೊತ್ತಿಲ್ಲ, ತಿಂದು ಕುಡ್ದು ಎಲ್ಲ ಕಸಾನೂ ಅಲ್ಲೇ ಸೀಟಿನ ಬುಡಕ್ ಒಗಿತಾರ. ಜೊತೀಗ್ ಕಿಡಕ್ಯಾಗಿಂದ ಹೊರಾಗ್ ಸೈತ ಒಗಿತನೇ ಇರ್ತಾರ.

ಮಂದೀ ಅವರವರ ಮನೀ ಪೂರ್ತೇಕೆ ಅಷ್ಟಾ ನೀಟಾಗಿಟ್ಕೊಂಡಿರ್ತಾರೆ.  ಯಾವ್ದೋ ಪ್ರೋಗ್ರಾಂನಾಗ ನಟ ಆಮೀರ್ ಖಾನ್ ಹೇಳಿದ್ದು ನೆನಪಾಕ್ಕೇತಿ.  ಅವರ ಮನೀಗೆ ಬಂದಿದ್ದ ಬ್ಯಾರೇ ದೇಶದ್ ಮಂದಿ, ನಿಮ್ಮ ಮನೀ ನೋಡಿದ್ರ ಇಷ್ಟು ಸ್ವಚ್ಛ ಐತಿ, ಒಂದೀಟಾದ್ರೂ ಕಸಾ, ಧೂಳಾ ಇಲ್ಲ,  ಆದ್ರ ಮನೀಗ್ ಬರೂ ದಾರೀ ಪೂರ್ತೆ ಕಸಾನೇ ಐತಲ್ರೀ ಅಂದಿದ್ರಂತ.  ಪಾಪ ಏನು ಹೇಳಾಕ್ ಆಕ್ಕೇತಿ ಬಿಡ್ರೀ.  ಅದೇ ನಮ್ ಮಂದೀ ವಿದೇಶಕ್ಕೆ ಹೋದ್ರೂ ಅಂದ್ರಾ, ಅಲ್ಲಿ ಅದೆಷ್ಟು ಸ್ವಚ್ಛತಾ ಪಾಲಿಸ್ತಾರ ಅಂದ್ರ ನೋಡ್ದೋರಿಗೆ ಒಂದ್ನಮೂನಿ ಕನ್ಫ್ಯೂಸ್ ಆಗ್ಬೇಕು.  ನಿಜವಾಗ್ಲೂ ಇವ್ರು ತಮ್ಮ ದೇಶದಾಗ್ ತಮ್ ಮನೀ ಸುತ್ತಾ, ಕಂಡಕಂಡಲ್ಲೇ ಕಸ ಒಗಿಯೋ ಭಾರತೀಯ ಮಂದೀನಾ ಹೌದೋ ಅಲ್ವೋ ಅಂತಾ.  ಇಂಡಿಯಾದಾಗ ನಾಯಿ ಗೀಯಿ ಸಾಕ್ಕೊಂಡಿದ್ರ,  ವಾಕಿಂಗ್ ಕರ್ಕೊಂಡ್ ಹೋಗಿ ಅವ್ರಿವ್ರ ಮನೀ ಮುಂದ ಸದ್ದಿಲ್ದಂಗ್ ಹೊಲಸು ಮಾಡ್ಸ್ಕೋತ ಆರಾಮಾಗಿರೋರು, ಫಾರಿನ್ ಬಂದ್ ಮ್ಯಾಗ ಅದೆಷ್ಟು ಕಾಳಜೀಲಿ ಹೊಲಸು ಹಿಡಿಯಾಕ ನೆಟ್ ಇರೂ ಬಡಿಗಿ ಇಟ್ಕೊಂಡು, ನಾಯಿ ಹೊಲಸು ಮಾಡೋಕ್ ನಿಲ್ತಿದ್ದಾಂಗ್ ಅದರ ಬುಡಕ್ಕ ಹಿಡ್ದು, ಕಲೆಕ್ಟ್ ಮಾಡ್ಕೊಂಡು, ಒಂದು ಚೀಲಾದಾಗ್ ತುಂಬ್ಕೊಂಡು ಹೋಕ್ಕಾರ.  ಇಲ್ಲಾ ಅಂದ್ರ ಸಾವಿರಾರು ರೂಪಾಯಿ ದಂಡಾ ಬೀಳ್ತದೆ ಅಂತಾ ಗೊತ್ತೇತಿ. ನಮ್ಮ ದೇಶದಾಗ ಅಂತಾ ಭಯ ಇಟ್ಟಿಲ್ಲ ನೋಡ್ರೀ, ಅದಕ್ಕಾ ಹಂಗಾಡ್ತಾರಾ.  ಅಕಸ್ಮಾತ್ ದಂಡಾ ಗಿಂಡಾ ಇಟ್ರೂ ಸೈತ, ಲಂಚಾ ಗಿಂಚಾ ಕೊಟ್ಟು ಅಧಿಕಾರಿಗಳನ್ನೇ ಬುಟ್ಟಿಗೆ ಹಾಕ್ಕೊಳ್ಳೋಷ್ಟು ಶಾಣ್ಯಾರು.

ಮೊನ್ನೀ ನಮ್ ಹುಬ್ಳೀ–ಧಾರ್ವಾಡ ನಗರಪಾಲಿಕೆಯೋರು ಒಂದಷ್ಟು ಕಸ ಒಗಿಯೋ ಜಗಾ ಗುರುತಿಸಿ, ಅಲ್ಲೆಲ್ಲ ಸ್ವಚ್ಛ ಮಾಡ್ಸೀ, ಸಸಿ ನೆಟ್ಟು, ರಂಗೋಲಿ ಹಾಕ್ಸೋ ಅಂತಾ ಭಲೋ ಕೆಲಸ್ ಮಾಡಿದ್ರು.  ಕತ್ತೀಗ್ಯಾಕ್ ಹತ್ತೀಕಾಳ್ ಮುಸುರೀ ಅನ್ನೂ ಹಂಗಾ, ಮತ್ತ ಮಂದೀದು ಅದಾ ರಾಗ, ಅದಾ ಹಾಡು.  ಅದು ಎಷ್ಟರ ಮಟ್ಟಿಗೆ ಮಂದಿಗೆ ಅರ್ಥ ಆಕ್ಕೇತೋ ತಿಳಿಯಂಗಿಲ್ಲ.  ಅದ್ರಾಗೂ ಗುಟ್ಕಾ ಎಲೀ ಅಡಿಕೀ ಹಾಕ್ಕೊಂಡು ಜಗದು ಜಗದು ಸಿಕ್ ಸಿಕ್ಕಲ್ಲೇ ಉಗಿಯೋದ್ರಾಗ್ ನಮ್ ಮಂದೀ ಎತ್ತಿದ್ ಕೈ ರೀಪಾ.  ಯಾವುದಾದ್ರೂ ಕಾಂಪ್ಲೆಕ್ಸ್ ಮೆಟ್ಲಾ ಹತ್ತೂ ಮುಂದೆ ಭಾರೀ ಹುಷಾರಾಗಿರ್ಬೇಕ್ರೀ. ಎರಡೂ ಕಡೀ ಆಸರಕ್ಕ ಕಂಬಿ ಸೈತ ಹಿಡಿಲಾರದಷ್ಟು ಉಗ್ದು ಗಲೀಜು ಮಾಡಿರ್ತಾರ. ಇನ್ನು ಗ್ವಾಡೀ ಅಂತೂ ನೋಡೂ ಸ್ಟೇಟಸ್‌ನಾಗೇ ಇರಾಂಗಿಲ್ಲ.  ಹಂಗಾಗಿ ಹೊಸ ಹೊಸಾ ಕಾಂಪ್ಲೆಕ್ಸ್‌ನಾಗೇ, ಸಾರ್ವಜನಿಕ ಸ್ಥಳಾ ಅಂತಾ ಕೆಲವು ಕಡೀ ಸುಣ್ಣಾ ಬಣ್ಣಾ ಬಳಿದ ಮ್ಯಾಗ್ ದೇವರ ಫೋಟೋದ್ ಒಂದು ಟೈಲ್ಸ್ ಹಚ್ಚಿಬಿಡ್ತಾರಾ.  ದೇವರ ಬಗ್ಗೀ ಭಯಾ ಭಕ್ತೀ ಸ್ವಲ್ಪ ಜಾಸ್ತೀ ಇರೋದ್ರಿಂದಾ, ಏನಾದ್ರೂ ಮಂದೀ ಸುಧಾರಿಸ್ತಾರೇನೋ



ಅಂತಾ ಒಂದು ಆಶಾ ನೋಡ್ರೀ. ಕೆಲವು ಕಡೀ ಅದರ್ ಮ್ಯಾಗ್ ಸೈತ ಪ್ರೋಕ್ಷಣೆ ಆಗಿರ್ತದ್ರೀ. ಅಷ್ಟಾ ಯಾಕೆ ತಮ್ಮ ತಮ್ಮ ಅಂಗಡೀ ಮುಂದ ಕಸಾ ಹುಡುಗಿ, ನೀರು ಹಾಕ್ತಾರಾ, ಆಮ್ಯಾಕೆ ತಾವೇ ಎಲೆಅಡ್ಕೀ ಗುಟ್ಕಾ ಅಗ್ದು ಉಗೀತಾರಾ. ಇನ್ನು ಬಸ್, ಆಟೋ ಬಾಜೂಕ್ ಅಪ್ಪೀ ತಪ್ಪೀನಾರಾ ನೀವು ನಿಂತಿದ್ರೀ ಅಂದ್ರ ಮುಗೀತು ಕಥಿ, ಮ್ಯಾಗಿಂದ ಯಾವಾಗ ಉಗುಳು ಮಳಿ ಸುರಿಸ್ತಾರೋ ಗೊತ್ತಾಗಂಗಿಲ್ಲ.

ಇನ್ನು ಪಾಲಿಕೆಯೋರು ತುಂಬಿಕೊಂಡು ಹೋದ ಕಸಾನಾ ಚೆಲ್ಲೋಕ್ ಜಗಾದ್ದೇ ದೊಡ್ಡ ಸಮಸ್ಯೆ. ಊರ್ ಹೊರಾಗೆ ಕಸ ವಿಂಗಡನೆ ಘಟಕ, ಅದೂ ಇದೂ ಅಂತಾ ಮಾಡಿದ್ರೂ ಯಾವ್ದೂ ಸೈತ ಸರ್‍ಯಾಗಿ ಕೆಲ್ಸ ಮಾಡ್ಲಿಕತ್ತಿಲ್ಲ. ಸುತ್ತಾ ಮುತ್ತಾ ಇರೋ ಹಳ್ಳೀ ಮಂದೀ, ಇಲ್ಲಿ ಕಸಾ ಒಗಿಯಾಕ್ ಬಿಡಾಂಗಿಲ್ಲ ನಾವು, ಕಸದ ಊರು ಅಂತಾ ಹೇಳಿ ಮಂದೀ ಹೆಣ್ಣು ಕೊಡಾಕ್ ಹಿಂದಾ ಮುಂದಾ ನೋಡ್ಲಿಕತ್ತಾರೆ ಅಂತಾ ಸರ್ಕಾರದ ಕೂಟೇ ಜಗ್ಳಾ ತೆಗಿಯಾಕತ್ತಾರಾ ಅಂತಾ ಸುದ್ದಿ. ಪ್ಲಾಸ್ಟಿಕ್, ದವಾಖಾನೆ ತ್ಯಾಜ್ಯ, ಮಕ್ಕಳ ಡಯಾಪರ್‌ಗಳು, ದೊಡ್ಡವರ ಡಯಾಪರ್‌ಗಳು, ಹೆಣ್ಣುಮಕ್ಳು ಮುಟ್ಟಿನ ದಿನದಾಗ್ ಉಪಯೋಗಿಸೋ ನ್ಯಾಪ್ಕಿನ್‌ಗಳು, ಇತ್ತೀಚೆಗೆ ಹೊಸದಾಗಿ ಸೇರ್ಪಡೆಯಾಗಿರೋ ಮಾಸ್ಕು ಜೊತೀಗ್ ಈ ಕಸ, ಇಂಥವೆಲ್ಲ ದೊಡ್ಡ ಸಮಸ್ಯಾನಾ ಸೃಷ್ಟಿಸ್ಲಿಕತ್ತಾವ. ಮನುಷಾ ಎಷ್ಟು ಹೊಸ ವಸ್ತು ಅನ್ವೇಷಣಾ ಮಾಡ್ಲಿಕತ್ತಾನೋ, ಅಷ್ಟು ಕಸದ ಸಮಸ್ಯಾ ಹೆಚ್ಚಾಗ್ತಾನಾ ಐತಿ.

ಒಂದು ಹಾಡಾ ಐತಿ ನೋಡ್ರೀ 'ಅವ ನಡಿಯೋ ದಾರೀಲಿ, ಗರಿಕೇನೂ ಬೆಳಿಯಲ್ಲಾ' ಅಗ್ದೀ ಖರೇ ಅದು. ಕಾಡು, ಮೇಡು, ರಸ್ತೆ, ನದಿ, ಬಾವಿ, ಹಳ್ಳ, ಕೊಳ್ಳ, ಸಮುದ್ರ, ಪರ್ವತ, ಒಟ್ಟಾ ಈ ಮನುಷ್ಯಾ ಎಲ್ಲೆಲ್ಲಿ ಕಾಲಿಡ್ತಾನೋ ಅಲ್ಲಿಗ್ ಅದ್ರ ಕತಿ ಮುಗೀತು ಅಂತಾ ತಿಳ್ಕೋಬೇಕೂ. ಕಾಲಿಟ್ಟಲ್ಲೆಲ್ಲಾ ಕಸ ಸುರುವಿ ಹೊಲಸೆಬ್ಬಿಸಿ ಬರ್ತಾನಾ. ಇನ್ನು ಪಾತಾಳನಾದ್ರೂ ಬಿಟ್ಟಾನೇನ್ರೀ. ಒಂದೆರಡು ಅಡೀ ಭೂಮೀನ ಅಗ್ದು ನೋಡಿದ್ರ ಗೊತ್ತಾಕ್ಕೇತಿ, ಬರೀ ಪ್ಲಾಸ್ಟಿಕ್ ಕಸಾನೇ ಕೈಗ್ ಹತ್ತೇತಿ. ಇನ್ನು ಕಾರ್ಖಾನೆ ಸುರಿಯೋ ರಾಸಾಯನಿಕ ನೀರು ಪಾತಾಳ ಸೇರಿ ಜಲಮೂಲಾನೆಲ್ಲ ಕಲುಷಿತ ಮಾಡ್ತಾವಂತ್ರೀಪಾ. ಸಮುದ್ರಾಗಂತೂ ಟನ್ನಗಟ್ಲೆ ತ್ಯಾಜ್ಯ ಸಂಗ್ರಹ ಅದಾಂತ. ಹೋಗ್ಲಿ ಆಕಾಶನಾದ್ರೂ ಕಸಮುಕ್ತ ಆಗೇತಪ್ಪಾ ಅಂತಾ ಅನ್ಕೊಳೋ ಹಾಗೇ ಇಲ್ಲ. ಅಲ್ಲೂ ಮನುಶಾ ಹಾರಿಸಿದ ಕೃತಕ ಉಪಗ್ರಹಗಳ ಕಸದ ಹಾವಳಿ. ಇನ್ನು ಚಂದ್ರಲೋಕದಾಗೋ ಅಥವಾ ಮತ್ತೆ ಬ್ಯಾರೆ ಗ್ರಹದಾಗೋ ಜೀವನಾ ಮಾಡಬೋದೇನೋ ಅಂತಾ ಪರೀಕ್ಷೆ ಮಾಡ್ತಾನೇ ಅದಾನೆ. ಅವುಗಳನ್ನ ಸೈತ ಕಸದಿಂದ ಕಲುಷಿತ ಮಾಡೇ ಕೈಬಿಡೂದು ಅನ್ನಿಸ್ಲಿಕತ್ತೇತಿ. ಜಗತ್ತು ಅಗ್ನಿಪ್ರಳಯಾ, ಜಲಪ್ರಳಯ ಆಗಿ ಮುಳುಗಿ ಹೋಕ್ಕೇತೋ ಇಲ್ಲೋ ಗೊತ್ತಿಲ್ಲ, ಆದ್ರಾ ಬಹುತೇಕ ಎಲ್ಲಾ ರೀತಿ ಪ್ರಳಯಕ್ಕೂ ಕಸಾನೇ ಮುಖ್ಯ ಮೂಲ ಕಾರಣ ಆಗೂದಂತೂ ಖರೇ ನೋಡ್ರೀ... ■

---



**ಯಾವುದೇ ಮಹಿಳೆಯ ವಯಸ್ಸನ್ನು**
**ತಿಳಿಯಬೇಕಾದರೆ, ಆಕೆಯ ನಾದಿನಿಯನ್ನು**
**ಕೇಳಬೇಕು.**

# ತೀರ್ಥಯಾತ್ರೆ

***ಸಿ.ಆರ್.ಸತ್ಯ**

ಇತ್ತೀಚೆಗೆ ಯಾಕೋ ನನ್ನ ದಿನನಿತ್ಯ ಜೀವನದಲ್ಲಿ ಜಿಗುಪ್ಸೆ ಬಂದು ನಾನು ಎಲ್ಲಾ ತೊರೆದು ಎಲ್ಲಿಗಾದರೂ ತೀರ್ಥಯಾತ್ರೆಗೆ ಹೋಗೋಣ, ಹಿಮಾಲಯದ ತಪ್ಪಲಲ್ಲೋ ಇನ್ನೆಲ್ಲೋ  ಮುಂದಿನ ಜೀವನ ಸಾಗಿಸೋಣ ಅಂತ ಯೋಚನೆ ಬಂತು. ಒಂದು ದಿವಸ ನನ್ನ ಹೆಂಡತಿ, ಮಗ, ಮಗಳು, ಮೊಮ್ಮಕ್ಕಳು ಎಲ್ಲಾ ಜೊತೆಗೆ ಇದ್ದಾಗ ಈ ವಿಷಯವನ್ನು ಪ್ರಸ್ತಾಪಿಸಿದೆ. ಎಲ್ಲರಿಗೂ ನನ್ನ ಯೋಚನೆಯಿಂದ ಶಾಕ್ ಆಗುತ್ತೆ ಅಂತ ಅಂದ್ಕೊಂಡಿದ್ದೆ. ಆದರೆ ಆಗಿದ್ದೇ ಬೇರೆ.

ನನ್ನ ಹೆಂಡತಿ,"ಸಧ್ಯ ನಿಮಗೂ ಒಳ್ಳೆ ಬದಲಾವಣೆ ಆಗುತ್ತೆ. ನನಗೂನು ನಿಮ್ಮನ್ನ ನೋಡಿಕೊಳ್ಳೊದು ತಪ್ಪುತ್ತೆ. ತೀರ್ಥಯಾತ್ರೆ ಖಂಡಿತಾ ಮಾಡಿ. ನಾಲಕ್ಕೋ ಐದು ವರ್ಷಗಳೋ ಇಷ್ಟ ಬಂದ ಕಡೆ ಹೋಗಿ ದೇವರು ದಿಂಡರು ಅಂತ ಓಡಾಡಿಕೊಂಡು ಬೇಜಾರಾದರೆ ಮನೆಗೆ ವಾಪಸ್ಸು ಬನ್ನಿ" ಅಂತ ಅಂದಳು–ವಿತೌಟ್ ಬ್ಯಾಟಿಂಗ್ ಎನ್ ಐ ಲಿಡ್.

ನನ್ನ ಮಗಳು "ಗುಡ್ ಐಡಿಯಾ ಡ್ಯಾಡಿ. ಹೋಗಿಬನ್ನಿ. ನಿಮಗೂನು ರಿಟೈರ್ಡ್ ಆದಮೇಲೆ ಮಾಡೋದಕ್ಕೆ ಏನೂ ಕೆಲಸ ಇಲ್ಲ. ನೀವು ಅಮ್ಮನ್ನ ಅದು ಇದು ಅಂತ ಗೋಳಾಡಿಸೋದೂ  ತಪ್ಪುತ್ತೆ. ನಿಮಗೆ ಒಂದು ಸ್ಮಾರ್ಟ್ ಫೋನ್ ಕೊಡ್ತೀನಿ. ನೀವು ಹೋಗೋ ಹಿಮಾಲಯ ತಪ್ಪಲಲ್ಲಿ ನೆಟ್ ವರ್ಕ್ ಇದ್ದರೆ ಆವಾಗ ಒಂದೊಂದು ಸಲ ವಾಟ್ಸಾಪ್ ಮಾಡ್ತೀನಿ. ಯಾವಾಗ ಹೊರಡುತ್ತೀರ ಹೇಳಿ. ನಿಮಗೆ ದೆಹಲಿ ತನಕ ಟ್ರೈನ್ ನಲ್ಲಿ ಬುಕ್ ಮಾಡ್ತೀನಿ. ದೆಹಲಿನಲ್ಲಿ ಸ್ವಲ್ಪಸಮಯ ಇದ್ದು ಬದರಿ, ಕೇದಾರನಾಥ್, ಕಾಶಿ, ಹರಿದ್ವಾರ, ಹೃಷಿಕೇಶ್ ಇಲ್ಲೆಲ್ಲಾ ಸುತ್ತು ಹಾಕಿಕೊಂಡು ಎಲ್ಲಿ ಕೊನೆಗೆ ಝೂಂಡಾ ಹೂಡ್ತೀರ ಅಂತ ಡಿಸೈಡ್ ಮಾಡಿ, ನಮಗೆ ತಿಳಿಸಿ" ಅಂತ ಅಂದಳು.

ನನ್ನ ಮಗ "ತೀರ್ಥಯಾತ್ರೆ ಅಂದ ಮೇಲೆ ಎಲ್ಲೂ ಝೂಂಡಾ ಹೂಡಬಾರದು ಡ್ಯಾಡಿ. ಒಂದು ಪುಣ್ಯ ಕ್ಷೇತ್ರದಿಂದ ಇನ್ನೊಂದು ಪುಣ್ಯ ಕ್ಷೇತ್ರಕ್ಕೆ ಹೋಗ್ತಾನೆ ಇರಬೇಕು. ಹೋದ ಕಡೇಲೆಲ್ಲಾ ತೀರ್ಥ ತೊಗೋತಾನೆ ಇರಬೇಕು. ನೀವು ಇಲ್ಲಿ ಕುಡಿಯೋ ತೀರ್ಥಗಳು ಎಲ್ಲಾ ಕಡೇನು ಸಿಗುತ್ವೆ. ನಿಮಗೆ ನಾನು ಒಂದು ಕ್ರೆಡಿಟ್ ಕಾರ್ಡ್ ಮಾಡಿಸಿಕೊಡ್ತೀನಿ. ಹೋದ ಕಡೇಲೆಲ್ಲಾ ಯಾವ ಬ್ರ್ಯಾಂಡ್ ತೀರ್ಥನಾದ್ರೂ ಕುಡಿತಾ ಇರಬಹುದು. ಯಾತ್ರೆ ಅಂದ ಮೇಲೆ ತುಂಬಾ ನಡಿತಾನೆ ಇರಬೇಕು. ನಿಮಗೆ ಲೇಟೆಸ್ಟ್ ಮಾಡಲ್ ಹೈಕಿಂಗ್ ಶೂಸ್ ತೆಕ್ಕೊಡ್ತೀನಿ. ಅವನ್ನು ಹಾಕಿಕೊಂಡು ಓಡಾಡಿ. ನಿಮ್ಮ ರಿಟೈರ್ ಮೆಂಟ್ ದುಡ್ಡನ್ನು ಧಾರಾಳವಾಗಿ ಖರ್ಚು ಮಾಡಿ. ಈಗ ಇರೋಹಾಗೆ ಒಂದೊಂದು ರೂಪಾಯಿ ಖರ್ಚಿಗೂ ಅಮ್ಮನ್ನ ಪರ್ಮಿಷನ್ ತೊಗೊಳ್ಳೋದು ತಪ್ಪುತ್ತೆ. ನಿಮ್ಮ ತೀರ್ಥಯಾತ್ರೆ ಐಡಿಯಾ ಇಂದ ನಮಗೆ ಮಾತ್ರ ಸಂತೋಷ ಆಗ್ತಿದೆ ಅಂತ ಅಂದ್ಕೋಬೇಡಿ. ನಿಮ್ಮ ವಾಕಿಂಗ್ ಫ್ರೆಂಡ್ಸ್ ಗೂ ಬಹಳ ಖುಷಿ ಆಗುತ್ತೆ. ಅವರ್ಗೂನೂ ನಿಮ್ಮ ಮಾತು ಕೇಳಿ ಕೇಳಿ ಸಾಕಾಗಿ ಹೋಗಿದೆ ಅಂತ ನನ್ನ ಹತ್ತಿರ ಎಷ್ಟೋ ಸಲ ಹೇಳಿದ್ದಾರೆ" ಅಂತ ಅಂದ.

ನನ್ನ ಮಗಳು "ನಾನು ಪುಸ್ತಕದಲ್ಲಿ ಓದಿದ್ದು ಜ್ಞಾಪಕ ಬಂತು. ತೀರ್ಥಯಾತ್ರೆ



ಅಂದ ಮೇಲೆ ಮಠಗಳಲ್ಲೋ ಛತ್ರಗಳಲ್ಲೋ ಇರಬೇಕು, ಅವರು ಹಾಕಿದ ಊಟ ಮಾಡಬೇಕು ಅಂತೆಲ್ಲಾ ಓದಿದ್ದೆ. ಸಧ್ಯ ನೀವು ಮಠ ಗಿಠ ಅಂತ ಹುಡುಕಾಡಬೇಡಿ. ಹೋದ ಕಡೇಲೆಲ್ಲಾ ತ್ರೀಸ್ಟಾರ್ ಅಥವಾ ಫೋರ್ ಸ್ಟಾರ್ ಹೋಟೆಲ್‌ನಲ್ಲಿ ರೂಮ್ ತೊಗೊಳ್ಳಿ. ಬೆಳಿಗ್ಗೆ ಒಳ್ಳೆ ಬ್ರೇಕ್ ಫಾಸ್ಟ್ ಮಾಡಿಕೊಂಡು ಹೊರಗೆ ಹೊರಡಿ. ಸಂಜೆ ವಾಪಸ್ ಬಂದು ನಿಮ್ಮ ತೀರ್ಥ ಸೆಷನ್ ನಡಿಸ್ಕೊಳ್ಳಿ" ಅಂತ ಅಂದಳು.

ನಾನು "ದೇವರ ಮೊರೆ ಹೋಗೋದಿಕ್ಕೆ  ನಾನು ತೀರ್ಥಯಾತ್ರೆ ಅಂತ ಯೋಚನೆ ಮಾಡಿದ್ದು. ತೀರ್ಥ ಅಂದರೆ ಇಲ್ಲಿ ಸಂಜೆ ತೊಗೊಳ್ಳೊ ಡ್ರಿಂಕ್ಸ್ ಮಾತ್ರ ಅಲ್ಲ. ದೇವರಪೂಜೆ ಆದಮೇಲೆ ದೇವಸ್ಥಾನಗಳಲ್ಲಿ ಅರ್ಚಕರು ಕೊಡೋ ತೀರ್ಥ. ಎಲ್ಲಾ ಪ್ರಸಿದ್ಧ ದೇವಸ್ಥಾನಗಳಿಗೂ ಹೋಗಿ ಅಲ್ಲಿಯ ತೀರ್ಥ ಕುಡಿಯೋಕ್ಕೆ  ನಾನು ತೀರ್ಥಯಾತ್ರೆ ಐಡಿಯ ಹೇಳಿದ್ದು" ಅಂತ ವಿವರಣೆ ಕೊಟ್ಟೆ.

ಇಲ್ಲಿ ತನಕ ಮಾತಿಲ್ಲದೆ ಸುಮ್ಮನೆ ಕೇಳ್ತಾ ಕೂತಿದ್ದ ನನ್ನ ಮೊಮ್ಮಗ, ಭಾರಿ ಚೂಟಿ ಹುಡುಗ, ಈಗ ಬಾಯಿಬಿಟ್ಟ. "ತಾತಾ, ನಿಮ್ಮ ಐಡಿಯಾ ನನಗೆ ಚೆನ್ನಾಗಿ ಅರ್ಥವಾಯ್ತು. ನಮಗೆಲ್ಲಾ ತಿಳಿದಿರೋಹಾಗೆ ನಿಮಗೆ ಹೇಗಿದ್ದರೂ ಮಾಮೂಲಿ ತೀರ್ಥ ಪ್ರತಿ ದಿನ ಬೇಕೇ ಬೇಕು. ಈಗ ನಿಮಗೆ ದೇವಸ್ಥಾನಗಳ ತೀರ್ಥಾನೂ ಬೇಕು ಅನ್ನೋ ಆಸೆ ಆಗಿದೆ. ಒಂದು ಕೆಲಸ ಮಾಡಿ. ಡ್ಯಾಡಿ ಮಮ್ಮಿ  ಜೊತೆಗೆ ನಾವು  ಹಾಸನದ ಹತ್ತಿರ ಒಂದು ರೆಸಾರ್ಟ್ ಗೆ ಹೋಗಿದ್ವಿ. ಅಲ್ಲಿಗೆ ನೀವು ಹೋಗಿ ಸ್ವಲ್ಪ ದಿನ ಕಳೆಯಿರಿ. ಒಳ್ಳೆ ಬ್ರೇಕ್ ಫಾಸ್ಟ್, ಮಧ್ಯಾನ್ಹದ ಊಟ, ರಾತ್ರಿ ಊಟ ಎಲ್ಲಾ ನೀವು ಹೇಳಿದ ಹಾಗೆ ರುಚಿ ರುಚಿಯಾಗಿ  ಮಾಡ್ತಾರೆ. ಅದಲ್ಲದೆ ಸಂಜೆ ವೇಳೆ ಪೂಲ್ ಸೈಡ್ ನಲ್ಲೂ ನಿಮಗೆ ತೀರ್ಥ ಸಪ್ಲೈ ಮಾಡ್ತಾರೆ. ಹಾಸನದಲ್ಲೇ ಹಾಸನಾಂಬೆ, ಇನ್ನೂ ಬೇಕಾದಷ್ಟು ದೇವಸ್ಥಾನಗಳಿವೆ. ಅದೂ ಅಲ್ಲದೆ  ಅಲ್ಲಿಂದ ನೀವು ಒಂದು ಕಾರ್ ಮಾಡಿಕೊಂಡು ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಮಂಗಳೂರು ಇಲ್ಲೆಲ್ಲಾ ಇರೋ ನೂರಾರು ದೇವಸ್ಥಾನಗಳಿಗೆ ಸುಲಭವಾಗಿ ಹೋಗಬಹುದು. ಹಾಗಾಗಿ ನಿಮಗೆ ದೇವರ ದರ್ಶನವೂ ಚೆನ್ನಾಗಿ ಅಗುತ್ತೆ. ಎಲ್ಲಾ ದೇವರ ತೀರ್ಥಾನು ಕುಡಿದ ಹಾಗೆ ಆಗುತ್ತೆ" ಅಂತ ಸಲಹೆ ಕೊಟ್ಟ.

ನಾನು " =ಒಳ್ಳೆ ಪ್ಲಾನ್ ಹೇಳಿದೆ ಮರಿ. ಆದರೆ ಹಾಸನ ಬೆಂಗಳೂರಿಗೆ ತುಂಬಾ ಹತ್ತಿರ  ಇದೆ. ನೀವುಗಳು ನನ್ನನ್ನ ನೋಡೋದಿಕ್ಕೆ ಅಂತ  ಆವಾಗಾವಾಗ ಬಂದು ನನ್ನನ್ನು ಡಿಸ್ಟರ್ಬ್ ಮಾಡಬೇಡಿ ಅಷ್ಟೆ" ಅಂದೆ. ಅದಕ್ಕೆ ನನ್ನ ಹೆಂಡತಿ "ನಿಮ್ಮನ್ನ ಒಂದು ಐದು ವರ್ಷನಾದ್ರೂ ನಾವು ಯಾರೂ ಮಾತನಾಡಿಸೋದಿಲ್ಲ. ಆ ದಿಕ್ಕಿಗೆ ನಾವು ಬರೋದೂ ಇಲ್ಲ. ಸಧ್ಯ ನಮ್ಮನ್ನು ಡಿಸ್ಟರ್ಬ್ ಮಾಡದೆ ನೀವು ಹಾಯಾಗಿ ಇದ್ದರೆ ನಾವೂ ಹಾಯಾಗಿ ಇರ್ತೀವಿ ಅನ್ನೋದು ಮರೆಯಬೇಡಿ" ಅಂತ ಅಂದಳು.

ನನ್ನ ಮಗ "ಸರಿ, ಈಗ ಎಲ್ಲಾ ಸೆಟ್ಲ್ ಆಯ್ತಲ್ಲಾ, ಗುಡ್!. ನಾನು ಈಗಲೇ ರೆಸಾರ್ಟ್‌ನಲ್ಲಿ ನಿಮಗೆ ಒಂದು ರೂಮ್ ಬುಕ್ ಮಾಡ್ತೀನಿ.  ಮೊದಲನೇ ಹಂತಕ್ಕೆ ಐದು ವರುಷಗಳಿಗೆ ಬುಕ್ ಮಾಡ್ತೀನಿ. ಆವಾಗ ಸ್ವಲ್ಪ ಚೀಪಾಗೂ ರೂಮು ಸಿಗುತ್ತೆ. ನೀವು ಸಂಜೆ ತೊಗೊಳ್ಳೋ ತೀರ್ಥ ಯಾವ ಬ್ರ್ಯಾಂಡ್ ಅಂತ ತಿಳಿಸಿ. ರೆಸಾರ್ಟ್ ನವರು ಅದನ್ನು  ದಿನಾ ತರಿಸಿ  ಇಡ್ತಾರೆ. ಇಲ್ಲದಿದ್ದರೆ ನಿಮಗೆ ಬರೀ ದೇವರ ತೀರ್ಥ ಸರಿಹೋಗಲ್ಲ. ಅದಷ್ಟು ಬೇಗ ಹೊರಡೋದಕ್ಕೆ ರೆಡಿಯಾಗಿ. ನಾನು ಈಗಲೇ ರೆಸಾರ್ಟ್ ಬುಕ್ ಮಾಡ್ತೀನಿ" ಅಂತ ಹೊರಟ. ಎಲ್ಲರೂ ಸಂತೋಷದಿಂದ ಒಪ್ಪಿಗೆ ಸೂಚಿಸಿದ್ರು.



ನನ್ನ ಹೆಂಡತಿ ಅಂತೂ ತಕ್ಷಣವೇ ಬೆಡ್ ರೂಮ್‌ಗೆ ಹೋಗಿ ಒಂದು ಸೂಟ್ ಕೇಸ್ ನಲ್ಲಿ ನನ್ನ ಬಟ್ಟೆ ಬರಿ ಎಲ್ಲಾ ಪ್ಯಾಕ್ ಮಾಡೇ ಬಿಟ್ಳು. ನನ್ನ ಮಗಳು ಹಾಸನಕ್ಕೆ ಹೋಗೋಕ್ಕೆ ಅಂತ ಒಂದು ಟ್ಯಾಕ್ಸೀನೂ ಬುಕ್ ಮಾಡಿದ್ಲು.

ಹೀಗೆ, ಎಲ್ಲರೂ ಎಷ್ಟು ಸಂತೋಷದಿಂದ ನನ್ನನ್ನು ಕಳಿಸಿಕೊಟ್ಟರು ಅಂತೀರಿ.

ನಾನು ಈಗ ರೆಸಾರ್ಟ್‌ಗೆ ಬಂದು ಒಂದು ತಿಂಗಳು ಆಗ್ತಾ ಬಂತು. ಹಾಯಾಗಿ ದೇವರ ತೀರ್ಥ ಬಾಟಲ್ ತೀರ್ಥ ಅಂತ ನನ್ನ ತೀರ್ಥ ಯಾತ್ರೆಗೆ ಒಂದು ಟೈಮ್ ಟೇಬಲ್ ಹಾಕ್ಕೊಂಡಿದೀನಿ. ಆವಾಗಾವಾಗ ನನ್ನ ಮಗನಿಗೆ, ಮಗಳಿಗೆ ಹೆಂಡತಿಗೆ ವಾಟ್ಸಾಪ್ ಮಾಡ್ತೀನಿ. ಆದ್ರೆ ಒಬ್ಬರೂ ಉತ್ತರ ಕೊಡೊದಿಲ್ಲ. ನಾನು ಹಾಯಾಗಿ ಇಲ್ಲಿ ಇದ್ದರೆ ಬೆಂಗಳೂರಿನಲ್ಲಿ ನನ್ನ ಸಂಸಾರಾನೂ ವಾಕಿಂಗ್ ಫ್ರೆಂಡ್ಸೂ ಹಾಯಾಗಿ ಇರ್ತಾರೆ ಅಂತ ಈಗ ಮನದಟ್ಟು ಆಗಿದೆ. ಸರ್ವೇ ಜನಾ: ಸುಖಿನೋ ಭವಂತು.

ಹಿಮಾಲಯ ತಪ್ಪಲು ಬಹಳ ದೂರ ಆಯ್ತು ಆದರೆ ಅದರ ಒಂದು ಪೈಂಟಿಂಗ್ ನನ್ನ ರೂಮಿನಲ್ಲಿ ತಗಲ್ಹಾಕಿದ್ದಾರೆ. ಅಷ್ಟೇ ಸಾಕು. ಹಿಮಾಲಯ ತನಕ ಆ ಛಳಿನಲ್ಲಿ ಯಾರು ಹೋಗ್ತಾರೆ?. ಹಾಸನವೇ ಚೆನ್ನಾಗಿದೆ. ಇನ್ನೂ ಐದು ವರುಷಗಳ ಕಾಲ ಹೀಗೇ ತೀರ್ಥಯಾತ್ರೆಯಲ್ಲಿದ್ದು, ದೇವರು ದಿಂಡರು ಅಂತ ಮನಸ್ಸು ತುಂಬಿಕೊಂಡು ಇಲ್ಲೇ ಜೀವನ ಕಳೀತೀನಿ. ಆಮೇಲೆ ಈ ಯಾತ್ರೇನ ಮುಂದುವರೆಸಲೋ ಬೇಡವೋ ಅಂತ ನನ್ನ ಹೆಂಡತಿಯನ್ನು ಕೇಳಿ ಎರಡನೇ ಹಂತಕ್ಕೆ ನಿರ್ಧಾರ ಮಾಡ್ತೀನಿ.

■

---

ಭಿಕ್ಷುಕ : ತಗೊಳಿ ಸರ್, ಆಸ್ಪತ್ರೆ ಬಿಲ್ಲು, ಇವತ್ತೇ ಸೆಟ್ಲ್ ಮಾಡಿ

ರಾವ್ : ನ್ನಾ ಆಸ್ಪತ್ರೆ ಬಿಲ್ ನಾನ್ಯಾಕೋ ಸೆಟ್ಲ್ ಮಾಡಬೇಕು

ಭಿಕ್ಷುಕ : ಇನ್ಯಾರು ಸೆಟ್ಲ್ ಮಾಡ್ತಾರೆ, ಅಮ್ಮಾವರು ಊರಿಗೆ ಹೋಗಿರುವಾಗ ನಾವು ಮಾಡಿದ ದರಿದ್ರ ಅಡಿಗೆ ತಿಂದು ತಾನೇ ನಾನು ಕಾಹಿಲೆ ಬಿದ್ದಿದ್ದು

***

ಚಿಕ್ಕ ಮಗು ಮಾತನಾಡುತ್ತಿದುದನ್ನೆಲ್ಲಾ ಸರ್ದಾರ್ಜಿಯೊಬ್ಬ ರೆಕಾರ್ಡ್ ಮಾಡುತ್ತಿದ್ದ. ಅವನ ಗೆಳೆಯರು, " ಇದ್ಯಾಕೆ ?" ಎಂದು ಪ್ರಶ್ನಾರ್ಥಕವಾಗಿ ಹುಬ್ಬೇರಿಸಿದರು. ಸರ್ದಾರ್ಜಿ, " ಇವನು ದೊಡ್ಡವನಾದಮೇಲೆ, ಏನು ಹೇಳಿದ ಅಂತ ಕೇಳ್ತೀನಿ " ಅಂದು ಬಿಡೋದೇ !



# ಶೂನ್ಯ ಸಂಪಾದನೆ.....!

***ವಿಜಯೇಂದ್ರ ರಾವ್**

ತಿಪಟೂರಿನ ಕುವೆಂಪು ಸಭಾಂಗಣದಲ್ಲಿ ಅಂದು ಜನರು ಕಿಕ್ಕಿರಿದು ಸೇರಿದ್ದರು. ಅವತ್ತು ಪ್ರತಿಷ್ಠಿತ ಸಂಸ್ಥೆಯೊಂದರ ರಜತೋತ್ಸವದ ಸಮಾರಂಭ. ಅದರ ಸಲುವಾಗಿ ವಿಶೇಷ " ಆದರ್ಶ ದಂಪತಿಗಳು " ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.ಅದರ ಅಬ್ಬರದ ಪ್ರಚಾರದ ಫಲವಾಗಿ ಅಂದು ಐವತ್ತಕ್ಕೂ ಹೆಚ್ಚಿನ ದಂಪತಿಗಳು ಉತ್ಸಾಹದಿಂದ ಅದರಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಅಲ್ಲಿದ್ದ ಮುಖ್ಯ ನಿಬಂಧನೆ ಏನೆಂದರೆ, ಕನಿಷ್ಠ ಮದುವೆಯಾಗಿ ಇಪ್ಪತ್ತೈದು ವರ್ಷಗಳು ಆಗಿರಲೇಬೇಕು ಎಂದಿತ್ತು.

ಆ ಕಾರ್ಯಕ್ರಮದ ಮುಖ್ಯಸ್ಥರು ಮತ್ತು ಅಂದಿನ ಮುಖ್ಯ ತೀರ್ಪುಗಾರರು ಇಬ್ಬರೂ ವಿಶಾಲವಾದ ಸ್ಟೇಜ್ ಮೇಲೆ ಬಂದು, ನಿಬಂಧನೆಗಳನ್ನು ಪೂರೈಸುವ ಅಲ್ಲಿ ನೆರೆದಿದ್ದ ಎಲ್ಲಾ ದಂಪತಿಗಳಿಗೆ ಮೇಲೆ ಏರಿ ಬರಲು ಆಹ್ವಾನವಿತ್ತರು. ಎಲ್ಲರೂ ಉತ್ಸಾಹದಿಂದ, ಲಗುಬಗೆಯಿಂದ ಸ್ಟೇಜ್ ಏರಲು ತೊಡಗಿದಾಗ......

ಇಬ್ಬರು ಏರು ಧ್ವನಿಯಲ್ಲಿ ಮಾತನಾಡುತ್ತಾ... "ಇಷ್ಟು ವರ್ಷ ನಾನು ಕಂಡ ಸುಖ ಅಷ್ಟರಲ್ಲೇ ಇದೆ... ಈಗ ನಾವು ಎಲ್ಲರ ಮುಂದೆ ನಾವೇ ಉತ್ತಮ ಅಂತ ಪ್ರದರ್ಶನ ಮಾಡಬೇಕೇ? ಅಂತ ಗೊಣಗಿಕೊಂಡೆ ಅವರಿಬ್ಬರೂ ಸ್ಟೇಜ್ ಏರಿದರು.ಅಂದಿನ ಮುಖ್ಯ ತೀರ್ಪುಗಾರರು ಅವರನ್ನೆಲ್ಲಾ ಉದ್ದೇಶಿಸಿ... ಈಗ ನಾವು ಗಂಡ, ಹೆಂಡತಿಯನ್ನು ಬೇರೆ ಬೇರೆಯಾಗಿ ಕೂಡಿಸಿ ನಿಮ್ಮ ಇಪ್ಪತ್ತೈದಕ್ಕೂ ಹೆಚ್ಚಿನ ದಾಂಪತ್ಯ ಜೀವನದಲ್ಲಿ ನೀವಿಬ್ಬರೂ ಒಬ್ಬರನ್ನೊಬ್ಬರು ಎಷ್ಟು ಅರ್ಥ ಮಾಡಿಕೊಂಡಿದ್ದೀರಾ? ನಿಮ್ಮ ಹೊಂದಾಣಿಕೆ ಹೇಗಿದೆ ಎಂದು ತಿಳಿಯಲು ಒಂದು ಸಣ್ಣ ಪರೀಕ್ಷೆ ನಡೆಸುತ್ತೇವೆ.ಇದರಲ್ಲಿ ನೂರು ಪ್ರಶ್ನೆಗಳನ್ನು ಕೊಟ್ಟಿರುವುದು. ಒಂದು ಗಂಟೆ ಕಾಲಾವಕಾಶ. ಇದರಲ್ಲಿ ಗಳಿಸುವ ಅಂಕ ಮತ್ತು ಇತರ ಗುಣಗಳನ್ನು ತುಲನೆ ಮಾಡಿ, ವಿಜೇತರಿಗೆ, ವಿಶೇಷ ಬಹುಮಾನವಾಗಿ ಒಂದು ಹೊಸ "ಐ– 10 ಹ್ಯುಂಡೈ" ಕಾರನ್ನು ನಮ್ಮ ಸಂಸ್ಥೆಯು ನೀಡುವುದು ಎಂದರು. ಸುಮಾರು ಜನ ಇದಕ್ಕೆ ತುಂಬಾ ಪರಿಶ್ರಮ ಪಟ್ಟು ತಯಾರಾಗಿ ಬಂದಿದ್ದರು.ಎಲ್ಲರೂ ಗಂಭೀರತೆಯಿಂದ ಪರೀಕ್ಷೆ ಬರೆಯಲು ತೊಡಗಿದರು.

ಪರೀಕ್ಷೆಯ ಮೌಲ್ಯಮಾಪನದ ನಂತರ, ಅಂದಿನ ಮುಖ್ಯ ತೀರ್ಪುಗಾರರು ಹೇಳಿದರು – ಇಂದಿನ ಪರೀಕ್ಷೆಯಲ್ಲಿ ಒಬ್ಬರು ನೂರಕ್ಕೆ ನೂರು ಮಾರ್ಕ್ಸ್ ತೊಗೊಂಡಿದ್ದಾರೆ. ಹಾಗೆ ಒಬ್ಬರು ನೂರಕ್ಕೆ ಸೊನ್ನೆ ನಂಬರ್ ಸಹ ತೊಗೊಂಡಿದ್ದಾರೆ. ಆದ್ದರಿಂದ, ನಾನು ಆ ಇಬ್ಬರು ದಂಪತಿಗಳನ್ನು ವೇದಿಕೆ ಮೇಲೆ ಕರೆಯುತ್ತಿದ್ದೇನೆ ಎಂದರು. ತಕ್ಷಣವೇ ಎಲ್ಲಾ ಜನರು ನೂರಕ್ಕೆ ನೂರು ನಂಬರ್ ತೊಗೊಂಡವರನ್ನು ಅಭಿನಂದಿಸಲು ಶುರು ಮಾಡಿ – ಓಹ್, ಅಂತೂ ಹೊಸ ಕಾರನ್ನು ಹೊಡೆದೇಬಿಟ್ರೆ ಎಂದೆಲ್ಲಾ ಹೇಳುವ ಗದ್ದಲವು ಜಾಸ್ತಿಯಾದಾಗ, ತೀರ್ಪುಗಾರರು – ಗಲಾಟೆ ಮಾಡಬೇಡಿ, ನಾವಿನ್ನು ವಿಜೇತರನ್ನು ಘೋಷಿಸಿಯೇ ಇಲ್ಲ. ಸ್ವಲ್ಪ ಸುಮ್ಮನಿರಿ ಎಂದಾಗ, ಎಲ್ಲರೂ ಮುಖ ಮುಖ ನೋಡುತ್ತಾ ಸುಮ್ಮನಾದರು.



ಮೇಲೆ ಬಂದ ಎರಡು ದಂಪತಿಗಳನ್ನು ಕುರ್ಚಿಯಲ್ಲಿ ಕುಳ್ಳಿರಿಸಿ, ನೂರು ಮಾರ್ಕ್ಸ್ ತೊಗೊಂಡ ದಂಪತಿಗಳನ್ನು – ನಿಮ್ಮದು ಲವ್ ಮ್ಯಾರೇಜೋ ಅಥವಾ ನಿಶ್ಚಿತ ಪಡಿಸಿದ

ಮದುವೆಯೋ ಎಂದು ಕೇಳಿದಾಗ, ಅವರು ನಮ್ಮದು ಅರೇಂಜಡ್ ಮ್ಯಾರೇಜ್ ಎಂದರು. ಈ ಬದಿ ಕುಳಿತ ಸೊನ್ನೆ ನಂಬರ್ ತೊಗೊಂಡ ದಂಪತಿಗಳ ಮುಜುಗರ ಜೋರಾಗಿತ್ತು. ನಾನು ಮುಂಚಿತವಾಗಿ ಹೇಳಿದ್ದೆ, ಈ ಸಂಭ್ರಮಕ್ಕೆ ನಾವು ಯಾಕೆ ಬರಬೇಕಿತ್ತು ಎಂದು ಹೇಳುತ್ತಾ ಅಳುವುದೊಂದೇ ಬಾಕಿಯಿತ್ತು ಆ ವಯಸ್ಸಾದ ಹೆಂಗಸಿಗೆ. ಆ ತೀರ್ಪುಗಾರರು ಇವರತ್ತ ಬಂದು, ನಿಮ್ಮ ಮದುವೆಯಾಗಿ ಎಷ್ಟು ವರ್ಷವಾಯಿತು? ಎಂದು ಕೇಳಿದಾಗ, ಅವರು ಮೂವತ್ತೈದು ವರ್ಷಗಳಾಯ್ತು ಎಂದರು. ಎಷ್ಟು ಮಕ್ಕಳು ಎಂದಾಗ, ನಮಗೆ ನಾಲ್ಕು ಮಕ್ಕಳು ಎಂದರು. ಸಭಿಕರೆಲ್ಲಾ ಜೋರಾಗಿ ನಗಾಡಿದರು. ಆಗ ಆ ತೀರ್ಪುಗಾರರು – ಸರಿ, ನೀವು ಯಾವುದೇ ಕಾರಣಕ್ಕೂ ಬೇಜಾರಾಗಬೇಡಿ. ನಿಮ್ಮಲ್ಲಿ ಎಷ್ಟೇ ಭೇದವಿದ್ದರೂ, ಹೊಂದಾಣಿಕೆಯಿಲ್ಲದಿದ್ದರೂ, ನೀವು ನಿಮ್ಮ ವಿಶಿಷ್ಟ ಪ್ರೀತಿಯಿಂದ ಮೂವತ್ತೈದು ವರ್ಷಗಳು ಒಟ್ಟಿಗೆ ಜೀವನ ಕಳೆದು, ಒಬ್ಬರನ್ನೊಬ್ಬರು ಬಿಡದೆ ನಮಗೆಲ್ಲರಿಗೂ ಆದರ್ಶವಾಗಿದ್ದೀರಿ. ಆದ್ದರಿಂದ, ಈ ನಮ್ಮ ಕಾರ್ಯಕ್ರಮದ ಇಂದಿನ "ಆದರ್ಶ ದಂಪತಿಗಳು" ನೀವೇ ಎಂದಾಗ ಎಲ್ಲರೂ ಒಂದು ಕ್ಷಣ ಮಂತ್ರಮುಗ್ಧರಾಗಿ, ನಂತರ ಜೋರಾಗಿ ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಆ ದಂಪತಿಗಳಿಗೆ ಹೊಸ ಕಾರಿನ ಕೀಯನ್ನು ಅವರಿಗೆ ಕೊಟ್ಟು ಶುಭ ಕೋರಿದರು...!

ಕೆಳಗೆ ನಿಧಾನವಾಗಿ ಮೆಟ್ಟಿಲು ಇಳಿದು ಬಂದು ಆ ಕಾರಿನ ಸುತ್ತಾ ತನ್ನ ಗಂಡನು ಸುತ್ತುತ್ತಿದ್ದನ್ನು ಕಂಡು, "ಯಾಕ್ರೀ, ಬಾಲ ಸುಟ್ಟುಕೊಂಡ ಬೆಕ್ಕಿನ ಹಾಗೆ ಅದನ್ನೇ ಸುತ್ತುತ್ತಿದ್ದೀರಿ..., ನಾನು ನಿಮಗೆ ಎಷ್ಟು ಸರ್ತಿ ಹೇಳಿದ್ದೆ, ಬಿಡುವಿದ್ದಾಗ ಏನಾದರೂ ಹೊಸದನ್ನು ಕಲಿಯಿರಿ ಎಂದು. ಆಗ ನೀವು ಕಾರ್ ಡ್ರೈವಿಂಗ್ ಕಲಿತಿದ್ದರೆ ಈಗ ಉಪಯೋಗಕ್ಕೆ ಬರುತ್ತಿತ್ತಾ?" ಎಂದು ಹಂಗಿಸಿ, ಸರಿ ಸರಿ, ಬಂದು ಕೂತುಕೊಳ್ಳಿ, ಇನ್ನು ಜಾಸ್ತಿ ಸುತ್ತಿದರೆ ಮಂಡಿ ನೋವು ಬಂದರೆ, ಆಮೇಲೆ, ಈ ಪಂಕಜಾನೇ ಬಂದು ನಿಮ್ಮ ಕಾಲು ನೀವಬೇಕು ಎಂದು ಪ್ರೀತಿಯಿಂದ ಗದ್ದರಿಸಿದ್ದನ್ನು ಎಲ್ಲರೂ ನೋಡಿದಾಗ, ಆ ವಯಸ್ಸಾದ ದಂಪತಿಗಳಿಗೆ ಸ್ವಲ್ಪ ನಾಚಿಕೆಯಾಗಿ, ಮುಜುಗರ ಪಡುತ್ತಿದ್ದಾಗ, ಅಲ್ಲಿದ್ದ ಕಾರ್ಯಕ್ರಮದ ಆಯೋಜಕರು – "ನೀವೇನೂ ಯೋಚಿಸಬೇಡಿ, ನಮ್ಮ ಕಡೆಯವರು ನಿಮ್ಮನ್ನು ನಿಮ್ಮ ಮನೆಗೆ ಕಾರಿನಲ್ಲಿ ಕರ್ಕೊಂಡು ಹೋಗಿ ಬಿಡುತ್ತಾರೆ. ಈಗ ನೀವು ಆನಂದದಿಂದ ಮನೆಗೆ ಹೋಗಿ, ಈ ಸಿಹಿ ಸುದ್ದಿಯನ್ನು ನಿಮ್ಮ ಮಕ್ಕಳು ಮೊಮ್ಮಕ್ಕಳ ಜೊತೆಗೆ ಹಂಚಿಕೊಳ್ಳಿ" ಎಂದು ಹೇಳಿ, ಅವರನ್ನು ಸಂತೋಷದಿಂದ ಅಲ್ಲಿಂದ ಬೀಳ್ಕೊಟ್ಟರು.

■

---

**ಆಫೀಸರ್: " ಏನ್ರೀ, ಇಷ್ಟು ಲೇಟು ಇವತ್ತು?"**

**ಗುಮಾಸ್ತೆ : "ನಿನ್ನೆ ನನ್ನ ಮಗನ ಮದುವೆ ಆಯ್ತು ಸಾರ್. ರಾತ್ರಿ ಎಲ್ಲಾ ನಿದ್ದೆಗೆಟ್ಟಿದ್ದೆ. "**

**ಆಫೀಸರ್ : " ಏನ್ರಿ, ತಮಾಷೆ ಮಾಡ್ತಿದೀರಾ?"**

**ಗುಮಾಸ್ತೆ : "ಖಂಡಿತ ಇಲ್ಲ. ಅವನು ಅಮೆರಿಕಾದಲ್ಲಿ ಮದುವೆ ಆಗಿದ್ದು"**



# ಧೂಳ್...ಧೂಳ್...ಧೂಳ್

*ವೈ ಎನ್ ಗುಂಡೂರಾವ್

ಧೂಳೆಂಬುದು ಅಲರ್ಜಿಯನ್ನುಂಟು ಮಾಡುವ ವಿಪತ್ಕಾರಿ. ಸಾಮಾನ್ಯವಾಗಿ ಯಾರೂ ಧೂಳಿಗೆ ತೆರೆದುಕೊಳ್ಳಲು ಇಷ್ಟಪಡುವುದಿಲ್ಲ. ಅದರಲ್ಲೂ ಆಸ್ತಮಾದಂತಹ ಖಾಯಿಲೆಗೆ ತುತ್ತಾದವರಿಗಂತೂ ಧೂಳು ಕೊಡುವ ತೊಂದರೆ ಅನುಭವಿಸಲಾಗದ್ದು. ಆದರೆ ಈ ಧೂಳೆಂಬುದೇ ಯುವ ಜನಾಂಗದ ಪ್ರೀತಿಯ ಪದವಾಗಿದೆಯೆಂದರೆ ಆಶ್ಚರ್ಯವಾಗುತ್ತದೆ.

ದೈನಂದಿನ ಜೀವನದಲ್ಲಿ ಯಾರಾದರು ಯಾವುದಾದರೊಂದು ಕ್ಷೇತ್ರದಲ್ಲಿ ಸಫಲತೆ ಕಂಡು, ಅತಿ ಹೆಚ್ಚಿನ ಪ್ರಸಿದ್ಧಿಗೆ ಒಳಗಾದರೆಂದರೆ ಧೂಳೆಬ್ಬಿಸಿಬಿಟ್ಟರು..... ಎಂದೇ ಯುವ ಜನರ ಜಯ ಘೋಷದ ಪ್ರತಿಕ್ರಿಯೆ. ಅದರಲ್ಲೂ ಸಿನಿಮಾ ಪ್ರಪಂಚದಲ್ಲಿ ಈ ಪದ ಅತಿ ಇಷ್ಟವಾದ , ರುಚಿಕರವಾದ ಪದವಾಗಿದೆ. ಬಿಡುಗಡೆಯಾದ ಎಲ್ಲಾ ಚಿತ್ರಗಳನ್ನೂ ಮೀರಿ ದಾಖಲೆ ನಿರ್ಮಿಸಿದ ಒಂದು ಚಿತ್ರ ಬಾಕ್ಸ್ ಆಫೀಸಿನಲ್ಲಿ ಹಣದ ಸುರಿಮಳೆ ಸುರಿಸಿದರೆ ಅಂತಹ ಚಿತ್ರ 'ಧೂಳೆಬ್ಬಿಸಿಬಿಟ್ಟತು', ' ಚಿಂದಿ ಎಬ್ಬಿಸಿಬಿಟ್ಟಿತು' , ' ಚಿಂದಿ ಚಿತ್ರಾನ್ನ ......' ಎಂಬಂತಹ ಮಾತುಗಳನ್ನು ಪಡ್ಡೆ ಹುಡುಗರು ಆಡುವುದನ್ನು ನೀವು ಕೇಳಿರಬಹುದು.

ಆಸ್ತಮಾ ರೋಗಿಗಳು, ಅಲರ್ಜಿಗೊಳಗಾಗುವವರು ಧೂಳನ್ನು ನಿಕೃಷ್ಟವಾಗಿ ಕಂಡರೂ ಸಿನಿಮಾ ಪ್ರಪಂಚದಲ್ಲಂತೂ ಈ ಪದ ಎಷ್ಟೊಂದು ಜನಪರವಾಗಿದೆಯೆಂದರೆ 'ಧೂಳ್' ಎಂಬ ಹೆಸರಿನ ಸಿನಿಮಾ ಒಂದು ಬಿಡುಗಡೆಯಾಗಿದ್ದು 2011 ರಲ್ಲಿ. ಈ ಚಿತ್ರದಲ್ಲಿ ಯೋಗೇಶ್, ಪ್ರಕಾಶ್ ರೈ , ಐಂದ್ರಿತಾ ರೇ ಮುಂತಾದವರೆಲ್ಲರೂ ನಟಿಸಿದ್ದರು. ಆದರೆ ಇದು ಧೂಳೆಬ್ಬಿಸಿತೊ ಬಿಟ್ಟತೋ! 'ಧೂಳು' ಕೂಡ ಸಿನಿಮಾ ತಯಾರಿಕೆಯ ವಸ್ತುವಾಗಬಲ್ಲದೆಂಬದನ್ನು ನಿರ್ಮಾಪಕರು, ನಿರ್ದೇಶಕರು ತೋರಿಸಿದ್ದು ನಿಜ.

ಸಿನಿಮಾ ಪ್ರಪಂಚದಲ್ಲಿ ತಮ್ಮ ಸಿನಿಮಾವೊಂದು ಧೂಳೆಬ್ಬಿಸಲೇಬೇಕೆಂದು ಪಣತೊಟ್ಟು ಚಿತ್ರ ತಯಾರಿಸುವವರಿಗೆ ಧೂಳಿನ ಬಗ್ಗೆ ಅತಿಯಾದ ವ್ಯಾಮೋಹವಿದ್ದಂತೆ ಕಾಣುತ್ತದೆ. 'ಧೂಳು' ನಿಕೃಷ್ಟವಾದ ಪದವಾದರೂ ಅದು ಎಬ್ಬಿಸಿದ ಖ್ಯಾತಿಯಿಂದ ಗಲ್ಲಾ ಪೆಟ್ಟಿಗೆ ತುಂಬಿಕೊಳ್ಳುವಾಗ ಆ ಪದವನ್ನು ಸುಮ್ಮನೆ ಬಿಡಲಾದೀತೆ? ಅದಕ್ಕೆ ದರ್ಶನ್ ಮುಖ್ಯ ಭೂಮಿಕೆಯಲ್ಲಿದ್ದ ಸಿನಿಮಾವೊಂದು 2018 ರಲ್ಲಿ ಬಿಡುಗಡೆಯಾಗಿದ್ದು, ಅದರಲ್ಲಿ ಬರುವ ಹಾಡು ಕೂಡ 'ಧೂಳ್' ಎಬ್ಬಿಸಿಯೇ ಬಿಟ್ಟಿತು. ತಂಗಾಳಿ ನಾಗರಾಜ್ ರಚನೆಯ, ಶಂಕರ್ ಮಹಾದೇವನ್ ಹಾಡುಗಾರಿಕೆಯ

ಧೂಳ್ ಮಗಾ ಧೂಳ್
ದಿಮಕ ದಿಮಕ ಧೂಳ್
ವೀರತನಕೆ ಹೆಸರು ಇದುವೆ
ನಮ್ಮ ಕಲಾಸಿ ಪಾಳ್ಯ



ಎಂದು ಕಲಾಸಿಪಾಳ್ಯ ಸಿನಿಮಾಗಾಗಿ ಹಾಡಿದ್ದಿದೆ.

ಈ ಹಾಡು ಪಡ್ಡೆ ಹುಡುಗರ ಬಾಯಲ್ಲಿ ಸದಾ ಗುನುಗುವ ಹಾಡಾಗಿದ್ದು ಧೂಳೆಬ್ಬಿಸಿದ್ದಂತು ನಿಜ.

ಸಿನಿಮಾರಂಗದಲ್ಲಿ ಧೂಳೆಬ್ಬಿಸಿದಂತೆ ಸಾಹಿತ್ಯದಲ್ಲೂ ಧೂಳು ತನ್ನ ಇರವನ್ನು ಬಿಟ್ಟುಕೊಡದೆ ಧೂಳೆಬ್ಬಿಸಿರುವುದನ್ನು ನೋಡಿದರೆ ಧೂಳೆಂಬುದು ಸಾಹಿತಿಗಳಿಗೂ ವರ್ಜ್ಯವಲ್ಲವೆಂದೇ ಹೇಳಬಹುದು. ನೀವೇನಾದರೂ ಸಾಹಿತ್ಯ ಪ್ರಿಯರಾಗಿದ್ದು, ಪುಸ್ತಕಗಳ ಸಂಗ್ರಹಣೆಯಲ್ಲಿ ತೊಡಗಿದ್ದರಂತೂ ಈ ಧೂಳಿನ ಅನುಭವ ಇದ್ದೇ ಇರುತ್ತದೆ. ಪುಸ್ತಕಗಳನ್ನು ಕೊಂಡಷ್ಟೇ ಆಗಾಗ್ಗೆ ಧೂಳು ಜಾಡಿಸಿ ಜೋಪಾನವಾಗಿಡುವುದೂ ಒಂದು ಕಲೆ ಎಂದೇ ನನ್ನ ಅನಿಸಿಕೆ.

ಅಪರೂಪದ ಪುಸ್ತಕ ನನ್ನಲ್ಲಿದೆಯೆಂದು ಹೆಮ್ಮೆಯಿಂದ ಹೇಳಿಕೊಂಡಾಗ 'ಕೊಡಿ ಓದ್ಕೊಡ್ತೇನೆ' ಎನ್ನುವವರಿಗೇನು ಕಡಿಮೆಯೇ! ಪುಸ್ತಕ ವಾಪಸ್ಸು ಬಂದಾಗ ಅದರ ಮೇಲಿರುವ ಧೂಳು ಜಾಡಿಸುವುದು, ಹರಿದ ರಟ್ಟನ್ನು ಬದಲಿಸುವುದು ಜೊತೆಗೆ ಕಪಾಟಿನಲ್ಲಿರುವ ಪುಸ್ತಕಗಳು ಧೂಳಿನಿಂದಾವೃತವಾಗದಂತೆ ಪದೇ ಪದೇ ಧೂಳು ಹೊಡೆಯುವುದು ಇದ್ದೇ ಇರುತ್ತದೆ.

ಪುಸ್ತಕವನ್ನು ಕಾಪಾಡುವುದರ ಬಗ್ಗೆಯೇ ಹೊಯಿಸಳರು ಬರೆದಿರುವ ಪದ್ಯವನ್ನು ನೀವು ಓದಿರಬೇಕಲ್ಲ.

ಬೀಳದೆ ಧೂಳು ಇಹಪರಿ ಮೇಲೆ
ಬೇರೊಂದಟ್ಟೆಯ ಹೊಂದಿಸು ಮಗು
ಜನಗಳ ಕಾಲಡಿ ಹಾಕದಿರು
ಕಿವಿಗಳ ನಿತ್ಯ ಮಡಿಸದಿರು !

ಎಂದು ಪದ್ಯ ಬರೆದು ಧೂಳಿನಿಂದ ಪುಸ್ತಕಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದನ್ನು ತಿಳಿಸಿದ್ದಾರೆ.

ಇದಲ್ಲದೆ ಧೂಳಿನ ಬಗ್ಗೆಯೇ ಹಲವಾರು ಗಾದೆಗಳೇ ಇವೆಯಲ್ಲ ---

ಧೂಳಿನಲ್ಲಿ ಬಿದ್ದರೆ ಚೇಳಿನ ಕಾಟ ತಪ್ಪೀತೇ ?
ಧೂಳಿನಿಂದ ಮಾಳಿಗೆ ಆದೀತೇ ?
ಧೂಳು ಧೂಪವಾದರೆ ಮಾಳಿಗೆ ಸ್ವರ್ಗವಾದೀತೇ ?
ಗಾಳಿಯಿಂದ ಧೂಳು ಹಾರಿದರೆ ಕೋಳಿ ಹೊಟ್ಟೆ ತುಂಬೀತೇ ?
– ಇನ್ನೂ ಅನೇಕ ಗಾದೆಗಳಿರಬಹುದು.

* * *



ಒಮ್ಮೆ ನಮ್ಮ ಹಳ್ಳಿಯಲ್ಲಿ ಪಂಚಾಯ್ತಿ ಸೇರಿಸಿದ್ದರು. ಮೇಲ್ಜಾತಿಯ ಹುಡುಗಿಯೊಬ್ಬಳನ್ನು ಕೆಳ ಜಾತಿಯವನೊಬ್ಬ ಕೀಟಲೆ ಮಾಡಿದ ಎಂಬುದೇ ಪಂಚಾಯ್ತಿ ಸೇರಿಸಿದ ವಿಷಯ. ಆರೋಪಿಯನ್ನು ಕರೆದು ತಂದು ಕೂಡಿಸಿದರು.

ಆರೋಪಿಯು ತನ್ನ ತಪ್ಪನ್ನು ಒಪ್ಪಿಕೊಳ್ಳದಿದ್ದಾಗ ಪಟೇಲರಿಂದ ಹಿಡಿದು ತೋಟಿ --- ತಳವಾರರವರೆವಿಗೂ "ಸುಮ್ಕೆ ಒಪ್ಕಂಬುಡು. ಆ ಹೆಣ್ಮಗೀಗೆ ಅವಮಾನ ಮಾಡಿದ್ದೂ ಅಲ್ದೆ ಇಲ್ಲಾ ಅಂತ್ಲೇ ಸತಾಯಿಸ್ತೀಯ " ಎಂದು ಆರೋಪಿಗೆ ಎಲ್ಲರೂ ಬುದ್ಧಿ ಹೇಳುವವರೇ. ಆದರೆ

ಆರೋಪಿ "ತಾನೇನು ಅಂದೇ ಇಲ್ಲ. ಅವರೇ ಹುಟ್ಟಿಸ್ಕಂಡು ಹೇಳ್ತಾ ಅವ್ರೆ" ಎಂಬುದೇ ಆರೋಪಿಯ ವಾದ. ಆದರೆ ಆರೋಪ ಮಾಡಿದವರಲ್ಲಿಯೂ ಸಾಕಷ್ಟು ಪುರಾವೆ ಇಲ್ಲದಿದ್ದುದರಿಂದ ಊರಿನ ಮುಖಂಡರಿಗೂ ತೀರ್ಮಾನಿಸುವುದು ಕಷ್ಟವೇ ಎನಿಸಿತು. ಆದರೆ ಪಂಚಾಯ್ತಿ ಮರ್ಯಾದೆ ಕಾಪಾಡಬೇಕಲ್ಲ.

ಆರೋಪಿಯನ್ನು ಹೇಗಾದರೂ ಮಾಡಿ ಸಿಕ್ಕಿಸಿ ದಂಡ ವಸೂಲಿ ಮಾಡಿದರೆ ಮುಂದೆ ಇಂತಹ ಪ್ರಕರಣಗಳಿಗೆ ಅವಕಾಶವಿರುವುದಿಲ್ಲವೆಂಬುದೇ ಪಂಚಾಯ್ತಿದಾರರ ಅನ್ನಿಸಿಕೆ.

ಒಂದು ಹಂತದಲ್ಲಿ ಆರೋಪಿಯು, "ತಪ್ಪುಮಾಡದಿದ್ದವನಿಗೆ ದಂಡ ಹಾಕ್ತೀನಿ ಅಂತ ಹೆದರಿಸ್ತಿದ್ದೀರಾ? ನಾನು "ನಾಲ್ಕೂರು' ನ್ಯಾಯಕ್ಕೆ ಹೋಗ್ತೀನಿ" ಎಂದು ಕುಳಿತಿದ್ದವನು ತನ್ನ ಬುಡದಲ್ಲಿ ಹಾಸಿಕೊಂಡಿದ್ದ ಟವಲನ್ನು ಜಾಡಿಸಿ, ಧೂಳನ್ನು ಎಲ್ಲರ ಮೈಗೂ ತೂರಿ ಹೊರಟೇ ಹೋದ. ಧೂಳು ತೂರಿಸಿಕೊಂಡವರು ಸುಮ್ಮನಿರುತ್ತಾರೆಯೇ?

"ನೋಡಿದ್ರಾ ಅವ್ನ ಕೊಬ್ಬ, ನಮ್ಮ ಮೂಖಕ್ಕೆ ಧೂಳು ಜಾಡಿಸಿ ಹೋದ್ನಲ್ಲಾ" ಎಂದಾಗ ಹಿಡ್ಕಂಬನ್ನಿ ಅವನ್ನ ಎಂದರು ಪಟೇಲರು.

ಕಡೆಗೂ ಆರೋಪಿ ಬಂದ. ನೀನು ತಪ್ಪು ಮಾಡ್ದೇನೇ ಇರಬೈದು. ಆದ್ರೆ ಪಂಚಾಯ್ತಿ ಕಟ್ಟೇಲಿ ಕುಂತವರ್ಗೆ ಮರ್ವಾದೆ ಕೊಡದನ್ನಾದ್ರೂ ಕಲ್ತಿರಬೇಕಲ್ಲ. ಅವರ ಮುಖಕ್ಕೆಲ್ಲ ಧೂಳು ತುಂಬಿಸಿ ಹೋದದ್ದು ತಪ್ಪಲ್ವ. ಕಟ್ಟು ತಪ್ ದಂಡ ಐವತ್ತು ರುಪಾಯಿ ಅಂದ್ರು. ಐನೂರು ಕೊಡೋ ಕಡೆ ಐವತ್ತು ತಾನೇ ಎಂದು ಆರೋಪಿ ಐವತ್ತು ರೂಪಾಯಿ ಇಟ್ಟು ಕೈಮುಗಿದು ಹೊರಟೇ ಹೋದ. ಪಂಚಾಯ್ತಿದಾರರಿಗೆ ದಂಡ ಹಾಕಿದ ತೃಪ್ತಿ. ಆರೋಪಿಗೆ ಹೆಚ್ಚಿಗೆ ದಂಡ ತೆರದ ತೃಪ್ತಿ.

ಆದರೆ ಪಾಪ ಆರೋಪಿ, ಧೂಳೆಬ್ಬಿಸಿ ದಂಡ ತೆರಬೇಕಾಯ್ತು.

ಸಿನಿಮಾರಂಗದಲ್ಲಿದ್ದಂತೆಯೇ ರಾಜಕೀಯದಲ್ಲಿ ಧೂಳೆಬ್ಬಿಸದಿದ್ದರೂ ಸೋತ ನಾಯಕರು ಧೂಳು ಕೊಡವಿಕೊಂಡು ಎದ್ದು ಬರುತ್ತಾರೆಂದು ಹಿಂಬಾಲಕರು ತಮ್ಮ ನಾಯಕರ ಬಗ್ಗೆ ಆಶಾವಾದದ ಉಕ್ತಿ ಉದುರಿಸುವುದನ್ನು ನೀವು ಕೇಳಿರಬಹುದು.

ಆದರೆ ಧೂಳಿನಿಂದಲೇ ಏಕೆ ಎದ್ದು ಬರುತ್ತಾರೆಂದು ಮಾತ್ರ ಕೇಳಬೇಡಿ. ಫೀನಿಕ್ಸ್ ಪಕ್ಷಿಯು ಸುಟ್ಟುಕೊಂಡು ತನ್ನ ಬೂದಿಯಿಂಲೇ ಮರುಹುಟ್ಟು ಪಡೆಯುತ್ತದೆಂಬ ಉಕ್ತಿ, ಮರು ಜನ್ಮ ಪಡೆಯಲೆತ್ನಿಸುವವರಿಗೆ ಕೊಡುವ ಉಪಮಾನವೇನೋ ಸರಿ. ಆದರೆ ಧೂಳಿನಿಂದೆದ್ದು ಬರುವುದೂ ಒಂದು ರೀತಿಯ ಕಲ್ಪನಾತೀತ ಉಪಮಾನವೇ!



ಹೀಗೆ ಧೂಳಿನ ಬಗ್ಗೆ ಬರೆಯುತ್ತಾ ಹೋದರೆ ಧೂಳಿನಿಂದ ಹೊರಬರಲಾಗದಂತೆ, ಧೂಳಿನ ವಿಷಯಗಳು ಮುತ್ತಿಕೊಂಡಾಗ ಹೊರಬರಲು ತಿಣುಕಬೇಕಾಗಬಹುದೆಂಬ ಭಯದಿಂದ ಇಲ್ಲಿಗೆ ಮುಕ್ತಾಯ ಹಾಡುವುದು ಒಳಿತೆನಿಸುತ್ತಿದೆ.

ಅಂತೂ ಸದ್ದು ಮಾಡದೆ ಒಂದೆಡೆ ಬಿದ್ದಿರುವ ಧೂಳು ಕೂಡಾ ಸುದ್ದಿ ಎಬ್ಬಿಸಬಹುದು ಎಂದಾಯಿತಲ್ಲಾ!

ಹೇಗಾದರಿರಲಿ, ಧೂಳು ತುಂಬಿದ ರಸ್ತೆಗಳಿಂದ ನಮಗೆ ತೊಂದರೆಯೇನೋ ಸರಿ. ಆದರೆ ತನ್ನೊಡಲಲ್ಲೇ ಧೂಳು ತುಂಬಿಕೊಂಡಿರುವ ರಸ್ತೆಯ ಗೋಳು ಕೇಳುವವರ್ಯಾರು ?

ಧೂಳು ತುಂಬಿದ ರಸ್ತೆಗೆ ಹೇಗೆ ಮಲಗಬೇಕೆಂಬುದೇ ಅದರ ಚಿಂತೆ,<br>
ಧೂಳಿನಿಂದ ಮುಕ್ಕುವ ರೋಗದಲ್ಲೂ ಯಾರ ಜೇಬೋ ತುಂಬಿದರೆ<br>
ಸೌಭಾಗ್ಯ ಬಂತೇ!

■

---

ಶಶಿ: "ಅಲ್ಲಯ್ಯಾ, ನಿನ್ನ ಮೂರು ಎಕರೆ ಹೊಲಾನ ಒಂದು<br>
ಪೈಸೆ ಖರ್ಚಿಲ್ಲದೇ ಅಗೆಸಿದೆಯಂತಲ್ಲಾ ಹೇಗೆ?"

ಮುರುಳಿ : "ಪಕ್ಕದ ಮನೆಯವರಿಗೆ ಕೇಳೋ ಹಾಗೆ,<br>
"ನಮ್ಮ ಹೊಲದಲ್ಲಿ ನಿಧಿ ಅಡಗಿದೆ ಅಂತ ಶಾಸ್ತ್ರಿಗಳು<br>
ಹೇಳಿದರು. ನಾನು ನಮ್ಮೂರಿಗೆ ಹೋಗಿ ಮನೆದೇವರಿಗೆ<br>
ಪೂಜೆ ಮಾಡಿಸಿಕೊಂಡು ಬಂದು ಅಗೆದು ನಿಧಿ<br>
ತಗೋತೀನಿ" ಅಂತ ಹೇಳಿ, ಎರಡು ದಿನ ಬೆಂಗಳೂರಿಗೆ<br>
ಹೋಗಿ ಬಂದೆ.

ವಾಪಸ್ ಬರೋ ಹೊತ್ತಿಗೆ ಹೊಲ ದಿವಿನಾಗಿ<br>
ಅಗೆತವಾಗಿತ್ತು."

***

ಸೊಬಗು –ಸೊಗಸು

ಹಳೆ ಬೇರು ಹೊಸ ಚಿಗುರು<br>
ಕೂಡಿರಲು ಮರ ಸೊಬಗು<br>
ಹಳೆ ದಂಪತಿ ಹೊಸ ರೀತಿ ನೀತಿ<br>
ಕೂಡಿರಲು ಮನೆ ಸೊಗಸು



# ಕೋಪಕ್ಕೊಂದು ಮನೆ

*ಚಿಂತಾಮಣಿ ಕೊಡ್ಲೆಕೆರೆ

ಚಿಕ್ಕಂದಿನಿಂದ ಒಂದು ವಿಷಯದ ಕುರಿತು ನನ್ನ ಮನಸಿನ ಆಳದಲ್ಲಿ ಕುತೂಹಲವನ್ನು ಕಾಪಾಡಿಕೊಂಡು ಬಂದಿದ್ದೇನೆ. ಅದೇನೆಂದು ಆಮೇಲೆ ಹೇಳುತ್ತೇನೆ. ಹೇಳಿದ ಮೇಲೆ ಹಿರಿಯರನ್ನು ಕೇಳಿ ಆ ವಿಷಯದ ಬಗೆಗಿನ ಕುತೂಹಲವನ್ನು ತಣಿಸಿಕೊಳ್ಳಬಹುದಿತ್ತಲ್ಲ ಎಂದು ಯಾರಾದರೂ ಸವಾಲೆಸೆಯಬಹುದು. ಅದಕ್ಕೆ ಈಗಲೇ ನಾನೇನೂ ಹೇಳುವುದಿಲ್ಲ. ಸಂವತ್ಸರಗಳ ಒಂದು ಚಕ್ರವೇ ಉರುಳಿದೆ, ನನ್ನೊಳಗೆ ಆ ಕುರಿತಾದ ಕಲ್ಪನೆ, ಆಶ್ಚರ್ಯ ಬೆಳೆಯುತ್ತಲೇ ನಡೆದಿವೆ. ಒಂದಲ್ಲ ಒಂದು ದಿನ ನಾನೇ ಖುದ್ದಾಗಿ ಈ ಆಶ್ಚರ್ಯಕರ ಸಂಗತಿಯ ಕುರಿತು ಶೋಧಿಸುವೆನೆಂದುಕೊಂಡಿದ್ದೆ. ಆದರೆ ನಾನು ಇತ್ತೀಚೆಗೆ ಈ ವಿಷಯಕ್ಕೆ ಸಂಬಂಧಿಸಿದ ಸ್ಥಳಕ್ಕೇ ಹೋದಾಗ ಈ ವಿಚಾರವನ್ನು ಕೈಬಿಟ್ಟೆ. ಹೀಗೆಂದರೆ ಯಾರೇ ಆದರೂ ನನ್ನನ್ನು ಅನುಮಾನಿಸಬಹುದು. ಕ್ಷಮಿಸಿ, ಅದಕ್ಕೆ ನಾನೇನೂ ಮಾಡಲಾರೆ ಮತ್ತು ನನ್ನನ್ನು ಸಮರ್ಥಿಸಿಕೊಳ್ಳುವ ಕಿಂಚಿತ್ ಪ್ರಯತ್ನವನ್ನೂ ಮಾಡುವುದಿಲ್ಲ. ಮುಂದೆ ಎಲ್ಲವನ್ನೂ ಈ ಪ್ರಬಂಧ ಓದಿ ಮುಗಿಸುವ 'ಕಾಲವೇ ನಿರ್ಣಯಿಸುತ್ತದೆ'.

ನನ್ನ ಕುತೂಹಲ ಕ್ರೋಧಾಗಾರದ ಕುರಿತಾದುದು. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಹುಡುಗ ನಾನು. ದಸರಾ ರಜೆಯಲ್ಲಿ 'ಎಳೆಯರ ರಾಮಾಯಣ' ಓದಿದೆ. ಶ್ರೀರಾಮನ ಪಟ್ಟಾಭಿಷೇಕ ಆಗುವುದೆಂದು ತಿಳಿದು ಕೈಕೇಯಿ ಕ್ರೋಧಾಗಾರವನ್ನು ಹೊಕ್ಕಳೆಂದು ಅದರಲ್ಲಿ ಬರೆದಿತ್ತು. ಈ ಪಟ್ಟಾಭಿಷೇಕದ ಕುರಿತು ತನ್ನ ರಾಣಿಯರೆಲ್ಲರೂ ಸಂತಸಗೊಳ್ಳುತ್ತಾರೆ ಎಂದೇ ದಶರಥ ಭಾವಿಸಿದ್ದ. ಅವನು ಮುದ್ದಿನ ಮಡದಿ ಕೈಕೇಯಿಗೆ ಈ ವಿಷಯ ತಾನೇ ತಿಳಿಸಬೇಕೆಂದು ಅವಳ ಅಂತಃಪುರಕ್ಕೆ ಬಂದ. ಕೈಕೇಯಿ ಅಂತಃಪುರದಲ್ಲಿ ಇರಲಿಲ್ಲ. 'ಎಲ್ಲಿ?' ಎಂದು ಕೇಳಿದ್ದಕ್ಕೆ ದಾಸಿಯು "ರಾಣಿ ಕ್ರೋಧಾಗಾರವನ್ನು ಸೇರಿದ್ದಾಳೆ" ಎಂದು ತಲೆ ತಗ್ಗಿಸಿ ಉತ್ತರಿಸಿದಳು.

ಇಲ್ಲಿ ಈಗ ನಾನು ಈ ಇಡೀ ಕಥೆ ಹೇಳುವ ಅಗತ್ಯವಿಲ್ಲ. ಅಂದೂ, ಇಂದೂ ನನ್ನನ್ನು ಚಕಿತಗೊಳಿಸುವುದು ಈ ಕ್ರೋಧಾಗಾರ ಎಂಬ ಪದವೇ. ಆ ಚಿಕ್ಕಂದಿನಲ್ಲಿ ನನ್ನಲ್ಲಿ ಹುಟ್ಟಿದ್ದ ಸಂದಿಗ್ಧ, ಪ್ರಶ್ನೆಗಳು ಅಸ್ಪಷ್ಟವಾಗಿದ್ದವು. ಈಗ ಅವು ಬಲ್ಲಿದರ ಮುಂದೆ ನಿವೇದಿಸಿಕೊಳ್ಳಲು ಅರ್ಹ ಎನಿಸುವಷ್ಟು ಸ್ಪಷ್ಟರೂಪ ಪಡೆದಿವೆ. "ಏನು, ಕೋಪಕ್ಕೂ ಒಂದು ಮನೆಯೇ?" – ಇದೇ ಆ ಪ್ರಶ್ನೆ, ಆ ಸಂದಿಗ್ಧ.

ಬಾಲ್ಯದಲ್ಲಿ ಸಾಕಷ್ಟು ದೊಡ್ಡ ಮನೆಯಲ್ಲೇ ನಾನು ಬೆಳೆದೆ. ಮನೆಯ ಹಿಂಭಾಗದಲ್ಲಿ ತುಸು ದೂರದಲ್ಲಿದ್ದ ಬಚ್ಚಲನ್ನು 'ಬಚ್ಚಲುಮನೆ' ಎಂದೇ ಕರೆಯುತ್ತಿದ್ದೆವು. ಹಾಗೆ ಕರೆಸಿಕೊಳ್ಳುವ ಯೋಗ್ಯತೆ ಅದಕ್ಕಿತ್ತು. ನಗರಗಳಲ್ಲಿ ಎಷ್ಟೋ ಸಲ ನಾವು ಉಳಿದುಕೊಳ್ಳುವ ಮನೆಗಳು ಅಷ್ಟು ವಿಶಾಲವಾಗಿರುವುದಿಲ್ಲ. ಸರಿ, ಆದುದರಿಂದ ಅದು 'ಬಚ್ಚಲುಮನೆ'. ನನ್ನ ಅಜ್ಜಿ ಮನೆಯಲ್ಲಿ ನೋಡುವುದಾದರೆ ಬಚ್ಚಲುಮನೆಯಿಂದ ಇನ್ನೂ ಮುಂದಕ್ಕೆ ಹೋದಾಗ ಗೋಶಾಲೆಯೂ ಇತ್ತು. (ದೊಡ್ಡ ಪದವಾಯಿತು, ನಾವು ಹೇಳುವುದು ಕೊಟ್ಟಿಗೆ ಎಂದು. ಅದನ್ನು ದನಗಳ ಮನೆ ಎಂದು ಕರೆಯೋಣ. ಅಷ್ಟು ದೊಡ್ಡದಾಗಿ ಇತ್ತು). ಈ ಮನೆಗಳು, ಹಿತ್ತಿಲು ಎಲ್ಲ ಎಷ್ಟೇ ದೊಡ್ಡದಾದರೂ ಯಾರ ಮನೆಯಲ್ಲೂ



ಕ್ರೋಧಾಗಾರವಿರಲಿಲ್ಲ. ರಾಜರು ದೊಡ್ಡವರು, ಒಪ್ಪಿದೆ, ಶಸ್ತ್ರಾಗಾರಗಳನ್ನು ಇಟ್ಟುಕೊಳ್ಳಲಿ, ಸಿಟ್ಟು ಮಾಡಿಕೊಳ್ಳಲೂ ಒಂದು ಆಗಾರ ಕಟ್ಟಿಕೊಳ್ಳುವುದು ಎಂದರೆ ಏನರ್ಥ? ನಾವೆಲ್ಲ ಎಲ್ಲೆಂದರಲ್ಲಿ  ಸಿಟ್ಟು ಮಾಡಿಕೊಳ್ಳುವುದಿಲ್ಲವೆ? ಇವರೂ ಹಾಗೇ ಮಾಡಬಹುದಲ್ಲವೆ? ಪುಸ್ತಕಗಳಿಗೆ ಗ್ರಂಥಾಲಯ, ದೇವರಿಗೆ ದೇವಾಲಯ, ಚಿನ್ನ, ರತ್ನ, ವಜ್ರ, ಮಾಣಿಕ್ಯಗಳ ಐಸಿರಿಗೆ ಒಂದು ರಹಸ್ಯಾಲಯ..  ಎಲ್ಲವನ್ನೂ ಕಲ್ಪಿಸಿಕೊಳ್ಳಬಲ್ಲೆ. ಆದರೆ ಸಿಟ್ಟು ಮಾಡಿಕೊಳ್ಳಲು ಒಂದು ಆಲಯ ಎಂದರೆ ಅತಿಯಾಯ್ತಲ್ಲ – ಇದು ನನ್ನ ಆಲೋಚನೆ. 'ಅಗತ್ಯವೇ?' ಮುಂದಿನ ಪ್ರಶ್ನೆ. ಉಪಪ್ರಶ್ನೆಗಳು ನೂರಾರಿವೆ. ಕಳೆದ ಹತ್ತು ಹದಿನೈದು ದಿನಗಳಿಂದ ಈ ಕುರಿತು ಗಂಭೀರವಾಗಿ ಶೋಧನೆ ಆರಂಭಿಸಿದ್ದೇನೆ.

ಪ್ರಾಚೀನ ಕಾಲದ ಕಟ್ಟಡ ನಿರ್ಮಾಣಶಾಸ್ತ್ರದ ಪರಿಚಯ ಇರುವವರು ಮತ್ತು ವಾಸ್ತು ತಜ್ಞರು ತಮ್ಮ ಯಾವುದೇ ಬರಹದಲ್ಲಿ ಈವರೆಗೆ  ಕ್ರೋಧಾಗಾರದ ಬಗೆಗೆ ಚರ್ಚಿಸಿಲ್ಲ. ತುಂಬ ಹಳೆಯ  ಕಾಲದಿಂದಲೂ  ಎಲ್ಲ ವಿದ್ವಾಂಸರು ಈ ವಿಷಯದಲ್ಲಿ ಮೌನ ವಹಿಸಿದ್ದಾರೆ.  ಸಾಮಾನ್ಯ ಜನರ ಮನೆಗಳಲ್ಲಿ ಕ್ರೋಧಾಗಾರ  ಅಗತ್ಯವಿಲ್ಲ ಎಂದು ತೀರ್ಮಾನಿಸಿ ಅವರು ಈ ಕುರಿತು ಏನೂ ಬರೆದಿಲ್ಲ ಎಂದು ನನ್ನ ಊಹೆ. ಕ್ರೋಧಾಗಾರ ಅರಮನೆಯ ವಿಶೇಷ ಸೌಲಭ್ಯ.  ಅಂದರೆ ಅರಮನೆಗಳಲ್ಲಿ ಕ್ರೋಧಾಗಾರದ ಅಗತ್ಯವಿತ್ತು – ಯಾರಿಗೆ, ಯಾಕೆ?  ಇಲ್ಲಿಯೂ ಒಂದು ಸ್ವಾರಸ್ಯವಿದೆ. ಅರಮನೆಯಲ್ಲಿ ಸಿಟ್ಟು ಬಂದವರೆಲ್ಲ ಕ್ರೋಧಾಗಾರಕ್ಕೆ ಹೋಗುತ್ತಿದ್ದರೆ? ಇಲ್ಲ, ಅದು ಕಾರ್ಯಸಾಧ್ಯವಲ್ಲ. ನೀವೇ ನೋಡಿ, ಮಹಾರಾಜರ ಆಸ್ಥಾನವೆನ್ನುವುದು  ಋಷಿಗಳ ತಾಣವಲ್ಲ. ಅಲ್ಲಿ ಸಮಾಜಕ್ಕೆ ಸಂಬಂಧಿಸಿದ ಎಷ್ಟೋ ವಿಷಯಗಳು ಚರ್ಚೆಗೆ ಬರುತ್ತವೆ. ಅಂಥ ಸಂದರ್ಭಗಳಲ್ಲಿ  ಕೋಪ ತಾಪ ಸ್ವಾಭಾವಿಕ. ಸಿಟ್ಟು ಬಂದವರು ಕ್ರೋಧಾಗಾರಕ್ಕೆ ಓಡಬೇಕೆ? ಆಸ್ಥಾನದಲ್ಲಿಯೇ ಸಿಟ್ಟು ಮಾಡಿಕೊಳ್ಳುತ್ತಿದ್ದರು – ಯಾರೇ ಆದರೂ. ರಾಜರ ಅರಮನೆಗೆ ದುರ್ವಾಸರು ಬಂದರೆಂದು ತಿಳಿಯೋಣ, ನೂರಾರು ಕೆಜಿಯಷ್ಟು ಸಿಟ್ಟನ್ನು ಮೈ, ಮುಖದ ಮೇಲೆ ಹೊತ್ತೇ ಬರುತ್ತಿದ್ದರು. ಅವರು ಅರಮನೆಗೆ  ಬಂದಿದ್ದೇ ಕ್ರೋಧಾಗಾರದ ಬಾಗಿಲು ತೆಗೆಯಲಾಗುತ್ತಿತ್ತೇ? ಖಂಡಿತ ಇಲ್ಲ. ಹಾಗೇನಾದರೂ ಅವರು ಕ್ರೋಧಾಗಾರದ ಒಳಗೆ ಹೊಕ್ಕರೆ ಹೊರ ಬರುವ ಮಾತೇ ಇಲ್ಲ! ಈ ಬಗೆಯಾಗಿ ವಿವಿಧ ಸಂದರ್ಭಗಳನ್ನು ಕಲ್ಪಿಸಿ ಯೋಚಿಸಿದಾಗ ಕ್ರೋಧಾಗಾರದ ಸೌಲಭ್ಯವು ಕೆಲವರಿಗೆ ಮಾತ್ರ ಲಭ್ಯವಾದುದಾಗಿತ್ತು ಎಂದು ತರ್ಕಿಸಬಹುದು.  ಆ ಕೆಲವರು ಯಾರು?

ಕ್ರೋಧಾಗಾರ ರಾಜನಿಗೆ  ಅವಶ್ಯವಿರಲಿಲ್ಲ. ಅವನು ಸಿಟ್ಟಿಗೆದ್ದರೆ  ಅವನಿರುವಲ್ಲೇ ಕೋಲಾಹಲ ಏರ್ಪಡುತ್ತದೆ. ಸಿಟ್ಟಿಗೆ ಕಾರಣರಾದವರನ್ನು ಗಡೀಪಾರು ಮಾಡಲೂ ಶಕ್ತನವನು. ಆದುದರಿಂದ ಅವನು ಕ್ರೋಧಾಗಾರ ಹೊಕ್ಕಬೇಕಾದ ಅಗತ್ಯ ಇಲ್ಲ. ಇನ್ನು ರಾಜನ ತಂದೆ, ತಾಯಿಗಳಿಗೇ ಆದರೂ ಕ್ರೋಧಾಗಾರ  ಅಗತ್ಯವಿತ್ತೆಂದು ಅನಿಸುವುದಿಲ್ಲ. ಬಹುಪಾಲು ಸಂದರ್ಭಗಳಲ್ಲಿ ವಯಸ್ಸಾದ ಹಿರಿಯರು ಮಕ್ಕಳಿಗೆ ರಾಜ್ಯಭಾರ ಒಪ್ಪಿಸಿ ವಾನಪ್ರಸ್ಥಕ್ಕೆ ತೆರಳುತ್ತಿದ್ದರು. ಕಂಸನಂಥ ಮಗನಾದರೆ ಅಪ್ಪನನ್ನೇ ಬಂದೀಖಾನೆಯಲ್ಲಿ ಇರಿಸುತ್ತಿದ್ದ. ಅರಮನೆಯ ಸೇವಕ ವರ್ಗದವರು ರಾಜ, ರಾಣಿಯರ ಸೇವೆ, ಓಲೈಕೆಯಲ್ಲಿ ಎಷ್ಟು ತೊಡಗಿರುತ್ತಿದ್ದರು ಎಂದರೆ ಸಿಟ್ಟು ಮಾಡಲು ಅವರಿಗೆ ಸವಡು ಸಿಗುತ್ತಿರಲಿಲ್ಲ. 'ಬಡವನ ಕೋಪ ದವಡೆಗೆ ಮೂಲ' ಎಂಬ ಗಾದೆ ಮಾತು ಆ ಯುಗಗಳಲ್ಲಿ ಕಲಿಯುಗಕ್ಕಿಂತ ಅಧಿಕ ಪ್ರಭಾವಶಾಲಿ ಆಗಿತ್ತು. ಹೀಗೆ 'ನೇತಿ', 'ನೇತಿ' ಎನ್ನುತ್ತಾ ಮುಂದೆ ಹೋದಾಗ ಈ ಕ್ರೋಧಾಗಾರವು ರಾಣಿಯರಿಗೇ ಮೀಸಲಾದ ವ್ಯವಸ್ಥೆ ಎಂಬುದು



ಸಿದ್ಧವಾಗುತ್ತದೆ. ಈಗ ಮುಂದಿನ ಪ್ರಶ್ನೆಗಳು:

1. ಒಂದು ಕ್ರೋಧಾಗಾರವನ್ನೇ ನಿರ್ಮಿಸುವ ಮಟ್ಟದಲ್ಲಿ ರಾಣಿಯರಿಗೇಕೆ ಸಿಟ್ಟು ಬರುತ್ತಿತ್ತು?

2. ರಾಣಿಯರು ರಾಜನನ್ನು ಬಿಟ್ಟು ಬೇರೆಯವರ ಮೇಲೆ ಸಿಟ್ಟಿಗೆದ್ದಾಗಲೂ ಕ್ರೋಧಾಗಾರ ಬಳಸಿಕೊಳ್ಳುತ್ತಿದ್ದರೇ?

3. ಎಲ್ಲ ರಾಣಿಯರಿಗೂ ಸಾರ್ವತ್ರಿಕವಾಗಿ ಒಂದೇ ಕ್ರೋಧಾಗಾರವಿತ್ತೋ ಅಥವಾ ಪ್ರತಿಯೊಬ್ಬರಿಗೂ ಪ್ರತ್ಯೇಕ ಕ್ರೋಧಾಗಾರ ಇರುತ್ತಿತ್ತೋ?

4. ಒಂದೇ ಕ್ರೋಧಾಗಾರ ಇರುತ್ತಿತ್ತು ಎಂದುಕೊಳ್ಳೋಣ. ಹಾಗಿದ್ದರೆ ಇಬ್ಬರು ಮೂವರು ರಾಣಿಯರಿಗೆ ಒಂದೇ ಸಮಯದಲ್ಲಿ ಸಿಟ್ಟು ಬಂದರೆ ಆಗ ಕ್ರೋಧಾಗಾರವನ್ನು ಯಾರು ಮೊದಲು ಬಳಸಿಕೊಳ್ಳಬೇಕು ಎಂಬುದಕ್ಕೆ ಏನಾದರೂ ನಿಯಮಗಳಿದ್ದವೇ? ಒಬ್ಬರಿಗಿಂತ ಹೆಚ್ಚು ರಾಣಿಯರಿಗೆ ಸಿಟ್ಟು ಬಂದಾಗ ಮೊದಲು ಒಳಹೋದವರು ಹೊರಕ್ಕೆ ಬರಲು ಸಮಯದ ನಿರ್ಬಂಧ ಕೂಡ ಅಗತ್ಯವಾಗುತ್ತಿತ್ತು ಎಂದು ನನ್ನ ಊಹೆ. ಇನ್ನೊಬ್ಬರು ಎಷ್ಟು ಹೊತ್ತು ಸಿಟ್ಟು ಅದುಮಿಟ್ಟುಕೊಂಡು ಹೊರಗೇ ನಿಲ್ಲಲು ಸಾಧ್ಯ?

5. ಪ್ರತಿಯೊಬ್ಬ ರಾಣಿಗೂ ಒಂದೊಂದು ಕ್ರೋಧಾಗಾರ ಇತ್ತೆಂದು ಊಹಿಸೋಣ. ಕೆಲವು ರಾಣಿಯರಿಗೆ ಸಿಟ್ಟೇ ಬರುತ್ತಿರಲಾರದು. ಆಗ ಅವರೇನು ಮಾಡಬೇಕು? ಆ ಮನೆಯ ಸದುಪಯೋಗ(!) ಆಗಬೇಕೆಂದು ಒಮ್ಮೊಮ್ಮೆ ಸಿಟ್ಟು ತಂದುಕೊಳ್ಳುತ್ತಿದ್ದರೇ?

6. ರಾಜರು ಗಾಂಧರ್ವ ವಿವಾಹ ಮಾಡಿಕೊಂಡು ಏಕಾಏಕಿ ಒಬ್ಬಳು ಹೊಸ ರಾಣಿಯನ್ನು ಅರಮನೆಗೆ ಕರೆದುಕೊಂಡು ಬಂದಾಗ ಅವಳಿಗಾಗಿ ಕ್ರೋಧಾಗಾರ ನಿರ್ಮಿಸಲು ತಕ್ಷಣ ಕ್ರಮ ತೆಗೆದುಕೊಳ್ಳಲಾಗುತ್ತಿತ್ತೇ? ಕಟ್ಟಡ ನಿರ್ಮಿಸುವುದರವರೆಗೆ ಅವಳು ತಾತ್ಕಾಲಿಕವಾಗಿ ಬೇರೆ ಕಡೆ ಸಿಟ್ಟು ಮಾಡಿಕೊಳ್ಳಲು ಅನುಮತಿ ಇತ್ತೇ?

7. ರಾಣಿಯರು ತಮ್ಮ ತಮ್ಮೊಳಗೇ ಕೋಪ ಮಾಡಿಕೊಂಡಾಗಲೂ ಈ ಕೋಪದ ಮನೆ ಬಳಸಿಕೊಳ್ಳಬಹುದಾಗಿತ್ತೇ? ಅದಕ್ಕೆ ಸಂಬಂಧಿಸಿ ವಿಧಿ ನಿಷೇಧಗಳು ಏನಿರಬಹುದು?

8. ರಾಜರ ಮೇಲೆ ಸಿಟ್ಟು ಬಂದಾಗ ಮಾತ್ರವೇ ಇದನ್ನು ಬಳಸಲಾಗುತ್ತಿತ್ತು ಎಂದಾದರೆ ಇದಕ್ಕೆ ಕ್ರೋಧಾಗಾರ ಎಂದೇ ಏಕೆ ಕರೆಯಬೇಕು? ಮಿಕ್ಕೆಲ್ಲ ಸಂದರ್ಭಗಳಲ್ಲೂ ಸಿಟ್ಟನ್ನು ಹೊರಗೇ ವ್ಯಕ್ತಪಡಿಸಬಹುದಿತ್ತು ಎಂದಾದ ಮೇಲೆ ಕ್ರೋಧಾಗಾರದ ಉಪಯೋಗ ವ್ಯಾಪಕವಾಗಿರಲಿಲ್ಲ ಅನಿಸುತ್ತದೆ. ಆದರೂ ಕ್ರೋಧಾಗಾರಗಳಿರುವುದು ರಾಜರ ಪ್ರತಿಷ್ಠೆಯ, ವೈಭವದ ಸಂಕೇತ ಆಗಿರಬಹುದು. ಸರಿಯೇ?

9. ಕ್ರೋಧಾಗಾರಗಳಲ್ಲಿ ಮನಸ್ಸನ್ನು ಸಮಾಧಾನ ಪಡಿಸುವ ಸಂಗೀತ, ಕಲೆಗಳಿಗೆ ಅವಕಾಶವಿತ್ತೇ? ರಾಜರು ಅರಮನೆಯಲ್ಲಿ ಇಲ್ಲದೇ ಹೋದರೆ ಸಿಟ್ಟಿಗೆದ್ದವರು ಏನು ಮಾಡಬೇಕು? ರಾಜರು ಇರುವುದನ್ನು ಖಚಿತ ಪಡಿಸಿಕೊಂಡು ಸಿಟ್ಟಿಗೇಳಬೇಕು ಎಂದರೆ ಹಾಸ್ಯಾಸ್ಪದವಾಗುತ್ತದೆ.



10. ರಾಜನು ರಾಣಿಯ ಸಿಟ್ಟಿಗೆ ಕೊಂಚವೂ ಬೇಸರ ಮಾಡಿಕೊಳ್ಳದೆ ಕ್ರೋಧಾಗಾರಕ್ಕೆ ಬರಲೇ ಇಲ್ಲ ಎಂದು ತಿಳಿಯೋಣ. ಇದು ಸರಿ ಅಲ್ಲ ಎಂದು ನನಗೇ ಹೊಳೆಯುತ್ತದೆ,

ಅಂದ ಮೇಲೆ ಈ ಕುರಿತು ಶಾಸ್ತ್ರಗಳು ರಾಜನಿಗೆ ಖಂಡಿತ ಸೂಚನೆ, ಎಚ್ಚರಿಕೆ ನೀಡಿರಬಹುದು. ಆದರೂ ಈ ಸಾಧ್ಯತೆ ಪರಿಶೀಲಿಸಬೇಕು. ಅಥವಾ ಹೀಗಾಗಲೂಬಹುದು: ಸಿಟ್ಟಿಗೆದ್ದ ರಾಣಿಯೇ ಕ್ರೋಧಾಗಾರ ಪ್ರವೇಶಿಸಿ ಕೆಲವು ಸಮಯ ಕಳೆದ ಬಳಿಕ ರಾಜ ಬರುವ ಮೊದಲೇ  ಮನಸು ತಿಳಿಗೊಂಡು ಹೊರಬರಲು ಇಚ್ಛಿಸಬಹುದು. ಅದಕ್ಕೆ ಅನುಮತಿ ಇತ್ತೇ?  ದುಡುಕಿ ಕ್ರೋಧಾಗಾರ ಪ್ರವೇಶಿಸಿದ ಕುರಿತು ಟೀಕೆಗಳು ಬರುವ ಸಾಧ್ಯತೆ ಮರೆಯಬಾರದಲ್ಲ!

11. ಹುಸಿಕೋಪವೂ ಕೋಪದ ಒಂದು ವಿಧಾನ.  ಕ್ರೋಧಾಗಾರದಲ್ಲಿ  ಅದರ ಅಭಿವ್ಯಕ್ತಿಗೂ ಅನುಮತಿ ಇತ್ತೇ?

12. ಕ್ರೋಧಾಗಾರ ಒಂದು ಪ್ರತ್ಯೇಕ ಕಟ್ಟಡ ಎಂದ ಮೇಲೆ ಅದರ ಪ್ರವೇಶಕ್ಕೆ ಧಾರ್ಮಿಕ ಕಾರ್ಯಕ್ರಮಗಳಿರುತ್ತಿದ್ದವೇ? ಮನೆಯ ಅಭಿವೃದ್ಧಿಗಾಗಿ, ಅಲ್ಲಿರುವವರ ಅಭ್ಯುದಯಕ್ಕಾಗಿ  ಅಂಥ ಧಾರ್ಮಿಕ  ಕಾರ್ಯಕ್ರಮ ಮಾಡಲಾಗುತ್ತದೆ. ಆದರೆ ಕ್ರೋಧಾಗಾರದ 'ಅಭಿವೃದ್ಧಿ', 'ಏಳಿಗೆ' ಅಂದರೆ ಏನರ್ಥ? ಅಲ್ಲಿ ಶಾಶ್ವತವಾಗಿ ಯಾರೂ ಇದ್ದಿರಲೂ  ಸಾಧ್ಯವಿಲ್ಲ. ಕ್ರೋಧಾಗಾರದ ಬಳಕೆ ಎಷ್ಟು ಕಡಿಮೆಯಾಗುತ್ತದೋ, ಅಷ್ಟು ಒಳಿತು. ಒಟ್ಟಿನಲ್ಲಿ ನನ್ನ ಪ್ರಶ್ನೆ: ಈ ಮನೆಯ 'ಗೃಹಪ್ರವೇಶ' ಹೇಗಿರುತ್ತಿತ್ತು?

ಸಾಮೂಹಿಕ ಮಾಧ್ಯಮಗಳು ಆಗ ಇರಲಿಲ್ಲ ಎಂಬುದು ಎಷ್ಟೋ ಸಮಾಧಾನದ ವಿಷಯ.  ಹಾಗೇನಾದರೂ ಇದ್ದರೆ ಏನಾಗುತ್ತಿತ್ತು? ಒಂದು ಕ್ಷಣ ಯೋಚಿಸಿ: ತಮ್ಮ ರಾಣಿ ಸಿಟ್ಟಿಗೆದ್ದಾಗ ರಾಜರು ಸೇವಕಿಯಿಂದ ವಿಷಯ  ತಿಳಿಯುವುದಕ್ಕೂ ಮೊದಲೇ ರಾಜ್ಯಾದ್ಯಂತ ಸುದ್ದಿ ಬಿತ್ತರಗೊಂಡು ರಾಜನೂ ಮಾಧ್ಯಮಗಳ ಮೂಲಕವೇ ಆ ಸುದ್ದಿ ತಿಳಿದು ರಾಣಿಯನ್ನು ಸಮಾಧಾನ ಪಡಿಸುವ ಮೊದಲೇ ಹಲವು ಚಾನೆಲ್ಲುಗಳ ಪ್ರಶ್ನೆಕರ್ತರ ಮುಂದೆ ನಿಂತು ಅವರ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತಿತ್ತು.  "ರಾಜರಿಗೂ ಮೊದಲೇ ಪ್ರಜೆಗಳಿಗೆ ಮಾಹಿತಿ",  "ಇದು ನಮ್ಮ ಚಾನೆಲ್ಲಿನಲ್ಲೇ ಮೊದಲು" ಮುಂತಾಗಿ ಟಿ.ವಿ.ಯವರು ತಾರಕಸ್ವರದಲ್ಲಿ ಕೂಗುವುದೂ ಅಲ್ಲದೆ ರಾಣಿ ಕ್ರೋಧಾಗಾರದ ಬಾಗಿಲು ತೆರೆದು ಹೊರ ಬರುವುದನ್ನೇ ಅವರು  ಕಾಯುತ್ತ ನಿಲ್ಲುತ್ತಿದ್ದರು. ಅರಮನೆಯಿಂದ ನೇರ ಪ್ರಸಾರ! ವಿದ್ವಾಂಸರಿಂದ ಚರ್ಚೆ! ರಾಜ, ರಾಣಿಯರು ಸಂಧಾನದ ಬಳಿಕ ನಗುತ್ತಾ ಹೊರಬರುವ ದೃಶ್ಯ! "ರೈತರ ಬೆಳೆ ಸಾಲ ಮನ್ನಾ ಕುರಿತು" ಅಥವಾ  "ರಾಜಧಾನಿಯ ರಸ್ತೆಯ ಹಳ್ಳ ಹೊಂಡಗಳ ಕುರಿತು" ಸಿಟ್ಟಿಗೆದ್ದುದಾಗಿ ರಾಣಿಯ ಹೇಳಿಕೆ, ಆ ಕುರಿತು ತಕ್ಷಣ ಕ್ರಮ ತೆಗೆದುಕೊಂಡಿರುವುದಾಗಿ ಮಹಾರಾಜರ ಘೋಷಣೆ..  ಹೀಗೆ ಏನೇನೋ ನಡೆದು ನಿಜವು 'ಮಳಲ ಹುಡಿಗಿಂತ ಕೀಳಾಗಿ' ನರಳಾಡುವ ಪರಿಸ್ಥಿತಿ ಬಂದೊದಗುತ್ತಿತ್ತು.

ಕ್ರೋಧ ಒಂದು ವಿಕಾರವೇ ಸರಿ, ಅನುಮಾನವಿಲ್ಲ. ಅದರ ದುಷ್ಪರಿಣಾಮ ಮಿಕ್ಕವರ ಮೇಲೆ ಅಥವಾ ಇಡೀ ಅರಮನೆಯ ಮೇಲೆ ಆಗದಿರಲೆಂದು ಕ್ರೋಧಾಗಾರವನ್ನು ಪ್ರತ್ಯೇಕವಾಗಿ ಕಟ್ಟುತ್ತಿದ್ದರು ಎಂಬುದು ಬಲ್ಲವರಿಂದ ನನಗೆ ಸಿಕ್ಕ ಒಂದು ವಿವರಣೆ. ಸಿಟ್ಟು ಇಳಿದು ಮನಸು ನಿರ್ಮಲಗೊಂಡ ಬಳಿಕ ಆ ವ್ಯಕ್ತಿ ಮಿಕ್ಕವರೊಡನೆ ಬೆರೆಯುತ್ತಿದ್ದ(ಳು). ಇದೊಂದು ಉದಾತ್ತ ಯೋಚನೆ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ಆದರೂ ಒಂದು ಪ್ರಶ್ನೆ ಹುಟ್ಟುತ್ತದೆ. ನಮ್ಮ ಹಿರಿಯರು ಷಡ್ವೈರಿಗಳನ್ನು (ಕಾಮ, ಕ್ರೋಧ.... ಮತ್ಸರ) ಗುರುತಿಸಿರುವರಷ್ಟೆ? ಅವುಗಳಲ್ಲಿ ಕ್ರೋಧ ಒಂದಕ್ಕೇ ಇಷ್ಟು ಪ್ರಾಶಸ್ತ್ಯ ಕೊಟ್ಟು ಅದಕ್ಕಾಗಿ ಒಂದು ಪ್ರತ್ಯೇಕ ಮನೆಯನ್ನೇ ಕಟ್ಟುವುದೇಕೆ? ಮತ್ಸರವೇನು



ಕಡಿಮೆ ಅಪಾಯಕಾರಿಯೇ? ಮೂಲತಃ ಕೈಕೇಯಿಗೆ ಉಂಟಾಗಿದ್ದು (ಮಂಥರೆ 'ಉಂಟುಮಾಡಿಸಿದ್ದು') ಮತ್ಸರವೇ. ಆ ಮತ್ಸರಕ್ಕೂ ಮೂಲದಲ್ಲಿದೆ ಮಗನ ಕುರಿತ ಮೋಹ. ಮೋಹ, ಮತ್ಸರಗಳೂ ಷಡ್ವಿಕಾರಗಳ ಗುಂಪಲ್ಲೇ ಇವೆ ಎಂಬುದನ್ನು ಗಮನಿಸಿ. 'ಕ್ರೋಧ' ಕೈಕೇಯಿಯ ಮನೋಭೂಮಿಕೆಯನ್ನು ವ್ಯಕ್ತಪಡಿಸುವ ಒಂದು ಹೊರಕವಚವಾಗಿತ್ತು ಮತ್ತು 'ಕ್ರೋಧಾಗಾರ' ಅದರ ರಂಗಭೂಮಿಯಾಗಿತ್ತು. ಅದೆಷ್ಟು ಚೆನ್ನಾಗಿ ಅವಳು ಭರತನ ಪಟ್ಟಾಭಿಷೇಕ ಮತ್ತು ಶ್ರೀರಾಮನ ವನವಾಸಕ್ಕೆ ವ್ಯೂಹ ರಚಿಸಿದಳು! ಅಂದರೆ ಕ್ರೋಧಾಗಾರವು ರಾಜಕಾರಣದ್ದೇ ಒಂದು ಅಂತರ್ವೇದಿಕೆಯಾಗಿತ್ತು! ಅದಕ್ಕಾಗಿಯೇ ಅದು ಅಂತಃಪುರಕ್ಕೆ ಹತ್ತಿರದಲ್ಲೇ ಇತ್ತು. ಅದರ ಹೆಸರು ಕ್ರೋಧಾಗಾರವಾದರೂ ರಾಜಕೀಯದ ಒಳಸುಳಿಗಳು ಅಲ್ಲಿ ಕಾಣಿಸಿಕೊಳ್ಳುತ್ತಿದ್ದವು. ರಾಮಾಯಣದ ಕಥೆಯ ಬಹುದೊಡ್ಡ ಪರಿವರ್ತನೆ ನಡೆದುದು ಅಲ್ಲಿ, ಕ್ರೋಧಾಗಾರದಲ್ಲಿ. ಇದನ್ನರಿತು ಮುಂದಿನ ರಾಜರು ಅದರ ಪಂಚಾಯ್ತಿಯೇ ಬೇಡ ಎಂದು ನಿರ್ಧರಿಸಿರಬೇಕು. ಅದರಿಂದಾಗಿ ಈವರೆಗೆ ನಾನು ಕಂಡ ಯಾವುದೇ ಅರಮನೆಯಲ್ಲಿ ಕ್ರೋಧಾಗಾರ ಇಲ್ಲ.

ಅಯೋಧ್ಯೆಯಲ್ಲಿ ಕನಕಭವನ ಎಂಬೊಂದು ಕಟ್ಟಡ ಇದೆ. ಮದುವೆಯಾಗಿ ಬಂದ ಸೀತೆಗೆ ಆ ಮನೆಯನ್ನು ಕೈಕೇಯಿ ಬಿಟ್ಟುಕೊಟ್ಟಳಂತೆ. ಆ ಕಾಲದಲ್ಲಿ ಇದು ಹೊನ್ನಿನ ಅರಮನೆಯೇ ಆಗಿತ್ತೆಂದೂ ತಿಳಿಯಿತು. ಕೈಕೇಯಿಯ ಈ ಉದಾರ ಚರಿತೆಯನ್ನು ಕೇಳಿ ನಾನು ಚಕಿತನಾದೆ. ಕ್ರೋಧಾಗಾರದ ಅವಶೇಷವನ್ನು ಈ ಪುಣ್ಯಭೂಮಿಯಲ್ಲಿ ಹುಡುಕುವುದು ಅವಿವೇಕ ಅನ್ನಿಸಿತು. ("ಈ ವಿಷಯಕ್ಕೆ ಸಂಬಂಧಿಸಿದ ಸ್ಥಳಕ್ಕೇ ಹೋದಾಗ ಈ ವಿಚಾರವನ್ನು ಕೈಬಿಟ್ಟೆ... ". ಎಂಬ ಈ ಬರಹದ ಆರಂಭದ ನನ್ನ ಮಾತಿಗೆ ಇದು ನಾನು ಒಪ್ಪಿಸುತ್ತಿರುವ ವಿವರಣೆ.). ನಿಜ, ಆ ಕಾಲದಲ್ಲಿ ಕ್ರೋಧಾಗಾರ ಇತ್ತು. ಹಾಗಿಲ್ಲದೆ ವಾಲ್ಮೀಕಿ ಋಷಿಗಳು "ಕ್ರೋಧಾಗಾರಮಭಿದ್ರುತಾ.. " ಎಂದು ಬರೆಯುತ್ತಿದ್ದರೇ? ಆ ಹಿಂದಿನ ಯುಗಗಳ ಅಧ್ಯಯನ ಮಾಡಿ ಸಮಾಜದಲ್ಲಿ ಕ್ರೋಧಾಗಾರಗಳ ಅಗತ್ಯವಿಲ್ಲ ಎಂದು ಬಲ್ಲವರೆಲ್ಲರೂ ಸೇರಿಯೇ ತೀರ್ಮಾನಿಸಿದ್ದಾರೆ ಎಂದು ನನ್ನ ಸದ್ಯದ ಶೋಧನೆ. ಕ್ರೋಧಾಗಾರಗಳನ್ನು 'ಮೀರಿದ್ದೇವೆ', ಸಾಧ್ಯವಾದರೆ ಕ್ರೋಧವನ್ನೂ ಮೀರೋಣ.

ಬಾಲಂಗೋಚಿ: (1)ನಾನು ಮನೆ ಕಟ್ಟುವಾಗ ಕ್ರೋಧಾಗಾರದ ಹೆಸರಿನಲ್ಲಿ ಒಂದು ಮನೆ ಬೇಡ, ಕೋಣೆಯನ್ನಾದರೂ ಕಟ್ಟೋಣವೇ ಎಂದು ಆಲೋಚಿಸಿದ್ದೆ. "ಮಾಸ್ಟರ್ ಬೆಡ್ ರೂಂ ಅಂದರೆ ಅದೇ ಅಲ್ಲವೇ?" ಎಂದು ನಮ್ಮ ಇಂಜಿನಿಯರ್ ನಕ್ಕುಬಿಟ್ಟರು ಮತ್ತು ಪ್ರತ್ಯೇಕ ಕೋಪದ ಕೋಣೆಯ ಪ್ರಸ್ತಾಪ ತಳ್ಳಿಹಾಕಿದರು.

(2) ಪ್ರಿಯ ಹಿರಿಯ ಕವಿ ಸುಬ್ರಾಯ ಚೊಕ್ಕಾಡಿಯವರು ಬರೆದ "ಮುನಿಸು ತರವೇ ಮುಗುದೆ" ಲೋಕಪ್ರಸಿದ್ಧವಾಗಿದೆ. ಕ್ರೋಧಾಗಾರ ಇಲ್ಲವಾದರೂ ಮುಗುದೆಯರು ಮುನಿಸು ನಿಲ್ಲಿಸಿಲ್ಲ ಎಂಬುದು ಇದರಿಂದಲೂ ಸಾಬೀತಾಗುತ್ತದೆ. ಮುನಿದ ಮಾನಿನಿಯರನ್ನು ಈ ಹಾಡು ಸಂತೈಸಿ ಮುಗುಳುನಗೆ ಮೂಡಿಸುವುದೆಂದು ಕಂಡುಕೊಂಡಿದ್ದೇನೆ. ಆ ಕಾಲದಲ್ಲಿದ್ದ ಕ್ರೋಧಾಗಾರವನ್ನು ತೋರಿದ ಆದಿಕವಿ ವಾಲ್ಮೀಕಿ ಮಹರ್ಷಿಗಳು, ಈ ಕಾಲದಲ್ಲಿ ಕ್ರೋಧ ಮೀರುವ ಉಪಾಯ ತೋರಿದ ಚೊಕ್ಕಾಡಿಯವರು ಇಬ್ಬರಿಗೂ ಗೌರವಪೂರ್ವಕ ನಮಸ್ಕಾರಗಳು.



■

# ದೇಖೋನಾ ಸನ್ ಆಫ್ ಕರೋನಾ

***ಗೌತಮ**

(ಈ ನಡುವೆ ಟಿವಿ ಆನ್ ಮಾಡೋದನ್ನೇ ಬಿಟ್ಟುಬಿಟ್ಟಿದ್ದೀನಿ. ಪ್ರಪಂಚದಲ್ಲಿನ ಸರ್ವ ಕ್ರಿಯೆಗಳೂ ಸ್ಥಬ್ದವಾಗಿ ಹೋಗಿದೆಯೇನೋ ಅನ್ನೋ ಹಾಗೆ ಸುದ್ದಿ ವಾಹಿನಿಗಳಲ್ಲೆಲ್ಲಾ ಬರೀ ಕರೋನಾ, ಸಾವು, ಆಕ್ಸಿಜನ್ನು, ಬೆಡ್ಡು, ದುಡ್ಡು, ವ್ಯಾಕ್ಸೀನು, ಐದನೇ ಅಲೆ, ಆರನೇ ಅಲೆ. ಆದರೂ, ಉಪ್ಪು ಹುಳಿ ಖಾರ ತಿನ್ನೋ ದೇಹ ಅಲ್ಲವೇ? ಟಿವಿ ನೋಡೋ ಆಸೇನ ಹತ್ತಿಕ್ಕೋದು ಅಷ್ಟು ಸುಲಭವಲ್ಲ. ಆನ್ ಮಾಡಿದೆ)

"ಘನ ಘೋರ ಭಯಂಕರ ಸುದ್ದಿ.

ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಸ್ಫೋಟ.

ನಮ್ಮ 'ಕಹಳೆ' ವಾಹಿನಿಯಿಂದ ಮಾತ್ರ"

(ಮ್ಯೂಸಿಕ್ಕು: ಝುನ್ ಝುನ್ ಝುನ್–ಪಾಸ್– ಝುನ್ ಝುನ್ ಝುನ್– ಪಾಸ್– ಝುನ್ ಝುನ್ ಝುನ್–ಪಾಸ್ . .

ಈ ಝುನ್ ಝುನ್ ಝುನ್ನಾಗಿ 772 'ಕರ್ಕಶ ಟಿಪೀಲು'ಗಳನ್ನು ಒಟ್ಟಿಗೆ ನುಡಿಸಿ ಈ ಸದ್ದನ್ನು ಹೊರಡಿಸಿದ್ದಾರಂತೆ!)

"ಘನ ಘೋರ ಭಯಂಕರ ಸುದ್ದಿ. ನಮ್ಮ 'ಕಹಳೆ' ವಾಹಿನಿಯಿಂದ ಮಾತ್ರ. ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಸ್ಫೋಟ"

"ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಸ್ಫೋಟ. ಘನ ಘೋರ ಭಯಂಕರ ಸುದ್ದಿ. ನಮ್ಮ 'ಕಹಳೆ' ವಾಹಿನಿಯಿಂದ ಮಾತ್ರ"

"ನಮ್ಮ 'ಕಹಳೆ' ವಾಹಿನಿಯಿಂದ ಮಾತ್ರ. ಘನ ಘೋರ ಭಯಂಕರ ಸುದ್ದಿ. ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಸ್ಫೋಟ"

(ಒಂದೊಂದು ಸೆಟ್ ಆದಾಗಲೂ ಝುನ್ ಝುನ್ ಝುನ್).

(ನಿಮ್ಮ ಕೈಲಿರೋ 'ಅಪರಂಜಿ' ಎಲ್ಲಿ ನಿಮ್ಮ ಕೋಪಕ್ಕೆ ಬಲಿಯಾಗಿ ಚಿಂದಿಯಾಗುತ್ತಾಳೋ ಅನ್ನೋ ಭಯದಿಂದ ಇಲ್ಲಿಗೇ ಸ್ಟಾಪ್ ಮಾಡ್ತೀನಿ. ಅನುಭವಿ ವೀಕ್ಷಕರಾದ ನೀವೇ ಮುಂದಿನ ಮೂರು ಸಾಲುಗಳನ್ನು ಊಹಿಸಿಕೊಳ್ಳಿ. ಹಾಂ. ಹಳೆಯ ಚಿತ್ರಗೀತೆಯೊಂದು ಜ್ಞಾಪಕಕ್ಕೆ ಬಂತು. ಕುಂಕುಮ ಹಣೆಯಲಿ ನಗುತಿದೆ. ಇದೂ ಅಷ್ಟೇ. ಮೂರೇ ಪದಗಳು. ಪರ್ಮುಟೇಷನ್ ಅಂಡ್ ಕಾಂಬಿನೇಷನ್ ಪ್ರಕಾರ ಆ ಮೂರು ಪದಗಳನ್ನು ಆರು ತರಹ ಜೋಡಿಸಿ ಹಾಡಬಹುದು. ಎಲ್ಲವೂ ಪರ್ಫೆಕ್ಟ್. ಟ್ರೈ ಮಾಡಿ)

(ಬೇಕಾದರೆ ಮಧ್ಯೆ ಮಧ್ಯೆ ಝುನ್ ಝುನ್ ಝುನ್ ನೀವೇ ಸೇರಿಸಿಕೊಳ್ಳಿ).

"ವಿಶ್ವದಲ್ಲಿನ ಲಕ್ಷಾಂತರ ಮಾನವರನ್ನು ನಿರ್ದಯವಾಗಿ ಮಸಣದೆಡೆಗೆ ತಳ್ಳಿದ ಕರೋನಾದ ಅಟ್ಟಹಾಸ ಇಳಿದು, ಉಳಿದವರು ಉಸಿರಾಡುವಂತೆ ಮಾಡುತ್ತಿರುವಾಗಲೇ ಇನ್ನೊಂದು ಮಹಾ ಹೆಮ್ಮಾರಿ ಇದೀಗ ಕೋಟ್ಯಾಂತರ ಸುನಾಮಿಗಳಂತೆ ಮಾನವಕುಲವನ್ನೇ ಆಪೋಶನ ತೆಗೆದುಕೊಳ್ಳಲು ದಾಪುಗಾಲು ಹಾಕುತ್ತಾ ಭೂಲೋಕಕ್ಕೆ ದಾಂಗುಡಿಯಿಡುತ್ತಾ



'ನೋಡಬೇಡಿ' ಎನ್ನುತ್ತಾ ಬರುತ್ತಿದೆ. ಅದರ ಹೆಸರು 'ದೇಖೋನಾ', 'ದೇಖೋನಾ ಸನ್ ಅಫ್ ಕರೋನಾ'. ಈ ಮಧ್ಯೆ, ಮೂರನೇ ಅಲೆ, ನಾಲ್ಕನೇ ಅಲೆ, ಅಂತೆಲ್ಲ ಕಾಣಿಸಿಕೊಂಡ ಅಲೆಗಳಿಗೆ ಜನ ಕೇರ್ ಮಾಡದೇ ಇದ್ದಾಗ ಬಾಲ ಮುದುರಿಕೊಂಡು ಹೇಳಹೆಸರಿಲ್ಲದಂತೆ ಲಯವಾದದ್ದು ಬೇರೆ ವಿಷಯ ಬಿಡಿ.

(ಈ ಒಂದೇ ಸುದ್ದಿಯಲ್ಲಿನ ಪದಗಳನ್ನ ತಿರುಗಾ ಮರುಗಾ ಐದು ಸಲ. ಹೇಗೆ ಅಂತ ನಿಮಗೆ ಹೇಳಬೇಕಾಗಿಲ್ಲ. ಒಂದೊಂದು ಸಲ ಮುಗಿದ ಮೇಲೂ ಝುಐನ್ ಝುಐನ್ ಝುಐನ್)

"ವಿವರಗಳನ್ನು ಕೆಲವೇ ಕ್ಷಣಗಳಲ್ಲಿ ನಿಮ್ಮ ಮುಂದಿಡುತ್ತಾ ಹೋಗುತ್ತೇವೆ. ಅದಕ್ಕೆ ಮುಂಚೆ ಒಂದು ಸಣ್ಣ ಬ್ರೇಕ್"

(ಐದು ನಿಮಿಷಗಳ ಕಾಲ ಕಿವಿ ಗಡಚಿಕ್ಕುವ, ಕಣ್ಣು ಕುಕ್ಕುವ. ಚರ್ಮದಲ್ಲಿ ತೂರುವ, ಜಾಹಿರಾತುಗಳು. ಮ್ಯೂಟ್ ಮಾಡೋಣ ಅಂತಂದರೆ, ಹಾಳಾದ್ದು ಅಲ್ಲೇ ಎಲ್ಲೋ ಇಟ್ಟ ರಿಮೋಟ್ ಕಣ್ಣಿಗೆ ಕಾಣಲ್ಲ. ಮಿಸ್ ಕಾಲ್ ಕೊಟ್ಟರೆ ಕಣ್ಮರೆಯಾಗಿರುವ ವಸ್ತು ಹೊಡಕೊಳ್ಳೋ ಥರ ಏನಾದರೂ ಗ್ಯಾಡ್ಜೆಟ್ ಒಂದನ್ನು ಪುಣ್ಯಾತ್ಮರಾರಾದರೂ ಕಂಡುಹಿಡಿದರೆ, ಕೋಟ್ಯಾಂತರ ಜನರಿಗೆ ಅದೊಂದು ವರವಾದೀತು ಮತ್ತು ಕಂಡುಹಿಡಿದವರಿಗೆ ನೋಬಲ್ ಪ್ರೈಸ್ ಬರೋದಂತೂ ಶತಸ್ಸಿದ್ಧ)

"ಇದೀಗ ತಾನೇ ಟಿವಿ ಆನ್ ಮಾಡಿದವರ ಉಪಯೋಗಕ್ಕಾಗಿ"

(ಎಲ್ಲವೂ ರಿಪೀಟು, ಝುಐನ್ ಝುಐನ್ ಝುಐನ್ ಸಮೇತ)

"ಉಸಿರು ಬಿಗಿ ಹಿಡಿದುಕೊಳ್ಳಿ. ಗುಂಡಿಗೆಯನ್ನು ಭದ್ರ ಮಾಡಿಕೊಳ್ಳಿ. ಮೃದು ಹೃದಯದವರು ಟಿವಿಯನ್ನು ಆಫ್ ಮಾಡಿ ಇಲ್ಲವೇ ಎದ್ದುಹೋಗಿ. ಅಂಥವರು ಭಂಡ ಧೈರ್ಯದಿಂದ ಈ ಭೀಕರ ಸುದ್ದಿ ಕೇಳಿ ಎದೆ ಒಡೆದು ಸತ್ತರೆ ನಾವು ಜವಾಬ್ದಾರರಲ್ಲ"

(ಝುಐನ್ ಝುಐನ್ ಝುಐನ್)

"ಎಚ್ಚರ ಎಚ್ಚರ ಎಚ್ಚರ".

"ಯಾರ ಕಣ್ಣಲ್ಲಾದರೂ ಕಣ್ಣಿಟ್ಟು ನೋಡಿದಿರೋ. ಅಷ್ಟೇ! ಅಷ್ಟೇ! ಅಷ್ಟೇ!"

"ಕಣ್ಣಿಲ್ಲದ ಕುರುಡರಾಗೋದು ಗ್ಯಾರಂಟಿ".

"ದೃಷ್ಟಿಯನ್ನು ಕಳೆದುಕೊಂಡು ಅಂಧರಾಗುವುದು ಸಹಸ್ರಸಿದ್ಧ"

"ಈಗಾಗಲೇ ಚೀನಾದಲ್ಲಿ ಈ ದೇಖೋನಾಗೆ ಇಪ್ಪತ್ತು ಜನ ಬಲಿಯಾಗಿದ್ದಾರೆ. ಕಣ್ಣು ಪರೀಕ್ಷಿಸಿದ ಹತ್ತು ಡಾಕ್ಟರುಗಳು ಮತ್ತು ಆ ಡಾಕ್ಟರುಗಳಿಗೆ ಕಣ್ಣು ತೋರಿಸಿದ ಹತ್ತು ಪೇಷೆಂಟುಗಳ ಕಣ್ಣುಗಳೇ ಮಟಾಷ್! ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದೇ ಇವರುಗಳು ಮಾಡಿದ ಘೋರ ಅಪರಾಧ. ಎಂಥ ದುರ್ದೈವ! ಈ ಮೈ ನಡುಗಿಸುವ ಸುದ್ದಿ ಕ್ಷಣಾರ್ಧದಲ್ಲಿ ಪ್ರಪಂಚದಾದ್ಯಂತ ವೈರಲ್ ಆಗುವಷ್ಟರೊಳಗೆ ಇನ್ನೂ ನಾಲಕ್ಕು ಸಾವಿರ ಕೇಸುಗಳು ದಾಖಲು. ಒಬ್ಬರನ್ನೊಬ್ಬರು ಗುರಾಯಿಸಿದ ಗಂಡ–ಹೆಂಡತಿಯರು, ಗುರುಗಳನ್ನೇ ಗುರಾಯಿಸಿದ ಶಿಷ್ಯ–ಶಿಷ್ಯನನ್ನೇ ಗುರಾಯಿಸಿದ ಗುರುಗಳು, ತಮ್ಮ ತಮ್ಮ ರೂಪವನ್ನು ಕಣ್ಣಕನ್ನಡಿಯಲ್ಲಿ ನೋಡಿಕೊಳ್ಳಲು ತವಕಿಸಿ ಕಣ್ಣಲ್ಲಿ ಕಣ್ಣಿಟ್ಟ ಪ್ರಿಯತಮ–ಪ್ರೇಯಸಿಯರು ಈ ನಾಲ್ಕು ಸಾವಿರದಲ್ಲಿ ಸೇರಿದ್ದಾರೆಂಬ ಮಾಹಿತಿ ಲಭ್ಯವಾಗಿದೆ. ಇದನ್ನು



ಹೇಳುವಷ್ಟರಲ್ಲಿ ಇನ್ನೆಷ್ಟು ಜೋಡಿಗಳು 'ದೇಖೋನಾ'ಗೆ ಬಲಿಯಾಗಿವೆಯೋ ಆ ಭಗವಂತನೇ ಬಲ್ಲ. 'ದೇಖೋನಾ'ದಷ್ಟೇ ವೇಗವಾಗಿ ಹಬ್ಬುತ್ತಿರುವ ಸುದ್ದಿ, ವಾಹಿನಿಗಳ ಮೂಲಕ ಇನ್ನಷ್ಟು ಸ್ಪೀಡಾಗಿ ಹರಿದು ಎಲ್ಲ ಕಣ್ವಂತರಿ('ನಾಕಾ'ರ ಸೃಷ್ಟಿ–ಧನ್ವಂತರಿಯಂತೆ ಕಣ್ವಂತರಿ) ಗಳೂ ತಮ್ಮ ತಮ್ಮ ನೇತ್ರಾಲಯಗಳನ್ನು ಮುಚ್ಚಿ ಮನೆ ಸೇರಿಕೊಂಡು ಮುಸುಕಿಟ್ಟುಕೊಂಡು ಮಲಗಿಬಿಡುತ್ತಿದ್ದಾರೆ. 'ದೇಖೋನಾ' ನಮ್ಮ ದೇಶಕ್ಕೂ ಕಾಲಿಡಲು ಹೆಚ್ಚು ಸಮಯ ಬೇಕಾಗಿಲ್ಲ. ದಿನಗಳಲ್ಲ, ಗಂಟೆಗಳಲ್ಲ, ನಿಮಿಷಗಳೂ ಅಲ್ಲ. ಕೇವಲ ಕ್ಷಣಗಳು. ಆ ಕ್ಷಣಕ್ಕೆ ಈಗಾಗಲೇ 'ಕ್ಷಣ'ಗಣನೆ ಶುರುವಾಗಿದ್ದು ಮಿಂಚಿನಂತೆ ಸರ್ವೇ ಜನರನ್ನೂ ತಲುಪುತ್ತಿದೆ"

"ಮುನ್ನೆಚ್ಚರಿಕೆಯ ಕ್ರಮವಾಗಿ ಮುಖ್ಯಮಂತ್ರಿಗಳು ವಿಶ್ವದ ಟಾಪ್ ಫೈವ್ ಎಕ್ಸ್‌ಪರ್ಟ್‌ಗಳನ್ನೊಳಗೊಂಡಂತೆ ಎಲ್ಲ ಮಂತ್ರಿಗಳ ತುರ್ತು ಸಭೆಯನ್ನು ಕರೆದಿದ್ದಾರೆ. ಕೆಲವೇ ಕ್ಷಣಗಳಲ್ಲಿ ತೀರ್ಮಾನ ಹೊರಬೀಳಲಿದೆ. ಏನಿದು 'ದೇಖೋನಾ'? ಸಭೆ ಮುಗಿಯುವುದರೊಳಗೆ 'ದೇಖೋನಾ' ಕುರಿತು ತಿಳಿಯೋಣ. ಇಬ್ಬರು ವ್ಯಕ್ತಿಗಳು ಪರಸ್ಪರ ನೋಡಿದಾಗ ಒಬ್ಬರ ಕಣ್ಣಿಂದ ಇನ್ನೊಬ್ಬರ ಕಣ್ಣಿನ ಕಡೆ ದೃಷ್ಟಿ ಹರಿದಾಗ, ಎರಡು ದೃಷ್ಟಿಗಳೂ ಬೆಳಕಿನ ವೇಗದಲ್ಲಿ ಚಲಿಸಿ ಎಲ್ಲೋ ಒಂದು ಬಿಂದುವಿನಲ್ಲಿ ಢಿಕ್ಕಿ ಹೊಡೆದ ತಕ್ಷಣ ಎರಡು ಆರ್ಡಿ ಎಂಬ ಅಲ್ಪಾಯು ವೈರಸ್ ಉತ್ಪತ್ತಿಯಾಗಿ ಎದುರು–ಬದುರುಗಣ್ಣುಗಳನ್ನು ಸೇರಿ ಅವನ್ನು ನಾಶ ಪಡಿಸುವುದಷ್ಟೇ ಅಲ್ಲದೇ ತಾವೂ ಸತ್ತುಹೋಗುತ್ತವೆ, ಮಾನವ ಬಾಂಬರ್ ಆತ್ಮಹತ್ಯೆ ಮಾಡಿಕೊಳ್ಳುವಂತೆ!"

"ಓ! ಬಂದೇಬಿಟ್ಟಿತು ಬ್ರೇಕಿಂಗ್ ನ್ಯೂಸ್. ಬಿಗ್ ಬ್ರೇಕಿಂಗ್ ನ್ಯೂಸ್."

"ಕೇವಲ ಮೂರು ನಿಮಿಷಗಳಲ್ಲಿ ತುರ್ತುಸಭೆ ಮುಗಿದಿರುವ ಅಭೂತಪೂರ್ವ ವಿದ್ಯಮಾನ ಗಿನ್ನಿಸ್ ದಾಖಲೆಯನ್ನು ಸೇರಿದೆ. ಅದರ ಹಿಂದೆಯೇ ಇದನ್ನು ಮೆಚ್ಚಿದ ಟ್ವೀಟ್‌ಗಳ ಸಂಖ್ಯೆಯೂ ಗಿನ್ನಿಸ್ ದಾಖಲೆಯನ್ನು ಸೇರಿದೆ. ಕೆಲವೇ ಕ್ಷಣಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾರ್ಯಸೂಚಿ ಬಿಡುಗಡೆ ಮಾಡಲಿದ್ದಾರೆ"

"ಅರೆ! ನಾನು ವಾಕ್ಯವನ್ನು ಹೇಳಿ ಮುಗಿಸುವುದರೊಳಗಾಗಿ ಕಾರ್ಯಸೂಚಿ ಬಿಡುಗಡೆಯೂ ಆಗಿಯೇಹೋಗಿದೆ. ಭೇಷ್!"

"ಈ ಕ್ಷಣದಿಂದ ಅನ್ವಯವಾಗುವಂತೆ ಸುಗ್ರೀವಾಜ್ಞೆಯೊಂದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೊರಡಿಸಿದ್ದಾರೆ. ಅದರಲ್ಲಿರುವುದು ಮೂರೇ ಪಾಯಿಂಟು"

"ಒಂದು: ಎಲ್ಲರೂ ಮಹಾಭಾರತದ ಧೃತರಾಷ್ಟ್ರನ ಹೆಂಡತಿ ಗಾಂಧಾರಿಯಂತಿರಬೇಕು. ಅಂದರೆ ಕಣ್ಣಿಗೆ ಪಟ್ಟಿ ಕಟ್ಟಿಕೊಳ್ಳಬೇಕು"

"ಎರಡು: ರಾಮಾಯಣದ ಲಕ್ಷ್ಮಣನಂತಿರಬೇಕು. ಅಂದರೆ ತಲೆ ಎತ್ತಿ ಯಾರನ್ನೂ ನೋಡಬಾರದು. ಬರೀ ನೆಲವನ್ನು ಮಾತ್ರ ನೋಡಬೇಕು. ಲಕ್ಷ್ಮಣ ತನ್ನ ಅತ್ತಿಗೆಯ, ಅಂದರೆ ಸೀತೆಯ ಮುಖವನ್ನೇ ನೋಡಿಲ್ಲವಂತೆ. ಅವನು ನೋಡುತ್ತಿದ್ದುದು ತನ್ನತ್ತಿಗೆಯ ಕಾಲುಂಗುರಗಳನ್ನು ಮಾತ್ರವಂತೆ"

"ಮೂರು: ಎಲ್ಲ ನೇತ್ರವೈದ್ಯರೂ ಅರ್ಜುನನಂತಿರಬೇಕು. ಎಣ್ಣೆ ಬಾಂಡ್ಲೆ ನೋಡಿಕೊಂಡು ಮೀನಿಗೆ ಬಾಣ ಬಿಟ್ಟ ಅರ್ಜುನನ ಹಾಗೆ ಕನ್ನಡಿ ನೋಡಿಕೊಂಡೇ ಚಿಕಿತ್ಸೆ/ಆಪರೇಷನ್ ಮಾಡಬೇಕು"



"ಈ ತ್ರಿಸೂತ್ರಗಳನ್ನು ಪಾಲಿಸದವರಿಗೆ ಸರ್ಕಾರ ಯಾವ ಶಿಕ್ಷೆಯನ್ನೂ ವಿಧಿಸುವುದಿಲ್ಲ. ಹಾಗಾಗಿ ನೀವು ಜೋಕೆ ಜೋಕೆ ಜೋಕೆ".

"ಅಕಸ್ಮಾತಾಗಿ ಮೈಮರೆತು, ಎಚ್ಚರ ತಪ್ಪಿ, ತಲೆಯನ್ನೆತ್ತಿ ಯಾರನ್ನಾದರೂ, ಅವರು ನಿಮ್ಮ ಗಂಡನೇ ಇರಬಹುದು, ಅವರು ನಿಮ್ಮ ಶಿಷ್ಯನೇ ಇರಬಹುದು, ನಿಮ್ಮ ಬಾಸೇ ಆಗಿರಬಹುದು ಅಥವಾ ನಿಮ್ಮ ಪಕ್ಕದ ಮನೆಯ ಆಂಟಿಯೇ ಆಗಿಬಹುದು, ಗುರಾಯಿಸಿದಿರೋ ನಿಮಗೆ ನೀವೇ ನೇತ್ರಹತ್ಯೆ ಮಾಡಿಕೊಂಡಂತೆ! ಹುಷ್ವಾರ್!""

"ಓಹ್! ಮತ್ತೊಂದು ರೋಚಕ ಸುದ್ದಿ! ನೀವು ನಂಬುವಿರೋ ಇಲ್ಲವೋ! ನಾವು ಹೇಳುವುದಂತೂ ಪರಮಸತ್ಯ"

"ಏನದು ನಂಬಲಾಗದ ಸುದ್ದಿ?"

(ಝುನ್ ಝುನ್ ಝುನ್)

"ನಂಬಲಾಗದ ಸುದ್ದಿ ಯಾವುದು? ಒಂದು ಸಣ್ಣ ಬ್ರೇಕ್ನ ನಂತರ"


"ಕಣ್ಣು ಮುಚ್ಚಿ ತೆಗೆಯೋಷ್ಟರಲ್ಲಿ ಸೀ–ಸ್ಪೆಕ್ಸ್ (see-specks) ಮಾರುಕಟ್ಟೆಗೆ ಬಂದುಬಿಟ್ಟಿದೆ. 1200 ರೂಪಾಯಿ ಬೆಲೆಯ ಈ ಕನ್ನಡಕಗಳು 8000 ದಿಂದ 10000 ರೂಪಾಯಿಗಳಿಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ"

"ಕರ್ನಾಟಕದ ಎಲ್ಲರೂ ಈ ಕನ್ನಡಕಗಳನ್ನು ಕೊಳ್ಳಲು ಅನುಕೂಲವಾಗುವಂತೆ ತಕ್ಷಣವೇ ಎರಡು ಸಾವಿರ ಕೋಟಿ ಹಣವನ್ನು ಬಿಡುಗಡೆ ಮಾಡಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ"

"ಇದೀಗ ನನ್ನ ತಲೆಗೆ ಹೊಳೆದದ್ದು. ಕನಸಿನಲ್ಲೂ ಸಹ ಯಾರನ್ನೂ ದುರುಗುಟ್ಟಿ ನೋಡೋಕೆ ಹೋಗಬೇಡಿ. ಎಲ್ಲಿ ಗ್ರಹಚಾರ!"

"ಗುಡ್ ನೈಟ್, ಶುಭರಾತ್ರಿ, ನಮಸ್ಕಾರ" ■

---






# ಅಂಡೆಪಿರ್ಕಿ ಅವತಾರಗಳು

***ಶರತ್ ಕಲ್ಕೋಡ್**

ಸುಂದರಮೂರ್ತಿ ಅಂದಾಕ್ಷಣ ಸುರಸುಂದರಾಕಾರದ ವ್ಯಕ್ತಿತ್ವ ನಿಮ್ಮ ಕಣ್ಣಿಗೆ ಕಟ್ಟಬಹುದಲ್ಲವೇ? ಆದರೆ ದಯವಿಟ್ಟು ಕ್ಷಮಿಸಿ. ದುಡ್ಡು ಕಾಸಿಲ್ಲದ ಸಂಪತ್ ಅಯ್ಯಂಗಾರಿ, ಅಂದಚೆಂದವಿಲ್ಲದ ಚೆಲುವಯ್ಯಂಗಾರಿ ಇರುವುದಿಲ್ಲವೇ? ಆ ಕ್ಯಾಟಗರಿಗೆ ಸೇರಿದವರು ನಮ್ಮ ಸುಂದರಮೂರ್ತಿ!

ಪ್ರಕೃತಿ ಆರಾಧಕರಿಗೆ ಮಲೆನಾಡು, ಮಾಲ್ಗುಡಿ ಡೇಸ್ ಸೀರಿಯಲ್ ಪ್ರಿಯರಿಗೆ ಆಗುಂಬೆ ಸೆರೆ ಹಿಡಿದಂತೆ ನನ್ನ ಮನದಲ್ಲಿ ಅಚ್ಚಳಿಯದಂತೆ ದಾಖಲಾಗಿರುವ ವ್ಯಕ್ತಿಯೇ ದೊಡ್ಮನೆ ಸುಂದರಮೂರ್ತಿ.

ಮೈಸೂರು ಮಹಾರಾಜರ ಕಾಲದ ಮಲೆನಾಡ ಹೆಸರಾಂತ ಶ್ರೀಮಂತ ಮನೆತನಗಳಲ್ಲಿ ದೊಡ್ಮನೆಯೂ ಒಂದು. ದಸರಾ ದರ್ಬಾರಲ್ಲಿ ಪಾಲ್ಗೊಳ್ಳುವಂತೆ ಆ ಕಾಲದಲ್ಲಿ ಪ್ರತಿವರ್ಷವೂ ಮಹಾರಾಜರಿಂದ ಆಮಂತ್ರಣ ಬರುತ್ತಿತ್ತೆಂದ್ಮೇಲೆ ಹೆಚ್ಚಿನ ವರ್ಣನೆ ಅನಗತ್ಯ ತಾನೇ? ಸಾವಿರ ಖಂಡಗ ಭತ್ತ ಸ್ಟಾಕ್ ಮಾಡುವ ಪಣತ, ತೀರ್ಥಹಳ್ಳಿ ತಾಲೂಕಿನ ಉದ್ದಗಲದಿಂದ ಬರುತ್ತಿದ್ದ ಗೇಣಿ ಅಡಕೆ, ದೊಡ್ಮನೆ ಸಾಹುಕಾರಿಕೆಗೆ ಗತ್ತಿಗೆ ಪುರಾವೆಗಳಷ್ಟೆ. ಆಗುಂಬೆ ಘಟ್ಟ ಹತ್ತಿ–ಇಳಿಯುವ ಮಂದಿ ಬಂದು ಉಂಡು–ತಂಗುತ್ತಿದ್ದ ಧರ್ಮಛತ್ರವೂ ದೊಡ್ಮನೆಯೇ!

ಇಂಥ ಹಿರಿಮೆ ವಂಶದ ಕುಡಿಯೇ ಸುಂದರಮೂರ್ತಿ. (ಇದೇ ಅವರ ಪ್ರಬಲ ಶ್ರೀರಕ್ಷೆ ಕೂಡ!) ಸ್ವಾತಂತ್ರ್ಯದ ಪೂರ್ವ ಜನಿಸಿದ ಸುಂದರಮೂರ್ತಿ, ಬ್ರಿಟಿಷ್ ಆಳ್ವಿಕೆ ವಿರುದ್ಧ ಕಾಲೇಜು ಓದುತ್ತಿದ್ದ ದಿನಗಳಲ್ಲಿ ಗಾಂಧೀಜಿ ಕರೆಗೆ ಓಗೊಟ್ಟು ಚಳುವಳಿಗಳಲ್ಲಿ ಭಾಗವಹಿಸಿ, ಪೊಲೀಸರ ಲಾಠಿ–ಬೂಟಿನೇಟಿನ ಪರಿಣಾಮ ತಲೆಕೆಟ್ಟಿತಂತೆ. ಎಷ್ಟೆಷ್ಟೋ ಆಸ್ಪತ್ರೆ, ಎಂಥೆಂಥೋ ಡಾಕ್ಟರ್, ಏನೇನೋ ಔಷಧ–ಉಪಚಾರ ಮಾಡಿದರೂ ಪ್ರಯೋಜನವಾಗಲಿಲ್ಲ. "ಮದುವೆ ಮಾಡಿದರೆ ಸರಿಯಾಗಬಹುದು" –ಜಾತಕ ನೋಡಿದವರ ಸಲಹೆ ಮೇರೆಗೆ ಅದನ್ನು ಮಾಡಿದರು. ಆದರೆ ಮೂರು ಮಕ್ಕಳಾದವೆ ಹೊರತು ಪರಿಸ್ಥಿತಿ ಬಿಲ್‌ಕುಲ್ ಸುಧಾರಿಸಲಿಲ್ಲ.

ಕಾಲಕ್ರಮೇಣ ಭೂಸುಧಾರಣೆ ಜಾರಿಯಾಗಿ, ಕುಟುಂಬದ ಸದಸ್ಯರ ಸಂಖ್ಯೆ ಜಾಸ್ತಿಯಾಗಿ, ಸ್ವಾಭಾವಿಕವಾಗಿ ಆಸ್ತಿ ಪಾಲಾಗಿ ಹೆಸರಲ್ಲಿ ಮಾತ್ರ ದೊಡ್ಮನೆ ಶ್ರೀಮಂತಿಕೆಯುಳಿದು, ವ್ಯವಹಾರದಲ್ಲಿ ಬಡತನ ಪ್ರಾಪ್ತವಾಯಿತು. ಸಂಕಟ ಸುಳಿಗೆ ಸಿಲುಕಿದ ಸುಂದರಮೂರ್ತಿಯನ್ನು ಊರವರು ಸುಮ್ಮನೆ ಬಿಟ್ಟಾರೆಯೇ? "ಶುದ್ಧ ಅಂಡೆಪಿರ್ಕಿ" ಪಟ್ಟಕಟ್ಟಿಯೇ ಬಿಟ್ಟರು !

ಪ್ರೈಮರಿಯಿಂದ ಹಿಡಿದು ಕಾಲೇಜಿನವರೆಗೂ –ಸುಮಾರು ಹತ್ತು–ಹದಿನೈದು ವರ್ಷ ಕಾಲ– ನಾನಾ ಬಗೆಯಲ್ಲಿ ದಾಖಲಾಗಿ ಛಾಪು ಮೂಡಿಸಿದ ಸುಂದರಮೂರ್ತಿ ಹತ್ತುಹಲವು ವೈಶಿಷ್ಟ್ಯ–ವಿರೋಧಾಭಾಸಗಳ ಆಗರ.



ಸಪುಸಪೂರ ಬಡಕಲದೇಹ, ಕೋಲು ಮುಖ. ವರ್ಚಗಣ್ಣು. ಚೂಪು ಮೂಗು, ಗಾಂಧಿಕಿವಿ. ಕೂದಲುದರಿ ಅರೆಬೋಳು ನೆತ್ತಿ. ಕೆಲವೊಮ್ಮೆ ಕಡುಮೌನಿ. ಮಾತನಾಡಲು ಶುರು ಮಾಡಿದರೆ ಮಹಾವಾಚಾಳಿ. ತುಟಿವಾರೆ ಮಾಡಿ ವಿಶಿಷ್ಟ ನಗೆ. ಪಂಚೆ, ಜುಬ್ಬಾ ಪೈಜಾಮ, ಕಚ್ಚೆಪಂಚೆ, ಪ್ಯಾಂಟುಶರ್ಟು ಟೈ, ಹ್ಯಾಟು ಬೂಟು–ಇಂತದ್ದೇ ಎಂಬ ನಿಖರವಿಲ್ಲದ ವೇಷ ಭೂಷಣ. ಕೂಲಿಂಗ್ ಗ್ಲಾಸ್. ಹೆಗಲಲ್ಲಿ ಸದಾ ನೇತಾಡುವ ಬಗಲಚೀಲ. ಎಡಗೈಯಲ್ಲಿ ತಪ್ಪದ ಪೇಪರ್. ಬಲಗೈಯಲ್ಲಿ ಸದಾ ಉರಿಯುವ ಸಿಗರೇಟು, ಬೀಡಿ ಇಲ್ಲಾ ಬಾಯಿ ತುಂಬಾ ತುಂಬಿ ತುಳುಕುವ ಎಲೆಯಡಕೆ. ಜನಜಂಗುಳಿ ಕಂಡರೆ ಸಾಕು, ಕೈಯಲ್ಲಿದ್ದ ಪೇಪರ್ ಸುತ್ತಿ ಮೈಕಾಗಿಸಿಕೊಂಡು ಭಾಷಣ ಬಿಗಿಯುವ ತೆವಲು...!

ಸ್ವಾತಂತ್ರೋತ್ಸವದಂದು ನಮ್ಮ ಶಾಲೆಗೆ ತಪ್ಪದೇ ಹಾಜರ್. ಪ್ರಭಾತ್‌ಪೇರಿಗೆ ಅವರೇ ಲೀಡರ್! "ಭೋಲೋ ಭಾರತ್ ಮಾತಾಕೀ, ಮಹಾತ್ಮಾ ಗಾಂಧೀಜಿ ಕೀ... ಸುಭಾಸ್‌ಚಂದ್ರ ಬೋಸಕೀ..." ಅವರ ಕೀಚಲ ಎತ್ತರ ಸ್ವರದ ಘೋಷಣೆಗೆ ಹಿಂಬಾಲಕರಾದ ನಾವು ಉಸಿರು ಕಟ್ಟಿ ಗಂಟಲು ಹರಿವ ಹಾಗೆ "ಜೈ" ಕಾರ ಕಿರುಚಬೇಕು! ಆದ್ರೆ ಅಪ್ಪಿತಪ್ಪಿ ನೆಹರು ಹೆಸ್ರೆತ್ತಿದರೆ ಮಾತ್ರ ಅವರಿಗೆ ಆಗುತ್ತಿರಲಿಲ್ಲ. ಪ್ರಭಾತ್ ಫೇರಿಯಲ್ಲೊಮ್ಮೆ ವೆಂಕಟೇಶ್ ಮಾಸ್ಟ್ರು "ಜವಾಹರ್ ಲಾಲ್ ನೆಹರೂಕೀ..." ಘೋಷಣೆಗೆ "ಬಾಳೇಮರಕ್ಕೆ ನೇತ್ಹಾಕಿ.." ಎಂದು ಸುಂದರಮೂರ್ತಿ ಗಟ್ಟಿಯಾಗಿ ಅರಚಿ, ದೊಡ್ಡ ರಂಪವಾಗಿ ಸಭೆ ನಡೆಯದೇ ನಮಗೆ (ಮಕ್ಕಳಿಗೆ) ಸ್ವೀಟ್ ದಕ್ಕಲಿಲ್ಲವೆಂಬುದು ಬೇರೇ ಮಾತು!

ಶಾಲೆಗೆ ಆಗಾಗ ಬರುತ್ತಿದ್ದ ಸುಂದರಮೂರ್ತಿಗೆ ಪಾಠಮಾಡುವ ಷೋಕಿ. ಪಾಂಡುರಂಗಮಾಸ್ಟ್ರು ಛಾನ್ಸ್ ಮಾಡಿಕೊಡೋರು. ಮ್ಯಾಥ್ಸ್ ಮಾಡೋದರಲ್ಲಿ ಎತ್ತಿದ ಕೈ. ಒಂಬತ್ತರ ಮಗ್ಗಿ ವೈಶಿಷ್ಟ್ಯ ವಿವರಿಸಿದ್ದು ಈಗಲೂ ನೆನಪಲ್ಲುಂಟು. ಹಾಗೆಯೇ ಚರಿತ್ರೆ, ಭೂಗೋಳ, ಇಂಗ್ಲಿಷ್ ಪಾಠಗಳಲ್ಲೂ ಎಕ್ಸ್‌ಪರ್ಟ್!

ಒಮ್ಮೆ ಶಾಲೆಗೆ ಹೋಗುವಾಗ ನೋಡ್ತೇವೆ. ಕಾಮತರ ಹೊಟೇಲ್ ಎದುರು ಸುಂದರಮೂರ್ತಿ! ನಮ್ಮನ್ನು ಕಂಡವರೇ "ಬನ್ನಿ..ಬನ್ನಿ...ಮಕ್ಕಳೇ, ಏನೇನು ಬೇಕೋ ಅದನ್ನೆಲ್ಲಾ ತಿನ್ನಿ...ಎಂದವರೇ "ಕಾಮತ್ ಮಾಮ್, ಮಕ್ಕಳು ಏನ್ ಕೇಳ್ತಾವೋ ಅದನ್ನೆಲ್ಲಾ ಕೊಡ್ರೀ, ಪಾಪಾ ತಿಂದು ಖುಷಿ ಪಡ್ಲೀ.." ಎಂದದ್ದೇ ತಡ ಜಾಮೂನು, ಮೈಸೂರು ಪಾಕ್, ಕೊಬ್ಬರಿ ಮಿಠಾಯಿ, ಈರುಳ್ಳಿಬಜೆ, ಕೋಡ್ಬಳೆ, ಬುರುಬುರಿ– ಬೇಕಾದ್ದನ್ನು ತಿಂದು ಮಜಾ ಉಡಾಯಿಸಿಬಿಟ್ಟೆವು!

ಮಿಡ್ಲಸ್ಕೂಲ್ ಓದುತ್ತಿದ್ದಾಗ ಒಂದು ಸಂಜೆ, ಇದ್ದಕ್ಕಿದ್ದಂತೆ ಸುಂದರಮೂರ್ತಿ ಪ್ರತ್ಯಕ್ಷವಾಗಬೇಕೆ? ಶಾಲೆ ತುಂಬಾ ಗುಲ್ಲೋಗಲ್ಲು, ಕೊನೆಗೆ ನೋಡಿದರೆ ಆಲೆಮನೆಗೆ ಕರೆಯಲು ಬಂದಿದ್ದಾರೆ. ಮೇಸ್ಟ್ರನ್ನೂ ಜೊತೆಗೂಡಿಸಿಕೊಂಡು ಸಾಲಾಗಿ ಪ್ರಭಾತ್‌ಫೇರಿ ತೆಗೆದು "ಆಲೆಮನೆಗೆ ಸಾಗಿ ಮುಂದೆ..., ಸುಂದರ ಮೂರ್ತಿಗಳ ಹಿಂದೆ.." ಕೋರಸ್ ಹಾಡುತ್ತಾ, "ಸುಂದರಮೂರ್ತಿಗೆ...," "ಜೈ" ಕಾರ ಹಾಕುತ್ತಾ ಸಾಗಿದೆವು. ಅವರದ್ದೇ ಆಲೆಮನೆ. "ಮಕ್ಕಳೇ ಎಷ್ಟು ಬೇಕೋ ಅಷ್ಟು ಹಾಲು ಕುಡೀರಿ. ಹೊಟ್ಟೆ ಬಿರಿಯುವಷ್ಟು ನೊರೆಬೆಲ್ಲ ತಿನ್ನಿ. ಹೊರಕ್ಕಾಗುವಷ್ಟು ಕಬ್ಬಿನ ಜಲ್ಲೆ ಹೊತ್ತುಕೊಂಡು ಹೋಗಿ..." ಅಂದರು.



ಅಷ್ಟು ಹೇಳಿದ ಮೇಲೆ ಕೇಳಬೇಕೇ? ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ! ನಮ್ಮನಮ್ಮ ಯಥಾನುಶಕ್ತಿ ಮೀರಿ ಕುಡಿದು, ತಿಂದು, ಹೊತ್ತೆವೆನ್ನಿ! "ಎಂಥ ದಿನಗಳೇ ಚಿನ್ನಾ ಅವು....ಚಿನ್ನದಂತ ದಿನಗಳೇ....!!

ಮೇಗ್ರಳ್ಳಿ ಹೈಸ್ಕೂಲ್‌ಗೆ ಹೋಗುತ್ತಿದ್ದ ಅರವತ್ತರ ದಶಕ. ಈಗಿನ ಹಾಗೆ ಐದು ನಿಮಿಷಕ್ಕೊಂದು (ಶಿವಮೊಗ್ಗ–ಉಡುಪಿ–ಮಂಗಳೂರು) ಮಿನಿಬಸ್ ಓಡಾಡುತ್ತಿರದ ಕಾಲ. ಗಜಾನನ, ಶಿವಶಂಕರ್. ಸಿಕೆಎಂಎಸ್, ಎಸಾರ್ವಿಟಿ, ದೇವಂಗಿ–ಹೀಗೆ ಬೆರಳೆಣಿಕೆಯಷ್ಟು ಉದ್ದಮೂತಿ ಬಸ್ ಓಡಾಡುತ್ತಿದ್ದವು. ಹೀಗೆ ಸಂಚರಿಸುತ್ತಿದ್ದ ಬಸ್‌ಗಳಲ್ಲಿ ಕೆಲವೊಮ್ಮೆ ಸುಂದರಮೂರ್ತಿ ಕಂಡೆಕ್ಟ್ರಾಗಿ ಅವತರಿಸಿ, "ಯಾರಿಗ್ರೀ ಟಿಕೇಟ್, ಎಲ್ಲಿಗ್ರೀ..? ದುಡ್ಡು ತಗೋಂಡು, ಚೀಟಿ ಕೊಡೋರು. ಕತ್ತಿನಲ್ಲಿ ನೇತುಹಾಕಿಕೊಂಡ ವಿಶಲ್ ಊದಿ "ಹೋಲ್ಡಾನ್..", "ರೈಟ್...ಪೋಯಿ.." ಅನ್ನೋರು. ಅಷ್ಟೇಯಲ್ಲ; ಕಾಡಿನ ಮಟ್ಟು, ಪೊದೆಯಲ್ಲಿ ಅವಿತುಕೊಂಡು ಬಸ್ ಬಂದ ತಕ್ಷಣ ಹಾರಿ ರಸ್ತೆ ನಡುವೆ ಫಕ್ಕನೆ ಪ್ರತ್ಯಕ್ಷವಾಗಿ ಎರಡೂ ಕೈಅಡ್ಡಹಾಕಿ  ಬಸ್ ತಡೆದು, "ಗೇಟ್‌ಪಾಸ್‌ಕೊಡು.., ಟಿಕೇಟ್ ಬುಕ್ ಕೊಡು.." ಅಂತ ಕಂಡೆಕ್ಟ್ರ್‌ನಿಂದ ಕಸಿದುಕೊಂಡು, ಪ್ರಯಾಣಿಕರ ತಲೆಯೆಣಿಸಿ ಎಲ್ಲಾ ಸರಿಯಾಗಿದೆಯಾ ಎಂದು ಚೆಕಿಂಗ್ ಮಾಡೋರು! ಉಪದ್ರ ತಾಳಲಾರದ ಬಸ್‌ನವರು ಕೆಲವೊಮ್ಮೆ ಕಾಡಿನ ಮಧ್ಯದಲ್ಲಿ ಅವರನ್ನ ಹೊತ್ತಹಾಕಿ ಹೋಗೋರು!

ತೀರ್ಥಹಳ್ಳಿ ಎಳ್ಳಮಾಸೆ ಜಾತ್ರೆಯಲ್ಲಂತೂ ಸುಂದರಮೂರ್ತಿಗಳ ಅವತಾರ ಹತ್ತುಹಲವು ಬಗೆ. ಸಿನಿಮಾ ಪ್ರಚಾರದ ತಂಡದ ನೇತೃತ್ವ ಇವರದೇ. ಕೆಂಪು ಬೇಗಡೆ ಕನ್ನಡಕ, ತಲೆಗೆ ಉದ್ದದ ಪೇಪರ್ ಟೋಪಿ, ಕೈಯಲ್ಲಿ ಪ್ರಚಾರದ ಕರಪತ್ರ. "ಗೋಪಾಲ್..", "ಏನ್ ಸಾರ್?". "ಎಲ್ಲಿಗೆ ಹೋಗ್ತೀಯಾ?", "ವೆಂಕಟೇಶ ಟಾಕೀಸ್ಸೀಗೆ..", "ಯಾಕೆ...?", "ಸಿನಿಮಾ ನೋಡ್ಲೀಕೆ..". "ಯಾವ ಸಿನಿಮಾ?", "ಸತ್ಯ ಹರಿಶ್ಚಂದ್ರ ಸಾರ್..", "ಯಾರ‍್ಯಾರಿದ್ದಾರೆ...?", "ಡಾ. ರಾಜಕುಮಾರ್, ಪಂಡರೀಬಾಯಿ, ಉದಯಕುಮಾರ್, ನರಸಿಂಹರಾಜು ಮುಂತಾದವರು ಸಾರ್...", "ದಿನಾ ಎಷ್ಟು ಷೋ?", "ಜಾತ್ರೆಯಾದ್ದರಿಂದ ನಾಲ್ಕು ಷೋ ಸಾರ್, ಬೆಳಗ್ಗೆ ಮಾರ್ನಿಂಗ್‌ಶೋ ಉಂಟು..." ಹೀಗೆ ಅವರ ನಾಯಕತ್ವದ ಪ್ರಚಾರದ ವೈಖರಿ.

ಎಳ್ಳಮಾಸೆ ಜಾತ್ರೆಗೆ ಬಂದಿದ್ದ ಸಾಲಿಗ್ರಾಮ ಮೇಳದ "ಮೋಹಿನಿ–ಭಸ್ಮಾಸುರ" ಯಕ್ಷಗಾನದ ಚಂಡೆಮದ್ದಳೆ ಅಬ್ಬರದ ನಡುವೆ ತಟ್ಟಕ್ಕನೆ ರಂಗಸ್ಥಳಕ್ಕೆ ಹಾರಿ, "ಧೈ ಥಕದಿನ, ಥಕಧಿನ ತೋಂ" ಹೆಜ್ಜೆ ಹಾಕಿ, ಧಿಗಣ ಕುಣಿದು ರಸಭಂಗ ಮಾಡಿ, ಪ್ರೇಕ್ಷಕ ಹಾಗೂ ಮೇಳದವರಿಂದ ಪೆಟ್ಟು ತಿಂದು ಹೊರದೂಡಿಸಿಕೊಂಡ ಪ್ರಸಂಗ ಈಗಲೂ ಹಿರಿಯರು ಎಲೆಯಡಿಕೆ ಮೆಲ್ಲುತ್ತಾ, ಹೊಗೆಸೊಪ್ಪು ತಿಕ್ಕುತ್ತಾ ಪ್ರಸ್ತಾಪಿಸುವುದುಂಟು!

ಎಪ್ಪತ್ತರ ದಶಕ ಸುಂದರಮೂರ್ತಿ ಅವರ ಬದುಕಿನ ಮಹತ್ವದ ಘಟ್ಟ. ರೈತ ಹಾಗೂ ಜೆಪಿ ಚಳುವಳಿ ನಡೆಯುತ್ತಿದ್ದ ಕಾಲ. ಅವೆರಡರಲ್ಲೂ ಅವರದು ಸಕ್ರಿಯ ಪಾಲು. ಹೆಗಲ ಮೇಲೆ ಹಸಿರು ಶಾಲು ಹೊದದ್ದು ಮಾತ್ರವಲ್ಲ; ತೀರ್ಥಹಳ್ಳಿ–ಆಗುಂಬೆ ಸುತ್ತಮುತ್ತಲ ಕಾರ್ಯಕ್ಷೇತ್ರ ವ್ಯಾಪ್ತಿ ಸಿಮೋಲ್ಲಂಘನೆ ಮಾಡಿ, ರಾಜಧಾನಿ ಬೆಂಗಳೂರಿಗೆ



ಪಾದಯಾತ್ರೆ ಮಾಡಿದ್ದು, ಐತಿಹಾಸಿಕ ದಾಖಲೆ! ಹಾಗೆಯೇ ಜೆಪಿ ಚಳುವಳಿಯಲ್ಲಿ ಶಿವಮೊಗ್ಗಾ ಪೇಟೆಯರೆಗೂ ಹೋರಾಟ ವಿಸ್ತರಿಸಿದ್ದು!!

ತುರ್ತುಪರಿಸ್ಥಿತಿ, ಸುಂದರಮೂರ್ತಿಗಳ ಅವತಾರದ ಕರಾಳ ಅಧ್ಯಾಯ ಕೂಡ! ಇಂದಿರಾಗಾಂಧಿ ಸರ್ವಾಧಿಕಾರಿಯೆಂದು ಟೀಕಿಸಿಸುತ್ತಿದ್ದವರಲ್ಲಿ ಅವರೂ ಒಬ್ಬರು. ನಾಲ್ಕು ಜನ ಸೇರಿದ್ದನ್ನು ಕಂಡರೆ ಸಾಕು, ಬಗಲಲ್ಲಿದ್ದ ನ್ಯೂಸ್ ಪೇಪರ್‌ನ್ನೇ ಕೈಯಲ್ಲಿ ಹಿಡಿದು ಸುತ್ತಿ ಮೈಕಾಗಿಸಿಕೊಂಡು ಇಂದಿರಾಗಾಂಧಿಯನ್ನು, ನೆಹರೂ ಅವರನ್ನು, ವಂಶಪಾರ್ಯಂಪರ್ಯ ಆಡಳಿತವನ್ನು ಉಗ್ರವಾಗಿ ಖಂಡಿಸಿ ಭಾಷಣ ಬಿಗಿಯುತ್ತಿದ್ದರು. ಅವರ ಕಾರ್ಯಕ್ಷೇತ್ರ ಆಗುಂಬೆ, ಮೇಗರವಳ್ಳಿ, ತೀರ್ಥಹಳ್ಳಿ, ಮಂಡಗದ್ದೆ ಸುತ್ತಮುತ್ತಲ ಪ್ರದೇಶ ಮೀರಿ ಶಿವಮೊಗ್ಗಾಕ್ಕೂ ವ್ಯಾಪಿಸಿತು. ಶಿವಮೊಗ್ಗಾ ಶಿವಪ್ಪನಾಯಕ ಸರ್ಕಲ್‌ನಲ್ಲಿ ಭಾಷಣ ಬಿಗಿಯುತ್ತಿದ್ದ ಅವರನ್ನು ಪೊಲೀಸ್‌ರು ವ್ಯಾನ್‌ಗೆ ಎತ್ತಿಹಾಕಿಕೊಂಡು ಹೋದದ್ದನ್ನು ಕಂಡವರಿದ್ದಾರೆ. ಆ ಸಾಕ್ಷಿದಾರರೇ ಸುಂದರಮೂರ್ತಿಗಳನ್ನು ಕಟ್ಟಕಡೆಬಾರಿ ಕಂಡವರು! ಮುಂದೆ ಅವರನ್ನು ಬೆಂಗಳೂರು, ಅಲ್ಲಿಂದ ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಯಿತೆಂಬ ಸುದ್ದಿ ಬಿಟ್ಟರೆ, ಮುಂದೇನಾದರೆಂಬುದು ಯಾರಿಗೂ ಗೊತ್ತಿಲ್ಲ!

ಪೊಲೀಸ್ ಆತಿಥ್ಯದಲ್ಲಿ ಕಾಣೆಯಾದ ಅನಾಮಿಕ ದೇಶಭಕ್ತರ ಲಿಸ್ಟ್‌ನಲ್ಲಿ ಸಾಲಿನಲ್ಲಿ, ಸುಂದರಮೂರ್ತಿಯೂ ಸೇರಿರಬಹುದೇ? ಸರ್ವಾಧಿಕಾರಿಗಿಂತ, ಸರ್ವಶಕ್ತನಾದ ಆ ದೇವರೇ ಬಲ್ಲ!!

■

---

## ಗಾದೆಗಳ ಗಮ್ಮತ್ತು !

ಗಾದೆಗಳಿಗೆ ದೇಶಕಾಲಗಳ ಗಡಿಯಿಲ್ಲ. ಇಲ್ಲಿ ನೋಡಿ ಜಪಾನ್ ದೇಶದಲ್ಲಿ ಬಳಕೆಯಲ್ಲಿರುವ ಗಾದೆಗಳ ಸೊಗಡನ್ನ! ಜಪಾನೀಯರು ಬಳಸುವ ಗಾದೆಗಳು ಆಶ್ಚರ್ಯವೆನಿಸುವ ಮಟ್ಟಿಗೆ ನಮ್ಮ ಗಾದೆಗಳನ್ನು ಹೋಲುತ್ತವೆ. ಇಲ್ಲಿ ನೋಡಿ.

ಇವಾನು ಗ ಹನ (ಮೌನವು ಹೂವಿನಂತೆ) **ಮಾತು ಮುತ್ತು, ಮೌನ ಬಂಗಾರ**

ಜೆನ್ ವಾ ಇಸೋಗೆ (ಒಳ್ಳೆಯದಾದರೆ ಬೇಗ ಆಗಲಿ) **ಶುಭಸ್ಯ ಶೀಘ್ರಂ**

ನೆಕೊ ನಿ ಕೊಬಾನ್ (ಬೆಕ್ಕಿಗೆ ಕಾಸು ನೀಡಿದಂತೆ) **ಕೋಣನ ಮುಂದೆ ಕಿನ್ನರಿ**

ಹನ ಯೋರಿ ದಂಗೊ (ಹೂವಿಗಿಂತ ಹಿಟ್ಟು ಮುಖ್ಯ) **ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ**

ನುಮ ಇಕೆ ನಿ ಮೊ ಹಸು ನೊ ಹನ (ಕೆಸರಿನಲ್ಲೂ ಕಮಲ ಅರಳುತ್ತದೆ) **ಕೆಸರಿನಲ್ಲಿ ಕಮಲ**

ರೈಗಿ ಮೊ ಸುಗಿರೇಬ ಷಿತ್ಸುರೈ ನಿ ನರು(ತುಂಬ ವಿನಯ ಸಂಶಯ ತರುತ್ತದೆ)
**ಅತಿ ವಿನಯಂ ಧೂರ್ತ ಲಕ್ಷಣಂ**



ತಮೇರು ನಾರ ವಕಾಗಿ ನೊ ಉಚಿ ( ಗಿಡ ಚಿಕ್ಕದಾಗಿದ್ದಾಗ ಬಗ್ಗಿಸಬಹುದು)
**ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?**

ಸುಮೇಬ ಮಿಯಾಕೊ(ವಾಸಿಸುವ ಜಾಗವೇ ರಾಜಧಾನಿ) **ಮನೆಯೇ ಕಾಶಿ, ಮನವೇ ಗಂಗಾ**

# ದಂತ ಧಾವನದ ಧಾವಂತಗಳು

***ಕೆ.ಎಸ್.ಸೋಮೇಶ್ವರ**

ನಮಗೆ ನಮ್ಮ ನಮ್ಮ ಹಲ್ಲುಗಳನ್ನು ಸ್ವಚ್ಛ ಮಾಡಿಕೊಳ್ಳಲು ತಲೆ ತಲಾಂತರದಿಂದ ಹಲವಾರು ವ್ಯಂಜನಗಳು ಬಂದು ರಕ್ಷಣೆ ನೀಡಿವೆ. ಬೇರೆ ಬೇರೆ ದೇಶಗಳಲ್ಲಿ ಇದು ಹೇಗಿದ್ದಿತೋ ತಿಳಿಯದು. ಏಕೆಂದರೆ ನಮಗೆಲ್ಲ ಬುದ್ಧಿ ಬಲಿಯುವ ಹೊತ್ತಿಗೆ ಅವುಗಳೆಲ್ಲ ಮುಂದುವರಿದ ದೇಶಗಳಾಗಿ ಬಿಟ್ಟಿದ್ದವು. ನಾವು ತಿಳಿದ ಹಾಗೆ ಮೊದ ಮೊದಲು ಬೇವಿನ ಕಡ್ಡಿಯಿಂದ ನಂತರದಲ್ಲಿ ಕರಿಯ ಇದ್ದಿಲು (ಇದ್ದಿಲೆಂದರೇ ಕಪ್ಪಲ್ಲವೇ) ಪುಡಿ ನಮಗಳಿಗೆ ಹೊಳೆ ಹೊಳೆಯುವ ದಂತ ಪಂಕ್ತಿಯನ್ನು ನೀಡುತ್ತಿದ್ದವು ಎಂದು ನಮ್ಮ ಹಿರಿಯರು ಹೇಳಿದ ನೆನಪು. ಏಕೆಂದರೆ ಅವರುಗಳ ಜನನ, ಬಾಲ್ಯ, ಯೌವ್ವನ, ವೃದ್ಧಾಪ್ಯ ಎಲ್ಲ ಹಳ್ಳಿಯ ಸೊಗಡಿನ ನಾಗರೀಕತೆಯಲ್ಲೇ ಬೆಳೆದವಾಗಿದ್ದವು. ಈಗ ಬಿಡಿ ಕೋಲ್ ಮೈನ್‌ಗಳೆಲ್ಲ ಗೋಲ್ಡ್ ಮೈನ್‌ಗಳಾಗಿಬಿಟ್ಟಿವೆ.

ನಮ್ಮ ಕಾಲ ಎಂದರೆ ಸುಮಾರು ಐವತ್ತು ವರ್ಷಗಳಿಗೂ ಹಿಂದೆ, ಹಲ್ಲು ಪುಡಿಯೇ ನಮ್ಮ ಹಲ್ಲಿನ ಸ್ವಚ್ಛತೆಗೆ ಟೊಂಕ ಕಟ್ಟಿ ಸಣ್ಣ ಪೊಟ್ಟಣಗಳಲ್ಲಿ ನಿಂತಿರುತ್ತಿದ್ದವು. ಅದರಲ್ಲೂ ಮೈಸೂರು ಭಾಗದವರಾದರೆ ನಂಜನಗೂಡು ಸದ್ವೈದ್ಯಶಾಲಾ ರವರ ತೆಳು ನೇರಳೆ ಬಣ್ಣದ ದಂತ ಚೂರ್ಣಗಳು ನಮ್ಮ ಹಲ್ಲುಗಳನ್ನು ಪಳ ಪಳ ಹೊಳೆಯುವಂತೆ ಮಾಡುತ್ತಿದ್ದವು. ಅದರ ಮುಂದುವರಿದ ಭಾಗವಾಗಿ ನಾವು ಕಂಡದ್ದು ದಂತ ಮಂಜನ ಅಂದರೆ ಟೂಥ್ ಪೇಸ್ಟ್‌ಗಳು. ಇದು ಹಲ್ಲು ಪುಡಿಯ ಜೊತೆಗೇ ನಮಗೆ ಕ್ರಿಕೆಟ್ ತಂಡದ ಹನ್ನೆರಡನೆ ಆಟಗಾರನಂತಿರುತ್ತಿತ್ತು. ಆಗ ನಾವು ಕಂಡದ್ದು ಫೋರ್‌ಹಾನ್ಸ್ ಟೂಥ್ ಪೇಸ್ಟ್, ಇದು ಕೂಡ ಸ್ವಲ್ಪ ನೇರಳೆ ಮಿಶ್ರಿತ ಬಿಳಿಯದಾಗಿರುತ್ತಿತ್ತು. ಇದರಲ್ಲಿ ಕಂಡಂತಹ ವಿಶೇಷವೆಂದರೆ ಅದನ್ನು ಬಳಸುವಾಗ ನೊರೆ ಬರುತ್ತಿರಲಿಲ್ಲ. ಇದು ಹಲ್ಲಿನ ಬಿಳುಪಿಗೆ ಯಾವುದೇ ಕುಂದಾಗಿರಲಿಲ್ಲ. ಇದಕ್ಕೆ ಪ್ರತಿ ಸ್ಪರ್ಧಿಯಾಗಿ ಆಗ ಕಾಣುತ್ತಿದುದು ಬಿನಾಕ ಫ್ಲೋರೈಡ್. ಇದನ್ನು ಹಲ್ಲಿನ ಮೇಲೆ ಇಡುತ್ತಿದ್ದಂತೆ ಅದರ ಬುರುಗು ನೊರೆ ನಮ್ಮ ಹಲ್ಲುಗಳಿಗೆ ಹೊಸ ಬಿಳುಪು ಮತ್ತು ಹೊಳಪನ್ನು ಕೊಡುತ್ತಿದೆ ಎಂಬ ಭ್ರಮೆ ನೀಡುತ್ತಿತ್ತು. ಇದರ ಹೆಸರು ಮಾರುಕಟ್ಟೆಯಲ್ಲಿ ಜೀವಂತವಾಗಿರುವಂತೆ ನೋಡಿಕೊಳ್ಳುತ್ತಿದುದು ಹೆಸರಾಂತ ರೇಡಿಯೋ ಕಲಾವಿದ ಅಮೀನ್ ಸಯ್ಯಾನಿ ಯವರ ರಿಂಗಣ ಕಂಠ ಸಿರಿಯಲ್ಲಿ ಮೂಡಿ ಬರುತ್ತಿದ್ದ 'ಬಿನಾಕ ಗೀತಮಾಲಾ' ಹೆಸರಿನಲ್ಲಿ ಜನಪ್ರಿಯ ಹಿಂದಿ ಚಲನ ಚಿತ್ರಗಳ ಹಾಡುಗಳ ಪ್ರಸಾರ ಕಾರ್ಯಕ್ರಮ. ಇದಕ್ಕೆ ಅಸ್ತಿಭಾರ ಅಂದಿನ ರೇಡಿಯೋ ಸಿಲೋನ್ ( ಈಗಿನ ಶ್ರೀಲಂಕ ದೇಶ). ಆಗ ದೃಶ್ಯ ಮಾಧ್ಯಮಗಳ ಕಣ್ಣು ಕುಕ್ಕುವಿಕೆ ಇರಲಿಲ್ಲ. ಕಾಲಾಂತರದಲ್ಲಿ ಬಿನಾಕಾ 'ಸಿಬಾಕ' ಆಗಿ ಹೆಸರು ಬದಲಾಯಿಸಿಕೊಂಡಿತು. ಈಗ ಯಾವ ಹೆಸರಿನಲ್ಲಿದೆಯೋ ಅವರೇ ಹೇಳ ಬೇಕು. ಅದೇ ಪಾಡು ಫೋರ್‌ಹಾನ್ಸ್ ನದು ಕೂಡ.

ಈಗಂತೂ ಇವುಗಳ ಬಗೆಗೆ ಏನು ಹೇಳಬೇಕು ಎಂಬುದೇ ತಿಳಿಯದು. ಏಕೆಂದರೆ, ಮಾರುಕಟ್ಟೆಯ ತುಂಬ ಹಲವು ಬಗೆಯ ಅಂದರೆ ಬಗೆ ಬಗೆಯ ಟೂಥ್ ಪೇಸ್ಟ್‌ಗಳ ತರಾವರಿ ಮಾಹಿತಿ ನಮಗೆ ದೊರೆಯುತ್ತದೆ. ಎಲ್ಲ ಟಿವಿ ಚಾನೆಲ್‌ಗಳ ಜಾಹೀರಾತು ಸಮಯದಲ್ಲಿ ಇವುಗಳೇ ಹೆಚ್ಚು ಹೊಳೆಯುತ್ತವೆ. ಅದರ ಉಪಯುಕ್ತತೆಯನ್ನು ಅದರಲ್ಲಿ



ಭಾಗಿಯಾಗಿರುವ ರೂಪದರ್ಶಿಗಳ ಹಲ್ಲು ಕಿರಿಯುವಿಕೆಯೇ ಜಗಜ್ಜಾಹೀರು ಮಾಡಿಬಿಡುತ್ತವೆ. ಇದರಲ್ಲಿ ಅಲೋಪತಿ, ಆಯುರ್ವೇದ ಎಲ್ಲರದೂ ಅಬ್ಬರದ ಪ್ರಚಾರವೇ. ಒಂದು ಸಂಸ್ಥೆಯಂತೂ ಕೆಲ ವರ್ಷಗಳ ಹಿಂದೆ ತಮ್ಮದು ಶೇಕಡ 100 ರಷ್ಟು ಸಸ್ಯಾಹಾರಿ ಎಂದಿತ್ತು. ಇವರು ಹೀಗೆ ಹೇಳಿದಾಗ ಇದು ಮೊದಲು ಈ ರೀತಿ ಇರಲಿಲ್ಲವೇ ಎಂಬ ಸಂಶಯ ಬಳಸುವವರಿಗೆ ಬಂದರೆ ಹೆಚ್ಚೇನಿಲ್ಲ. ಕೆಲವಂತೂ ಸಾವಿರಾರು ವರ್ಷಗಳ ರಸಾಯನವನ್ನು ಅರೆದು ನಮಗೆ ಕೊಡುತ್ತವೆ.. ಇದರಲ್ಲಿ ಅಲೋಪತಿ ಯವರು ತಮ್ಮದೂ ಸಸ್ಯಜನ್ಯ ಎಂಬಂತೆ ಬಿಂಬಿಸುತ್ತಾರೆ. ಒಂದಂತೂ 'ವೇದ ಶಕ್ತಿ'ಯಾಗಿ ನಮಗೆ ನಾಲ್ಕು ವೇದಗಳ ಸಾರವನ್ನೇ ತಿನ್ನಿಸುತ್ತದೆ. ಸಧ್ಯದಲ್ಲಿ ಯಾರೂ ಪುರಾಣ ಕಾಲದ ಹೀರೋಗಳು ಇದನ್ನೇ ಬಳಸುತ್ತಿದ್ದರು ಎಂದು ಹೇಳುತ್ತಿಲ್ಲ. ಇಲ್ಲಿ ದಶಕಂಠನಾದರೆ ಏನು ಗತಿ. ಅವನ 32 x 10 ಹಲ್ಲು ಸೆಟ್ಟುಗಳಿಗೆ ಯಾವ ದಂತ ಮಂಜನ ಒಪ್ಪುತ್ತಿತ್ತು ಎಂಬುದೇ ಜಿಜ್ಞಾಸೆ. ಏಕೆಂದರೆ, ಅವನು ಮೊದಲೇ ದಾನವ ವೀರ ಅವನ ಒಂದೊಂದು ತಲೆ ಒಂದೊಂದು ರೀತಿ ಯೋಚನೆ ಮಾಡಿ ಒಂದೊಂದಕ್ಕೂ ಬೇರೆ ಬೇರೆ ರೀತಿಯದು ಕೇಳುತ್ತಿದ್ದನೇನೋ. ಇವಕ್ಕೆಲ್ಲ ನಮ್ಮ ಪುರಾಣೇತಿಹಾಸಕಾರರೇ ಉತ್ತರಿಸ ಬೇಕು. ಆದರೂ ಒಂದು ತಲೆನೋವು ನಿವಾರಕ ಪೇಸ್ಟ್ ಒಂದರಲ್ಲೇ ಹತ್ತೂ ತಲೆಗಳ ನೋವು ನಿವಾರಿಸಿದೆ. ಇದೊಂದು ನಮ್ಮ ಆಧುನಿಕ ಧನ್ವಂತರಿಗಳ ವಿಕ್ರಮವೆಂದೇ ಹೇಳಬೇಕು.

ಸಧ್ಯ, ದೇವ ದಾನವರ ಪಾಡು ಬಿಡಿ. ಏಕೆಂದರೆ ಅವರಿಗೆ ಬೇಕೆಂದರೆ ಸಮುದ್ರ ಮಥನ ಮಾಡಿಕೊಳ್ಳುತ್ತಾರೆ. ಅವರು ಜಗಳವಾಡಿದರೆ ಅವರನ್ನು ಸೆಳೆಯಲು ಮೋಹಿನಿ ಇದ್ದೇ ಇರುತ್ತಾಳೆ. ನಮಗೆ ಮಥನ ಮಾಡುತ್ತಿರುವವರು ಹಲವು ದೇಶೀಯ, ಪರದೇಶೀಯ ಸಂಸ್ಥೆಗಳು. ಇವು ಆಗಿಂದಾಗ್ಗೆ ಹೊಸ ಹೊಸದನ್ನು ಅರೆದು ಬಳಿದು ನಮಗೆ ಕೊಡುತ್ತವೆ. ಈಗಂತೂ ಒಬ್ಬ ಮಾಯಾಂಗನೆ ಎಲ್ಲಿಂದಲೋ ಪ್ರತ್ಯಕ್ಷವಾಗಿ 'ನಿಮ್ಮ ಟೂಥ್ ಪೇಸ್ಟ್ ನಲ್ಲಿ ಉಪ್ಪು ಇದೆಯೇ' ಎಂದು ನೋಡುಗರ ಬಾಯಿಗೇ ಮೈಕ್ ಹಿಡಿಯುತ್ತಾಳೆ. ಆ ಮನುಷ್ಯನೆಂಬ ಪ್ರಾಣಿ ಕಕ್ಕಾಬಿಕ್ಕಿಯಾಗಿ ಹೌ ಹಾರುತ್ತಾನೆ. ಇದೇ ರೀತಿಯ ಇನ್ನೊಂದು ದೃಶ್ಯವೆಂದರೆ ರೈಲು ಪ್ರಯಾಣ ಮಾಡುತ್ತಿರುವ ಕುಟುಂಬದ ಮುಖ್ಯಸ್ಥೆ ಯಾವುದೋ ಗಟ್ಟಿ ಪದಾರ್ಥವನ್ನು ಅವಳ ಹಲ್ಲುಗಳಿಂದ ಕಚ್ಚಿ 'ಹಾ' ಎನ್ನುವುದೇ ತಡ ಮತ್ತೆ ಬಂತು ಉಪ್ಪಿನ ಜ್ಞಾನ. ಆಕೆಯೂ ಸಂತೋಷದಿಂದ ಉಪ್ಪಿನ ಧ್ಯಾನ ಮಾಡುತ್ತಾ ಹಲ್ಲು ಕಿರಿಯುತ್ತಿರುತ್ತಾಳೆ. ಈ ಉಪ್ಪಿನ ಕಥೆಯ ಮುಂದುವರಿದ ಭಾಗವಾಗಿ ಮೊನ್ನೆಯ ವಿಶ್ವ 'ಮಧು ಮೇಹ ದಿನ' ಆಚರಣೆಯ ಸಂಧರ್ಭದಲ್ಲಿ ಒಂದು ಪೇಸ್ಟ್ ತಯಾರಿಕಾ ಸಂಸ್ಥೆಯ ಹೊಸ ಜಾಹೀರಾತಿನಂತೆ ಮಧು ಮೇಹಿಗಳಿಗೆ ಪ್ರತ್ಯೇಕ ಟೂಥ್ ಪೇಸ್ಟ್ ಅಂತೆ. ಅದನ್ನು ಬಳಸದಿದ್ದರೆ ಬಾಯಿಯ ಮುಖಾಂತರ ಸಕ್ಕರೆ ಖಾಯಿಲೆ ಬರಬಹುದಂತೆ. ಇದನ್ನು ಮೀರಿಸಿದ್ದು ಇನ್ನೊಂದು ಸಂಸ್ಥೆಯ ಜಾಹೀರಾತು. ಅವರು ಕೊರೋನಾ ಬೇರೆ ಬೇರೆ ರೂಪದಲ್ಲಿದ್ದು ಇನ್ನೂ ಹೋಗಿಲ್ಲ. ಹಾಗಾಗಿ ಅವರು ಓಮಿಕ್ರಾನ್ ವಿರುದ್ಧ ಒಂದು ದಂತ ಧಾವನ ಬಿಡುಗಡೆ ಮಾಡಿದ್ದಾರಂತೆ. ಈ ಉಪ್ಪಿನ ಆಟ ಎಷ್ಟಿದೆಯೆಂದರೆ, ಕಿರಾಣಿ ಅಂಗಡಿಗೆ ಹೋಗಿ ಉಪ್ಪು ಕೇಳಿದರೆ, ಟೂಥ್ ಪೇಸ್ಟ್ ಕೊಡುತ್ತಾರಂತೆ.



ಇವರುಗಳ ಉಪ್ಪಿನ ಗ್ಯಾನ, ಧ್ಯಾನದ ಕೆನೆತ ಹೇಷಾರವ ಹೇಗಿರುತ್ತದೆಂದರೆ ನಾವು ನೋಡದ ಸ್ವತಂತ್ರ ಪೂರ್ವದ ಉಪ್ಪಿನ ಸತ್ಯಾಗ್ರಹವನ್ನು ಕಂಡಂತೆ ಅಂದರೆ ಬಿಳಿಯ ಉಪ್ಪು ಅದೇ ಆದರೂ ಅದನ್ನು ಬಗೆ ಬಗೆಯ ಬಣ್ಣಗಳಿಂದ ನಮಗೆ ಕಣ್ಣು

ಕೋರೈಸುವಂತೆ ಮಾಡುತ್ತದೆ. ಇಂತಹ ಉಪ್ಪಿನ ಜ್ಞಾನ ಆಗಲೇ ಆಗಿದ್ದಿದ್ದರೆ ಬ್ರಿಟಿಷರಿಗೆ ಗಾಂಧೀಜಿಯವರು ಮತ್ತು ಇತರೆ ಸಾವಿರಾರು ಸತ್ಯಾಗ್ರಹಿಗಳನ್ನು ಸೆರೆಮನೆಯಲ್ಲಿ ಕೂಡಿ ಹಾಕುವ ಕಷ್ಟವೇ ಇಲ್ಲದೇ ಅವರ ರಾಣಿಗೆ ಸೆಲ್ಯೂಟ್ ಮಾಡಿ ನಮ್ಮ ದೇಶ ಖಾಲಿ ಮಾಡುತ್ತಿದ್ದರೆನಿಸುತ್ತದೆ.

ನಮ್ಮವರದೇ ಆದ ಆಂಕರ್ ಟೂಥ್‌ಪೇಸ್ಟ್‌ನ ಒಂದು ವಿಡಿಯೋ ಜಾಹೀರಾತಿನಲ್ಲಿ ಹೊಸದಾಗಿ ಮದುವೆಯಾದ ಹೆಣ್ಣೊಬ್ಬಳು ತನ್ನ ನವ ಪತಿಯನ್ನು ಹೊಸ ರುಚಿಯಿಂದ ಸಂತುಷ್ಟ ಗೊಳಿಸಲು ಕೇಕ್ ತಯಾರಿಸುತ್ತಾಳೆ. ಅವಳು ಮಾಡಿದ ಅತಿ ಉತ್ಸಾಹದ ಕೇಕ್ ದಪ್ಪ ಕಲ್ಲಿನಂತಾಗಿರುತ್ತದೆ. ಅದನ್ನು ಹಿಡಿದು ಅವಳು ಕುಣಿಯುವಾಗ ಅದು ಗೋಡೆಗೆ ಹೊಡೆದು ಗೊಡೆಯ ಒಂದು ಪದರವೇ ಕಿತ್ತು ಬರುತ್ತದೆ. ಗಂಡ ಬಂದವನೇ ಖುಷಿಯಾಗಿ ಅದಕ್ಕೆ ಬಾಯಿ ಹಾಕುವುದನ್ನು ಅವಳು ತಡೆದರೂ ಬಿಡದೆ ಅವನು ಅದನ್ನು ಕಚ್ಚಿ ತನ್ನ ಹಲ್ಲು ಬೀರುತ್ತಾನೆ. ಇಲ್ಲಿ ಈ ಪೇಸ್ಟ್‌ನಲ್ಲಿ ಉಜ್ಜಿದ ಹಲ್ಲುಗಳು ಏನನ್ನಾದರೂ ಕಡಿದು ಹಾಕಬಹುದು ಎಂಬುದು ಅರ್ಥವಂತೆ. ಇನ್ನೊಂದು ಅಮೆರಿಕನ್ ಜಾಹೀರಾತಿನಲ್ಲಿ ಹೆಣ್ಣಿನ ಹಲ್ಲು ಬೀರುವಿಕೆಯೇ ಅವಳ ಪ್ರಿಯಕರನ ಕೆನ್ನೆಗೆ ತುಟಿಯ ಗುರುತು ಮೂಡಿಸಿರುತ್ತದೆ. ಮತ್ತೊಂದು ನಮ್ಮದೇ ಜಾಹೀರಾತಿನಲ್ಲಿ ಒಬ್ಬ ಆಟೋ ಚಾಲಕ ಮತ್ತು ಹುಡುಗನ ಮಧ್ಯೆ ಅವನು ಕೇಳಿದ ಹೆಚ್ಚಿನ ಹಣದ ವಿಚಾರವಾಗಿ ದೊಡ್ಡ ವಾಗ್ಯುದ್ಧ ಆಗುತ್ತದೆ. ಕಡೆಗೆ ಆ ಚಾಲಕ ಹುಡುಗನ ಹಲ್ಲು ಮುರಿಯುತ್ತೇನೆ ಎಂದಾಗ ಆ ಬಾಲಕ ತನ್ನ ಹಲ್ಲಿನಲ್ಲಿ ಕಬ್ಬು ಜಗಿದು ತೋರಿಸುತ್ತಾನೆ. ನೋಡಿ ನಮ್ಮ ದಂತ ಮಂಜನಗಳು ಹಲ್ಲಿನ ಬಗ್ಗೆ ಎಷ್ಟು ನಿಗಾ ವಹಿಸುತ್ತವೆ!! ದೇಶ ವಿದೇಶಗಳಲ್ಲಿ ಈ ಟೂಥ್ ಪೇಸ್ಟ್‌ಗಳ ಜಾಹೀರಾತಿಗಾಗಿಯೇ ಕೋಟ್ಯಾಂತರ ಡಾಲರ್ ಹಣವನ್ನು ವ್ಯಯಿಸುತ್ತಾರಂತೆ. ಇವುಗಳ ಜೊತೆಗೇ ಟೂಥ್‌ಬ್ರಷ್‌ಗಳ ಬಗ್ಗೆ ಹೇಳದಿದ್ದರೆ ಹೇಗೆ ? ಅವುಗಳೂ ಮೃದು, ಗಡಸು, ಹೇಗೆ ಬೇಕಾದರೂ ತಿರುಗುವಂತಹುದು, ಇದ್ದಿಲು ಮಿಶ್ರಿತ ಮತ್ತು ಇವೆಲ್ಲದರ ಜತೆಗೆ ವಿದ್ಯುತ್ ಚಾಲಿತ ಬ್ರಷ್‌ಗಳು ಬೇರೆ. ಟೂಥ್ ಬ್ರಷ್‌ಗಳಿಲ್ಲದಿದ್ದರೆ ಈ ತರಾವರಿ ಟೂಥ್ ಪೇಸ್ಟು ಗಳೆಲ್ಲ ವೇಷ್ಟೇ. ಮೊನ್ನೆ ಇನ್ನೊಂದು ನೋಡಿದೆ. ಅದು ಅರಿಶಿನ ಮಿಶ್ರಿತವಂತೆ. ಹಲ್ಲು ಬಿಳಿಯಾಗಿಸತ್ತೋ ಇಲ್ಲ ಹಳದಿಯಾಗಿಸತ್ತೋ ಗೊತ್ತಿಲ್ಲ. ನಾನಂತೂ ಬಲಿ ಪಶುವಾಗಲಾರೆ.

ಇವೆಲ್ಲ ಏನೇ ಇರಲಿ ನಮಗೆ ಈಗಲೂ ಪಕ್ಕದ ರಾಜ್ಯದ ಆದರೆ ಹೊರ ದೇಶಗಳಲ್ಲೂ ಹೆಸರುವಾಸಿಯಾಗಿರುವ ಗೋಪಾಲ್ ಪಲ್ಲು ಪುಡಿ ಮತ್ತು ನಮ್ಮ ಮನೆಯ ಆವರಣದ ನಂಜನಗೂಡು ಹಲ್ಲು ಪುಡಿಯು ಸ್ವಾದ ಇವಕ್ಕೆಲ್ಲ ಸೆಡ್ಡು ಹೊಡೆಯುವಂತಿರುತ್ತದೆ.

■

---

ಪತ್ನಿ : ಬ್ಯಾಂಕಿಗೆ ಹೋಗಿ ದುಡ್ ಡ್ರಾ ಮಾಡ್ಕೊಂಡು ಬನ್ನಿ ಅಂದ್ರೆ, ಏನ್ರೀ ಅದು ಡ್ರಾಮಾ ಮಾಡ್ತಿದೀರ.

ಪತಿ : ಬ್ಯಾಂಕಿನ ಕ್ಲರ್ಕು ನಳಿನಿ ಮೂರು ದಿನ ರಜ ಅಂತೆ ಕಣೆ, ಅವಳು ಬಂದ್ಮೇಲೆ ಹೋಗ್ತೀನಿ.



# ರಷ್ಯ–ಯುಕ್ರೇನ್ ಯುದ್ಧಕ್ಕಿಂತ ಕರೋನನೆ ವಾಸಿ!

***ಇ.ಆರ್. ರಾಮಚಂದ್ರನ್**

ಅಜ್ಜಿ ಟಿವಿ ನೋಡುತ್ತಿದ್ದವರು ಒಮ್ಮೆಲೇ ರಿಮೊಟ್ ಎಸೆದರು. ಅದು ಅವರು ಕೂತಿದ್ದ ಮಂಚದ ಮುಂದಿದ್ದ ದಿಂಬಿನ ಮೇಲೆ ಬಿತ್ತು. ಟಿವಿಯಲ್ಲಿ ಬರುತ್ತದ್ದ ಗೋಳು ಇನ್ನೂ ಕೇಳಿಸುತ್ತಿತ್ತು. ರಿಮೋಟು ಇನ್ನೂ ಒಂದು ಪೀಸಾಗೆ ಇತ್ತು, ಸಧ್ಯ!

'ಅಜ್ಜಿ! ಏನಾಯ್ತು? ನೀನು ಆವೇಶದಿಂದ ಚಿಕ್ಕ ಗಾಂಧಿ ನಮ್ಮ ಮಾಜಿ ಪ್ರಧಾನಿ ಮನಮೊಹನ್ ಸಿಂಘ್ ಅವರ ಪೇಪರನ್ನ ಪಬ್ಲಿಕ್ಕಾಗಿ ಹರಿದ್ನಲ್ಲ ಹಾಗೆ ನೀನು ರಿಮೋಟನ್ನು ಯಾಕೆ ಎಸ್ದೆ?'

'ಮತ್ತಿನ್ನೇನೋ! ಸ್ವಲ್ಪವಾದರೂ ನಾಚಿಕೆಬೇಡ್ವಾ?... ಒಬ್ಬ ಸ್ಕೂಲು, ಕಾಲೇಜು ಆಸ್ಪತ್ರೆಗಳ ಮೇಲೆ ಒಂದೇ ಸಮ ಬಾಂಬು ಸುರಿಸ್ತಾ ಇದಾನೆ..ಜನಗಳು ಸಾಯ್ತಿದಾರೆ. ಇನ್ನೊಬ್ಬ ನಿನ್ನ ಮೇಲೆ ಸ್ಯಾಂಕ್ಷನ್ ಹಾಕ್ತಿವೀ ಅಂತ ಕೂಗಿದ್ದೇ ಕೂಗಿದ್ದು..'

'ನೀನು ಪ್ಯುಟಿನ್ ಮತ್ತು ಬೈಡನ್ ವಿಚಾರ ಟಿವಿಲಿ ನೋಡಿ ಎಕ್ಸೈಟ್ ಆಗಿ ಕೈಗೆ ಸಿಕ್ಕ ಸಾಮಾನು ತೊಗೊಂಡು ಎಸೀತಾ ಹೋಗ್ಬೇಡ ಹುಷಾರು..ಇಲ್ದಿದ್ರೆ ನಿನ್ಗೂ ಸಾಂಕ್ಷನ್ ಹಾಕ್ಬೇಕಾಗುತ್ತೆ!'

'ಸಾಂಕ್ಷನ್ ಅಂದ್ರೆ ?.. ಒಂದು ಸಲ ನಿನಗೆ ಜೇನುಹುಳ ಕಡ್ದು ನಿನ್ನ ಮುಖ ಹಲಸಿನ ಹಣ್ಣಿನ ಅಪ್ಪನ ಹಾಗೆ ಊದಿತ್ತಲ್ಲಾ.... ಮುಖದಲ್ಲೆಲ್ಲಾ ಮುಳ್ಳು ಹುಟ್ಟುಕೊಂಡಿತ್ತು .....ಆಗ ಹೆಡ್ಮಾಸ್ಟರ್ಗೆ ಕಾಗದ ಬರ್ದು ಲೀವ್ ಸಾಂಕ್ಷನ್ ಮಾಡಿ ಅಂತ ಬರೆದಿದ್ವಲ್ಲಾ..ಅದೇನೊ... ರಜ ಮಂಜೂರು ಮಾಡೋದಾ ಸ್ಯಾಂಕ್ಷನ್ನು?'

'ಅದಲ್ಲಾ ಅಜ್ಜಿ! ಈಗ ಸಾಂಕ್ಷನ್ ಅಂದ್ರೆ ತದ್ವಿರುಧ್ಧದ ಅರ್ಥ. ನಿನಗೆ ನಾಳೆ ಮದ್ಯಾಹ್ನ ಊಟದಲ್ಲಿ ಬಿಸಿಬೇಳೆ ಚಿತ್ರಾನ್ನದ ಜೊತೆ ಹುರುಳಿ ಹಪ್ಪಳ ಸ್ಯಾಂಕ್ಷನ್ ಅಂದ್ರೆ ಹುರುಳಿ ಹಪ್ಪಳ ಇರಲ್ಲ.. ನೀನು ಊಟ ಮಾಡ್ದ ಮೇಲೆ ಮಿಕ್ಕವರು ಸಿಗರೇಟ್ಗೆ, ನಶ್ಯಕ್ಕೆ ಪರದಾಡ್ತಾರಲ್ಲಾ ಹಾಗೆ ನೀನು ಅಡಿಕೆ ಬಾಯಲ್ಲಿ ಇಟ್ಕೊಂಡು ಇದೇ ಸ್ವರ್ಗ ಅಂತ ಅದರೆ ರಸ ಹೀರ್‍ತಾಇರ್‍ತಿಯಲ್ಲ... ಅದರ ಮೇಲೆ ಸಾಂಕ್ಷನ್ ಹೇರಿದೆ ಅಂದ್ರೆ ನಿನಗೆ ನಾಳೆಯಿಂದ ಅಡಿಕೆ ಖೋತಾ...ಅದೇ ಸಾಂಕ್ಷನ್ ಅಂದ್ರೆ ಅರ್ಥ ಈಗ'.

'ಏನೋ ಸುಡುಗಾಡು.. ನನ್ನ ಅಡಿಕೆ ಡಬ್ಬಿ ಮುಟ್ಟಿದ್ರೆ ನಿನ್ನ ಸೊಂಟ ಮುರೀತೀನಿ.. ಅದಿರ್‍ಲಿ ಏನೇನೋ ಸಾಂಕ್ಷನ್ ಹಾಕ್ತಿವಿ ಹಾಕೀದಿವಿ ಅಂತ ಹೇಳಿ, ಈಗ್ಲೂ ರಷ್ಯಾದ ಹತ್ರಾನೇ ಗ್ಯಾಸು, ಆಯಿಲ್ ಎಲ್ಲಾ ದಿನಾ ಕೊಂಡುಕೊಳ್ತಿದಾರಂತಲ್ಲೋ..... ನಮ್ಮ ಸಾಫ್ಟ್ವೇರ್ ಸಾವಿತ್ರಮ್ಮ ಹೇಳ್ತಿದ್ರು.. ಇದೆಲ್ಲಾ ಬುಟಾಟಿಕೆ.. ಕಣ್ಣೊರ್‍ಸೋ ಮಾತು.. ಒಂದ್ಕಡೆ ಯುಧ್ಧ. ಇನ್ನೊಂದ್ಕಡೆ ಅವ್ರಿಗೆ ಬೇಕಾದ್ದು ಸಾಮಾನು ಎಲ್ಲಾ ಕೊಂಡುಕೊಳ್ತಿದಾರಂತೆ.... ಎಲ್ಲಾ ಅವರವರಲ್ಲೇ ಅಡಜಸ್ಮೆಂಟಂತೆ..'



'ನಿನ್ನ ಫ್ರೆಂಡು ಸಾವಿತ್ರಮ್ಮ ಪ್ಯುಟಿನ್, ಬೈಡನ್ ಗೆ ಅಡ್ವೀಸರ್ ತರಹ ಮಾತಾಡಿದಾರಲ್ಲಾ...!. ಇರ್ಬೇಕು....ಆಕೆಗೆ ಎಲ್ಲಾ ಗೊತ್ತಿದೆ. ಷಿ ಈಸ್ 100% ರೈಟ್. ಈ ಯುಧ್ಧದ ಮದ್ಯೆಲೂ ಅವರಿಗೆ ಸಪ್ಲೈ ಆಗ್ತಿದೆ. ಡಾಲರ್ರೂ ಸಿಗ್ತಿದೆ..'

'ಅಲ್ವೊ! ಇವ್ರೆಲ್ಲಾ ಮೂರು ಮೂರು ತಿಂಗಳಿಗೆ ಜಿ 7, ಜಿ 20 ಮೀಟಿಂಗು

ಅಂತ ಹೋಗಿ ಮಜ ಮಾಡಿ ಊರೆಲ್ಲಾ ಸುತ್ತಿಬರ್ತ್ತಾರೆ,..ನಮ್ಮ ಮನ್ಮೋಹನ್ ಸಿಂಘೂ, ಮೋದಿ ಕೂಡ ಪ್ರಪಂಚದಲ್ಲಿ ಎಲ್ಲಿ ಹಾಟ್ ಸ್ಪಾಟು, ಕೋಲ್ಡು ವಾರು ಅಂತ ಅಲ್ಲೆಲ್ಲಾ ವರ್ಷಗಟ್ಲೆ  ಓಡಾಡಿ, ಯುದ್ಧ ಶುರುವಾಗಿ ಒಂದೇ ದಿನಕ್ಕೆ ಕೈ ಬೆರಳು ಆಟಂ ಬಾಂಬಿನ ಕಡೆ ಹೋಗ್ತಿದೆ.. ಇದೇನೇನೊ ಇವರ ಮೀಟಿಂಗು? ಸಾವಿರಾರು ಜನನ್ನ ಆಗಾಗ್ಗೆ ಕೊಲ್ಲೋ ಬದ್ಲು ಒಟ್ಟಿಗೆ ಎಲ್ಲಾರ್ರೂ ಸೇರ್ರಿ ಮುಗಿಸ್ಬಿಡೋಣಾಂತನ ಇವರ ಪ್ಲಾನು?'

'ಹೋಗೋ ದಿಕ್ಕು ನೋಡಿದ್ರೆ ಹಾಗೇಂತ ಅನ್ಸುತ್ತೆ'.

'ನಮ್ಮ ಹಾರ್ಡ್ವೇರ್ ಹರಿಣಿ ಹೇಳ್ತಿದ್ದು. ಕಾಂಗ್ರಸ್ ಕೂಡ ಜಿ 23 ಅನ್ನೋ ಗ್ರೂಪು ಮಾಡ್ಕೊಂಡಿದೆಯಂತೆ. ಅದರಲ್ಲಿ ಏನು ಮಾಡ್ತಾರೋ'?

'ಅದರಲ್ಲಿ ನಾವು ಯಾರು? ಯಾಕೆ ಇದೀವಿ,  ಏನು ಮಾಡ್ಬೇಕು, ಏನು ಮಾಡ್ತೀವಿ, ಯಾಕೆ ಮಾಡ್ಬೇಕು ಅಂತ ಎಲ್ಲಾ ಕೂಲಂಕುಷವಾಗಿ ಯೋಚಿಸ್ತಿದಾರಂತೆ...'

'ಸರಿ ಬಿಡು. ಅದು ಆಗೋ ಅಷ್ಟರಲ್ಲಿ ನೀನು ಮುತ್ತಜ್ಜ ಆಗಿರ್ತೀಯ! ಹಾಗ್ನೋಡಿದ್ರೆ.....ಈ ಯುದ್ಧ, ಬಾಂಬುಗಳು ಮದ್ಯೆ  ನಮ್ ಕರೊನಾನೇ ವಾಸಿ..'

'ನಮ್ ಕರೋನಾ? ಅಜ್ಜಿ, ನಿನ್ಗೆ ಹುಚ್ಚು ಏನಾದ್ರೂ ಹಿಡಿತಾ ? ಎಲ್ಲಿ ಕೈ ಕೊಡು..ಸಧ್ಯ ನಿನ್ನ ಪಲ್ಸು ಹೊಡೆತ  ಎಲ್ಲಿ ರೂಫಿಗೆ ಹೋಗಿ ನಿಂತಿದೆಯೋ ಅಂತ ಹೆದರಿದ್ದೆ...,ಸರಿಯಾಗೇ ಇದೆ .... ಸ್ವಲ್ಪ ಪಿತ್ಥ ಆಗಿರ್ಬೇಕು ನಿನಗೆ..ಮಜ್ಜಿಗೆ ಕುಡಿ ಸರಿಯಾಗುತ್ತೆ.. ಕರೋನಾದಿಂದ  ಎಷ್ಟು ಜನ ಸತ್ತಿದಾರೆ ಅದ್ರಿಂದ, ಎಷ್ಟು ಮನೆ ಹಾಳಾಗಿದೆ..ನಮ್ ಕರೋನಾ ಅಂತಿಯಲ್ಲಾ ಅಜ್ಜಿ?'

'ವಾತಿಗೆ ಹಾಗೆ ಹೇಳಿದ್ನೋ...ಕರೊನ ಬರುವುದಕ್ಕೆ ಮುಂಚೆ ವಾಸ್ನೆ ನಿಂತುಹೋಗುತ್ತೆ..ಸೀನು ಬರ್ತಾ ಇರುತ್ತೆ.. ಗಂಟಲಲ್ಲಿ ಕಿರಿಕಿರಿ.. ಮೈ ಕೈ ನೋವು.. ಏನೇನೋ ಸಿಮ್ಟಂಗಳು ಹೇಳೊವ್ರು..ಅದು ಬರ್ಬಾರ್ದು ಅಂತ ಒಂದಿಷ್ಟು ಜನ ತಮಟೆ ಬಾರ್ಸಿದರು.. ಶಂಖ ಊದಿಸಿದ್ರು. ಒಂದಿಷ್ಟು ಜನ ಮೂಗಿಂದ ಬಿಸಿ ಬಿಸಿ ಹೊಗೆ ಕುಡಿದ್ರೆ ಅದು ಬರಲ್ಲ ಅಂತ  ನಾಲಿಗೆ ಬಾಯಿ ಸುಟ್ಕೊಂಡ್ರು..ಕೆಲವ್ರು ಮನೆ ಮುಂದೆ 'ನಾಳೆ ಬಾ' ಅಂತ ಇವತ್ತು ತಪ್ಪಿಸ್ಕೊಂಡು  ಮಾರನೆ ದಿವಸ ಕೋವಿಡ್ ಬಂದು ಒದ್ದಾಡಿದವರೂ ಇದ್ದಾರೆ..'

'ಅದೆಲ್ಲಾ ಸರಿ..ಅದನ್ನ ಈವಾಗ ಯಾಕೆ ಹೇಳ್ತಿ? ಆಕ್ಸಿಜನ್ ಸಿಲಿಂಡರ್ ಇಲ್ದೆ, ಕ್ಲೋರೊ, ಫ್ಲೀರೊ ಮಾತ್ರೆಗಳು.. ಅದನ್ನೆಲ್ಲಾ ಈಗ ಯಾಕೆ ಜ್ಞಾಪಿಸ್ತಿ? ಅದೆಲ್ಲಾ ಆಯ್ತುಲ್ಲಾ.. ನಿನಗೆ ಎರಡು ವಾಕ್ಸಿನೇಷನ್ ಮತ್ತು ಬೂಸ್ಟರ್ ಕೂಡಾ ಹಾಕ್ಸಿದ್ವಲ್ಲಾ...'

'ಅದು ಯಾಕೆ  ಹೇಳ್ದೆ ಅಂದ್ರೆ.. ಕರೋನ ಎಲ್ಲಾರ್ರೂಗ್ಗ ಟೈಮ್ ಕೊಡ್ತು.....ಸಿಂಟಮ್ಗಳೂ ಕೊಡ್ತು.. ಕಿವಿ ತೂತಾಗೊ ಅಷ್ಟು ಕಿವಿಮಾತೂ ಬಂತು... ಮಾಸ್ಕು ಹಾಕು,. ಕೈ ಸೋಪಿನಿಂದ ತೊಳಿ, ಹತ್ತಿರ ಹೋಗಿ ಅವರ್ನ ಇವರ್ನ ಮುಟ್ಬೇಡಾ.. ಮುಟ್ಟಿಸ್ಕೋಬೇಡಂತ.. ಹೌದಲ್ವೋ..?'

'ಹೌದಜ್ಜಿ.. ಖಂಡಿತ'.

'ನೋಡು ವೈರಸ್ಸಿಗೆ ನಮ್ಮ ಮೇಲೆ ಎಷ್ಟು ಕಾಳಜಿ ಇತ್ತು..ಚೈನಾದವ್ರೋ ಯಾರು ಮಾಡಿದ್ರೋ ಸಿಸ್ಟಮ್ ಆಗಿ ಮಾಡಿದ್ರು..ಏನು ತಿನ್ಬೇಕು, ಏನು ತಿನ್ಬಾರ್ದು, ಎಲ್ಲಾರ್ ಮದ್ವೇಗೂ 100 ಜನ ಅಂದ್ರೆ ಮಿನಿಸ್ಟರ್ ಅವರ ಮದುವೆಲಿ 500 ಜನ ಬಂದ್ರೂ



ಮಾಧ್ಯಮದವರು 30 ಜನದ ಮೇಲೆ ತೋರಿಸ್ತಿರ್ಲಿಲ್ಲ ..ಅವರ ಪಂಕ್ತಿನೇ ಒಂದು 50 ಜನ ಇರ್ತಿದ್ರು..ಬಹಳ ಚೆನ್ನಾಗಿ ಏನು ತೋರಿಸ್ಬೇಕೂ ಏನು ತೋರಿಸ್ಬಾರ್ದು ಅವರಿಗೆ ಚೆನ್ನಾಗಿ ಗೊತ್ತು.. ಒಟ್ನಲ್ಲಿ ಕರೊನ ವಾರ್ನಿಂಗ್ ಕೊಡ್ತಾನೇ ಇತ್ತು.. ನಾವು ಅದನ್ನು ಪಾಲಿಸಿದರೆ ಸೇಫು..ಇಲ್ದಿದ್ರೆ ಫೇಲು... ಈಗ ರಷ್ಯ ಯುದ್ಧ ಮಾಡೊಕ್ಕೆ ಎಲ್ಲಿ ವಾರ್ನಿಂಗ್ ಕೊಡ್ತಿದ್ಯೋ? ಮನೇಲೇ ಕೂತಿದ್ರೂ ಹೊಡೆಯೋ ಬಾಂಬಿಗೆ ಸೂರು ಕುಸಿದು, ಬೆಂಕಿ ಯಾಗಿ ಅಲ್ಲಲ್ಲೇ ದುರ್ಮರಣ ಆಗ್ತಿದಿಯಲ್ಲೋ? ಮಕ್ಕಳು ಮರಿ ನಾಯಿ ಇದ್ದಿದ್ದ ಕಡೆನೇ ಅಲ್ಲಲ್ಲೆ ಸಾಯ್ತಿದಾರಲ್ಲೋ..'.

'ಹೌದಜ್ಜಿ'.

'ಇವತ್ತು ಈ ರೋಡಿಗೆ ಬಾಂಬ್ ಹಾಕ್ತಿದಿವಿ.. ಏನಾದ್ರೂ ತರಕಾರಿ ಹಣ್ಣು ತರೋದಿದ್ರೆ ಇವತ್ತೆ ತರಿಸಿ ಇಟ್ಕೋಳಿ, ಬ್ಯಾಂಕಿಗೆ ಹೋಗಿ ದುಡ್ಡು ತಂದಿಟ್ಕೋಳಿ ಯಾಕಂದ್ರೆ ನಾಳೆ . ಬ್ಯಾಂಕು ದುಡ್ಡು ಎರಡೂ ಅಲ್ಲಿ ಇರಲ್ಲ.. ತರಕಾರಿ ಜಾಸ್ತಿ ತೊಗೋಬೇಡಿ..ನಾಳೆ ನೀವು ಇದ್ರೂ ನಾಳಿದ್ದು ಏನು ಗ್ಯಾರಂಟಿ?' ಅಂತ ಹೇಳೊವ್ರು ಯಾರೂ ಇಲ್ವಲ್ಲೊ.. ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಒಂದು ವಾರ್ನಿಂಗ್ ಕೂಡಾ ಕೊಡ್ದೆ ಕೊಚ್ಚಿ ಎಸೀತಾ ಇದಾನಲ್ಲಾ.. ವೈರಸ್ಸು, ಕರೊನ ನಮಗಿಂತ ವಾಸಿ ಅಲ್ವಾ?'

'ಹೌದು ಅಜ್ಜಿ. ನೂರು ಪಾಲು ಒಪ್ಕೊಳ್ತೀನಿ ನಿನ್ ಮಾತ್ನ.'

'ಇನ್ನೊಂದು ಮಾತು. ಪುಟಿನ್ ಮತ್ತು ಬೈಡೆನ್ಗೆ ಯಾವುದರಲ್ಲೂ ಹೊಂದಾಣಿಕೆ ಇಲ್ಲ ಇದು ಎಲ್ಲಾರಿಗೂ ಗೊತ್ತಿರುವ ವಿಷಯ. ಅವರ ಹೆಸರಲ್ಲೂ ಒಬ್ಬರಿಗೊಬ್ಬರಿಗೆ ಆಗಲ್ಲ..'.

'ಅದು ಹೇಗೆ ಹೇಳ್ತಿಯಾ ಅಜ್ಜಿ?'

'ಪುಟ್ ಇನ್ ಅಂದ್ರೆ ಒಳಗಿಡು... ಭದ್ರವಾಗಿಡು ಅಂತ ಅಲ್ವೇನೋ?'

'ಹೌದು'.

'ಬೈ ಡೆನ್ ಅಂದ್ರೆ  ನಿನ್ನ ಹತ್ತಿರ ಸಾಕು. ಬೈ ಬೈ.. ಇನ್ನು ನಾನು ಹೊರಡ್ತೀನಿ.. ಅಲ್ವಾ? ಅವರಿಬ್ಬರಿಗೂ ಅಷ್ಟಕ್ಕಷ್ಟೆ ಅನ್ಸುತ್ತೆ.'

'ವ್ಹಾ ಅಜ್ಜಿ!'

■

---

**"ಬ್ರಹ್ಮಾಂಡದ ಬೇರೆ ಕಡೆಗಳಲ್ಲೂ ನಮ್ಮಷ್ಟೇ ಮುಂದುವರಿದ ಜನ ಇದ್ದಾರೆ ಎನ್ನುವುದು ಖಂಡಿತ"**

**"ಅದು ಹೇಗೆ ಹೇಳುತ್ತೀರಿ?"**

**"ಇನ್ನೂ ಯಾರೂ ನಮ್ಮನ್ನು ಸಂಪರ್ಕಿಸಿಲ್ಲವಲ್ಲ !**



# ಒಬ್ಬಟ್ಟಿನಲ್ಲಿ ಬಲವಿದೆ

***ನಳಿನಿ ಸೂರ್ಯಪ್ರಕಾಶ್**

ಸುಬ್ಬಣ್ಣ-ಸುನಂದಮ್ಮ ದಂಪತಿಯ ಸಂಸಾರ ಸಿಂಗಲ್ ಇಂಜಿನ್ನದ್ದು. ಅಂದ್ರೆ ಆತನೊಬ್ಬನ ಚಿಕ್ಕ ನೌಕರಿಯ ಸಂಪಾದನೆಯೊಂದೇ. ಆದರೆ ಆತ ಮಾತ್ರ ಡಬಲ್ ಕಪಿ ಅಂದರೆ ಡಬಲ್ ಕಾಲೇಜು-ಕನ್ಯಾಮಣಿಗಳ ಪಿತೃ. ಪಿತ್ರಾರ್ಜಿತವಾದ ಹಳೇ ಹೆಂಚಿನ ಮನೆಯಿದೆ ಸುಬ್ಬಣ್ಣನ ಪಾಲಿಗೆ. ಅದೂ ಬೆಂಗಳೂರಿನ ಒಳ್ಳೆಯ ಬಡಾವಣೆಯಲ್ಲೇ. ಆರಕ್ಕೇರದ, ಮೂರಕ್ಕಿಳಿಯದ ಹಣಕಾಸಿನ ಸ್ಥಿತಿ. ಸಿರಿತನವಿಲ್ಲದೇ ಹೋದ್ರೂ ಹಬ್ಬಹರಿದಿನಗಳ ಸಂಭ್ರಮಾಚರಣೆಗೆ ಕೊರತೆಯಿಲ್ಲದ ಸಂಸಾರ.

ಹೊಸ ಸಂವತ್ಸರದ ಜೊತೆ ಯುಗಾದಿ ಮತ್ತೆ ಮರಳಿ ಬಂದಿತ್ತು. ಹೊಸಿಲ ಮುಂದೆ ಚೆಲುವಿನ ಚಿತ್ತಾರ. ಮನೆಯ ಮುಂಬಾಗಿಲಿಗೆ ಮಾವು-ಬೇವುಗಳ ಹಸಿರು ತೋರಣ. ಅಡುಗೆಮನೆಯಲ್ಲಿ ಏಲಕ್ಕಿಯ ಘಮಲಿನ ಕಾಯಿಬೆಲ್ಲದ ನುಣುಪಾದ ಹೂರಣ. ಸುನಂದಮ್ಮ ಒಬ್ಬಟ್ಟು ಮಾಡುವುದರಲ್ಲಿ ಎತ್ತಿದ ಕೈ. ಬಂಗಾರ ಬಣ್ಣದ ಕಣಕದಲ್ಲಿ ಮತ್ತಷ್ಟು ಹೂರಣ ತುಂಬಿ ಬಾಳೆಲೆ ಮೇಲೆ ಹುಣ್ಣಿಮೆ ಚಂದಿರನಂತೆ ಮೂಡಿಸುವ ಒಬ್ಬಟ್ಟಿನಲ್ಲಿ ಅಂಚಿನವರೆಗೂ ಸಮಾನವಾಗಿ ಹರಡಿಕೊಂಡಿರುವ ಹೂರಣ! ಅಬ್ಬಬ್ಬಾ! ಅದೆಂಥಾ ಕೈಚಳಕ! ಅದೇನು ರುಚಿ! ರುಚಿಯೆಂದರೆ ಆಥೆಂಟಿಕ್ ರುಚಿ!

ಹಬ್ಬದ ದಿನ ಒಬ್ಬಟ್ಟು ತಟ್ಟೋಕ್ಕೇಂತ ಬಾಳೆಲೆ ಕೊಯ್ಯಲು ಸುನಂದಮ್ಮ ಅಂಗಳಕ್ಕೆ ಬಂದಳು. ಪಕ್ಕದ ಮನೆಯ ಇಂಜಿನಿಯರ್ ಶ್ಯಾಮಪ್ರಸಾದ ಅಮೆರಿಕದಿಂದ ತನ್ನ ಸಹೋದ್ಯೋಗಿ ಡ್ಯಾನಿಯಲ್‌ನೂ ಕಟ್ಕೊಂಡು ಊರಿಗೆ ಬಂದಿದ್ದ. ತನ್ನ ಮನೆಯ ತುಳಸಿ ಕಟ್ಟೆಯ ಬಳಿ ಬಿಳಿತೊಗಲಿನ, ಕೆಂಚುಕೂದಲಿನ, ಅಜಾನುಬಾಹುವಿನಂತಿದ್ದ ತನ್ನ ಸ್ನೇಹಿತ ಡ್ಯಾನಿ ಜೊತೆ ಏನೋ ಮಾತಾಡ್ತಾ ನಿಂತಿದ್ದ. ಆ ಗಂಡು ಶ್ಯಾಮನ ಮಾತನ್ನು ಕಣ್ಣರಳಿಸಿ ಕೇಳ್ತಾ, ನಡುವೆ ತಲೆದೂಗ್ತಿದ್ದ. ತುಳಸಿಗಿಡದ ಎಲೆಯೊಂದನ್ನು ಕಿತ್ತು ಅಗಾಗ ಮೂಸಿ ಮೂಸಿ ನೋಡ್ತಿದ್ದ.

ಸುನಂದಮ್ಮನನ್ನು ಕಂಡ ಶ್ಯಾಮು, "ಹೋಯ್ ನಂದಮ್ಮಾ! ಹೂರಣದ ಘಮಲು ನಮ್ಮನೇ ತನಕ ಬರ್ತಿದೆ. ಈ ಬಿಳಿ ಜಿರಳೇನೂ ಕರ್ಕೊಂಡು ಒಬ್ಬಟ್ಟು ತಿನ್ನೋಕ್ಕೆ ನಿಮ್ಮನೇಗೆ ನಾನು ಹಾಜರ್" ಅಂದ.

"ಅದಕ್ಕೇನು ಬಾ ದೊರೆ. ನೀ ಕೇಳೋದು ಹೆಚ್ಚೋ, ನಾ ಮಾಡಿಕೊಡೋದು ಹೆಚ್ಚೋ!" ಸುನಂದಮ್ಮನ ಅಕ್ಕರೆಯ ಆಹ್ವಾನ.

ಸಂಜೆ ಚಾಕಲೇಟ್ಸಿನ ಪ್ಯಾಕೆಟ್ಟು ಹಿಡಿದು ಶ್ಯಾಮು ಸುಬ್ಬಣ್ಣನ ಮನೆಯ ಕದ ತಟ್ಟಿದ. ಶ್ಯಾಮುವಿನ ಜೊತೆಗಿದ್ದ ಅಜಾನುಬಾಹು ಬಿಳಿಯನನ್ನು ಕಂಡು ತುಸು ಗಾಬರಿ, ಸಂಕೋಚ, ಸಂಭ್ರಮ ಎಲ್ಲಾ ಒಟ್ಟಿಗೆ ಪಟ್ಕೊಂಡ ಸುಬ್ಬಣ್ಣ ಬಂದವರನ್ನು ಒಳಕರೆದ. "ಸುಬ್ಬು, ಇವ ಡ್ಯಾನಿಯಲ್ ಅಂತ, ನನ್ನ ಕೊಲೀಗ್" ಎನ್ನುತ್ತ ಚಾಕಲೇಟ್ಸಿನ ಪ್ಯಾಕೆಟ್ಟನ್ನು ಸುಬ್ಬಣ್ಣನ ಕೈಗಿತ್ತ ಶ್ಯಾಮು. "ಡ್ಯಾನಿ, ದಿಸ್ ಈಸ್ ಮೈ ನೇಬರ್, ಸುಬ್ಬಣ್ಣ." ಹ್ಯಾಪಿ ಯುಗಾದಿಯ ವಿನಿಮಯವಾಯ್ತು.

ಸುಬ್ಬಣ್ಣನ ಮೊದಲನೆ ಕನ್ಯಾರತ್ನ ಮುಂಬಾಗಿಲ ಮುಂದೆ ಮುದ್ದಾದ ರಂಗವಲ್ಲಿ ಬಿಡಿಸಿದ್ದಳು. ಆ ಬಿಳಿರಂಗೋಲಿ ಕೆಮ್ಮಣ್ಣಿನ ಚುಕ್ಕಿ-ಬಳ್ಳಿಗಳು ಡ್ಯಾನಿಯ ಕಾಲಿಗೆ



ತೊಡರಿಕೊಂಡವೇನೋ! ಅಲ್ಲೆ ನಿಂತು, ಬೇರೆ ಬೇರೆ ಕೋನಗಳಿಂದ ರಂಗೋಲಿಯ ಫೋಟೋಗಳನ್ನು ತನ್ನ ಮೊಬೈಲಿನಿಂದ ಕ್ಲಿಕ್ಕಿಸಿದ.

"ಈ ಬಿಳಿಯ ಭಲೇ ರಸಿಕಬಡ್ಡಿಮಗ ನೋಡು! ಓವರ್ ಡ್ಯಾನಿ? ಪ್ಲೀಸ್ ಗೆಟ್ ಇನ್"" ಅಂತ ಶ್ಯಾಮು ಒಳನಡೆದ. ನಡುಮನೆಯಲ್ಲಿನ ಬಣ್ಣ ಮಾಸಿದ ಬೆತ್ತದ ಕುರ್ಚಿಗಳನ್ನು ಟವೆಲಿನಿಂದ ಒರೆಸಿ ಒರೆಸಿ, ಬಂದವರನ್ನು ಕೂಡಲು ಹೇಳಿ, ತಾನು ಎದುರಿಗಿದ್ದ ಸ್ಟೂಲಿನ ಮೇಲೆ ಕೂತ ಸುಬ್ಬಣ್ಣ. ಶ್ಯಾಮು ಸುಬ್ಬಣ್ಣನ ಜೊತೆ ಲೋಕಾಭಿರಾಮದ ಮಾತುಗಳನ್ನಾಡ್ತಾ ಕೂತ. ಅಡುಗೆಮನೆಯಲ್ಲಿ ಸುನಂದಮ್ಮ ಎರಡು ಸ್ಟೀಲ್ ತಟ್ಟೆಗಳನ್ನು ಸೆರಗಂಚಿನಿಂದ  ಚೆನ್ನಾಗಿ ಒರೆಸಿ, ಎರಡೆರಡು ಒಬ್ಬಟ್ಟುಗಳನ್ನಿಟ್ಟು, ಪಕ್ಕದಲ್ಲಿ ಪುಟ್ಟಬಟ್ಟಲಿನಲ್ಲಿ ಬಿಸಿಯಾದ ತುಪ್ಪ ಹಾಕಿ, "ರೀ..." ರಾಗವೆತ್ತಳು. ಒಬ್ಬಟ್ಟಿನ ಹಿಂದೆಯೇ ಎರಡು ಲೋಟ ನೀರೂ ಸರಬರಾಜಾಯಿತು. ನಡುಮನೆಗೆ ಬಂದ ಸುನಂದಮ್ಮನ ಕೈಯಲ್ಲಿ ಬೇವುಬೆಲ್ಲದ ಬಟ್ಟಲಿತ್ತು. "ವೆಲ್ಕಂ ಕಿಚನ್ ಕ್ವೀನ್!"" ಶ್ಯಾಮುವಿನ ಉದ್ಗಾರ.

"ಅಗೇನ್! ದಿ ಸ್ವೀಟ್ ಅಂಡ್ ಬಿಟ್ಟರ್ ಥಿಂಗ್ಸ್ ಆಫ್ ಲೈಫ್" ಯುಗಾದಿಯ ಹಿಂದಿನ ವಿಶೇಷ ತಿಳ್ಕೊಂಡಿದ್ದ ಡ್ಯಾನಿ ಬೇವುಬೆಲ್ಲದ ಸಿಹಿ ಕಹಿಯನ್ನು ಜಗಿಯುತ್ತಾ ಮುಖ ಹುಳ್ಳಗೆ ಮಾಡಿದ!

"ಡ್ಯಾನಿ", ದಿಸ್ ಈಸ್ ಒಬ್ಬಟ್ಟು. ಎ ಟ್ರೆಡಿಶಿನಲ್  ಸೌತ್ ಇಂಡಿಯನ್ ಸ್ವೀಟ್ ಮೇಡ್ ಆಫ್ ಕೊಕೊನಟ್ ಅಂಡ್ ಜ್ಯಾಗರಿ." ಶ್ಯಾಮು ಒಬ್ಬಟ್ಟಿನ ಪರಿಚಯ ಮಾಡಿದ. ಡ್ಯಾನಿ ಪುಟ್ಟ ಬಟ್ಟಲಿನ ತುಪ್ಪದ ಕಡೆ ಬೆರಳುಮಾಡಿ, "" ಹೌ ಅಬೌಟ್ ದಿಸ್?""

"ಓಹ್, ಒಬ್ಬಟ್ಟು ಟೇಸ್ಟ್ಸ್ ವಂಡರ್ಫುಲ್ ವಿತ್ ಘೀ ಆರ್ ಕ್ಲ್ಯಾರಿಫೈಡ್ ಬಟರ್" ಅಂತ ಕ್ಲ್ಯಾರಿಫಿಕೇಶನ್ ಬಂತು ಶ್ಯಾಮು ಕಡೆಯಿಂದ.

""ಒಬಾ..ಟು! ದಟ್ಸ್ ಇಂಟರೆಸ್ಟಿಂಗ್!" ತನ್ನ ಮುಂದಿದ್ದ ಒಬ್ಬಟ್ಟನ್ನು ಎರಡೂ ಕೈಗಳಿಂದ ಚೂರು ಚೂರಾಗಿಸಿ, ತುಪ್ಪದಲ್ಲದ್ದಿ ಬಾಯಿಗಿಟ್ಟ ಡ್ಯಾನಿ ಅದರ ರುಚಿಗೆ ಮಾರು ಹೋಗಿ ಉದ್ಗರಿಸಿದ, "ವಾವ್! ಇಟ್ಸ್ ಹೆವೆನ್ಲಿ!!" ಒಂದೊಂದೇ ಚೂರು ಒಬ್ಬಟ್ಟನ್ನು ತಿನ್ನುವಾಗಲೂ ಕ್ರಮವಾಗಿ ಶ್ಯಾಮು, ಸುಬ್ಬಣ್ಣ, ಸುನಂದಮ್ಮರ ಮುಖ ನೋಡಿ ತಲೆದೂಗ್ತಾ, "ವಂಡರ್ಫುಲ್! ಲವ್ ಇಟ್!"" ಅಂತಲ್ಲಾ ಉದ್ಗರಿಸಿಯೇ ಉದ್ಗರಿಸಿದ.

ನೀರು ಕುಡಿದು ಕೈತೊಳೆದ ಮೇಲೆ, ಶ್ಯಾಮುವಿನ ಜೊತೆಗೆ ಏನೇನೋ ಠಸ್ಸುಪುಸ್ಸು ಇಂಗ್ಲೀಷು ಪುಂಖಾನುಪುಂಖವಾಗಿ ಹರಿಬಿಟ್ಟ. ಸುಬ್ಬಣ್ಣ ದಂಪತಿ ಈ ಬಿಳಿದೊಗಲಿನ ಅತಿಥಿಯನ್ನು, ಅವನ ಭಾವಭಂಗಿಯನ್ನು ಬೆರಗಾಗಿ ನೋಡಿಯೇ ನೋಡಿದರು. ಅವನ ಮಾತನ್ನೆಲ್ಲ ಕನ್ನಡೀಕರಿಸಿ, ಶ್ಯಾಮು ಹೇಳಿದ, "ಇದಕ್ಕೆ ನಿನ್ನ ಒಬ್ಬಟ್ಟಿನ ರುಚಿ ಹತ್ತಿದೆ ನಂದಮ್ಮಾ, ಇನ್ನೆರಡು ವಾರದಲ್ಲಿ ಮತ್ತೆ ನಾವು ಅಮೆರಿಕಕ್ಕೆ ಹೊರಡಬೇಕು. ಹೊರಡುವ ಮುಂಚೆ ಇನ್ನೊಂದು ಹತ್ತು ಒಬ್ಬಟ್ಟು ಬೇಕಂತೆ! ಒಂದಕ್ಕೆ ಒಂದು ಡಾಲರ್ ಕೊಡ್ತಾನಂತೆ! ಅಂದ್ರೆ ಹತ್ತು ಡಾಲರ್ ಆಯ್ತು. ಸುಮಾರು ಎಂಟುನೂರು ರೂ.! ಸುನಂದಮ್ಮ ತನ್ನ ಕಿವಿಯನ್ನು ತಾನೇ ನಂಬಲಾರದೆ, ಮೂಗಿನ ಮೇಲೆ ಬೆರಳಿಟ್ಟುಕೊಂಡಳು. ಆಶ್ಚರ್ಯ, ಗಾಬರಿಯಿಂದ ದಂಪತಿಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು!



ಶ್ಯಾಮು ಮಾತು ಮುಂದುವರಿಸಿದ. "ನಿನ್ನ ಕೈಯಿಂದು ಎಕ್ಸಪೋರ್ಟ್ ಕ್ವಾಲಿಟಿ ಒಬ್ಬಟ್ಟು ನಂದಮ್ಮ! ಅಮೆರಿಕದಲ್ಲಿ ಇವನ ಮಂದಿಗೂ ನಿನ್ನ ಒಬ್ಬಟ್ಟಿನ ರುಚಿ ಹತ್ತಿಸ್ತಾನೆ

ನೋಡ್ತಿರು. ನಾನೂ ನನ್ನ ಸ್ನೇಹಿತರ ಪೈಕಿ ಹೇಳ್ತೀನಿ. ಇನ್ನು ಮೇಲೆ ನೀನು ಆಗಾಗ ಅಮೆರಿಕಕ್ಕೆ ಒಬ್ಬಟ್ಟಿನ ಪಾರ್ಸಲ್ಲು ಕಳಿಸ್ತಿರಬೇಕು! ಹಾಗೇ ನಿಮ್ಮದೊಂದು ವೆಬ್ ಸೈಟೂ ಮಾಡೋಣಂತೆ. ಆನ್ ಲೈನ್ ನಲ್ಲಿ ತುಂಬಾ ಜನರನ್ನ ಬೇಗ ತಲುಪಬಹುದು. ಅದೆಲ್ಲ ನಿನ್ನ ಕಾಲೇಜು ಕುವರಿಯರಿಗೆ ನಾನು ಹೇಳಿಕೊಡ್ತೀನಿ."

"ಹಬ್ಬ ಹರಿದಿನಗಳಲ್ಲಿ ಇವಳು ಮಾಡಿಹಾಕಿದ ಒಬ್ಬಟ್ಟು ತಿಂದು ತೇಗ್ತಿದ್ವಿ ಅಷ್ಟೆ. ನಮ್ಮನೆ ಒಬ್ಬಟ್ನಲ್ಲಿ ಇಷ್ಟೆಲ್ಲ ವಿಷಯ ಇದೆ ಅಂತ ಗೊತ್ತೇ ಇರಲಿಲ್ಲ ನೋಡು." ಸುಬ್ಬಣ್ಣ ಹಲ್ಕಿರಿದ.

"ನೋಡು ಸುಬ್ಬಣ್ಣ, ಈಗೆಲ್ಲಾ ನೂರಕ್ಕೆ ಐವತ್ತು ಮನೆಗಳಲ್ಲಿ ಚಪಾತಿ ಮಾಡೋದನ್ನೇ ಬಿಟ್ಟು ಕೊಂಡ್ಕೋತಾರೆ ! ಇನ್ನು ಒಬ್ಬಟ್ಟು ತಟ್ಕೋ ರೇಜಿಗೆ ಯಾರಿಗೆ ಬೇಕಿದೆ? ಶುಚಿ-ರುಚಿಯಾಗಿ ಸಿಕ್ರೆ, ಜನ ಮುಗಿಬಿದ್ದು ಕೊಂಡ್ಕೋತಾರೆ. ಬೆಂಗಳೂರಲ್ಲಂತೂ ನಿಮಗೆ ಒಳ್ಳೇ ಮಾರ್ಕೆಟ್ ಇದೆ" ಸುನಂದಮ್ಮ, "ನಾವು ನಾಲ್ಕೂ ಜನ ಕೈಜೋಡಿಸ್ತೀವಿ ತಗೋ ಶ್ಯಾಮು. ತಿಂಗಳಿಗೆ ಒಂದಷ್ಟು ಮೇಲ್ಸಂಪಾದನೆ ಆದ್ರೆ ಯಾರಿಗುಂಟು ಯಾರಿಗಿಲ್ಲ!""

"ವೆರಿಗುಡ್! ಅಂತೂ ನಿಮ್ಮ ಒಬ್ಬಟ್ಟಿನ ಬೆಲೆ ನಿಮ್ಗೇ ಗೊತ್ತಿಲ್ಲದೇ ಹೋಗ್ತಿತ್ತು. ಹನುಮಂತನಿಗೆ ಅವನ ಬಲ ಅವನಿಗೇ ಗೊತ್ತಿಲ್ಲದೆ ಹಾರಲಾರದ ಹನುಮಂತನಾಗಿದ್ನಂತೆ! ಕೊನೆಗೆ ಜಾಂಬುವಂತನೇ ಬರಬೇಕಾಯ್ತು, ಅವನ ಬಲವನ್ನ ಮನವರಿಕೆ ಮಾಡಿಕೊಡೋದಕ್ಕೆ! ಹಾಗಾಯ್ತು ನಿಮ್ಮ ಕತೆ. ನಿಮ್ಮ ಒಬ್ಬಟ್ಟಿನ ಬಲವನ್ನು ಮನವರಿಕೆಮಾಡಿಕೊಟ್ಟ ಬಿಳಿ ಜಾಂಬುವಂತ ಇಲ್ಲಿದಾನೆ ನೋಡಿ ನಮ್ಮ ಡ್ಯಾನಿ!"

ಶ್ಯಾಮುವಿನ ಮಾತಿಗೆ ಎಲ್ಲರ ಜೊತೆ ಡ್ಯಾನಿಯೂ ನಕ್ಕ!, ಎಲ್ಲ ಮಾತೂ ಅರ್ಥವಾದವನ ಹಾಗೆ! ■






# ಜೀವನಾನುಭವ ದೊಡ್ಡದು !

*ಹಿರಿಯೂರು ರಾಘವೇಂದ್ರ

ಮದುವೆಯಾದ ಹೊಸತು. ಅಲ್ಲಿಯವರೆಗೂ ನಮ್ಮಣ್ಣನ ಮನೆಯೇ ನನ್ನ ತವರು ಮನೆಯಾಗಿತ್ತು.

ಮದುವೆಯಾದ ಕೆಲವೇ ತಿಂಗಳುಗಳಲ್ಲಿ ಬೇರೆ ಮನೆ ಮಾಡುತ್ತೇನೆ ಅಂದಿದ್ದೆ, ಕೇವಲ ಮೂರು ತಿಂಗಳ ಒಳಗೆ ಮನೆ ಮಾಡಿದೆ ಕೂಡಾ. ಗ್ಯಾಸ್ ತೆಗೆದುಕೊಂಡಿದ್ದರೂ, ಕುಕ್ಕರ್ ಕೂಗಿಸುವ ಭಾಗ್ಯ ಒದಗಿ ಬಂದಿರಲಿಲ್ಲ.

"ನನ್ನ ಹತ್ರ ಒಂದು ಕುಕ್ಕರ್ ಇದೆ, ಅದಕ್ಕೆ ಕೆಲಸವಿಲ್ಲದೆ ಮೂಲೇಲಿ ಕುಕ್ಕರು ಬಡಿದಿದೆ. ನಾಳೆ ಸಾಯಂಕಾಲ ತಂದು ಕೊಡ್ತೇನೆ" ಅಂದಿದ್ದ ಸೂರಿ.

ಕೆಲಸಕ್ಕೆ ಹೊರಟಿದ್ದವನು, "ಲೇ, ಇವಳೇ ಸಂಜೆ ಸೂರಿ ಬಂದು ಕುಕ್ಕರ್ ಕೊಡ್ತಾನಂತೆ ಈಸ್ಕೊಂಡಿರು" ಅಂದೆ.

"ನಾನು ಅಮ್ಮನ ಮನೇಗ್ ಹೋಗ್ತಿದೀನಿ. ಬೇಗ ಬರ್ತೀನಿ" ಅನ್ನೋ ಸಿದ್ದುತ್ತರ ಬೌನ್ಸ್ ಆಯಿತು.

"ಅಷ್ಟರೊಳಗೆ ಅವನು ಬಂದ್ರೆ ?"

"ಕೀ ಪಕ್ಕದ ಮನೇಲಿ ಕೊಟ್ಟು ಹೋಗಿರ್ತೀನಿ. ನೀವೇನು ಟೆನ್ಷನ್ ಮಾಡ್ಕೋಬೇಡಿ"

ಅವಳ ಧ್ವನಿಯಲ್ಲಿ 'ಮುಚ್ಕೊಂಡ್ ಹೋಗಯ್ಯಾ' ಅನ್ನೋ ಮುಚ್ಚಟೆ ಧಾರಾಳವಾಗಿ ಕಂಡು ಬಂತು. ತೆಪ್ಪಗೆ ಹೊರಟೆ, ಬೆನ್ನ ಹಿಂದೆ ಬಾಗಿಲು ರಪ್ ಎಂದು ರಫ್ ಆಗಿ ಮುಚ್ಚಿದ್ದು ಧಾರಾಳವಾಗಿಯೇ ಪ್ರತಿಧ್ವನಿಸಿತು.

ಸಂಜೆ ಬಸ್ ಹಿಡಿದು ಮನೆಗೆ ಬಂದಾಗ, ಕತ್ತಲಾವರಿಸಿ ಗಂಟೆಯಾಗಿತ್ತು. ಬಾಗಿಲು ತೆಗೆದಿದ್ದ ಮನೆಯೊಳಗೆ ಕಾಲಿಟ್ಟೆ, ಕಗ್ಗತ್ತಲು.

"ಯಾಕೇ ದೀಪ ಹಾಕ್ದೆ ಕತ್ತಲಲ್ಲಿ ಕೂತಿದೀಯ, ಪವರ್ ಇಲ್ವಾ?"

ಕೂಗಿದಂತೆ ಕೇಳಿದಾಗ ಫೀಮೇಲ್ ವಾಯ್ಸ್‌ಗೆ ಬದಲು, ವಯಸ್ಸಿಗೆ ಬಂದ ಮೇಲ್ ವಾಯ್ಸ್ ಉತ್ತರ ಕೊಟ್ಟು,

"ಪವರ್ರೂ ಇಲ್ಲ ನಿನ್ನ ಪವರ್ರೂ ಮನೇಲಿಲ್ಲ!"

ಅರೆಕ್ಷಣ ಗಾಬರಿ ಬಿದ್ದೋದೆ. ಸ್ವಿಚ್ ಆನ್ ಮಾಡಿದರೆ ಬೇಕೂಫ ಕರೀ ಸೂರಿ ಕಗ್ಗತ್ತಲಿನಿಂದ ಬೆಳಕಿನೆಡೆಗೆ ಬಂದ!

"ಅವಳೆಲ್ಲೋ?"

"ಯಾವ ನನ್ಮಗನಿಗೆ ಗೊತ್ತು? ನಿನಗೇ ಗೊತ್ತಿಲ್ಲ, ಅಂದ್ಮೇಲೆ ಇನ್ನು ನನಗೆ ಗೊತ್ತಿರುತ್ತಾ?"



"ಮತ್ತೆ ನಿನಗೆ ಕೀ ಯಾರು ಕೊಟ್ರು, ಒಳಗ್ ಬಂದು ಕೂತಿದೀಯ?"

"ಬಂದು ಬಾಗಿಲು ತಟ್ಟಿದೆ, ಯಾರೂ ಬಾಗಿಲು ತೆಗೀಲಿಲ್ಲ. ಏನ್ ಮಾಡೋದು ಅಂತ ಅಂದ್ಕೊಳ್ತಿದ್ದಾಗ ಬಾಗಿಲಿಗಂಟಿಸಿದ್ದ ಚೀಟಿ ಕಾಣಿಸ್ತು.

"ಮನೆ ಬೀಗದ ಕೈ ಫುಟ್ ರೆಸ್ಟ್ ಕೆಳಗಿಟ್ಟಿದೀನಿ, ನಾನು ಬರೋದು ಲೇಟಾಗುತ್ತೆ. ಅಡುಗೆ ಮಾಡಿ, ಬಂದು ಊಟ ಮಾಡ್ತೀನಿ" ಅಂತಿತ್ತು. ಬಾಗಿಲು ತೆಕ್ಕೊಂಡು ಒಳಗೆ ಬಂದು ಕೂತೆ. ಕರೆಂಟೇ ಇಲ್ಲ. ಸುಮ್ಮನೆ ದೆವ್ವದ ಥರಾ ಕೂತಿದ್ದೆ. ನೀನ್ ಬಂದು ಸ್ವಿಚ್ ಹಾಕ್ದೆ ಕಾಕತಾಳೀಯವಾಗಿ ಕರೆಂಟ್ ಬಂತು. ನಿನ್ನ ಕೈಗುಣ ಚೆನ್ನಾಗಿದೆ ಗುರೂ"

"ನನ್ನ ಕೈಗುಣಕ್ ಮುಂಡಾ ಮೋಚ್ತು. ನಾವು ಹೊರಗಡೆ ಹೋದ್ರೆ ಮೈನ್ ಸ್ವಿಚ್ ಆಫ್ ಮಾಡಿರ್ತೀವಿ. ಮೈನ್ ಸ್ವಿಚ್ ಆನ್ ಮಾಡ್ದೆ, ಲೈಟ್ ಹತ್ಕೊಂತು"

"ಅಲ್ಲಯ್ಯಾ, ಬೀಗದ ಕೈ ಇಂಥ ಕಡೆ ಇಟ್ಟಿದೀನಿ ಅಂಥಾ ಬರೆದಿಟ್ಟಿದೀರಲ್ಲ, ಬೇರೆ ಯಾರಾದ್ರೂ ನೋಡಿದ್ರೆ ಇರೋದೆಲ್ಲ ದೋಚಿಕೊಂಡೋಗೋದಿಲ್ವಾ ?"

ಸೂರಿ ಮಾತಿಗೆ ಬಾಗಿಲ ಬಳಿಯಿಂದ ಉತ್ತರ ಬಂತು,

"ಏನ್ ಮಾತೂಂತ ಆಡ್ತೀರಿ ಸೂರಿ ನೀವು. ಮದುವೆಯಾಗಿ ಮೂರ್ ತಿಂಗಳಾದ್ರೂ ಕುಕ್ಕರ್ ಇರ್ಲಿ ಹಾಳಾದ್ ಒಂದ್ ಕಾಫೀ ಫಿಲ್ಟರ್ ಕೂಡಾ ತಗೊಳ್ಳೋದಕ್ಕಾಗಿಲ್ಲ, ಅಂಥಾದ್ದರಲ್ಲಿ ಯಾವ್ ನನ್ಮಗ ಬಂದು ಏನ್ ತಗೊಂಡ್ ಹೋಗ್ತಾನೆ ಈ ಮನೇಲಿ ?

ಬೇರೆಯವರ ಮನೇಲಿ ಏನಾದ್ರೂ ಕದ್ಕೊಂಡ್ ಬಂದಿದ್ರೆ ನಮ್ಮನೆ ಪರಿಸ್ಥಿತಿ ನೋಡಿ ಇಲ್ಲೇ ಇಟ್ಟು ಹೋಗಿರ್ತಿದ್ದ ಅಷ್ಟೇ !

ಈಗ ನೀವೇ ಎಗ್ಸಾಂಪಲ್ ಇಲ್ವಾ, ಕುಕ್ಕರ್ ಕೊಟ್ ಹೋಗೋದಕ್ಕೆ ಬಂದಿದ್ದೀರಿ?"

ಅವಳ ಮಾತಿಗೆ ಸೂರಿ ದಂಗ್ ಬಿದ್ದೋದ್ನೋ ಬಿಟ್ನೋ ಗೊತ್ತಿಲ್ಲ, ನಾನಂತೂ ಕಂಗಾಲಾಗಿ ಹೋಗಿದ್ದೆ !

■

---




ಡಾಕ್ಟರ್...ತುಂಬಾ ಮಾತಾಡೋರಿಗೆ
'ಮಾತು ಸ್ಟಾಪ್' ಮಾಡೋ ತರದ
ಕೋವಿಡ್ ಲಸಿಕೆ ಇದ್ಯಾ...!?



# ಹೋಳಿ ಹಬ್ಬ

**ನಾಗರತ್ನ ರಾಮಮೂರ್ತಿ**

ರತ್ನಾ ನಾಳೆ ಹೋಳಿ ಹಬ್ಬ ಅಲ್ವಾ ಅಂದ್ಲು.  ಹೌದು ಅಂದೆ.

ಹಾಗೇ ಮನಸ್ಸು, ಹಿಂದಿಂದಕ್ಕೆ ಹೋಯ್ತು. ಹಿಂದಿನ ಸಡಗರ ಸಂಭ್ರಮ ಈಗೆಲ್ಲಿದೆ? ಈಗ ಏನಿದ್ರೂ, ಬಣ್ಣ ಎರೆಚಾಟಕ್ಕೆ ಸೀಮಿತವಾಗ್ತಿದೆ ಅನ್ನಿಸ್ತು.

ನಮ್ಮ ಭದ್ರಾವತಿ ಸ್ನೇಹಿತರ ಪಟಾಲಂ ನಮ್ಮ ಚಿದಂಬರನ ಮನೆಯಲ್ಲಿ ಸೇರಿದ್ದಾಗಿನ ಒಂದು ಹರಟೆ (50 ವರ್ಷವೇ ಕಳೆದು ಹೋಗಿದೆ) ಜ್ಞಾಪಕಕ್ಕೆ ಬರ್ತಿದೆ. ಇದರಲ್ಲಿ, ನಮ್ಮಮ್ಮ, ಚಿದಂಬರನ ತಾಯಿಯವರೂ ಭಾಗಿಗಳು.

ಹೀಗೇ ಅವತ್ತು, ಚಿದಂಬರನ ಮನೆಯಲ್ಲಿ ಮಾತಾಡ್ತಾ ಕೂತಿದ್ವಿ. ಅವರ ಮನೆ ಹೊರಗಡೆ ಹುಡುಗರ ಗಲಾಟೆ, ಕುಣಿತ ಕೇಳಿಸ್ತಿತ್ತು.

ಏನೇ ಇಷ್ಟೊಂದು ಗಲಾಟೆ. ರಾತ್ರಿಪಾಳಿ ಕೆಲ್ಸ ಮುಗುಸ್ಕೊಂಡ್ಬಂದು ಮಲ್ಕೊಂಡಿರೋವ್ರು ಇರ್ತಾರೆ. ಏನ್ ಹುಡುಗ್ರೋ? ಅಂದ್ರು ನಮ್ಮಮ್ಮ.

ಸುಮ್ನಿರು, ಸಾಯಂಕಾಲ ಸೂರ್ಯ ಮುಳ್ಗೋ ಹೊತ್ನಾಗೆ ಯಾರೇ ಮಲ್ಕೊಂಡಿರ್ತಾರೆ.  ನಾಳೆ  ಹೋಳಿಹಬ್ಬಾ  ಅಲ್ವೇನೆ ಅದಕ್ಕೆ ಸೌದೆ, ಬಟ್ಟೆ, ದುಡ್ಡು, ಕಾಸು ಅಂತ ಸಂಗ್ರಹಿಸೋಕೆ ಬಂದಿರ್ತಾರೆ ಅಂದ್ರು.

ಅಯ್ಯೋ, ಹೌದಲ್ವಾ ಮರ್ತೇ ಹೋಗಿತ್ತು. ಏನೇ ಹೇಳು ಹಿಂದಿನ ಆ ಸಡಗರ, ಸಂಭ್ರಮ ಈಗಿಲ್ಲ ಕಣೆ.  ಹಿಂದೆಲ್ಲಾ, ಗಂಡು ಹುಡುಗ್ರುಗಳೆಲ್ಲಾ ಸೇರಿ, ಎಲ್ಲರ ಮನೆಮುಂದು ಡಬ್ಬ ಬಡಿತಾ 2–3 ದಿನ ಸಂಗ್ರಹಣೆ ಮಾಡೋರು. ನಾವ್ಗಳೂ ಹಳೇ ಸೌದೆ (ಗೆದ್ದಲು ಹಿಡ್ದಿದ್ದು ), ಚೆಕ್ಕೆ ಪಕ್ಕೆ, ಬೆರಣಿ, ಹಳೇ ಬಟ್ಟೆ ಎಲ್ಲಾ ಕೊಟ್ಟು ಸಾಗ ಹಾಕ್ತಿದ್ವು. ಅವ್ರು ಗಳೂ ಒಂದು ಕೈಗಾಡಿನಲ್ಲಿ ಎಲ್ಲಾ ಹಾಕ್ಕೊಂಡ್ ಹೋಗ್ತಿದ್ರು.

ಸೀಮೇ ಎಣ್ಣೆ ಅಂಗಡಿ ಮುಂದ್ಹೋಗಿ ಸ್ವಲ್ಪ ಬಟ್ಟೇನ ಸೀಮೇ ಎಣ್ಣೆಲಿ ಅದ್ಕೊಡ್ರಿ ಅಂತ ವರಾತ ಹಚ್ತಿದ್ರು.

ಏನಾರ ಸ್ವಲ್ಪ ಕಾಸು ಕೊಡ್ರಿ. ಕಳ್ಳೆಪುರಿ, ಕಡ್ಲೆ ಬೆಲ್ಲಕ್ಕೆ ಅಂತ ವರಾತ ತೆಗೀತಿದ್ರು. ಮೂರು ಕಾಸೋ ಆರು ಕಾಸೋ ಕೊಟ್ರೆ ಏನ್ ಖುಷಿ ಪಡೋವ್ರು. ನಮ್ಗೂ ಹಬ್ಬದ ಸಾಯಂಕಾಲ ಬನ್ನಿ, ಕಾಮನ ಸುಡೋಕೆ ಅಂತ ಬೇರೆ ಹೇಳ್ತಿದ್ರು.

ನಮ್ಮನೇ ಹತ್ರದ ಸುಬ್ರಾಯ್ರು, ಅದೇ ಮೂಗ್ನೊಟ್ಟ ಸುಬ್ರಾಯ್ರು ಅಂತಿದ್ವಲ್ಲ ಅವ್ರು – ಮನೆ ಪಕ್ಕದ್ಲೇ ಸೌದೆ ಡಿಪೋ ಇಟ್ಕೊಂಡಿದ್ರು ಗೊತ್ತಲ್ವಾ, ಅವ್ರು ಮಾತ್ರ ಸೌದೆ ಕೊಡ್ತಿರ್ಲಿಲ್ಲ.  ಒಂದ್ಮಣ ಸೌದೆ ನಾಲ್ಕಾಣೆ ಗೊತ್ತಾ ಅಂತಿದ್ರು. ಹುಡುಗ್ರು ಬಿಡ್ತಿರ್ಲಿಲ್ಲ. ಡಬ್ಬ ಬಡಿತಾ ಗಲಾಟೆ ಮಾಡ್ಕೊಂಡ್ ಕುಣೀತಿದ್ರು. ಮನೆಮಂದಿ ಎಲ್ಲಾ ಇದನ್ನೋಡ್ತಾ ನಿಂತ್ಕೊಂಡಿರ್ತಿದ್ರು. ಕೆಲವು ಹುಡುಗ್ರು ಹಿಂದ್ಗಡೆ ಹಾಸಿ ಹೋಗಿ, ಅವ್ರು ಒಟ್ಟಿರ್ತಿದ್ದ ಸೌದೇನ ಅವ್ರಿಗೆ ಗೊತ್ತಾಗ್ದ ಹಾಗೆ ಹಿಂದ್ಗಡೆಯಿಂದ ಸ್ವಲ್ಪ ಸಾಗಿಸ್ಬಿಡ್ತಿದ್ರು. ಹಾಗೇ ಮೂರು ಕಾಸೋ ಆರು ಕಾಸೋ ವಸೂಲಿನೂ ಮಾಡ್ತಿದ್ರು.



ಹಾಗೇ, ಅವ್ರ ಮಗನ ಜುಟ್ಟಿನ ಕಥೆ ಗೊತ್ತಾ ಅಂದ್ರು ನಮ್ಮಮ್ಮ.  ಹೇಳಿ ಹೇಳೀ

ಅಂದ್ರು ಎಲ್ರೂ.

ಅವ್ರ ಮಗಂಗೆ ಐದಾರು ವರ್ಷ ಆದ್ರೂ ಜುಟ್ಟಿಡ್ಸಿರಲಿಲ್ಲ. ಮನೆದೇವ್ರಿಗೇ ಹೋಗ್ಬೇಕು ಅಂತ ಹೇಳ್ಕೊಂಡು, ಏನ್ಕಾರಣಾನೋ, ಹೋಗಕ್ಕಾಗ್ದೇ ಹಾಗೇ ಬಿಟ್ಟಿದ್ರು. ಉದ್ದ ಕೂದ್ಲು. ಉದ್ದ ಜಡೆ ಹೆಣೆದು ಸ್ಕೂಲ್ಗೆ ಕಳಿಸ್ತಿದ್ರು. ಸ್ಕೂಲಲ್ಲೋ, ಹುಡುಗ್ರೆಲ್ಲಾ ಜಡೇ ಎಳ್ದು, ಲಂಗ ಹಾಕ್ಕೊಂಡ್ಬಾರೋ ಹುಡಿಗೀಸ್ರ್ಜಾಲ್ನಲ್ಲಿ ಕೂರುಸ್ತಾರೆ ಅಂತೆಲ್ಲಾ ಗೇಲಿ ಮಾಡ್ತಿದ್ರಂತೆ. ಆ ಹುಡ್ಗನಿಗೋ ನಾಚ್ಕೆ, ಅಳುನೂ ಬರ್ತಿತ್ತಂತೆ. ಮುಂದಿನ್ಕಥೆ ಕೇಳಿ–

ಒಂದು ಭಾನುವಾರ, ಯಾರೋ ಒಂದ್ಮಣ ಸೌದೆ ಬೇಕು ಅಂತ ಬಂದ್ರಂತೆ. ಸುಬ್ರಾಯ್ರು ಮಡೀಲಿದ್ರಂತೆ. ಮಗನ ಕೈಲಿ ಸೌದೆ ಹಾಕ್ಸಿ, ನಾಕಾಣೆ ಇಸ್ಕೊ ಅಂತಾ ಹೇಳಿ ಒಳಗ್ಹೋದ್ರಂತೆ. ಮಗ ಇಸ್ಕೊಂಡ. ಮಗರಾಯ ಆಮೇಲೆ ಏನ್ಮಾಡಿದಾನೆ ಗೊತ್ತಾ–

ಸೀದ ದುಡ್ತಗೊಂಡ್ ಕ್ಷೌರದ ಅಂಗಡಿಗೆ, ಹೋಗಿ, ನಮ್ತಂದೆ ಹೇಳಿದಾರೆ, ಕ್ರಾಪ್ ಕಟ್ ಮಾಡ್ಬೇಕಂತೆ ಅಂತ ನಾಲ್ಕಾಣೆ ಕೊಟ್ಟಿದಾನೆ. ಅವ್ರುನೂ ಕ್ಲೀನಾಗಿ ಕಟ್ಟಿಂಗ್ ಮಾಡಿ ಕ್ರಾಪ್ ಬಾಚಿ ಕಳ್ಸಿದಾರೆ. ಇವ್ನೂನು ಮನೇಗೆ ಖುಶಿಯಾಗಿ ಓಡ್ಬಂದ. ಅಷ್ಟೊತ್ಗೆ ಸುಬ್ರಾಯ್ರ ಪೂಜೆ ಮುಗ್ದು ಮಂಗಳಾರತಿ ಸಮಯ. ಅವ್ರಿಗೆ, ಮೊದ್ಲೇ ಸಿಟ್ಟು ಜಾಸ್ತಿ. ಉಗ್ರಾವತಾರ ತಾಳ್ಬಿಟ್ರಂತೆ. ಎದ್ಬಂದು, ಮಗನ್ಗೆ ಹೊಡ್ದು, ಬೈದು ಅವನಿಗೇ ಮಂಗಳಾರ್ತಿ ಮಾಡಿದ್ರಂತೆ. ಅವ್ರ ಹೆಂಡ್ತಿ ತಾನೇ ಏನ್ಮಾಡ್ತಾರೆ, ನೀರು ಹಾಕಿ, ಸ್ನಾನ ಮಾಡ್ಸಿ. ಮಗನ್ನ ಒಳಗ್ಕರ್ಕೊಂಡರಂತೆ. ಸುಬ್ರಾಯ್ರು, ಮತ್ತೆ ಸ್ನಾನ ಮಾಡಿ, ಅವತ್ತು ದೇವ್ರಿಗೆ ಮಂಗಳಾರತಿನೂ ಮಾಡ್ದೆ, ಊಟಾನೂ ಮಾಡ್ದೆ, ದಿನ್ವೆಲ್ಲಾ ಸಿಟ್ಮಾಡ್ಕೊಂಡು ಕೂತಿದ್ರಂತೆ. ಅವ್ರ ಹೆಂಡ್ತಿ ಪಂಕಜಮ್ಮ ಹೇಳ್ಕೊಂಡು ಕಣ್ಣೀರಿಟ್ರು ಅವತ್ತು.

ಆಮೇಲ್ಯೇನ್ಮಾಡಿದ್ರೆ ಪದ್ಮ ಅಂತ ಚಿದಂಬರನ ತಾಯಿ ಕೇಳಿದ್ರು.

ಆಮೇಲ್ಯೇನ್ಮಾಡ್ತಾರೆ, ನಾಕ್ದಿವ್ಸ ಸ್ಕೂಲ್ಗೆ ಕಳಿಸ್ದೇ, ಒಂದ್ನಾಕ್ದಿವ್ಸ ಬಿಟ್ಟು, ಮನೇ ದೇವ್ರಿಗೆ ತಪ್ಕಾಣಿಕೆ ತೆಗ್ದಿಟ್ಟು, ಯಾವ್ದೋ ದೇವಸ್ಥಾನಕ್ಕೆ ಕರ್ಕೊಂಡ್ಹೋಗಿ, ಜುಟ್ಬಿಡ್ಸಿದ ಶಾಸ್ತ್ರ ಮಾಡ್ಕೊಂಡ್ಬಂದ್ರಂತೆ ಕಣೇ ಅಂದ್ರು.

ಎಲ್ರೂ ನಕ್ವಿ. ನಮ್ಮ ಚಿದಂಬರ, ಸರಿ, ಹೋಳಿಹಬ್ಬದ ಕಥೇನೇ ಹೇಳ್ಲಿಲ್ವಲಾ, ಅಂದ.

ಹೇಳ್ತಾಳೆ ತಡ್ಯೋ, ಕಾಫಿ ಮಾಡ್ಕೊಂಡ್ಬರ್ತೀನಿ ಅಂತ ಚಿದಂಬರನ ಅಮ್ಮ ಎದ್ಹೋದ್ರು.

■

---

**ಒಬ್ಬಾತ ಒನ್ ವೇ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುತ್ತಿದುದನ್ನು ಪೋಲೀಸರು ನೋಡಿದರೂ ಅವನನ್ನು ಹಿಡಿಯಲಿಲ್ಲ. ಏಕೆಂದರೆ ಅವನು ನಡೆದು ಬರುತ್ತಿದ್ದ !**



# ಜೀವನ – ಪಿ. ಜಿ. ವೋಡ್‌ಹೌಸ್ ಕಂಡಂತೆ

ಸಂಗ್ರಹ: * **ಸುಕೇಶವ**

- **ನಮಗೆ ಜೀವನದಲ್ಲಿ ವಯಸ್ಸಾಗುತ್ತಾ ಬಂದು ಮನುಷ್ಯನ ಸಂತೋಷದ ಬಗೆಗೆ ಅರಿವಾದಾಗ ಅರ್ಥವಾಗುವುದು ಏನು ಎಂದರೆ ನಿಜವಾದ ಸಂತೋಷ ಯಾವುದೆಂದರೆ ಇತರರಿಗೆ ಸಂತೋಷವನ್ನು ಉಂಟುಮಾಡುವುದು ಎಂದು.**

- ನಾನು ಅವಳನ್ನು ನೋಡಿದಾಗಲೆಲ್ಲಾ ಅವಳು ಅರ್ಧಬೆಂದ ಮಡಿಕೆ ಎಂದುಕೊಂಡಿದ್ದೆ. ಆದರೆ ಈಗ ನನಗೆ ಅರ್ಥವಾಗುತ್ತಿದೆ ಅವಳು ಒಂದು ಚೂರೂ ಬೆಂದೇ ಇಲ್ಲ ಎಂದು.

- **ಜೀವನದ ಅತ್ಯಂತ ನ್ಯೂನತೆ ಇರುವ ಕ್ಷಣಗಳು ಎಂದರೆ ಅದು ಸತ್ಯ ಹೇಳಲೇಬೇಕಾದಂಥ ಪ್ರಸಂಗಗಳನ್ನು ಒಳಗೊಂಡಿರುವುದು**

- ಒಳ್ಳೆಯ ಹೆಣ್ಣಿನ, ತಾಯಿ ಅಥವಾ ಹೆಂಡತಿ, ಹಾರೈಕೆ ಇಲ್ಲದೇ ಯಾವ ಪುರುಷನೂ ಯಶಸ್ವಿಯಾಗುವುದಿಲ್ಲ. ಇಬ್ಬರ ಹಾರೈಕೆಯೂ ಇದ್ದರೆ ಅವನ ಯಶಸ್ಸು ಕಟ್ಟಿಟ್ಟ ಬುತ್ತಿ

- **ಲೇಖಕನಿಗೆ ಯಶಸ್ಸು ಸಿಗುವುದು ಬಹಳ ನಿಧಾನವಾಗಿ. ಎಷ್ಟು ನಿಧಾನವಾಗಿ ಎಂದರೆ ಒಂದು ದಿನ ಅವನು ಹತ್ತಿ ನಿಂತಿರುವ ಎತ್ತರ ನೋಡಿದರೆ ಅವನಿಗೇ ಅಚ್ಚರಿ ಆಗುವಷ್ಟು.**

- ದೇವರನ್ನಲ್ಲದೇ ಯಾರನ್ನೂ ಸಂಪೂರ್ಣವಾಗಿ ನಂಬಬೇಡ, ಜನರನ್ನು ಪ್ರೀತಿಸು, ಆದರಿಸು, ಓಲೈಸು, ಆದರೆ ಅಂತಿಮವಾಗಿ ನಿನ್ನ ನಂಬಿಕೆ ಇರಬೇಕಾದದ್ದು ದೇವರಲ್ಲಿ.

- **ಪುರುಷರು ಯಾವಾಗಲೂ ತಾವು ಹೆಣ್ಣಿನ ಪ್ರಥಮ ಪ್ರೇಮಿ ಆಗಬೇಕೆಂದು ಬಯಸುತ್ತಾರೆ. ಆದರೆ ಹೆಣ್ಣು ಗಂಡು ತನ್ನ ಅಂತಿಮ ಪ್ರೇಮಿಯಾಗಬೇಕೆಂದು ಬಯಸುತ್ತಾಳೆ.**

- ನಾವು ಒಬ್ಬರೇ ಇರುವಾಗ ಹೆಚ್ಚು ನಗುವುದು ಸಾಧ್ಯವಿಲ್ಲ

- **ಜೀವನದ ಅತ್ಯುತ್ತಮ ಮತ್ತು ಮಹತ್ವವಾದ ಪ್ರಶ್ನೆ ಏನೆಂದರೆ ನೀನು ಇತರರಿಗೆ, ಸಮಾಜಕ್ಕೆ ಏನು ಮಾಡುತ್ತಿದ್ದೀಯ ಎನ್ನುವುದು**

- ಸುಮ್ಮನೇ ಸಲಹೆ ಕೊಡಬೇಡಿ ಎಂದು ಜನರಿಗೆ ನಾನು ಸಲಹೆ ಕೊಡುತ್ತಲೇ ಇರುತ್ತೇನೆ .

■



# 'ಮುಂಗೋಟಿ ಬಲು ಒಳ್ಳೇದಣ್ಣ!'

*ಲತಾ ಹೆಗಡೆ

ಕರೋನಮ್ಮನಿಗೆ ಜಗತ್ತನ್ನೇ ಅಲ್ಲೋಲಕಲ್ಲೋಲ ಮಾಡುವ ಅದ್ಭುತ ತಾಕತ್ತು ಇರುವುದು ಸಾಬೀತಾಗಿದೆ. ಹಾಳುಮೂಳು ತಿನ್ನುವವರ ದೇಶ ತವರೂರಂತೆ ಆದಾಗ್ಯೂ ಔಡಲಕಾಯಿಯಂತೆ ತೋರುವ ಮುಳ್ಳು ಮೈಯೆಲ್ಲಾ ಮುಳ್ಳಿರುವ ಆ ಸೂಕ್ಷ್ಮಾತಿಸೂಕ್ಷ್ಮ ಜೀವಿಯಲ್ಲಿ ಕಿಂಚಿತ್ತಿನಷ್ಟೂ ಸ್ವಾರ್ಥದ ಲವಲೇಶವಿಲ್ಲ. ಜಗತ್ತಿನ ಪ್ರತೀ ಮಾನವ ಜೀವಿಯನ್ನೂ ಸ್ವಂತ ಒಡಹುಟ್ಟಿದವರೆಂದೇ ಭಾವಿಸಿ ನಿಃಸ್ವಾರ್ಥ ಪ್ರೀತಿ ತೋರುತ್ತಾ ಮೌನವಾಗಿದ್ದುಕೊಂಡೇ ಎಲ್ಲರ ಮೈಯನ್ನಾವರಿಸಿಕೊಂಡಿದೆ. ಗುಂಡಿಗೆಯನ್ನು ತಲ್ಲಣಗೊಳಿಸಿ ಪತರುಗುಟ್ಟಿಸುವ ಕೆಲಸ ದೃಶ್ಯ ಮಾಧ್ಯಮದವರದ್ದು. ತಮ್ಮ ವಿಶಿಷ್ಟ ಶೈಲಿಯಿಂದಾಗಿ ವಿಷಯವನ್ನು ವೈಭವೀಕರಿಸುತ್ತಾ ಅತೀ ಶೀಘ್ರದಲ್ಲೇ ಎಲ್ಲರ ಮನವನ್ನಾವರಿಸಿ ಭಯದ ವಾತಾವರಣ ಹುಟ್ಟುಹಾಕುವಲ್ಲಿ ಇವರು ಸಿದ್ಧಹಸ್ತರು. ಏನೇ ಆದರೂ ಅನುಭವಿಸಿದವರಿಗಷ್ಟೇ ಗೊತ್ತು ಕರೋನಮ್ಮನ ಆಸ್ಥೆಯ ಆಳ, ಉದ್ದ, ಅಗಲ, ಎತ್ತರ ಎಲ್ಲವೂ! ಆ ಮುಳ್ಳು ಜೀವಿಯ ಉಸಿರುಗಟ್ಟಿಸುವ ಅಕ್ಕರೆಯೂ ಬೇಡ ಉಸಾಬರಿಯೂ ಬೇಡವೆಂಬ ನಿರ್ಣಯಕ್ಕೆ ಜಗತ್ತಿನಾದ್ಯಂತ ಒಮ್ಮತದ ಸಮ್ಮತಿಯಿದೆ, ಹಾಗಾಗಿ ಕೆಲವೊಂದು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಲೇಬೇಕಾದ ತುರ್ತು ಪರಿಸ್ಥಿತಿಗೆ ಬೇಕಿದ್ದೋ ಬೇಡದೆಯೋ ಬದ್ಧರಾಗಿದ್ದಾಗಿದೆ. ಆದರೆ ಕೆಲವರು ಮಾತ್ರ ಇದ್ಯಾವುದಕ್ಕೂ ಒಳಪಡದೇ ಕರೋನಾಳ (ಕರೀನಾ ಎಂದುಕೊಂಡರೇನೋ) ಪ್ರೀತಿಯನ್ನು ಎದುರು ನೋಡುತ್ತಾ ಭಂಡರೆನ್ನಿಸಿದ್ದಾರೆ. ಬಿಡಿ, ಅವರನ್ನು ಗಟ್ಟಿಪಿಂಡ ಎಂದು ಬಯ್ಯಬಹುದಷ್ಟೇ. ಆದರೆ ಪರಿಸ್ಥಿತಿಯ ಗಂಭೀರತೆಯನ್ನು ಅರಿತವರು, ನಾಜೂಕಿಗಳು ಇದನ್ನು ನಜರ್ ಅಂದಾಜ್ ಮಾಡುವಂತಿಲ್ಲ.

ಅಸ್ತವ್ಯಸ್ತಗೊಂಡ ಜೀವನಶೈಲಿಯಿಂದ ರೋಸಿ ಹೋದವರಿಗೆ ಕರೋನಮ್ಮ ಮತ್ತವಳ ಹೆತ್ತವರನ್ನು ಹಿಡಿಶಾಪ ಹಾಕುತ್ತಾ ತೆಗಳುವುದು ಬಿಟ್ಟು ಅನ್ಯ ಮಾರ್ಗವೇ ತೋರುತ್ತಿಲ್ಲ. ಕೈಲಾಗದವ ಮೈ ಪರಚಿಕೊಂಡಂತಾಗಿದೆ ಸ್ಥಿತಿ. ಮೊದಲೆಲ್ಲಾ ಸುತ್ತಲಿನ ಪರಿವೆಯಿರದೇ ಹೇಗ್ಹೇಗೋ ಮೂಗು, ಬಾಯಿ ಅರಳಿಸಿ ಖಬರುಗೆಟ್ಟು ಜೋರಾಗಿ ಸೀನುತ್ತಿದ್ದವರೂ ಇದೀಗ ಸೀನುವುದನ್ನೇ ಮರೆತಿದ್ದಾರೆ. ಖೆಮ್ಮುವುದನ್ನೂ ಕೂಡ! ಹಾಗೊಂದು ವೇಳೆ ಮೂಗು ತುರಿಸಿ ಸೀನು ತನ್ನ ಇರುವಿಕೆಯನ್ನು ನೆನಪಿಸಿದರೂ, ಗಂಟಲು ಕೆರೆದರೂ ಅಡಗಿಸಿಕೊಂಡು ಬಲು ಮೆಲ್ಲಗೆ ಸೀನುತ್ತಾರೆ, ಖೆಮ್ಮುತ್ತಾರೆ. ಎಂತಹ ದುಃಸ್ಥಿತಿ ಅಲ್ಲವೇ? ಇನ್ನು ಹೇಗೆಂದರೆ ಹಾಗೆ ನೆನಪಾದಾಗಲೆಲ್ಲಾ ಮೂಗನ್ನು ಬಗೆಯುವಂತಿಲ್ಲ. ಸಾಲದ್ದಕ್ಕೆ ಪದೇಪದೇ ಕೈ ತೊಳೆಯುವಾಟ ಮನೋರೋಗದಂತೆ ಮಾರ್ಪಟ್ಟಿದ್ದರೂ ಹಾಗೆಂದು ಯಾರೂ ಭಾವಿಸುತ್ತಿಲ್ಲ. ಮೊದಲಾಗಿದ್ದರೆ ಇದನ್ನು ಗೀಳು ಮನೋರೋಗವೆಂದು ಗುರುತಿಸಿ ಚಿಕಿತ್ಸೆಗೆ ಒಳಪಡಿಸುತ್ತಿದ್ದರು. ಆದರೀಗ ಸ್ವಚ್ಛತೆ ಎಂದೆನಿಸಿ ಮೊದಲ ಆದ್ಯತೆ ದಕ್ಕಿದೆ. ದೂರ ನಿಂತು ಅಂತರ ಕಾಪಾಡಿಕೊಂಡು ಮಡಿವಂತರಂತಿರುವುದು ಅನಿವಾರ್ಯವೂ, ಆವಶ್ಯಕವೂ ಎನ್ನಿಸಿದೆ. ಮಡಿವಂತರೆಂಬ ಕಾರಣಕ್ಕೆ ವಿಚಾರವಾದಿಗಳಾದಿಯಾಗಿ ಎಲ್ಲರಿಂದ ವಿನಾಕಾರಣ ನಿಂದೆಗೊಳಗಾಗಿದ್ದ, ಆಗುತ್ತಿದ್ದ ಅದೊಂದು ವರ್ಗ ಇದೀಗ ಕರೋನಮ್ಮನ ಕೃಪೆಯಿಂದಾಗಿ ಬಚಾವಾಗಿದೆ.



ಇರಲಿ, ಈಗ ವಿಷಯಕ್ಕೆ ಬರುತ್ತೇನೆ. ಯಾವಾಗೆಂದರೆ ಆವಾಗ ಧುತ್ತೆಂದು ಜಾರಿಯಾಗಿಬಿಡುವ ಲಾಕ್‌ಡೌನ್ ಭಯದ ಕಾರಣ ಕನಿಷ್ಠ ಎರಡು ತಿಂಗಳಿಗಾಗುವಷ್ಟು ಕಿರಾಣಿ ಸಾಮಾನುಗಳನ್ನು ಶೇಖರಿಸಿಟ್ಟುಕೊಳ್ಳುವಲ್ಲಿ ಯಶಸ್ವಿಯಾದೆವೆಂದರೆ ಗೆದ್ದೆವೆಂಬ ಭಾವ. ಇದು ಎಲ್ಲರ ಅವಸ್ಥೆಯ ಸಾಮಾನ್ಯ ನೋಟವಾದರೆ ನನ್ನ ಪಾಡು ಇದರೊಟ್ಟಿಗೆ ಬೇರೆಯದ್ದೇ ಇತ್ತು. ಕರೋನಮ್ಮ ನಮ್ಮ ದೇಶಕ್ಕೆ ದಾಳಿಯಿಡುವುದಕ್ಕೂ, ಸಕ್ಕರೆ ರೋಗದ ಸಂತ್ರಸ್ತ ಪತಿರಾಯರು ರೋಗ ನಿಯಂತ್ರಿಸುವ ಆನ್‌ಲೈನ್ ಕೋರ್ಸ್‌ಗೆ ಸೇರುವುದಕ್ಕೂ ತಾಳೆಯಾಗಿತ್ತು. ರೋಗರಹಿತ ಹಾಗೂ ಔಷಧ ರಹಿತರನ್ನಾಗಿಸುವುದು ಕೋರ್ಸ್‌ನ ಮುಖ್ಯ ಧ್ಯೇಯೋದ್ದೇಶ. ಅದಕ್ಕಾಗಿ ನಿಯಮಿತ ವ್ಯಾಯಾಮ, ಬದಲಾವಣೆಗೊಂಡ ನಿಗದಿತ ಆಹಾರಕ್ರಮವೇ ಬೀಜಮಂತ್ರವಾದ್ದರಿಂದ ಕೆಲವೇ ಕೆಲವು ಆಯ್ದ ಹಣ್ಣಿನ ಜೊತೆ ತರಹೇವಾರಿ ತರಕಾರಿ, ಸೊಪ್ಪು–ಸದೆ, ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟ ಸ್ಮೂದಿ, ಪ್ರೋಟೀನಯುಕ್ತ ಆಹಾರ, ಕೆಂಪಕ್ಕಿಯ ಅನ್ನ ಸೇವನೆಯೇ ಪತಿದೇವರ ಜೀವನಕ್ರಮವಾದರೆ ಚಾಚೂತಪ್ಪದೇ ತಯಾರಿಸಿ ಬಡಿಸುವ ದರ್ದು ನನ್ನದಾಗಿತ್ತು. ಆದರೆ ಎರಡು ವಾರಕ್ಕಾಗುವಷ್ಟು ಖರೀದಿಸಿ ಹೊರಲಾರದೇ ಹೊತ್ತು ತರುವ ತರಕಾರಿ ಹಣ್ಣುಗಳದ್ದೋ ರಾಜಯೋಗ. ಉಪ್ಪು ನೀರಲ್ಲಿ ನೆನೆಯಿಡಲ್ಪಟ್ಟು ಮೂರು ಅಭ್ಯಂಜನ ಸಾಂಗವಾಗಿಸಿಕೊಂಡು ಸೋಸುವ ಬುಟ್ಟಿಯಲ್ಲಿ ಕೆಲಕಾಲ ವಿಶ್ರಮಿಸುವ ಭಾಗ್ಯ. ನೀರು ಪೂರ್ತಿಯಾಗಿ ಶೋಧಿಸಿದ ನಂತರವಷ್ಟೇ ಗರಗರನೆ ತಿರುಗುತ್ತಿರುವ ಪಂಖದ ಕೆಳಗೆ ಸ್ವಚ್ಛ ಬಟ್ಟೆಯ ಮೇಲೆ ಹಾಯಾಗಿ ಪವಡಿಸುವ ಸೌಭಾಗ್ಯ! ಅರ್ಧ ದಿನದ ನಂತರ ಒಣಗಿದ ಅವುಗಳನ್ನು ಇಂಟರ್ ನ್ಯಾಶನಲ್ ಬ್ರ್ಯಾಂಡ್‌ನ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಆಸ್ಥೆಯಿಂದ ತುಂಬಿಟ್ಟು ತಂಗಳ ಪೆಟ್ಟಿಗೆಯಲ್ಲಿ ನಾಜೂಕಾಗಿ ಜತನದಿಂದ ಕಾಪಿಡಬೇಕಾದ ಕರ್ಮಕ್ಕೆ ಸಾಂಬ್ರಾಣಿ ಹೊಗೆಯ ಸಂಭ್ರಮವೊಂದು ಇಲ್ಲದ್ದು ನನ್ನ ಏಳೇಳು ಜನ್ಮದ ಪುಣ್ಯವೇ ಸೈ. ಬಿಡಿ, ಈವಾಗ ಮತ್ತೊಮ್ಮೆ ಮುಖ್ಯ ವಿಷಯಕ್ಕೆ ಬರ್ತೇನೆ. ಅದೇ ಮುಂಗೋಟಿಯದ್ದು... ಗೊತ್ತಾಗ್ಲಿಲ್ವಾ? ಈಗೊಂದೂವರೆ ವರ್ಷದಿಂದಲೂ ನಮ್ಮ ಜೀವನದ ಅವಿಭಾಜ್ಯ ಅಂಗವೆನ್ನಿಸಿಕೊಂಡಿರುವ ಮಾಸ್ಕ್ ಕಣ್ರೀ... ಅಚ್ಚ ಕನ್ನಡದಲ್ಲಿ ಮುಂಗೋಟಿಯೇ ಅನ್ವರ್ಥ! ಸರಿ, ಈ ಮುಂಗೋಟಿಯಿಂದ ಉಪಯೋಗ ಎಷ್ಟಿದೆಯೋ ಅಷ್ಟೇ ಅನರ್ಥವೂ ಇದೆ ಎಂಬ ಸ್ವಾನುಭವದ ವಿವರ ಇಲ್ಲಿದೆ, ಓದುವಂಥವರಾಗಿ.

ನಮ್ಮ ಬಡಾವಣೆಯಲ್ಲಿ ನಮ್ಮ ಮನೆಯ ಸಮೀಪವೇ ವಾರದ ಸಂತೆ ಆಗುವುದುಂಟು. ಸಂತೆ ಎಂದಮೇಲೆ ಸಂದಣಿ ಇದ್ದದ್ದೇ. ಅಂದು ವಾಡಿಕೆಯಂತೆ ಮುಖಗವಸು ಧರಿಸಿ ಸನ್ನದ್ಧಳಾಗಿ ಸಂತೆಯಲ್ಲೆದುರಾದ ಮಾಸ್ಕ್‌ಧಾರಿಗಳು ಇಷ್ಟವಾದಲ್ಲಿ ಕಣ್ಣಲ್ಲೇ ನಗೆಸೂಸಿ ಕಷ್ಟವಾದಲ್ಲಿ ಗುರುತು ಹಿಡಿಯದಂತೇ ನಟಿಸುತ್ತಾ ತರಕಾರಿ ಕುಪ್ಪೆಗಳತ್ತ ಎಕ್ಸ್‌ರೇ ದೃಷ್ಟಿ ಹಾಯಿಸುತ್ತಾ ಸಾಗಿದ್ದೆ... 'ಅಕ್ಕಾರ ಬರ್ರೀ ಇಲ್ಲಿ... ಹೀರಿಕಾಯಿ ಒಯ್ರಲಾ... ಹೊಲ್ದಾಗಿಂದು... ಪ್ರೆಶ್ ಐತಿ ನಶಿಕ್ನಾಗ ಎದ್ದವ್ನ ಹರ್ಕೊಂಡ್ ಬಂದೇನ್ರೀ... ಇಗಾ ಇಲ್ ನೋಡ್ರಿ ಮಣ್ ಸುದಕ ಹಂಗ ಐತಿ...' ಕಾಯಿಪಲ್ಲೆ ಕುಪ್ಪೆಯ ಒಡೆಯ ಒಡತಿಯರದ್ದು ತಾರಕ ಸ್ವರದ ಪಕ್ಕವಾದ್ಯ. ಕೊಚ್ಚೆನೀರಿನಲ್ಲಿ ಸರಿಯಾಗಿ ತೊಳೆಯದೇ ಅವಸರದಲ್ಲಿ ಬಂದದ್ದಕ್ಕೆ ಹೀಗೊಂದು ಪಿಳ್ಳೇ ನೆವ. ಅವರೆಲ್ಲರೂ ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುತ್ತಿದ್ದರೆ ನಂಬಿದಂತೆ ನಟಿಸಲು ನಾವೂ ನಿಸ್ಸೀಮರೇ! ವಾಡಿಕೆಯಂತೆ ನನಗಿಷ್ಟ ಬಂದಕಡೆ ಖರೀದಿಸುತ್ತಾ ಮೂಲೇಲಿ ಕುಳಿತಿದ್ದವಳನ್ನು ನೋಡಿಯೂ ನೋಡದಂತೇ ದಾಟಿ ಮುನ್ನಡೆದಿದ್ದೆ ಕಾರಣ ಅವಳ ಧೋರಣೆ ಹಾಗೂ ಜೋರು ಬಾಯಿ. ಅಕಸ್ಮಾತ್ ಅಲ್ಲಿ ನಿಂತು ದರ ವಿಚಾರಿಸಿ



ಖರೀದಿಸದೇ ಮುನ್ನಡೆದೆವೆಂದಿಟ್ಟುಕೊಳ್ಳಿ, ಬೈಗುಳಗಳ ಸುರಿಮಳೆ ಗ್ಯಾರಂಟಿ! ಬೇಡದಿದ್ದರೂ ಖರೀದಿಸಲೇಬೇಕು; ತುಟ್ಟಿ ಕೂಡ. ಉಸಾಬರಿಯೇ ಬೇಡ... ಹೇಗೂ ಮಾಸ್ಕ್ ಇರೋದ್ರಿಂದ ಗುರುತು ಹಿಡಿಯಲಾರಳೆಂದುಕೊಂಡದ್ದೇ ತಪ್ಪಾಗಿತ್ತು. 'ಯಾಕ್ ಅಕ್ಕಾರ... ಹಂಗ ಎತ್ತಾಗೋ ನೋಡಿ ಹೊಂಟೀರಲ್ಲ, ಸೊಪ್ಪು ಎಷ್ಟ್ ತಾಜಾ ಐತಿ ಸ್ವಲ್ಪು ಇತ್ತಾಗ ಬರ್‍ರಲಾ...' ಅಯ್ಯಬ್ಬಾ! ನನ್ನ ಮಾಸ್ಕ್ ಮೋರೆಯನ್ನೂ ಗುರುತು ಹಿಡಿದುಬಿಟ್ಟಳೇ... ಅವಳ ಸಮಾಧಾನಕ್ಕೆ ಬೇಡದಿದ್ದರೂ ಸೊಪ್ಪು ಖರೀದಿಸತೊಡಗಿದ್ದೆ 'ಎರಡ್ಕೇಜಿ ತಮಾಟಿ ರೊಕ್ಕಾನೇ ಕೊಟ್ಟಿಲ್ಲಲ್ರೀ ಬಾಯಾರ' ಏರುಧ್ವನಿ ಬಂದತ್ತ ಸಹಜವಾಗಿಯೇ ದೃಷ್ಟಿ ಹಾಯಿಸಿದ್ದೆ... ಇರಿಯುವ ನೋಟದವನ ಆಕ್ಷೇಪಣೆ ನನಗೇ ಎಂದು ಅರಿವಾಗುವಷ್ಟರಲ್ಲಿ ಮತ್ತೊಮ್ಮೆ ಜಬರಿಸಿ ಕೇಳಿದ್ದ, ಮುಜುಗರವೆನ್ನಿಸಿತ್ತು. ಸುತ್ತಮುತ್ತಲಿನ ಬಣ್ಣ ಬಣ್ಣದ ಮಾಸ್ಕ್ ಮೂತಿಗಳೆಲ್ಲವೂ 'ನೀನೇ ಕಪಟಿ' ಎಂಬಂತೇ ನನ್ನತ್ತ ಬಗೆಯುವ ದೃಷ್ಟಿ ಹಾಯಿಸಿದಂತೇ ಭಾಸವಾದರೂ ಸಾವರಿಸಿಕೊಂಡು 'ಯಾರಪ್ಪಾ ನೀನು... ಇದೇ ಈಗ ಸಂತೇಗ್ ಬಂದೇನಿ, ಟೊಮ್ಯಾಟೊ ಖರೀದಿ ಮಾಡೇ ಇಲ್ಲ' ಸಮಜಾಯಿಷಿ ಕೊಟ್ಟರೂ ನಂಬದೇ ಚೀಲ ತೆಗೆದು ತೋರುವಂತೆ ಮಾಡಿದ್ದೂ ಸಾಲದೆಂಬಂತೇ ತಾನೇ ಕೈ ಹಾಕಿ ಜಾಲಾಡಿಸಿದ್ದ! ನಂತರವಷ್ಟೇ ಮುಂದೆ ದೊಂಬಿಯಲ್ಲಿ ಸಾಗುತ್ತಿದ್ದ ಆ ಸೇಮ್‌ಪಿಂಚ್ ಆಕೃತಿಯ ಹಿಂದೆ ಓಡಿದ್ದ. ಆತನಲ್ಲಿ ಪಶ್ಚಾತ್ತಾಪದ ಲವಲೇಶವೂ ಇಲ್ಲದಾಗಿತ್ತು. ಕೆಜಿಗೆ ನೂರು ರೂಪಾಯಿ ದಾಟಿದ ಟೊಮೇಟೊ ದರ ಪಡೆದುಕೊಳ್ಳುವುದತ್ತ ಚಿತ್ತವೆಂಬಂತಿತ್ತು ಆತನ ವರ್ತನೆ. ಲಾಕ್‌ಡೌನ್‌ನಿಂದಾಗಿ ದಿನಗೂಲಿ ವ್ಯಾಪಾರಿಗೆ ಆತನದ್ದೇ ಆದ ಸಮಸ್ಯೆಗಳಿವೆಯೆಂದು ಸಮಾಧಾನಿಸಿಕೊಂಡರೂ ಆಗಿನ ನನ್ನ ಅಸಹಾಯಕ ಸ್ಥಿತಿಗೆ ಭೂಮಿ ಬಾಯ್ದೆರೆದು ಮಡಿಲಿಗೆ ಹಾಕಿಕೊಳ್ಳಬಾರದೇ ಎನ್ನಿಸಿದ್ದು ನಿಜ. ಇದ್ಯಾಕೋ ಸ್ವಲ್ಪ ಜಾಸ್ತಿ ಆಯ್ತು ಇಷ್ಟೊಂದು ಉತ್ಪ್ರೇಕ್ಷೆ ಯಾಕೆ ಅಂತಿದ್ದೀರಾ? ನಿಮ್ಮ ಅನಿಸಿಕೆಯೂ ಸರಿ ಬಿಡಿ, ಅಷ್ಟಕ್ಕೂ ಇದು ತ್ರೇತಾಯುಗವೂ ಅಲ್ಲ ನಾನು ಸೀತಾಮಾತೆಯೂ ಅಲ್ಲ... ಇಷ್ಟೆಲ್ಲಾ ಅವಾಂತರಕ್ಕೆ ನಾನಾಗಲೇ ಹೇಳಿದಂತೆ ನನ್ನ ಅವಳ ಸೇಮ್‌ಪಿಂಚ್ ನಿಲುವು, ಉಡುಪಿನ ಬಣ್ಣ ಒಂದೇ ಆದದ್ದೇ ಕಾರಣವಾಗಿತ್ತು. ಜೊತೆಗೆ ಗುರುತು ಮರೆಮಾಚಿದ ಮಾಸ್ಕ್ ಮೂತಿಯೂ...! ಹಾಂ...ಇನ್ನೊಂದು ರೀತಿಯಲ್ಲಿ ವಿಚಾರ ಮಾಡಿದಾಗ ಮಾಸ್ಕ್ ಇದ್ದದ್ದು ಒಳ್ಳೆಯದೇ ಆಯಿತು ಎನ್ನಿಸಿತ್ತು. ನಾನಾರೆಂಬುದೇ ಗೊತ್ತಾಗದಿರುವಾಗ ಮರ್ಯಾದೆ ಹೋಗುವ ಪ್ರಶ್ನೆಯೇ ಇರಲಿಲ್ಲ. (ಕೇಳಿದವರಾರು?)

ಈ ಘಟನೆ ಘಟಿಸುವವರೆಗೂ ಮುಂಗೋಟಿಯನ್ನು ಅನಿವಾರ್ಯವೆಂಬಂತೇ ಧರಿಸುತ್ತಿದ್ದೆ. ಮುಳ್ಳು ಮುಖದ ಕರೋನಮ್ಮಳ ದಾಳಿಯಿಂದ ಬಚಾವಾಗುವುದೊಂದೇ ಧ್ಯೇಯೋದ್ದೇಶವಾಗಿತ್ತು. ಆದರೀಗ ತುಂಬಿದ ಸಭೆಯಲ್ಲಿ ದ್ರೌಪದಿಯ ಮಾನ ರಕ್ಷಣೆ ಮಾಡಿದ ಶ್ರೀಕೃಷ್ಣನಂತೆ ತುಂಬಿದ ಸಂತೆಯಲ್ಲಿ ನನ್ನ ಮಾನ ರಕ್ಷಣೆಯನ್ನೂ ಮಾಡಿದ ಆ ಪುಟ್ಟ ಮುಖಗವಸಿನ ಮೇಲೆ ಅಗಾಧ ಪ್ರೀತಿ, ಅಭಿಮಾನ ಹೀಗೇ ಏನೇನೋ ಹುಟ್ಟಿ ಪುರಂದರ ದಾಸರ 'ಲಂಗೋಟಿ ಬಲು ಒಳ್ಳೇದಣ್ಣ' ಪದವನ್ನು ಸ್ವಲ್ಪವೇ ತಿರುಚಿ ಲಹರಿಯಿಂದ ಗುನುಗುವಂತಾಗಿದೆ. ■

---

**"ನಾನು ಇಷ್ಟು ವರ್ಷ ಬದುಕುತ್ತೇನೆ ಅಂತ ಗೊತ್ತಿದ್ದರೆ,**

**ನನ್ನ ಬಗ್ಗೆ ಬಹಳ ಕಾಳಜಿಯಿಂದ ಇರುತ್ತಿದ್ದೆ"**

**ಅಂತ ಹೇಳಿದ್ದು ಖ್ಯಾತ ಅಮೆರಿಕನ್ ನಗೆಗಾರ, ಗ್ರೌಛೋ ಮಾರ್ಕ್ಸ್.**



# ಮರೆಯುವವರ ನೆನಪಿನಲ್ಲಿ

***ಜಿ. ವಿ. ಅರುಣ**

ಹಿರಿಯರು ಹೇಳಿದ ಬುದ್ಧಿಮಾತುಗಳಲ್ಲಿ ಒಂದನ್ನು ಸ್ವಾಮಿ ಚಚುತಪ್ಪದೆ ಪಾಲಿಸಿಕೊಂಡು ಬಂದಿದ್ದ, 'ವ್ಯಕ್ತಿಗಳನ್ನು ನೋಡಿಕೊಂಡು ಸ್ನೇಹ ಮಾಡಿಕೋ;ಅದರಿಂದ ನಿನಗೆ ಲಾಭವಾಗುತ್ತದೆ' ಎಂದು ಅವರ ತಾತ ಹೇಳಿದ್ದರು. ಅದು ಅವನ ಮನದಲ್ಲಿ ಮರೆಯದಂತೆ ನೆಲೆಯೂರಿಬಿಟ್ಟಿತ್ತು. ಹಾಗಾಗಿ ನಮ್ಮ ಕೆಲವರೊಡನೆ ಅವನ ಸ್ನೇಹ ನಿರಂತರವಾಗಿತ್ತು.

ಅವನ ಬುದ್ಧಿ ಬೆಳೆದಂತೆಲ್ಲ ಸ್ನೇಹದ ಬಗ್ಗೆ ಅವನ ತಾತನವರು ಹೇಳಿದ್ದ ಮಾತುಗಳ ವಿಶ್ಲೇಷಣೆಯನ್ನು ಪ್ರಾರಂಭಿಸಿಬಿಟ್ಟಿದ್ದ. ಆಗಾಗ ನಮ್ಮನ್ನು ಕೇಳುತ್ತಲೂ ಇದ್ದ, "ನಿಮ್ಮೊಡನೆ ನಾನು ಸ್ನೇಹ ಮಾಡಿಕೊಂಡಿದ್ದೇನೆ. ಇದರಿಂದ ನನಗೆ ಏನು ಲಾಭ ಸಿಕ್ಕಿದೆ? ನೀವು ನನ್ನೊಡನೆ ಸ್ನೇಹ ಮಾಡಿಕೊಂಡಿದ್ದೀರಿ. ನಿಮಗೆ ಏನು ಲಾಭ ಸಿಕ್ಕಿದೆ?"

"ನಾವು ಪರಸ್ಪರ ಇನ್ನೊಬ್ಬರನ್ನು ಕೆಟ್ಟವರಾಗಲು ಬಿಟ್ಟಿಲ್ಲವಲ್ಲಪ್ಪ! ಅದೇ ದೊಡ್ಡ ಲಾಭ. ಅಲ್ಲದೆ ಕಷ್ಟ ಸುಖಕ್ಕೆ ಆಗ್ತಿವಿ ಅಲ್ವಾ?" ಎಂಬ ನಮ್ಮ ಮಾತು ಅವನಿಗೆ ಸಮಾಧಾನ ತಂದಿರಲಿಲ್ಲ.

ಈಚೆಗೆ ಅವನನ್ನು ಭೇಟಿಯಾಗುವುದು ಕಡಿಮೆಯಾಯಿತು. ಒಮ್ಮೆ ಸಿಕ್ಕಿದಾಗ ವಿಚಾರಿಸಿದೆವು. ಕೆಲವರು ಹೊಸ ಸ್ನೇಹಿತರುಗಳು ಸಿಕ್ಕಿರುವುದರಿಂದ ನಮ್ಮನ್ನು ಕಾಣಲು ಅಷ್ಟು ಸಮಯವಾಗುತ್ತಿಲ್ಲ ಎಂದಿದ್ದ. ಮತ್ತೊಮ್ಮೆ ನಾವೆಲ್ಲರೂ ಅವನನ್ನು ಹಿಡಿದು, ಆ ಹೊಸ ಸ್ನೇಹಿತರ ಬಗ್ಗೆ ವಿಚಾರಿಸಿದೆವು. ನಮಗೂ ಅವರನ್ನು ಪರಿಚಯ ಮಾಡಿಸಲು ನಿರ್ದೇಶಿಸಿದೆವು.

ಆಗ ಸ್ವಾಮಿ ಬಾಯಿಬಿಟ್ಟ. ಈಚೆಗೆ ಅವನು ಮರೆಗುಳಿಗಳನ್ನು ಹುಡುಕಿ ಹುಡುಕಿ ಸ್ನೇಹ ಮಾಡಿಕೊಳ್ಳುತ್ತಿದ್ದ. ಅದರಿಂದ ಅವನಿಗೆ ತಾತ ಹೇಳಿದ್ದ 'ವ್ಯಕ್ತಿಗಳನ್ನು ನೋಡಿ ಸ್ನೇಹ ಮಾಡಿಕೊಳ್ಳಬೇಕು' ಎನ್ನುವ ಷರತ್ತು ಪಾಲನೆ ಆಗಿತ್ತು. ಅವರುಗಳು ಇವನಿಗೆ ಕೊಟ್ಟು ಮರೆಯುತ್ತಿದ್ದ ಪೆನ್ನು, ಛತ್ರಿ ಇತ್ಯಾದಿಗಳು ಇವನಿಗೆ ಲಾಭವಾಗಿ, ತಾತನ ಹೇಳಿಕೆಯ ಎರಡನೇ ಷರತ್ತು ಪಾಲನೆಯಾಗಿತ್ತು.

ನಮಗೆ ಇದು ಯಾಕೋ ಸರಿ ಕಾಣಿಸಲಿಲ್ಲ. ಅವನಿಗೆ ತಿಳಿಸಿದರೂ ಅವನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಒಮ್ಮೆ ಸಿಕ್ಕಿದಾಗ ಸ್ವಾಮಿ ಬಲು ಖುಷಿಯಲ್ಲಿದ್ದ. "ಬನ್ರೋ ಬೈಟು ಕಾಫಿ ಕೊಡಿಸ್ತೀನಿ" ಎಂದು ಕರೆದೊಯ್ದ. ಕಾಫಿ ಕುಡಿಯುವಾಗ ಅವನ ಖುಷಿಗೆ ಕಾರಣ ಕೇಳಿದೆವು.

ಅವನು ಈಚೆಗೆ ಸ್ನೇಹ ಮಾಡಿಕೊಂಡಿದ್ದ ಒಬ್ಬ ಮರೆಗುಳಿಯ ಬಳಿ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡು, ಇಪ್ಪತ್ತು ದಿನಗಳ ಅನಂತರ ಒಂದು ನೂರು ರೂಪಾಯಿ ಹಿಂದಿರುಗಿಸಿದ್ದ. ಅವರಿಗೆ ಅರ್ಧಂಬರ್ಧ ನೆನಪು. 'ನೂರು ರೂಪಾಯಿನಾ ' ಎಂದು ಕೇಳಿದರು. ಇವನು, 'ನನಗೆ ಗೊತ್ತು ಸರ್. ನೀವು ನನಗೆ ಕೊಟ್ಟ ನೂರು ರೂಪಾಯಿನ ಜ್ಞಾಪಕ ಇಟ್ಟುಕೊಂಡಿರುವುದಿಲ್ಲ ಅಂತ. ಹಾಗಂತ ನಾನು ಹಿಂದಿರುಗಿಸದಿದ್ದರೆ ನನಗೆ ಮನಸ್ಸು ತಡೆಯೋದಿಲ್ಲ. ಮುಂದಿನ ಸಲ ನಿಮ್ಮ ಬಳಿ ಸಾಲ ಹೇಗೆ ಕೇಳಲಿ?' ಅಂತ ತಲೆ ಸವರಿ, ನೂರು ರೂಪಾಯಿ ಹಿಂದಿರುಗಿಸಿದ್ದ.



ನಾವೆಲ್ಲ ಮುಖ ಮುಖ ನೋಡಿಕೊಂಡೆವು. ಒಬ್ಬ ಒಳ್ಳೆಯ ಸ್ನೇಹಿತ ಹೀಗೆ ಮೋಸಗಾರ, ನಯವಂಚಕ, ಹಗಲು ದರೋಡೆಗಾರನಾಗಿ, ಮನದಲ್ಲೇ ಮಂಡಿಗೆ ತಿನ್ನುತ್ತಿರುವುದು ನಮಗೆ ಸರಿ ಕಾಣಲಿಲ್ಲ.

"ನಿನಗೆ ಯಾವುದೋ ದೆವ್ವ ಬಡಕೊಂಡಿದೆ." ಒಬ್ಬ ಕೋಪದಿಂದ ಹೇಳಿದ.

"ಇಲ್ಲ. ಇದೊಂದು ತರಹ ಮನೋರೋಗ. ಇದಕ್ಕೆ ಸರಿಯಾದ ಚಿಕಿತ್ಸೆ ಅಂದರೆ, ಅವನ ಸ್ಟೈಲಲ್ಲೇ ತಿರುಗೇಟು ಕೊಡಬೇಕು." ಇನ್ನೊಬ್ಬ ನನ್ನ ಕಿವಿಯಲ್ಲಿ ಪಿಸುಗುಟ್ಟಿದ.

ಅನಂತರ "ಸ್ವಾಮಿ, ನಮ್ಮನೆ ಹತ್ರ ಒಬ್ಬರಿದ್ದಾರೆ. ಅವರು ಯಾವಾಗಲೂ 'ನನಗೆ ಏನೂ ಜ್ಞಾಪಕನೇ ಇರಲ್ಲ' ಅಂತ ಇರ್ತಾರೆ. ಅವರ ಪರಿಚಯ ನಿನಗೆ ಮಾಡಿಕೊಡ್ತಿನಿ. ನಿಂಗೆ ಅವರು ತುಂಬಾ ಇಷ್ಟ ಆಗ್ತಾರೆ" ಎಂದು ಹೇಳಿದ.

ಹೀಗೆ ಬ್ರಹ್ಮಾಂಡಯ್ಯನ ಪರಿಚಯ ಸ್ವಾಮಿಗೆ ಆಯಿತು. ಅವರಿಗೂ ಖುಷಿ; ಇವನಿಗೂ ಖುಷಿ. ಸ್ವಲ್ಪ ದಿನ ಸ್ವಾಮಿ ಪತ್ತೆ ಇರಲಿಲ್ಲ. ನಿನ್ನೆ ಮತ್ತೆ ನಮ್ಮೆಲ್ಲರನ್ನೂ ಭೇಟಿಯಾಗಲು ಬಂದ, ಮುಖ ಬಾಡಿತ್ತು.

"ಯಾಕೋ ?", "ಏನಾಯಿತೋ ?", "ಒಂದು ತರಹ ಇದೀಯಲ್ಲೋ ?" ಎಲ್ಲರೂ ಕೇಳಿದೆವು.

"ಅಯ್ಯೋ ಅದೊಂದು ದೊಡ್ಡ ಕಥೆ. ಮೊನ್ನೆ ಬ್ರಹ್ಮಾಂಡಯ್ಯ ನಮ್ಮ ಮನೆ ಹತ್ತಿರ ಬಂದಿದ್ದರು. 'ಬನ್ನಿ ಸರ್ ಹಾಗೆ ಸುತ್ತಾಡಿಕೊಂಡು ಬರೋಣ' ಅಂತ ಕರೆದುಕೊಂಡು ಹೋದ್ರು. ಹಾಗೆ ಹೋಟೆಲ್‌ಗೆ ಹೋದೆವು. ತಿಂಡಿ ಬಿಲ್ ಅವರ ಕೈಯಲ್ಲೇ ಕೊಡಿಸಿ, ಒಂದೆರಡು ಸಾವಿರ ಸಾಲ ಕೇಳೋಣ ಅಂತ ಅಂದುಕೊಂಡೆ. ಗಡದ್ದಾಗಿ ಮಸಾಲೆ, ಕೇಸರಿಬಾತ್, ಮೊಸರು ವಡೆ ತಿಂದರು. ಕಾಫಿ ಕುಡಿದ ಮೇಲೆ 'ಬಂದೆ ' ಅಂತ ಎದ್ದು ಹೋದರು."

"ಎಲ್ಲೋ ಕೈ ತೊಳೆದುಕೊಳ್ಳಲು ಹೋಗಿರಬೇಕು ಅಂತ ಕಾಣುತ್ತೆ " ನಾನು ಹೇಳಿದೆ.

"ನಾನು ಹಾಗೆ ಅಂದುಕೊಂಡಿದ್ದೆ. ಆದರೆ ಎಷ್ಟು ಹೊತ್ತಾದರೂ ಬರಲಿಲ್ಲ. ಮಾಣಿ ಬೇರೆ 'ಸಾರ್, ರಷ್ ಟೈಮು, ಬಿಲ್ ಕೊಟ್ಟ್ ಬಿಡಿ, ಬೇರೆ ಗಿರಾಕಿಗಳು ಕಾಯ್ತಾ ಇದ್ದಾರೆ' ಅಂತ ನನ್ನ ಹತ್ತಿರವೇ ದುಡ್ಡು ಪೀಕಿಸಿದ! ನಾನು ಆಚೆ ಬಂದು ನೋಡಿದ್ರೆ ಬ್ರಹ್ಮಾಂಡಯ್ಯ ಪತ್ತೇನೇ ಇಲ್ಲ. ಮತ್ತೆ ಹೋಟೆಲ್ ಒಳಗೆ ಇಣುಕಿ ನೋಡಿ, ಮನೆ ಕಡೆ ಹೊರಟೆ"

"ಅಯ್ಯೋ, ಹೌದಾ, ನಾನು ಹೇಳಿದ್ದೆನಲ್ಲ ಅವ್ರಿಗೆ ವಿಪರೀತ ಮರೆವು ಅಂತ." ಬ್ರಹ್ಮಾಂಡಯ್ಯ ಅವರನ್ನು ಪರಿಚಯಿಸಿದ್ದ ಸ್ನೇಹಿತ ಹೇಳಿದ.

"ಏನು ಮರೆವೋ ಏನೋ? ನೋಡಿದರೆ ಎದುರುಗಡೆಯಿಂದ ಬ್ರಹ್ಮಾಂಡಯ್ಯ ಬರ್ತಾ ಇದ್ರು. ನನ್ನ ನೋಡಿದ ತಕ್ಷಣ 'ಓಹ್, ನೀವು ಸಿಕ್ಕಿದ್ದು ಒಳ್ಳೆದಾಯಿತು. ನಾನು ಪರ್ಸ್ ಮರೆತು ಬಂದಿದ್ದೀನಿ. ನೀವೇ ಬೈಟು ಕಾಫಿ ಕೊಡಿಸಿ ಬಿಡಪ್ಪ' ಅಂದ್ರು. ನಾನು 'ಅಲ್ಲ ಈಗ ತಾನೇ ತಿಂಡಿ ತಿಂದು, ಕಾಫಿ ಕುಡಿದು ಆಚೆ ಬಂದಿರಲ್ಲ' ಎಂದರೆ, 'ಯಾರು? ನಾನೆ? ನೀವು ಕನ್ಫ್ಯೂಸ್ ಮಾಡಿಕೊಂಡಿದ್ದೀರ. ನಾನು ಈಗ ತಾನೆ ಕಾಫಿ ಕುಡಿಯೋಣ, ಯಾರಾದ್ರು ಕೊಡಿಸೋರು ಸಿಗ್ತಾರಾ ಅಂತ ಹುಡುಕ್ತಾ ಬರ್ತಾ ಇದೀನಿ.



ತಿಂಡಿ ಗಿಂಡಿ ನಾನು ತಿಂದಿಲ್ಲ' ಅಂತ ಸಾಧಿಸಿದರು." ಸ್ವಾಮಿ ಹೇಳಿದ.

"ಮತ್ತೇ, ಏನ್ಮಾಡ್ದೆ? ಕೊಡಿಸಿದೆಯಾ?" ನಾನು ಕೇಳಿದೆ.

ಅದಕ್ಕೆ ಸ್ವಾಮಿ " ಅವ್ರು ಬಿಟ್ರೆ ತಾನೇ, ಮತ್ತೆ ಬೈಟು ಕಾಫಿಗೆ ನಾನೇ ದುಡ್ಡು ಕುಕ್ಕಿ, ಮನೆ ಕಡೆ ಹೊರಟೆ. ನನ್ನ ಜೊತೆ ಮತ್ತೆ ಮನೆಗೆ ಬಂದು ಕುಳಿತುಕೊಂಡರು. ನನಗೆ ಕೋಪ ಬರ್ತಾ ಇತ್ತು. ಆದರೂ ಸಮಾಧಾನ ಮಾಡಿಕೊಂಡು, ನಾಳೆ ನಾನೇ ಅವರ ಮನೆಗೆ ಹೋಗಿ ಇದಕ್ಕೆಲ್ಲ ಬಡ್ಡಿ ಸಮೇತ ವಾಪಸ್ ತಗೋಬೇಕು ಅಂತ ಅಂದುಕೊಂಡೆ."

"ಅವರ ಮನೆಗೆ ಹೋಗಿದ್ಯ?" ಮತ್ತೊಬ್ಬ ಸ್ನೇಹಿತ ಕೇಳಿದೆ.

"ಇಲ್ಲ, ಆ ಬ್ರಹ್ಮಾಂಡಯ್ಯ ಅಲ್ಲೇ ಕೂತಿದ್ದರಲ್ಲ, 'ಸಾರ್ ನಿಮಗೊಂದು ಗುಡ್ ನ್ಯೂಸ್ ಹೇಳಿ ಬಿಟ್ಟು ಹೋಗೋಣ ಅಂತ ಬಂದೆ' ಅಂತ ಅಂದ್ರು. 'ಇಷ್ಟೆಲ್ಲಾ ಆದ್ಮೇಲೆ ಇನ್ನೂ ಗುಡ್ ನ್ಯೂಸ್ ಇದೆಯೇನಪ್ಪಾ' ಅಂದೆ. ಅದಕ್ಕೆ 'ಯಾಕೋ ಬೇಜಾರು ಮಾಡ್ಕೊಂಡು ಇರೋ ಹಾಗಿದೆ, ಇರ್ಲಿ ಬಿಡಿ. ಇವತ್ತು ಸಾಯಂಕಾಲ ಮನೆಯವರೆಲ್ಲರೂ ಉತ್ತರ ಭಾರತಕ್ಕೆ ತೀರ್ಥಯಾತ್ರೆ ಹೊರಟಿದ್ದೀವಿ. ಐನೂರು ರೂಪಾಯಿ ಕೊಟ್ಟುಬಿಡಿ. ಎಲ್ಲ ದೇವಸ್ಥಾನಗಳ ಹುಂಡಿಗೆ ನಿಮ್ಮ ಹೆಸರಲ್ಲಿ ಚಿಲ್ಲರೆ ಕಾಣಿಕೆ ಹಾಕಿಬಿಡುತ್ತೀನಿ' ಎಂದರು. ನಾನು 'ಏನು? ಐನೂರು ರೂಪಾಯಿ ನಾನು ಕೊಡಬೇಕಾ?' ಎಂದೆ."

ಬ್ರಹ್ಮಾಂಡಯ್ಯನ ಡಿಮ್ಯಾಂಡ್ ಕೇಳಿ ನಮಗೆಲ್ಲ ನಗು ಬಂದಿತ್ತು.

"ನೋಡಪ್ಪ ಸ್ವಾಮಿ, ನಿನ್ನ ಮನೋಕಾಮನೆಗಳು ಪೂರ್ತಿಯಾಗಲಿ ಅಂತ ಎಲ್ಲ ದೇವಸ್ಥಾನದಲ್ಲಿ ಪ್ರಾರ್ಥಿಸಿ, ಹುಂಡಿಗೆ ಕಾಣಿಕೆ ಹಾಕಿಬಿಡುತ್ತೀನಿ. ಅಷ್ಟು ಇಲ್ಲ ಅಂದ್ರೆ ಹೋಗ್ಲಿ ಒಂದು ನೂರು ರೂಪಾಯಿ ಕೊಟ್ಟುಬಿಡಪ್ಪ. ಈ ವಿಚಾರದಲ್ಲಿ ನಿಮ್ಮ ಪರವಾಗಿ ನನ್ನ ದುಡ್ಡು ಹಾಕೋದು ಸರಿ ಇರಲ್ಲ' ಅಂದ್ರು."

"ಅದೂ ಸರೀನೇ, ನಿನ್ನ ಪರವಾಗಿ ಪೂಜೆ ಮಾಡಿದರೆ ಕಾಣಿಕೆ ನೀನೇ ಕೊಡಬೇಕಲ್ವಾ?" ನಾನು ಕೇಳಿದೆ.

"ಹೂಂ, ಇನ್ನು ಹೆಚ್ಚು ಹೊತ್ತು ಇದ್ದರೆ ಪ್ರವಾಸದ ದುಡ್ಡು ಕೇಳಬಹುದು ಅಂತ ಆತಂಕ ಆಯಿತು. ನೂರು ರೂಪಾಯಿ ಕೊಟ್ಟು ಸಾಗಹಾಕಿದೆ. ಆಚೆಗೆ ಹೋದವರು, 'ಏನ್ ಬಿಸಿಲು ಕಣಪ್ಪ, ಬಾಯಾರಿಕೆ, ಒಂದು ಲೋಟ ನೀರು ತಂದು ಕೊಡಪ್ಪ' ಅಂದ್ರು. ನೀರು ತರೋ ಹೊತ್ತಿಗೆ ಆಸಾಮಿ ಪತ್ತೇನೆ ಇಲ್ಲ! ನೀರನ್ನ ಕುಡಿಯೋದು ಮರೆತು ಹೊರಟುಬಿಟ್ಟಿದ್ದರು."

"ಪಾಪ, ಬೇಸಿಗೇಲಿ ನೀರು ಕುಡಿಯೋದು ಮರೆತರೆ ಹ್ಯಾಗೆ?" ಎಂದು ಇನ್ನೊಬ್ಬ ಸ್ನೇಹಿತ ಅನುಕಂಪ ತೋರಿಸಿದ.

ಸ್ವಾಮಿ ಅದಕ್ಕೆ, "ಸಂಜೆ ನನ್ ಹೆಂಡ್ತಿ 'ರೀ ಯಾರಾದ್ರಿ ಇದು, ಅರ್ಧ ಉಂಗುಷ್ಟ ಕಿತ್ತ ಹಳೆ ಚಪ್ಪಲಿ?' ಎಂದು ಕೇಳಿದಾಗಲೇ ಗೊತ್ತಾಗಿದ್ದು, ಬ್ರಹ್ಮಾಂಡಯ್ಯ ಅವನ ಹಳೆ ಚಪ್ಪಲಿ ಬಿಟ್ಟು, ನನ್ನ ಹೊಚ್ಚ ಹೊಸ ಚಪ್ಪಲಿ ಹಾಕಿಕೊಂಡು ಹೊರಟು ಹೋಗಿದ್ರು ಅಂತ." ನಾವೆಲ್ಲ ಬಿದ್ದುಬಿದ್ದು ನಕ್ಕೆವು.



"ನಗಬೇಡಿ, ಅದಕ್ಕೆ ಇನ್ನು ಮರೆಗುಳಿಗಳ ಸಹವಾಸವೇ ಬೇಡ ಅಂತ ನಿಮ್ಮ ಹತ್ರಾನೇ ವಾಪಸ್ ಬಂದೆ. ನಮ್ಮ ತಾತನ ಮಾತು ಈಗ ಸರಿಯಾಗಿ ಅರ್ಥ ಆಯ್ತು" ಎಂದು ನಮಗೆಲ್ಲ ಕೈಮುಗಿದ.

■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | **98452 64304**

**You could also request any book of your choice by WhatsApp**

